ಸಂಪುಟ ೪
ಸಂಚಿಕೆ ೧

ಕರ್ನಾಟಕ ಭಾರತಿ

ಸ್ವಾತಂತ್ರ್ಯೋತ್ಸವ ಸಂಚಿಕೆ
೧೯೭೧

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ.

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ' ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, ಸಂಪಾದಕರು, **'ಕರ್ನಾಟಕ ಭಾರತಿ', ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವದೇ ವಿಷಯಕ್ಕೆ ಡಾಯರೆಕ್ಟರ್, ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೪ ಸಂಚಿಕೆ : ೧

ಪ್ರಧಾನ ಸಂಪಾದಕರು

ಡಾ. ಆರ್. ಸಿ. ಹಿರೇಮಠ

ಸಹಾಯಕ ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕ್ರಿ.ಶ. ೧೯೭೧ ಶಾ.ಶ. ೧೮೯೩

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೪, ಸಂಚಿಕೆ : ೧
ಆಗಸ್ಟ್ ೧೯೭೧

ಸ್ವಾತಂತ್ರ್ಯೋತ್ಸವ ಸಂಚಿಕೆ

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩

ಮುದ್ರಕರು :

ಶ್ರೀ ಬಿ. ಜಿ. ಗುತ್ತಲ, ಬಿ.ಎ., ಎಲ್‌ಎಲ್.ಬಿ.
ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪಿಕರ್ ರೋಡ್, ಹುಬ್ಬಳ್ಳಿ – ೨೦

ಪರಿವಿಡಿ

ಪುಟ

೧ ಎರಡು ಕವನಗಳು (ಕವನ) ೧—೩

—ಶೈಲಜಾ

೨ ಜಯಕೀರ್ತಿ ಮತ್ತು ನಾಗವರ್ಮರು (ಸಂಶೋಧನೆ) ೪-೧೬

—ಪ್ರ. ಗೋ. ಕುಲಕರ್ಣಿ

೩ ಕನ್ನಡ ಜಾನಪದದ ಮುಖ್ಯ ವಿಭಾಗಗಳು (ಜಾನಪದ) ೧೭-೨೧

—ಜ್ಯೋತಿ ಹೊಸೂರ

೪ ಹಿಂದೂ ಧರ್ಮದಲ್ಲಿ ವಿವಾಹ (ಸಾಮಾಜಿಕ ವಿವೇಚನೆ) ೨೨-೨೬

—ಎಂ. ಬಿ. ಚರಂತಿಮಠ

೫ ಬಿಜ್ಜಲದೇವ ಮತ್ತು ಸೋಯಿದೇವ ಇವರ
ಉಮ್ರಾಣಿ ಶಾಸನ (ಸಂಶೋಧನೆ) ೨೭-೩೮

—ಆರ್. ಎನ್. ಗುರವ

೬ ಕುಮಾರವ್ಯಾಸ ಚಿತ್ರಿಸಿದ ದ್ಯೂತಪ್ರಸಂಗ (ವಿವೇಚನೆ) ೩೯-೬೦

—ಕೃಷ್ಣಮೂರ್ತಿ ಕಿತ್ತೂರ

೭ ಸ್ವಂತಿಕೆ (ಕವನ) ೬೧-೬೨

—ಜಿ. ಕೃಷ್ಣರಾವ್

೮ ಶ್ರೀ ವೀರಭದ್ರದೇವರ ಪಾರಿಜಾತ (ಸಂಪಾದನೆ) ೬೩-೬೬

—ಭೋಜರಾಜ ಪಾಟೀಲ

೯ ಭಗವತೀ ಆರಾಧನಾ : ಟೀಕೆ ಕಥಾಕೋಶ ಮತ್ತು
ಹಳಗನ್ನಡ ಸಾಹಿತ್ಯ (ಸಂಶೋಧನೆ) ೬೭-೭೬

—ಬಿ. ಕೆ. ಕಡಬಡಿ

೧೦ ಘನ (ಕವನ) ೭೭

—ಜಯಂತ ಕ್ಯಾಕಿಣಿ

೧೧ ಹಲವು ಹೋರಾಟಗಳ ಕಲಿ ಅ.ನ.ಕೃ. (ವ್ಯಕ್ತಿ ಮತ್ತು ಸಾಹಿತ್ಯ) ೭೮-೮೭

—ಚೆನ್ನವೀರ ಕಣವಿ

೧೨ ಪಂಪಭಾರತದ ಒಂದು ಪದ್ಯ (ವಿವೇಚನೆ) ೮೮–೧೦೬

—ಸೀತಾರಾಮ ಜಾಗೀರದಾರ

೧೩ ಭಾರತೀಯ ಇತಿಹಾಸಕ್ಕಾಗಿ ದುಡಿದ ೧೦೭–೧೧೩

ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್(ವ್ಯಕ್ತಿ ಪರಿಚಯ)

ಆರ್. ಆರ್. ಅತಗೂರ

೧೪ ಪೆರಿಯ ಪುರಾಣದ ಕಥೆಗಳು (ಕಥೆ) ೧೧೪–೧೧೬

—ಎಂ. ವ್ಹಿ. ಜಂಬುನಾಥನ್

೧೫ ಸಾಹಿತ್ಯಪ್ರಪಂಚದಲ್ಲಿ ವಿಮರ್ಶೆ (ವಿಮರ್ಶೆ) ೧೧೭–೧೩೦

—ಎಸ್. ಕೋತಿನ

೧೬ ಅಬ್ಬಲೂರು ಚರಿತೆ : ಒಂದು ಲಘುಪುರಾಣ (ಕೃತಿಪರಿಚಯ) ೧೩೧–೧೩೯

— ಎಂ. ಎಂ. ಕಲಬುರ್ಗಿ

೧೭ ಶಾಸನಪದ ಸೂಚಿ ೧೪೦–೧೪೫

—ಎಸ್. ರಾಜಶೇಖರ

೧೮ ಗ್ರಂಥಾವಲೋಕನ ೧೪೬–೧೬೧

—ಎಸ್. ಡಿ. ಸವದತ್ತಿಮಠ

—ಎಂ. ಎಸ್. ಎಲಿಗಾರ

—ಬಿ. ವ್ಹಿ. ಗುಂಜೆಟ್ಟಿ

—ಶ್ರೀಶೈಲಾರಾಧ್ಯ

—ಹಾ. ವೆಂ. ನಾಗೇಶ

೧೯ ಸಾದರ ಸ್ವೀಕಾರ ೧೬೨

೨೦ ಸಂಪಾದಕೀಯ ೧೬೩–೧೬೪

೨೧ ಲೇಖಕರ ಪರಿಚಯ ೧೬೫–೧೬೬



ವಿದೇಶ ಪ್ರಯಾಣ ಕೈಕೊಂಡಿರುವ ನಮ್ಮ ಕುಲಪತಿಗಳು

ಎರಡು ಕವನಗಳು

ದಾಹ

ಏಕಷ್ಟು ಪ್ರತೀಕಗಳಿಗೆ ಪರದಾಟ ?
ಗಾಳಿಗೆ ಗುದ್ದಿ ಮೆಯ್ ನೋಯಿಸಿಕೊಳ್ಳುವ ಆಟ.
ದಾಹ, ದಾಹ, ದಾಹ,
ಕುಡಿದಷ್ಟೂ ದಾಹ ಈ ಧರೆಗೆ.
ಅರ್ಥ, ಅರ್ಥ, ಅರ್ಥ,
ಅರ್ಥದ ಹಾಹಾ ಈ ಹುಚ್ಚರಿಗೆ.

ನನ್ನ ಕರಳುಗಳನೆಲ್ಲ ಕಲ್ಲಿಗೆ
ತೊಡಿಸಿರುವೆ.
ನನ್ನ ಅನಿಸಿಕೆಗಳನೆಲ್ಲ ಶವಕೆ
ಸಿಂಗರಿಸಿರುವೆ.
ನನ್ನ ಆಸರ ಬೇಸರವನ್ನೆಲ್ಲ
ಕೆಸರಿನಲಿ ಹೂಳಿರುವೆ.
ನನ್ನ ಹಸಿವೆಯೇ ಜಗದ ವಿಷಯ.

ಹಳ್ಳ ಸರಸಿ ಸಾಗರಗಳೆಲ್ಲ
ಕಾಗಿ ಗುಬ್ಬಿ ಕಚರಾಗಳೆಲ್ಲ
ಮುಗಿದು ಹೋಗಿವೆ ನನಗೆ.
ನವ್ಯದ ನಾಗರಿಕ ಲೋಕದ
ನಾಲ್ಕು ಗಾಲಿಗಳು ಸುತ್ತಿ ಸವೆದಿವೆ ನನ್ನೊಳಗೆ.
ಇಂದು ಬೇಕಾಗಿದೆ ನನಗೆ
ಬಳಕೆ ಇಲ್ಲದ ಬೆಲೆಬಾಳದ (?) ಬತ್ತಲೆ ಸಿರಿವಂತಿಕೆ,

* * *

ನೇರ ನಡೆದರೆ ನದಿಯು ಜಲ ಹಂಳಿಯೆ ?
ಅಂಕು ಡೊಂಕಿನಲಿ ಕುಣಿದು
ಏರದ ತಾಣಕೆ ಏರಿ ಇಳಿದು
ಹೊಲಸು ಹುಟ್ಟುಗಳಲಿ ಭೋರ್ಗರೆದು
ನಡೆದು ಬರೆ ನೀರು ಸಿಹಿಯಹುದೇನು ?

* * *

ನನಗೆ ಅಭ್ಯಾಸ ತುಸು ತುಸುವೇ
sugar cotedಗಳ ತಿಂದು.
ಹಿಡಿಯ ಬೇಡ ಒಂದೇ ಸಲಕೆ
ವಿಷದ ಕುಡಿಕೆ ನನ್ನ ಮುಂದು.
ಮುಚ್ಚಿದ ಚೆಲುವ ಇನಿತು ಇನಿತು
ನೋಡಿ ಸಹಿಸಿದ ಕಣ್ಣುಗಳಿಗೇಕೆ
ಭಗ್ಗನೆ ನಗ್ನತೆಯ ಬಣ್ಣ ?

ಕಿರಣಕಿರಣಗಳ ಚೆಲುವ ಹೊನ್ನಿನಲಿ
ಮಣ್ಣಿನಲಿ ನೋಡಿ ನಲಿಯಬಲ್ಲೆ
ಇಂದಾದರೋ **flood light** ನ್ನೆ ಮುಂದೆ
ಒಡ್ಡಿರುವೆಯಲ್ಲಾ !

ಕದ್ದು ತಿನ್ನುವ ಚಟ

ನಿನ್ನಂಗಳದಲಿ ಚೆಲು ಗುಲಾಬಿ ಅರಳಿರಲು
ಮಂದಿ ಮನೆ ಮಲ್ಲಿಗೆಯು ಸೊಗಸೇ,
ನೂರು ಕಟ್ಟೆಗಳ ಕಟ್ಟಿ ಸುತ್ತು ಬಿಗಿದರೂ
ಬಿರುಕಿನಲಿ ಇಣುಕುವುದೇ ಜಲದ ಮನಸು.
ಎನಿತು ಹುಟ್ಟುಹಾಕಿದರೂ ಗುರಿ ಮುಟ್ಟಲು
ಇಳಿಜಾರಿಗೆ ನುಸುಳುವುದೇ ಹಡಗು ನಡಿಗೆ,

ಬೇಡವೆಂದರೂ ಓಡಿ ಮುತ್ತು ಬಿಟ್ಟು
ಮಣ್ಣು, ಸಿಂಪಿಗಳ ಹುಡುಕುವುದೇ ಸಹಜ ನಿನಗೆ,
ನಾನಾದರೂ ಎಂತಹ ಹುಚ್ಚಿ !
ಮಣ್ಣಿನ ಮಕ್ಕಳಿಗೆ ಬಾನ ನೀಲಿಯ
ಊಣ ಬಡಿಸಿಹೆ.
ಸುತ್ತು ಹಬ್ಬಿದ ವಿಷದ (?) ಹಲ್ಲು ಕಳೆಯದೆ
ಆಡಲು ಅಂಗಳಕೆ ಕಳಿಸಿಹೆ.

* * *

ಸ್ವಚ್ಛಂದದಲಿ ಹುಟ್ಟಿದ ನನಗೆ
(ನಿರ್) ಬಂಧ ಸಾಗದು.
ಒಂದು ಗಳಿಗೆಯಾದರೂ ಸರಿಯೇ
ಸ್ವಾನಂದದಲಿ ಮೆರೆಯದೆ
ಈ ಜೀವಕೆ ಆಗದು.
ಬೇಡ ನನಗೆ ನೀತಿ, ನಿಯತಿಗಳ—
ಮುಳ್ಳು ಬೇಲಿ.
ತುಸು ಬಿಟ್ಟು ನೋಡು, ಬೇಕಾದರೆ,
ನಿನ್ನೆಡೆಗೂ ಬೀಸೀತು ಆ
ಮಧು ಮಾಸದ ತಂಗಾಳಿ.

★ ಶೈಲಜಾ

ಜಯಕೀರ್ತಿ ಮತ್ತು ನಾಗವರ್ಮರು

ಅಚ್ಚಗನ್ನಡ ಛಂದಸ್ಸನ್ನು ವಿವರವಾಗಿ ಹೇಳಿದ ಪ್ರಾಚೀನ ಲಾಕ್ಷಣಿಕರಲ್ಲಿ ಇಬ್ಬರು ನಮಗೀಗ ಪರಿಚಿತರು. ಒಬ್ಬನು ನಾಗವರ್ಮ, ಇನ್ನೊಬ್ಬನು ಜಯಕೀರ್ತಿ. ನಾಗವರ್ಮನು 'ಛಂದೋಂಬುಧಿ' ಎಂಬ ತನ್ನ ಗ್ರಂಥವನ್ನು ಕನ್ನಡದಲ್ಲಿ ರಚಿಸಿದ್ದರೆ, ಜಯಕೀರ್ತಿಯು ಛಂದೋನುಶಾಸನವನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ. ಕರ್ಣಾಟ ವಿಷಯಜಾತಿಗೆ ಛಂದೋಂಬುಧಿಯಲ್ಲಿ ಪಂಚಮಾಧಿಕಾರವು ಮೀಸಲಾಗಿದ್ದರೆ, ಛಂದೋನುಶಾಸನದಲ್ಲಿ ಸಪ್ತಮಾಧಿಕಾರವು ಮೀಸಲಾಗಿದೆ. ಜಯಕೀರ್ತಿಯು ದಿಗಂಬರ ಪಂಥದ ಜೈನಸನ್ಯಾಸಿ. ಅಚ್ಚಗನ್ನಡ ಛಂದಸ್ಸನ್ನು, ಸಂಸ್ಕೃತದಲ್ಲಿ ರಚಿತವಾದ ಛಂದೋನುಶಾಸನದಲ್ಲಿ ಸೇರ್ಪಡೆ ಮಾಡಿದುದನ್ನು ನೋಡಿದರೆ ಇವನು ಕನ್ನಡನಾಡಿನವನೇ ಇರಬೇಕೆಂಬುದು ಸ್ಪಷ್ಟವಾಗುತ್ತದೆ.

ನಾಗವರ್ಮನ ಹೆಸರಿನಲ್ಲಿ ಕಾದಂಬರಿ, ಛಂದೋಂಬುಧಿ, ಕಾವ್ಯಾವಲೋಕನ, ಕರ್ಣಾಟಕ ಭಾಷಾಭೂಷಣ, ವಸ್ತುಕೋಶ ಎಂಬ ಐದು ಗ್ರಂಥಗಳು ದೊರೆಯುತ್ತವೆ. ಇವಲ್ಲದೆ ಈಗ ನಮಗೆ ಅಲಭ್ಯವಾಗಿರುವ ಒಂದು ಜಿನಪುರಾಣವನ್ನು ನಾಗವರ್ಮನು ರಚಿಸಿರಬೇಕೆಂದು ಹೇಳಲಾಗುತ್ತಿದೆ.[೧] ಈ ಆರು ಗ್ರಂಥಗಳನ್ನು ರಚಿಸಿದವನು ಒಬ್ಬನೇ ನಾಗವರ್ಮನೆಂದು ಶ್ರೀ ಅ. ವೆಂಕಟಸುಬ್ಬಯ್ಯನವರು ಅಭಿಪ್ರಾಯ ಪಡುತ್ತಾರೆ. ಆದರೆ ಕಾದಂಬರಿ ಛಂದೋಂಬುಧಿಗಳನ್ನು ರಚಿಸಿದ ನಾಗವರ್ಮನು, ಬೇರೆಯಿದ್ದು ಉಳಿದವುಗಳನ್ನು ರಚಿಸಿದವನು ಅವನಿಂದ ಭಿನ್ನನಾದ ೨ನೆಯ ನಾಗವರ್ಮನೆಂದು ಶ್ರೀ ಆರ್. ನರಸಿಂಹಾಚಾರ್ಯರು ಅಭಿಪ್ರಾಯ ಪಡುತ್ತಾರೆ.[೨] ಈ ಇಬ್ಬರು ನಾಗವರ್ಮರಲ್ಲದೆ 'ಚಂದ್ರಚೂಡಾಮಣಿ ಶತಕ' ವನ್ನು ಬರೆದ ನಾಗವರ್ಮಾಚಾರ್ಯನು ಬೇರೆಯೇ ಇರುತ್ತಾನೆ.[೩]

ಕಾದಂಬರಿ, ಛಂದೋಂಬುಧಿಗಳನ್ನು ರಚಿಸಿದ ಮೊದಲನೆಯ ನಾಗವರ್ಮನು ಕ್ರಿ.ಶ. ಸು. ೯೯೦ರಲ್ಲಿ ಇದ್ದನು: ಎರಡನೆಯವನು ಕ್ರಿ.ಶ. ಸು. ೧೧೪೫ ರಲ್ಲಿ ಇದ್ದನು ಎಂದು ಕವಿಚರಿತೆಕಾರರು ಹೇಳಿದ್ದಾರೆ.[೪] ಮೊದಲನೆಯ ನಾಗವರ್ಮನ ಕಾಲವು ಕ್ರಿ.ಶ. ಸು. ೯೮೦ ಎಂಬುದು ಶ್ರೀ ಗೋವಿಂದ ಪೈ

---

೧. ಪ್ರಬುದ್ಧ ಕರ್ಣಾಟಕ, ಸಂಪುಟ ೧೫, ಸಂಚಿಕೆ ೩, ಪುಟ ೫೯,

೨. ಅದೇ. ನಾಗವರ್ಮನ ಕೃತಿಗಳು.

೩. ಕವಿಚರಿತೆ, ಪರಿಶೋಧಿತ ಮುದ್ರಣ ಪುಟ ೧೦೩.

೪. ಕರ್ನಾಟಕ ಕವಿಚರಿತೆ, ಪ್ರಥಮ ಸಂಪುಟ ಪರಿಶೋಧಿತ ಮುದ್ರಣ ಪು. ೫೪-೫೫

ಅವರ ಅಭಿಪ್ರಾಯ.[೫] ಎರಡನೆಯ ನಾಗವರ್ಮನು ಛಂದೋಂಬುಧಿಯಿಂದ ಭಿನ್ನವಾದ 'ಛಂದೋವಿಚಿತಿ' ಎಂಬ ಗ್ರಂಥವನ್ನು ಬರೆದಿರಬೇಕೆಂದೂ ಗ್ರಂಥಕರ್ತರ ನಾಮಸಾದೃಶ್ಯದ ಪರಿಣಾಮವಾಗಿ ಅದು ಮುಂದಿನವರ ಭ್ರಮೆಯಿಂದ ಛಂದೋಂಬುಧಿಯಲ್ಲಿಯೇ ಐಕ್ಯವಾಗಿರಬಹುದೆಂದೂ ಶ್ರೀ ಮರಿಯಪ್ಪ ಭಟ್ಟರು ಹೇಳುತ್ತಾರೆ.[೬]

ಜಯಕೀರ್ತಿಯ ಛಂದೋನುಶಾಸನವು ಬೆಳಕಿಗೆ ಬಂದಮೇಲೆ ಜಯಕೀರ್ತಿಯು ನಾಗವರ್ಮನಿಗಿಂತ ಮುಂಚಿನವನೋ ಹಿಂಚಿನವನೋ, ಮುಂಚಿನವನ ಗ್ರಂಥವನ್ನು ಹಿಂಚಿನವನು ಅನುಸರಿಸಿರುವನೋ ಹೇಗೆ? ಎಂಬೀ ವಿಷಯಗಳಲ್ಲಿ ಭಿನ್ನ ಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿವೆ, ಅವುಗಳಲ್ಲಿ ಸಮಂಜಸವಾವುದೆಂಬುದನ್ನು ಕನ್ನಡಿಗರ ಅವಗಾಹನೆಗೆ ತರುವುದೇ ಈ ಲೇಖನದ ಉದ್ದೇಶ.

ಸಂಸ್ಕೃತದಲ್ಲಿಯ ಹಲವು ಛಂದೋಗ್ರಂಥಗಳನ್ನು ಸಂಪಾದಿಸಿ ಬೆಳಕಿಗೆ ತಂದ ಶ್ರೀ ಎಚ್. ಡಿ. ವೇಲಣಕರರು 'ಜಯದಾಮನ್', ಎಂಬ ಪ್ರಾಚೀನ ಛಂದೋಗ್ರಂಥಗಳ ಸಂಗ್ರಹದಲ್ಲಿ ಜಯಕೀರ್ತಿಯ ಛಂದೋನುಶಾಸನವನ್ನೂ ಪ್ರಕಟಿಸಿದ್ದಾರೆ (೧೯೪೯). ಅದಕ್ಕೆ ಮೊದಲು 'Chandonusasana of Jayakirti and Ancient Kannada metres' ಎಂಬ ಅವರದೊಂದು ಲೇಖನವು ಕ್ರಿ. ಶ. ೧೯೪೫ರಲ್ಲಿ ಪ್ರಕಟವಾಗಿದೆ.[೭] ಈ ಲೇಖನದಲ್ಲಿ ಜಯಕೀರ್ತಿಯ ಕಾಲದ ಬಗೆಗೆ ಹೇಳುತ್ತ ಅವರು ವಿಶೇಷ ಚರ್ಚೆಗೆ ಪ್ರವೇಶಿಸದೆ, ಜಯಕೀರ್ತಿಯು ಛಂದೋನುಶಾಸನದಲ್ಲಿ ಉಲ್ಲೇಖಿಸಿರುವ ಸ್ವಯಂಭು (೩–೨೨), ಅಸಗ (೭–೭) ಮತ್ತು ಕರ್ಣಾಟ ಮಾಲತೀ ಮಾಧವ ಕಾವ್ಯ (೭–೬) ಈ ಕಾಲದಿಂದೀಚೆಗೆ; (ಛಂದೋನುಶಾಸನದ) ಜೆಸಲ್ಮೆರ್ ಹಸ್ತಪ್ರತಿಯ ಲಿಖಿತ ಕಾಲದಿಂದೊಳಗೆ ಎಂದರೆ ಕ್ರಿ.ಶ. ೧೦೦೦ರಿಂದ ೧೧೩೩ರ ಮಧ್ಯದಲ್ಲಿ ಜಯಕೀರ್ತಿ ಇದ್ದನೆಂದು ಅಭಿಪ್ರಾಯ ಪಟ್ಟಿದ್ದಾರೆ. ಹೀಗೆ ಅಭಿಪ್ರಾಯ ಪಡುವಲ್ಲಿ ನಾಗವರ್ಮನ (ಕ್ರಿ.ಶ.ಸು. ೯೯೦) ಛಂದೋಂಬುಧಿಯನ್ನು ಜಯಕೀರ್ತಿ ನೋಡಿದ್ದನೆಂಬುದನ್ನೂ ಜಯಕೀರ್ತಿ ಉಲ್ಲೇಖಿಸಿರುವ 'ಚೂಡಾಮಣಿ' ಎಂಬ ಕಾವ್ಯವು (೭–೧೫) ಕ್ರಿ. ಶ. ಸು. ೧೦೦೦ದಲ್ಲಿದ್ದ ಕಂದರ್ಪದೇವಕೃತವೆಂಬುದನ್ನು ಸೂಚಿಸಿರುವ ಪ್ರೊ. ಡಿ. ಎಲ್. ನರಸಿಂಹಾಚಾರ್ಯರ ಹೇಳಿಕೆಯನ್ನೂ ಗಣನೆಗೆ ತೆಗೆದುಕೊಂಡಿರುತ್ತಾರೆ."[೮] ಛಂದೋನುಶಾಸನವನ್ನು ಸಂಪಾದಿಸಿದ ಶ್ರೀ ವೇಲಣಕರರು 'ಜಯದಾಮನ್' ಗ್ರಂಥದ ಪೀಠಿಕೆಯಲ್ಲಿ ಹೇಳುವುದು :

---

೫. ಪ್ರಬುದ್ಧ ಕರ್ನಾಟಕ, ಸಂಪುಟ ೨೮, ಸಂಚಿಕೆ ೩, ಪು. ೧೧೬.
೬. ಕನ್ನಡ ಸಂಸ್ಕೃತಿ—ಕನ್ನಡ ಛಂದೋಗ್ರಂಥಗಳು ಶ್ರೀ ಎಂ. ಮರಿಯಪ್ಪಭಟ್ಟ
೭. JBBRAS, Vol. 21.
೮. ಕನ್ನಡ ಛಂದಸ್ಸು ಪುಟ ೭೪— ಶ್ರೀ ಟಿ. ವಿ. ವೆಂಕಟಾಚಲಶಾಸ್ತ್ರಿ (೧೯೭೮)

"Chandonusasan of Jayakirti is another important work on Sanskrit Prosody. It stands midway between Kedar's Vrittaratnakara and Hemachandra's Chandonusasan, in respect of cronolagy and development."[೯]

ವೃತ್ತರತ್ನಾಕರವನ್ನು ರಚಿಸಿದ ಭಟ್ಟಕೇದಾರನು ಕ್ರಿ. ಶ. ೧೧೦೦ಕ್ಕೆ ಕೆಲ ಸಮಯ ಪೂರ್ವದಲ್ಲಿದ್ದನೆಂದೂ[೧೦] ಹೇಮಚಂದ್ರನು ಕ್ರಿ. ಶ. ೧೦೮೯–೧೧೭೩ರ ಅವಧಿಯಲ್ಲಿದ್ದನೆಂದೂ[೪] ಶ್ರೀ ವೇಲಣಕರರೇ ಹೇಳಿದ್ದಾರೆ, ಜಯಕೀರ್ತಿಯು ಭಟ್ಟಕೇದಾರನಿಂದ ಈಚೆಯುವನೆಂಬ ಅವರ ಅಭಿಪ್ರಾಯ ಸರಿಯಾದುದಲ್ಲ. ಅಕ್ಷರವೃತ್ತಗಳಿಂದ ಭಿನ್ನವಾದ ಮಾತ್ರ ಗಣಗಳಿಂದ ರಚಿತವಾದ ಪದ್ಯಗಳನ್ನು ಪ್ರಾಚೀನಕಾಲದಲ್ಲಿ 'ಜಾತಿ' ಎಂದು ಕರೆಯುತ್ತಿದ್ದರು, ವೃತ್ತವೆಂದು ಕರೆಯುತ್ತಿರಲಿಲ್ಲ. ಕಾಲಕ್ರಮದಲ್ಲಿ ಮಾತ್ರಾ ಛಂದಗಳನ್ನೂ ವೃತ್ತಗಳೆಂದು ಕರೆಯ ತೊಡಗಿದರು.

೧೧ನೆಯ ಶತಮಾನದ ಕೊನೆಯ ವರೆಗೆ ಮಾತ್ರಾಛಂದಗಳಿಗೆ 'ವೃತ್ತ' ಎಂದು ಹೇಳುತ್ತಿರಲಿಲ್ಲ. ವಿರಹಾಂಕನು ತನ್ನ ಛಂದೋಗ್ರಂಥಕ್ಕೆ 'ವೃತ್ತಜಾತಿ ಸಮುಚ್ಚಯ' ಎಂದು ಹೆಸರಿಸಿದ್ದಾನೆ. ಈ ಗ್ರಂಥವು ಕ್ರಿ. ಶ. ೯–೧೦ ಶತಮಾನದಲ್ಲಿಯೋ ಅದಕ್ಕೂ ಪೂರ್ವದಲ್ಲಿಯೋ ರಚಿತವಾಗಿರಬೇಕೆಂದು ಅದರ ಸಂಪಾದಕರಾದ ಶ್ರೀ ವೇಲಣಕರರೇ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ೯ನೆಯ ಶತಮಾನದ ಉತ್ತರಾರ್ಧದಲ್ಲಿ ರಚಿತವಾದ ಕನ್ನಡ ಕವಿರಾಜಮಾರ್ಗದಲ್ಲಿಯೂ 'ವೃತ್ತ-ಜಾತಿ' ಎಂಬ ವಿಭಾಗವೇ ಕಂಡುಬರುತ್ತದೆ. 'ಯತಿಯೆಂಬುದುಸಿರ್ವತಾಣಂ ಕೃತಾಸ್ಪದಂ ವೃತ್ತ ಜಾತಿ ಪದಪದ್ಧತಿಯೊಳ್."[೧೧] ಕೇದಾರಭಟ್ಟನು ತನ್ನ ಗ್ರಂಥಕ್ಕೆ 'ವೃತ್ತರತ್ನಾಕರ' ಎಂದು ಹೆಸರಿಸಿದ್ದಾನೆ. ಆತನ ಗ್ರಂಥದ ದ್ವಿತೀಯಾಧ್ಯಾಯವು, 'ಇತಿ ಭಟ್ಟಕೇದಾರ ವಿರಚಿತೇ ವೃತ್ತರತ್ನಾಕರಾಖ್ಯೇ ಛಂದಸಿ ಮಾತ್ರಾವೃತ್ತಾಧಿಕಾರೋ ನಾಮ ದ್ವಿತೀಯೋಧ್ಯಾಯಃ' ಎಂದು ಮುಗಿಯುತ್ತದೆ. ಜಯಕೀರ್ತಿಯ ಛಂದೋನುಶಾಸನದಲ್ಲಿ 'ವೃತ್ತಂ ಜಾತಿರಿತಿ ದ್ವೇಧಾ ಪದ್ಯಂ ತತ್ತು ಚತುಷ್ಪದಿ, ಗಣಬದ್ಧಂ ತಥಾವೃತ್ತಂ ಜಾತಿರ್ಮಾತ್ರಾಗಣಾಶ್ರಿತಾ' (೧–೨೦) ಎಂದು ಹೇಳಲಾಗಿದೆ. ಇದು ಜಯಕೀರ್ತಿಯ ಛಂದೋನುಶಾಸನವು ವೃತ್ತರತ್ನಾಕರಕ್ಕಿಂತ ಪ್ರಾಚೀನವಾದುದೆಂಬುದನ್ನು ಸ್ಪಷ್ಟಪಡಿಸುತ್ತದೆ.

---

೯. Jayadaman, Critical Introduction P. 37

೧೦. ಅದೇ ಪು. ೪೩ ೪. ಅದೇ ಪುಟ ೪೬

೧೧. ಕವಿರಾಜ ಮಾರ್ಗ, ೧–೨೧

ಶ್ರೀ ವೇಲಣಕರರ ಲೇಖನದಲ್ಲಿ ಬರುವ ಕಂದರ್ಪನ ಚೂಡಾಮಣಿ ಕಾವ್ಯದ ಬಗೆಗೆ ನಾನು ಶ್ರೀ ಡಿ. ಎಲ್. ನರಸಿಂಹಾಚಾರ್ ಅವರಿಗೆ ಪತ್ರ ಬರೆದು ಕೇಳಿದಾಗ ಅವರಿಂದ ಬಂದ ಉತ್ತರವಿದು :

" ಕಂದರ್ಪನ ಚೂಡಾಮಣಿಯ ವಿಚಾರ : ಡಾ. ವೇಲಣಕರ್ ಅವರು ನನಗೆ ೧೧-೧೨-೧೯೪೫ ರಲ್ಲಿ ಒಂದು ಪತ್ರ ಬರೆದು ಜಯಕೀರ್ತಿಯ ಛಂದೋನುಶಾಸನದ ಏಳನೆಯ ಪರಿಚ್ಛೇದದ ಒಂದು ಸ್ವಹಸ್ತಪ್ರತಿಯನ್ನು ನನಗೆ ಕಳಿಸಿಕೊಟ್ಟರು. ಅದರಲ್ಲಿನ

' ಗದಿತಾಶ್ಚೇಚ್ಚತುಷ್ಪದಿಕಾ ವಿದಿತಾ ಸಾ ಚೂಡಾಮಣಾ ' (೭-೧೫)

ಎಂಬ ಪಂಕ್ತಿ ಆದ ಮೇಲೆ ' ಕಂದರ್ಪ ಚೂ ' ಎಂದು ಬರೆದಿದ್ದಾರೆ. ನಾನು ಇದನ್ನು ಆಧಾರವಾಗಿರಿಸಿಕೊಂಡು ಚೂಡಾಮಣಿ ಎಂಬ ಗ್ರಂಥ ಕಂದರ್ಪ ಕವಿಯದಿರಬಹುದೆಂದು ಊಹಿಸಿ ಅವರಿಗೆ ಹಾಗೆ ಪತ್ರ ಬರೆದೆ. ನಾನು ಹೀಗೆ ಬರೆದಿದ್ದೇನೆಂದು ಅವರು ತಮ್ಮ ಲೇಖನದಲ್ಲಿ ಬರೆದಿದ್ದಾರೆ— Chandonusasana of Jayakirti and Ancient Kannada Metres. JBBRAS: N.S: Vol. 21 1945 Page 9 ಅಡಿಟಿಪ್ಪಣಿ 2. ಈ ಅಡಿಟಿಪ್ಪಣಿಯೇ ಎಲ್ಲರಿಗೂ ಆಧಾರ. ಈ ವಿಷಯವಾಗಿ ನಾನು ಬೇರೆ ಲೇಖನವನ್ನೇನೂ ಬರೆದಿಲ್ಲ.

ಜಯಕೀರ್ತಿಯ ಛಂದೋನುಶಾಸನ ಅಚ್ಚಾಗಿ ಬಂದಮೇಲೆ ಅದರಲ್ಲಿ ' ಕಂದರ್ಪ ಚೂ ' ಎಂಬ ಶಬ್ದವಿಲ್ಲ. ವೇಲಣಕರ್ ಅವರು ತಮ್ಮ ಹಸ್ತ ಪ್ರತಿಯಲ್ಲಿ ಏಕೆ ಹಾಗೆ ಬರೆದರೋ ತಿಳಿಯದು. ಇರುವ ವಿಷಯ ಇಷ್ಟು. ಕಂದರ್ಪನ ಗ್ರಂಥವೇನೂ ದೊರೆತಿಲ್ಲ. ಆ ಅಡಿಟಿಪ್ಪಣಿಯನ್ನು ಕೆಳಗೆ ಬರೆದಿದೆ :

" Prof. D. L. Narasimhachar of Mysore, to whom I had sent a copy of Chapater VII at his request, thinks that Jayakirti Knew Nagavarmanah chandombudhi mentioned at VII. 15, is the work of a Kannada Poet Kandarpa, who flourished about 100 A. D. I am thankful to Prof. Narasimhachar and his frind N. Shivaram Sastry for this and other information of the Seventh Chapter of this work."

ಡಾ. ವೇಲಣಕರ್ ಅವರು ಯಾವ ಮೂಲ ಪ್ರತಿಯ ನಕಲನ್ನು ನನಗೆ ಕಳಿಸಿದರೋ ಆ ಪ್ರತಿಯನ್ನು ನೋಡಬೇಕು. ಅದರಲ್ಲಿ ' ಕಂದರ್ಪ ಚೂ '

ಎಂಬ ಶಬ್ದವಿದೆಯೇ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು, ಇದು ಹೇಗೆ ಸಾಧ್ಯ?"

× × ×

ಶ್ರೀ ವೇಲಣಕರರು ಕಳುಹಿಸಿದ ಹಸ್ತಪ್ರತಿಯಲ್ಲಿರುವ 'ಕಂದರ್ಪ ಚೂ' ಎಂಬ ಬರೆಹದ ಮೇಲಿಂದ ಶ್ರೀ ಡಿ ಎಲ್. ಎನ್. ಅವರು ಚೂಡಾಮಣಿ ಕಾವ್ಯದ ಕರ್ತೃ ಧಾರವಾಡ ಜಿಲ್ಲೆಯ ಹಾವೇರಿ ತಾಲೂಕು ಕಳ್ಳಿಹಾಳದ ಶಾಸನವನ್ನು ಬರೆದವ (೧೧೮೯)ನೆಂದೂ ಛಂದೋನುಶಾಸನದಲ್ಲಿ ಉಕ್ತವಾದ ಚುಡಾಮಣಿ ಕಾವ್ಯವು ಅವನದೇ ಎಂದೂ ಊಹಿಸಿದ್ದಾರೆ. ಈ ಊಹೆಯು ಸಬಲವಾದುದಾಗಲಾರದು. 'ಪೂರ್ವಂ ಕರ್ಣಾಟಚ್ಛಂದೋಮತೇ' (೭-೧೦) ಎಂಬುದರಿಂದ ಅಲ್ಲಿ ಉಕ್ತವಾದುದು ಛಂದೋಂಬುಧಿಯೆಂದೇ ಸಿದ್ಧವಾಗಲಾರದು. ಅದು ಕನ್ನಡದಲ್ಲಿ ಯಾವಾಗಲೋ ಬರೆಯಲ್ಪಟ್ಟ ಛಂದೋಗ್ರಂಥವೊಂದಾಗಿರಬಹುದು. ಜಯಕೀರ್ತಿಯು ಛಂದೋನುಶಾಸನದ ರಚನೆಯಲ್ಲಿ ಬೇರೆ ಬೇರೆ ಲಾಕ್ಷಣಿಕರನ್ನು ಸಂದರ್ಭೋಚಿತವಾಗಿ ಅನುಸರಿಸುವಂತೆ ನಾಗವರ್ಮಕೃತ ಛಂದೋಂಬುಧಿಯನ್ನು ಅನುಸರಿಸಿರಬೇಕೆಂದು ತಿಳಿಯಲು ಆತನ ಗ್ರಂಥಗಳಲ್ಲಿ ಯಾವ ಸ್ಪಷ್ಟವಾದ ಆಧಾರವೂ ಕಂಡುಬರುವುದಿಲ್ಲ. ಜಯಕೀರ್ತಿಯು ಕ್ರಿ.ಶ. ೧೦೦೦ ರಿಂದ ಈಚೆಯವನೆಂದು ತೋರಿಸುವ ಯಾವ ನಿರ್ದಿಷ್ಟ ಆಧಾರಗಳೂ ಅವನ ಗ್ರಂಥದಲ್ಲಿ ದೊರೆಯುವುದಿಲ್ಲ.

ಜಯಕೀರ್ತಿಯ ಛಂದೋನುಶಾಸನವು ಕ್ರಿ. ಶ. ೯೦೦ ರ ಆಚೆ ಈಚೆ ರಚಿತವಾಗಿರಬೇಕೆಂದು ಶ್ರೀ ಗೋವಿಂದ ಪೈ ಅಭಿಪ್ರಾಯಪಡುತ್ತಾರೆ.[೧೨] ಜಯಕೀರ್ತಿಯ ಗ್ರಂಥದಲ್ಲಿ ಉಕ್ತವಾದ ಅಸಗ ಮಹಾಕವಿಯ 'ಕುಮಾರಸಂಭವ' ಎಂಬ ಗ್ರಂಥದ ಸಹಾಯದಿಂದ ಅವರು ಈ ಕಾಲವನ್ನು ನಿರ್ಧರಿಸಿದ್ದಾರೆ. ಈ ಬಗೆಗೆ ಅವರು ಹೇಳಿರುವ ಮುಖ್ಯ ಅಂಶಗಳಿವು:

(೧) ಛಂದೋನುಶಾಸನದ ೭ ನೆಯ ಅಧಿಕಾರದಲ್ಲಿ ಸಮಾನಾಕ್ಷರ ಎಂಬ ದೊರೆಯಕ್ಕರವನ್ನು ಉದಾಹರಿಸುವಲ್ಲಿ ಅಸಗನೆಂಬ ಕವಿಯನ್ನೂ ಅವನ 'ಕುಮಾರಸಂಭವ' ಎಂಬ ಕನ್ನಡ ಕಾವ್ಯವನ್ನೂ ಹೆಸರಿಸಿದೆ. ಪೊನ್ನನ (ಕ್ರಿ. ಶ. ಸು. ೯೬೦) ಶಾಂತಿಪುರಾಣದಲ್ಲಿ (೧-೧೧) 'ಕನ್ನಡ ಕವಿತೆಯೊಳಸಗಂ' ಎಂದಿದೆ. ಅತಏವ ಆತನು ಪೊನ್ನನಿಗೂ ಹಿಂದೆ ಆಗಿಹೋಗಿದ್ದ

೧೨. ಪ್ರಬುದ್ಧ ಕರ್ಣಾಟಕ ಸಂಪುಟ ೨೮, ಸಂಚಿಕೆ ೩. ....ಜಯಕೀರ್ತಿಯ ಛಂದೋನುಶಾಸನದ ಕಾಲ.

ಪ್ರಸಿದ್ಧ ಒಬ್ಬ ಕನ್ನಡ ಕವಿ ಎಂದು ಸಿದ್ಧವಾಗುತ್ತದೆ. ಆತನು ತಾನು ರಚಿಸಿದ ವರ್ಧಮಾನ ಚರಿತ ಎಂಬ ಸಂಸ್ಕೃತ ಕಾವ್ಯವನ್ನು (ವಿಕ್ರಮ) ಸಂವತ್ಸರದ ೯೧೦ರಲ್ಲಿ ಅಂದರೆ ಕ್ರಿ. ಶ. ೮೫೩–೮೫೪ ರಲ್ಲಿ ರಚಿಸಿದ್ದಾಗಿ ಹೇಳಿಕೊಂಡಿದ್ದಾನೆ. ಈ ವಿಷಯವನ್ನು ಹೇಳುವ ಪದ್ಯದಿಂದ ವರ್ಧಮಾನಚರಿತವು ಅವನ ಕೊನೆಯ ಕೃತಿಯೆಂದು ತಿಳಿಯುವುದು. ಆತನ ಕನ್ನಡ ಕಾವ್ಯವಾದ ಕುಮಾರಸಂಭವವು ಹೆಚ್ಚು ಕಡಿಮೆ ಕ್ರಿ. ಶ. ಸು. ೮೪೦–೮೪೫ ರಲ್ಲಿ ರಚಿತವಾದುದೆಂದು ನಿಶ್ಚಯಿಸಬಹುದು. ಅಂದರೆ ಕ್ರಿ. ಶ. ಸು, ೯೦೦ ಜಯಕೀರ್ತಿಯ ಛಂದೋನುಶಾಸನದ ಪೂರ್ವಾವಧಿಯಾಗುತ್ತದೆ.

೨) ಸಮಾನಾಕ್ಷರವೆಂಬ ದೊರೆಯಕ್ಕರವನ್ನು ಕುರಿತಲ್ಲಿ ಅಸಗನನ್ನೂ ಅವನ ಕನ್ನಡ ಕಾವ್ಯವನ್ನೂ ಹೆಸರಿಸುವಂತೆ; ಛಂದೋನುಶಾಸನದ ಅದೇ ೭ನೆಯ ಅಧಿಕಾರದಲ್ಲಿ ಆ ಮುಂದೆ ಮಹಾಕ್ಷರವೆಂಬ ಪಿರಿಯಕ್ಕರವನ್ನು ವಿವರಿಸುವಲ್ಲಿ ಮಹಾಕ್ಕರ ವೃತ್ತಗಳನ್ನೊಳಗೊಂಡ ಪಂಪನ (ಕ್ರಿ.ಶ, ೯೪೨) ಆದಿಪುರಾಣ ವಿಕ್ರಮಾರ್ಜುನ ವಿಜಯಗಳನ್ನಾಗಲಿ ಪೊನ್ನನ (ಕ್ರಿ.ಶ. ೯೬೦) ಶಾಂತಿ ಪುರಾಣವನ್ನಾಗಲಿ ಹೆಸರಿಸಿಲ್ಲ. (ಪಿರಿಯಕ್ಕರಗಳು ಬರುವ ಯಾವ ಕಾವ್ಯದ ಹೆಸರನ್ನೂ ಕವಿಯ ಹೆಸರನ್ನೂ ಹೇಳುವುದಿಲ್ಲ). ಇದರಿಂದ ಛಂದೋನುಶಾಸನವು ರಚಿತವಾದ ಕಾಲದಲ್ಲಿ ಪಂಪ ಪೊನ್ನರ ಶ್ರೇಷ್ಠ ಕಾವ್ಯಗಳು ರಚಿಸಲ್ಪಟ್ಟಿರಲಿಲ್ಲ ಎಂದೇ ನಿರ್ಣಯಿಸಬೇಕಾಗುತ್ತದೆ. ಹೀಗಾದರೆ ಛಂದೋನುಶಾಸನವು ಕ್ರಿ. ಶ. ೯೦೦ರ ಆಚೀಚೆಯ ಕೆಲವು ವರ್ಷಗಳಲ್ಲಿ ರಚಿಸಲ್ಪಟ್ಟಿರಬೇಕು.

೩) ನಾಗವರ್ಮನ ಛಂದೋಂಬುಧಿಯಲ್ಲಿ ಉಲ್ಲೇಖಿಸಲ್ಪಟ್ಟ 'ಅರಸಂ ರಕ್ಕಸಗಂಗಂ' ಕ್ರಿ. ಶ. ೯೭೩ ರಿಂದ ೯೮೬ರ ವರೆಗೆ ಆಳಿದ ಸತ್ಯವಾಕ್ಯ ರಾಜಮಲ್ಲನಾದುದರಿಂದ ನಾಗವರ್ಮನ ಛಂದೋಂಬುಧಿಯು ಕ್ರಿ. ಶ. ೯೮೦ ರೊಳಗೆ ರಚಿತವಾಗಿರಬೇಕು. ಜಯಕೀರ್ತಿಯು ನಾಗವರ್ಮ ಛಂದೋಂಬುಧಿಯನ್ನು ಕಂಡಿರಲಿಲ್ಲವೆಂಬುದು ವ್ಯಕ್ತವಾಗುವುದರಿಂದ ಅವನ ಛಂದೋನುಶಾಸನವು ಅದಕ್ಕೆ ಪೂರ್ವದಲ್ಲಿ ಎಂದರೆ ಮೇಲೆ ಹೇಳಿದಂತೆ ಕ್ರಿ. ಶ. ೯೦೦ರ ಆಚೀಚೆ ರಚಿತವಾಗಿರಬೇಕು.

೪) ಜಯಕೀರ್ತಿಯಿಂದ ಉಲ್ಲೇಖಿತವಾಗಿರುವ ಚೂಡಾಮಣಿಯು ಕ್ರಿ. ಶ. ೬ ನೆಯ ಶತಮಾನದ ಸಂಸ್ಕೃತ ಕವಿ ದಂಡಿಯಿಂದ ಹೊಗಳಲ್ಪಟ್ಟಿರುವ ಶ್ರೀವರ್ಧದೇವನಿಂದ ರಚಿತವಾಗಿರುವ ಕನ್ನಡ ಗ್ರಂಥವಾಗಿರಬೇಕು.

ಶ್ರೀ ಗೋವಿಂದ ಪೈ ಅವರ ಈ ಲೇಖನವನ್ನೂ ಶ್ರೀ ವೇಲಣಕರರು ನೋಡಿದ್ದಾರೆ. ಇದನ್ನು ಉಲ್ಲೇಖಿಸಿಯೂ ಜಯಕೀರ್ತಿ ಕ್ರಿ.ಶ. ೧೦೦೦ ಸುಮಾರಿಗೆ

ಜೀವಿಸಿರಬಹುದೆಂದು ' ಜಯದಾಮನ್ ' ಗ್ರಂಥದ ಪೀಠಿಕೆಯಲ್ಲಿ ಹೇಳಿದ್ದಾರೆ. ಆದರೆ ಶ್ರೀ ಡಿ. ಎಲ್. ಎನ್. ಅವರು ಸಂಪಾದಕ ವರ್ಗದಲ್ಲಿ ಒಬ್ಬರಾಗಿದ್ದು ಪರಿಶೋಧಿತವಾದ ಕನ್ನಡ ಕವಿಚರಿತೆಯ ಪ್ರಥಮ ಸಂಪುಟದಲ್ಲಿ ಶ್ರೀ ಗೋವಿಂದ ಪೈ ಅವರು ಹೇಳಿದ ಜಯಕೀರ್ತಿಯ ಕಾಲವನ್ನೇ ಉಲ್ಲೇಖಿಸಲಾಗಿದೆ.[೧೩]

ಶ್ರೀ ಟಿ. ವಿ. ವೆಂಕಟಾಚಲ ಶಾಸ್ತ್ರಿಗಳು ' ಕನ್ನಡ ಛಂದಸ್ಸು ' ಎಂಬ ತಮ್ಮ ಗ್ರಂಥದಲ್ಲಿ (೧೯೭೦) ಶ್ರೀ ಗೋವಿಂದ ಪೈ ಅವರ ಲೇಖನ ವಿಷಯವೆತ್ತಿ ಜಯಕೀರ್ತಿಯು ನಾಗವರ್ಮನಿಗೆ ಪೂರ್ವಕಾಲಿಕನೆಂಬುದಾಗಿ ಅವರು ಗ್ರಹಿಸಿದ್ದಾರೆ. ಆದರೆ ಜಯಕೀರ್ತಿಯ ಕಾಲ ನಿರ್ಣಯದಲ್ಲಿ ಅವರು ಒದಗಿಸಿರುವ ಯಾವುದೊಂದೂ ದೃಢಪ್ರಮಾಣವಲ್ಲ. " ಜಯಕೀರ್ತಿಯು ಛಂದೋನುಶಾಸನದ ರಚನೆಯಲ್ಲಿ ಬೇರೆ ಬೇರೆ ಲಾಕ್ಷಣಿಕರನ್ನು ಸಂದರ್ಭೋಚಿತವಾಗಿ ಅನುಸರಿಸುವಂತೆ, ಕನ್ನಡ ಛಂದಸ್ಸಿನ ಅಂಶಗಳನ್ನು ವಿವೇಚಿಸುವಾಗ ನಾಗವರ್ಮಕೃತ ಛಂದೋಂಬುಧಿಯನ್ನು ಅನುಸರಿಸಿರಬೇಕೆಂದು ತಿಳಿಯಲು ಆತನ ಗ್ರಂಥಗಳಲ್ಲಿ ಕೆಲವು ಸ್ಪಷ್ಟವಾದ ಆಧಾರಗಳಿವೆ. ಇದರ ಸೂಚನೆಯನ್ನು ವಿದ್ವಾಂಸರು ಈಗಾಗಲೇ ಕೊಟ್ಟಿರುತ್ತಾರೆ. ಛಂದೋಂಬುಧಿಯನ್ನು ನೇರವಾಗಿ ಅನಸರಿಸಿರುವುದಲ್ಲದೆ ತಾನೇ ಕನ್ನಡಿಗನಾದುದರಿಂದ ಸ್ವೀಯ ವಿಮರ್ಶೆಯನ್ನು ಜತೆಗೂಡಿಸಿದ್ದಾನೆ " ಎಂದು ಹೇಳಿ ಜಯಕೀರ್ತಿಯು ಛಂದೋನುಶಾಸನದಲ್ಲಿ ನಾಗ-ವರ್ಮನ ಛಂದೋಂಬುಧಿಯನ್ನು ಎಷ್ಟರ ಮಟ್ಟಿಗೆ ಅನುಸರಿಸಿದ್ದಾನೆಂಬುದನ್ನು ವಿಶದಪಡಿಸುವ ೧೮ ಪುಟಗಳ ಒಂದು ಪ್ರಕರಣವನ್ನೇ ತಮ್ಮ ಕನ್ನಡ ಛಂದಸ್ಸಿನಲ್ಲಿ ಕೊಟ್ಟಿದ್ದಾರೆ. ಆದರೆ ಅವರೀ ಪ್ರಯತ್ನದಲ್ಲಿ ಯಶಸ್ವಿಗಳಾಗಿರುವುದಿಲ್ಲವೆಂಬುದು ಅವರ ಮಾತುಗಳಿಂದಲೇ ವ್ಯಕ್ತವಾಗುತ್ತದೆ. ಆ ಲೇಖನದಲ್ಲಿ ಛಂದೋನುಶಾಸನದ ಒಂದೊಂದು ಅಧಿಕಾರವನ್ನೆತ್ತಿಕೊಂಡು ಅವರು ಹೇಳುವ ಕೆಳಗಣ ಮಾತುಗಳನ್ನೇ ಗಮನಿಸಿ :

" ಛಂದೋನುಶಾಸನದ ಪ್ರಥಮಾಧಿಕಾರವಾದ ಸಂಜ್ಞಾ ಪ್ರಕರಣದಲ್ಲಿ, ಪ್ರಕಟವಾಗಿ ಛಂದೋಂಬುಧಿಯನ್ನು ಅನುಸರಿಸುವುದಕ್ಕೆ ಪ್ರಬಲವಾದ ಪ್ರಮಾಣಗಳೇನೂ ದೊರೆಯುವುದಿಲ್ಲ. " (ಪುಟ ೭೩)

ಛಂದೋನುಶಾಸನದ ದ್ವಿತೀಯಾಧಿಕಾರವಾದ ಸಮವೃತ್ತ ಪ್ರಕರಣದಲ್ಲಿ ಹೇಳುವ " ಎಷ್ಟೋ ವೃತ್ತಗಳು ಪೂರ್ವಕಾಲೀನ ಸಂಸ್ಕೃತ ಛಂದೋಗ್ರಂಥಗಳಲ್ಲಿ ಕಂಡುಬರುವಂಥವೇ ಆಗಿವೆ. ಹಾಗೆಯೇ ಛಂದೋಂಬುಧಿಯೂ ಅವನಿಗೆ ಆಕರವಾಗಿದೆ ಎಂದು, ಪರಿಶೀಲಿಸಿ ನೋಡಿದಾಗ ತಿಳಿಯುತ್ತದೆ " ಎನ್ನುತ್ತಾರೆ. ಇದಕ್ಕಾಗಿ ಎರಡೂ ಗ್ರಂಥಗಳಲ್ಲಿಯ ಕೆಲವು ವೃತ್ತಗಳ ಹೆಸರುಗಳ

---

೧೩. ಕವಿಚರಿತೆ, ಪರಿಶೋಧಿತ ಮುದ್ರಣ ಅನುಬಂಧ ಪುಟ ೩೧.

ಲ್ಲಿರುವ ಸಾಮ್ಯವನ್ನು ಎತ್ತಿತೋರಿಸಲು ಪ್ರಯತ್ನಿಸಿದ್ದಾರೆ. ಇಂತಹ ಅಲ್ಪ ಸಾಮ್ಯಗಳು, ಜಯಕೀರ್ತಿಯು ಅವನ್ನು ಛಂದೋಂಬುಧಿಯಿಂದಲೇ ಎತ್ತಿಕೊಂಡಿರುವನೆಂದು ಸಿದ್ಧಪಡಿಸಲಾರವು. ನಾಗವರ್ಮನಿಗಿಂತ ಜಯಕೀರ್ತಿ ಮುಂಚಿನವನೆಂದಾದರೆ, ನಾಗವರ್ಮನು ಅವನ್ನು ಜಯಕೀರ್ತಿಯಿಂದಲೇ ಎತ್ತಿಕೊಂಡನೆಂದು ಹೇಳಲಿಕ್ಕೂ ಬಾರದಂತಹ ಮಾತಿದು. ಇವರಿಬ್ಬರಿಗೂ ಆಕರವಾಗಿ ಬೇರೊಂದು ಗ್ರಂಥವೂ ಇರುವ ಸಂಭವವಿದೆ. ಅದೀಗ ನಮಗೆ ದೊರೆತಿರಲಿಕ್ಕಿಲ್ಲ. ಛಂದೋನುಶಾಸನದಲ್ಲಿ ಉಕ್ತವಾದ ಅನೇಕ ವೃತ್ತಗಳು ಛಂದೋಂಬುಧಿಯಲ್ಲಿ ಇರುವುದಿಲ್ಲ; ಛಂದೋಂಬುಧಿಯಲ್ಲಿ ಉಕ್ತವಾದ ಅನೇಕ ವೃತ್ತಗಳು ಛಂದೋನುಶಾಸನದಲ್ಲಿ ಇರುವುದಿಲ್ಲ. ಇನ್ನು ಹಲವು ವೃತ್ತಗಳಿಗೆ ಛಂದೋನುಶಾಸನದಲ್ಲಿ ಒಂದು ಹೆಸರಿದ್ದರೆ ಛಂದೋಂಬುಧಿಯಲ್ಲಿ ಇನ್ನೊಂದು ಹೆಸರಿದೆ. ಹೀಗಿರಲು ಅವು ಒಂದಕ್ಕೊಂದು ಆಕರವಾಗಿವೆಯೆಂದು ಹೇಳುವುದು ಹೇಗೆ? ಕೆಳಗಿನ ಉದಾಹರಣೆಗಳನ್ನು ನೋಡಿ. (ಮೊದಲು ಛಂದೋಂಬುಧಿಯ ಹೆಸರನ್ನೂ ಆದರ ಲಕ್ಷಣದ ಪದ್ಯಸಂಖ್ಯೆಯನ್ನೂ ಕೊಟ್ಟಿದೆ, ಅದರ ಮುಂದೆ ಛಂದೋನುಶಾಸನದ ಹೆಸರನ್ನೂ ಪದ್ಯಸಂಖ್ಯೆಯನ್ನೂ ಕೊಟ್ಟಿದೆ.)[೧೪]

ಅತ್ಯುಕ್ತೆ ಛಂದದಲ್ಲಿ—ಗಿರಿಧರ (೨–೩): ವಲಿ (೨–೭); ದಿಗಂತಗ (೨–೪): ಸುಖ (೨–೫); ಗರ್ವ (೨–೫): ಪದ್ಮ (೨–೪).

ಮಧ್ಯಾಛಂದದಲ್ಲಿ—ಪಾವನ (೨–೮): ಸುಧೀ (೨–೧೦); ರತಾಂತ (೨–೯): ವನ (೨–೯); ಪರಮ (೨–೯೦): ದೃಕ್ (೨–೧೫).

ಪ್ರತಿಷ್ಠಾ ಛಂದದಲ್ಲಿ—ಸೌಂದರ (೨–೧೧): ಸುಮುಖೀ (೨–೨೨); ಜನೋದಯ (೨–೧೨): ಜಯಾ (೨–೨೧); ದೇವರಮ್ಯ (೨–೧೩): ಬುದ್ಧಿ (೨–೧೮); ಮೃಗನೇತ್ರ (೨–೧೪ : ಸುಮತೀ (೨–೧೯); ಸುರತರು (೨–೧೫): ದಲು (೨–೩೧); ಕಾಮಾಂಗ (೨–೧೬): ತಾರಾ (೨–೨೦).

ಸುಪ್ರತಿಷ್ಠಾ ಛಂದದಲ್ಲಿ—ಸಂದಕ (೨–೧೭): ಧೃತಿ (೨–೩೪); ಸನ್ಮೃಗನೇತ್ರ (೨–೧೯): ಶುದತೀ (೨–೪೦); ಅನಂಗ (೨–೨೧): ಸತೀ (೨–೩೫).

ಗಾಯತ್ರೀ ಛಂದದಲ್ಲಿ—ಶಶಿಕಾಂತ (೨–೨೬): ಕಾಮಲಲಿತಾ (೨–೪೫); ವಿಚಿತ್ರ (೨–೨೭): ದ್ರುತ (೨–೫೦).

---

೧೪. ವಿದ್ವಾನ್ ಎಚ್. ಶೇಷ ಅಯ್ಯಂಗಾರರಿಂದ ಸಂಪಾದಿತವಾದ ಛಂದೋಂಬುಧಿಗೆ ಅನುಸಾರವಾಗಿ ಛಂದೋಂಬುಧಿಯ ಹೆಸರು ಮತ್ತು ಪದ್ಯಸಂಖ್ಯೆ ಕೊಟ್ಟಿದೆ.

ಉಷ್ಣಿಕ್ ಛಂದದಲ್ಲಿ—ಅಮಳ ಮತ್ತು ಕಮಳ (೨–೩೩): ಕಲಿಕಾ (೭–೫೩); ಜಗದ್ವಿಭೂತಿ (೨–೧೫); ಗೋಮಿನೀ (೨–೫೫); ಸುಲಭ (೭–೩೯): ಲಟಹ (೨–೬೦).

ಬೃಹತೀಛಂದದಲ್ಲಿ—ವಿನುತ (೨–೫೨): ಉಪಚ್ಯುತ (೨–೮೭).

ಪಂಕ್ತಿಛಂದದಲ್ಲಿ—ಮಂದಾನಿಲ (೨–೫೮): ರುಕ್ಮವತೀ (೨–೮೬).

ತ್ರಿಷ್ಟುಪ್‌ಛಂದದಲ್ಲಿ—ಚಂದ್ರಿಕಾ (೨–೬೮): ಭದ್ರಿಕಾ (೨–೧೦೪).

ಅತಿಜಗತಿ ಛಂದದಲ್ಲಿ—ಪ್ರಭಾತಮಿಶ್ರ (೨–೯೩): ಅಚಲ, ಸುವಕ್ತ್ರ (೨–೧೬೦).

ಅತ್ಯಷ್ಟಿಛಂದದಲ್ಲಿ—ಕನಕಾಬ್ಜಿನೀ (೨–೧೧೫): ನರ್ಕುಟಕ (೨–೧೧೪).

ಧೃತಿಛಂದದಲ್ಲಿ—ಆನಂದಕಂದರ್ಪಜಾತ (೨–೧೧೯): ಕುಸುಮಿತಲತಾವೇಲ್ಲಿತಾ (೩–೨೧೯).

ಅತಿಧೃತಿಛಂದದಲ್ಲಿ—ಖಚರಪ್ಲುತ (೨–೧೨೪): ಶಾರ್ಙ್ಗ (೨೨೯).

ಕೃತಿಛಂದದಲ್ಲಿ—ಅನವದ್ಯ (೨–೧೨೬): ಮುದ್ರಾ–ಉಜ್ವಲ (೨–೨೩೬); ನಗರಂಜಿತ (೨–೧೨೮): ಭಾಸುರ (೨–೨೩೫).

ಆಕೃತಿಛಂದದಲ್ಲಿ—ವನಮಂಜರೀ (೨–೧೩೫): ಲತಾಕುಸುಮ (೨–೨೪೬). ಇದು ಏನನ್ನು ತೋರಿಸುತ್ತದೆ?

ಛಂದೋನುಶಾಸನದ ೩, ೪, ೫ ಅಧಿಕಾರಗಳ ಬಗೆಗೆ ಶ್ರೀ ವೆಂಕಟಾಚಲ ಶಾಸ್ತ್ರಿಗಳು ಹೇಳುವುದು:

"ಛಂದೋನುಶಾಸನದ ತೃತೀಯಾಧಿಕಾರದಲ್ಲಿ ಜಯಕೀರ್ತಿ ೨೫ ಅರ್ಧ–ಸಮವೃತ್ತಗಳ ಲಕ್ಷಣವನ್ನು ಲಕ್ಷಣ ಲಕ್ಷ್ಯ ಸಮೀಕರಣ ಪದ್ಧತಿಯಿಂದ ವಿವರಿಸಿದ್ದಾನೆ. ನಾಗವರ್ಮ ಜಯಕೀರ್ತಿಗಳಿಗೆ ಸಮಾನವಾಗಿರುವ ಪದ್ಯಗಳು ಈ ಭಾಗದಲ್ಲಿ ಗೋಚರಿಸುವುದಿಲ್ಲ."

"ಇನ್ನು ಅನುಷ್ಟುಪ್ ಭೇದಗಳನ್ನೂ ಕೆಲವು ವಿಷಮವೃತ್ತಗಳನ್ನೂ ಕುರಿತ ಛಂದೋನುಶಾಸದ ಚತುರ್ಥಾಧಿಕಾರದಲ್ಲಿ ಜಯಕೀರ್ತ ನಾಗವರ್ಮರಿಗೆ ಸಮಾನವಾಗಿರುವ ವೃತ್ತಗಳು ಎಂದರೆ ಉದ್ಗತಾಸೌರಭಕ (ಛಂದೋಂಬುಧಿಯಲ್ಲಿ ಇದನ್ನು ಉದ್ಗತಾಭೇದವೃತ್ತವೆಂದು ಮಾತ್ರ ಸೂಚಿಸಿವೆ) ಮತ್ತು ಪದ ಚತುರೂರ್ಧ್ವ. ಇವನ್ನು ಜಯಕೀರ್ತಿ ಛಂದೋಂಬುಧಿಯಿಂದ ಎತ್ತಿಕೊಂಡು ಹೇಳಿದನೆಂದು ತಿಳಿಯಬೇಕಾಗಿಲ್ಲ".

"ಛಂದೋನುಶಾಸನದ ಪಂಚಮಾಧಿಕಾರದಲ್ಲಿ ಗಾಥಾ ಮತ್ತು ಅವರ ಜನ್ಯಭೇದಗಳೇ ಮೊದಲಾದ ಮಾತ್ರಾ ವೃತ್ತಗಳನ್ನು ವಿವರಿಸಿವೆ (೫, ೧–೨೪)

ಆರ್ಯಾ ಮತ್ತು ಆರ್ಯ ಭೇದಗಳ ವಿವರಣೆಯಲ್ಲಿ ಸಂಸ್ಕೃತ ಛಂದೋಗ್ರಂಥಗಳನ್ನೇ ಬಲು ಮಟ್ಟಿಗೆ ಅನುಸರಿಸಬೇಕು ".

ಇದರಿಂದ ಮೂರು ಅಧಿಕಾರಗಳಲ್ಲಿ ಜಯಕೀರ್ತಿಯು ನಾಗವರ್ಮನಿಂದ ಸ್ವೀಕರಿಸಿದುದು ಇಲ್ಲವೆಂದು ಶಾಸ್ತ್ರಿಗಳೇ ಒಪ್ಪಿದ್ದಾರೆಂದಾಯಿತು. ೬ ನೆಯ ಅಧಿಕಾರದಲ್ಲಿ ಬರುವ 'ಗುಣ' ಎಂಬ ಮಿಶ್ರವೃತ್ತವು (೬–೨೭) ಛಂದೋಂ-ಬುಧಿಯಲ್ಲಿಯ ತ್ರಿಪದೋನ್ನತಿಯನ್ನು ಎಲ್ಲ ವಿಧದಲ್ಲಿ ಹೋಲುತ್ತದೆಂದೂ ದ್ವಿಪದಿಯು ಛಂದೋಂಬುಧಿಯ ಚತುರ್ಥಾಧಿಕಾರದಲ್ಲಿ ಉಕ್ತವಾದ ದುವಯಿ (೪–೧೦) ಎಂಬುದಕ್ಕೆ ಸಮೀಪವಾಗಿದೆಯೆಂದೂ ಹೇಳುತ್ತಾರೆ. ಮಿಶ್ರಾಧಿಕಾರ ದಲ್ಲಿಯ ಉತ್ಸಾಹವು ನಾಗವರ್ಮನ ಅಂಶಗಣದ ಕನ್ನಡ ಜಾತಿಗಳಲ್ಲಿಯ ಉತ್ಸಾಹವಾಗಿದೆ ಎನ್ನುತ್ತಾರೆ. ಇವೆಲ್ಲ ಕಡೆಯಲ್ಲಿಯೂ ಸ್ಪಷ್ಟವಾಗಿ ಸ್ವೀಕಾರದ ಮಾತನ್ನು ಶ್ರೀ ಶಾಸ್ತ್ರಿಗಳೇ ಆಡಿರುವುದಿಲ್ಲ, ಸ್ವೀಕರಣದ ಪ್ರಶ್ನೆಯಿದ್ದರೆ ಇಂತಹ ಭಿನ್ನತೆಗೆ ಎಡೆ ಇರುತ್ತಿತ್ತೆ ?

ಜಯಕೀರ್ತಿಯ ಛಂದೋನುಶಾಸನದಲ್ಲಿಯ ಸಪ್ತಮಾಧಿಕಾರವು ಕರ್ನಾಟ ವಿಷಯ ಭಾಷಾ ಜಾತಿಗೆ ಸಂಬಂಧ ಪಟ್ಟುದು. ಛಂದೋಂಬುಧಿಯ ಪಂಚಮಾಧಿಕಾರವು ಹೀಗೆಯೆ ಅಚ್ಚಗನ್ನಡದ ಛಂದಸ್ಸಿಗೆ ಮೀಸಲಾದುದು. ಅಚ್ಚಗನ್ನಡದ ಜಾತಿಗಳ ವಿವರಣೆಯೇ ಈ ಎರಡರಲ್ಲಿರುವುದರಿಂದ ಅವುಗಳಲ್ಲಿ ವಿಶೇಷ ಸಾಮ್ಯ ಕಂಡು ಬರುವುದು ಸ್ವಾಭಾವಿಕ. ಇದರಿಂದ ಈ ವಿಷಯವನ್ನು ಜಯಕೀರ್ತಿಯು ನಾಗವರ್ಮನಿಂದ ಸ್ವೀಕರಿಸಿದನೆಂದಾಗಲಿ ನಾಗವರ್ಮನು ಜಯಕೀರ್ತಿಯಿಂದ ಸ್ವೀಕರಿಸಿದ್ದನೆಂದಾಗಲಿ ಅರ್ಥವಾಗುವುದಿಲ್ಲ. ಇವರಿಬ್ಬ ರಿಗೂ ಮಾರ್ಗದರ್ಶಕವಾಗಿ ಇನ್ನೊಂದು ಛಂದಸ್ಸು ಇರಬಹುದು. ಹಾಗೆ ಇದ್ದಿತೆಂಬುದಕ್ಕೆ ಆಧಾರಗಳೂ ದೊರೆಯುತ್ತವೆ. ಆದುದರಿಂದ ಇವರಿಬ್ಬರೂ ತಮ್ಮ ಪೂರ್ವದ ಛಂದೋಗ್ರಂಥದಿಂದ ಇವನ್ನು ಸಂಗ್ರಹಿಸಿರುವರೆಂದು ಹೇಳ ಬೇಕು. ಹೀಗಿದ್ದರೂ ಪಂಚ ಅಕ್ಕರಗಳ ಲಕ್ಷಣ ಹೇಳುವಲ್ಲಿ ಇಬ್ಬರೂ ಭಿನ್ನಕ್ರಮ ಅನುಸರಿಸಿದ್ದಾರೆ. ಛಂದೋಂಬುಧಿಯಲ್ಲಿ ಪಿರಿಯಕ್ಕರ ವೃತ್ತದಿಂದ ಕಿರಿಯಕ್ಕ ರದ ಕಡೆಗೆ ಸಾಗಿದ್ದರೆ, ಛಂದೋನುಶಾಸನದಲ್ಲಿ ಅಲ್ಪಾಕ್ಷರದಿಂದ ಮಹಾಕ್ಷರದ ಕಡೆಗೆ ಸಾಗಿದೆ. ಇದಾದರೂ ಅವರಿಬ್ಬರಲ್ಲಿ ಒಬ್ಬರು ಇನ್ನೊಬ್ಬರ ಗ್ರಂಥವನ್ನು ಸ್ವೀಕರಿಸಿರುವರೆಂಬ ಮಾತಿಗೆ ವಿರೋಧವೇ ಆಗುತ್ತದೆ. ಅಂತು ಇವರಿಬ್ಬರಲ್ಲಿ ಸ್ವೀಕರಣವು ನಡೆದಿಲ್ಲವೆಂಬುದೇ ಸ್ಪಷ್ಟವಾಗುತ್ತದೆ.

ಛಂದೋನುಶಾಸನ ಛಂದೋಂಬುಧಿಗಳಲ್ಲಿಯ ಮಹತ್ವದ ಭೇದವೊಂದರ ವಿಚಾರ ಮಾಡುವ ಮೊದಲು ಒಂದು ಮಾತನ್ನು ಹೇಳುವುದು ಅವಶ್ಯ-ವೆನಿಸುತ್ತದೆ. ಅದೆಂದರೆ ಜಯಕೀರ್ತಿ ದಿಗಂಬರ ಪಂಥದ ಜೈನ ಸನ್ಯಾಸಿಯಾಗಿ ದ್ದರೆ ನಾಗವರ್ಮನು ಗೃಹಸ್ಥಾಶ್ರಮಿ ಬ್ರಾಹ್ಮಣನಾಗಿದ್ದನು. ಈ ಮೊದಲನೆಯ

ನಾಗವರ್ಮನ ಧರ್ಮದ ವಿಚಾರವಾಗಿ ಕವಿಚರಿತೆಕಾರರು—"ಮೊದಲನೆಯವನು ಛಂದೋಂಬುಧಿಯ ಆದಿ ಭಾಗದ ಸ್ತೋತ್ರದಿಂದಲೂ ಅಧಿಕಾರಗಳ ಆದಿ ಪದ್ಯಗಳಿಂದಲೂ ಕೆಲವು ಓಲೆಯ ಪುಸ್ತಕಗಳ ಪ್ರಕಾರ ಅಧಿಕಾರಾಂತ್ಯದ ಗದ್ಯಗಳಿಂದಲೂ ಕಾದಂಬರಿಯ ಆದಿ ಶ್ಲೋಕದಿಂದಲೂ ಜೈನನೋ ಅಲ್ಲವೋ ಎಂಬ ಸಂದೇಹವನ್ನುಂಟುಮಾಡುತ್ತಾನೆ. ಆದರೆ ತನ್ನ ಗುರು ಅಜಿತಸೇನಾಚಾರ್ಯನೆಂದು ಹೇಳುವುದರಿಂದ ಜೈನನೇ ಆಗಿರಬೇಕು" ಎನ್ನುತ್ತಾರೆ.[೧೫] ಛಂದೋಂಬುಧಿಯನ್ನು ಪರಿಶೋಧಿಸಿ ಪ್ರಕಟಿಸಿದ ವಿದ್ವಾನ್ ಶೇಷ ಅಯ್ಯಂಗಾರ್ ಮತ್ತು ರಾಮಸ್ವಾಮಿ ಅಯ್ಯಂಗಾರರು ಗ್ರಂಥದ ಮುನ್ನುಡಿಯಲ್ಲಿ ಗ್ರಂಥಕರ್ತನ ವಿಚಾರವಾಗಿ ಬರೆಯುತ್ತ 'ಛಂದೋಂಬುಧಿಯಲ್ಲಿ ಕವಿಯೇ ಶತಪತ್ರೋದ್ಭವ ಮಹಾವಂಶೋತ್ಪನ್ನನು, ಚತುರ ವಿಪ್ರಕುಲಲಲಾಮನು, ಬ್ರಹ್ಮ ಬೃಹಸ್ಪತಿ ಇವರಿಗೆ ಸಮಾನನು, ಅಪ್ರತಿಮನು' ಎಂದು ಹೇಳಿಕೊಂಡಿರುವುದರಿಂದ ಜಾತಿಯಿಂದ ಬ್ರಾಹ್ಮಣನು.

"ವೈದಿಕ ಮತದವನಾದ ಈ ನಾಗವರ್ಮನು, ಜೈನ ಮತದ ಅಜಿತಸೇನ ಪಂಡಿತ ದೇವರು ತನ್ನ ಗುರುಗಳೆಂದು ಹೇಳುವುದು ಅಯುಕ್ತವು ಎಂಬ ಶಂಕೆಗೆ ಎಡೆ ಮಾಡಿಕೊಡುವುದು ಸ್ವಾಭಾವಿಕವಾಗಿದೆ. ಆದರೆ ತನ್ನ ಪೋಷಕನಾದ ರಾಯನಿಗೂ; ಆತನಿಗೂ ತನಗೂ ಅರಸನಾದ ರಕ್ಕಸಗಂಗನಿಗೂ ಗುರುಗಳಾದ ಅಜಿತಸೇನ ಪಂಡಿತ ದೇವರನ್ನು ತನ್ನ ಗುರುಗಳೆಂದು ಔಪಚಾರಿಕವಾಗಿ ಹೇಳಿರವನೆಂದಾಗಲಿ ಅಥವಾ ಈತನು ತನ್ನ ಜೀವನದಲ್ಲಿ ಕೆಲವು ಕಾಲವಾದ ಬಳಿಕ ಜೈನ ಮತವನ್ನವಲಂಬಿಸಿರಬಹುದೆಂದಾಗಲಿ ಸಮಾಧಾನವನ್ನು ಮಾಡಿಕೊಳ್ಳಬಹುದು" ಎಂದಿದ್ದಾರೆ. ಈ ಬಗೆಯ ಸಂಗತಿಯನ್ನು ನಾವು ನಾಗವರ್ಮನೊಬ್ಬನಲ್ಲಿಯೇ ಮೊದಲಾಗಿ ಕಾಣುವುದಿಲ್ಲ. ನಾಗವರ್ಮನಿಗಿಂತ ಪ್ರಾಚೀನನಾದ ಅಗಸನು ತನ್ನ ಶಾಂತಿಪುರಾಣದ ಪ್ರಾರಂಭದಲ್ಲಿ ತನ್ನ ಪ್ರಶಸ್ತಿಯನ್ನು ಹೇಳಿಕೊಳ್ಳುತ್ತ, ಜಿನಧರ್ಮಾಸಕ್ತನಾದ ಜಿನ್ನಪ್ಪ ಎಂಬ ಬ್ರಾಹ್ಮಣನು ತನ್ನ ಗೆಳೆಯನಾಗಿದ್ದು ಜೈನ ಧರ್ಮದಲ್ಲಿ ಆಸಕ್ತಿಯನ್ನು ತೋರಿ ಆ ಧರ್ಮದ ಪುರಾಣಗಳನ್ನು ಮನಸಾರೆ ಮೆಚ್ಚಿಕೊಂಡಿದ್ದನೆಂದೂ ಅವನಲ್ಲಿರುವ ಈ ಗುಣವನ್ನು ಕಂಡು ತಾನು ಶಾಂತಿಪುರಾಣವನ್ನು ಬರೆದೆನೆಂದೂ ಹೇಳಿಕೊಂಡಿದ್ದಾನೆ. ಇದು ಅಂದಿನ ಕಾಲದ ಭಿನ್ನಮತೀಯರಲ್ಲಿದ್ದ ಸೌಹಾರ್ದವನ್ನು ಎತ್ತಿ ತೋರಿಸುತ್ತದೆ. ನಾಗವರ್ಮನು ಅಜಿತಸೇನಾಚಾರ್ಯರಲ್ಲಿ ಕೆಲಕಾಲ ಅಭ್ಯಾಸವನ್ನು ಮಾಡಿರಬಹುದು. ಪರಿಣಾಮವಾಗಿ ಅವನು ತನ್ನ ಗುರುವೆಂದೂ ಹೇಳಿಕೊಂಡಿರಬಹುದು.

---

೧೫. ಕವಿಚರಿತೆ (೧೨೪) ಪುಟ ೫೩-೫೪.

ನಾಗವರ್ಮನು ಅಜಿತಸೇನಾಚಾರ್ಯರು ತನ್ನ ಗುರುವೆಂದು ಯಾವ ಕಾರಣದಿಂದಲೇ ಹೇಳಿಕೊಂಡಿರಲಿ, ಛಂದೋಂಬುಧಿಯನ್ನು ರಚಿಸುವಾಗ ಬ್ರಾಹ್ಮಣ ಧರ್ಮದಲ್ಲಿ ಅಭಿಮಾನವಿರಿಸಿಕೊಂಡೇ ಬರೆದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಅಂಶಗಣಗಳ ಹೆಸರಿನಲ್ಲಿ ಅವನು ಮಾಡಿಕೊಂಡಿರುವ ಮಾರ್ಪಾಡು ವ್ಯಕ್ತಪಡಿಸುತ್ತದೆ. ನಾಗವರ್ಮನ ಛಂದೋಂಬುಧಿಯೊಂದೇ ಕನ್ನಡಿಗರಿಗೆ ಪರಿಚಿತವಾಗಿರುವಾಗ ಅಂಶಗಣಗಳನ್ನು ಕನ್ನಡಿಗರು ಬ್ರಹ್ಮ ವಿಷ್ಣು ರುದ್ರಗಣಗಳೆಂದು ಕರೆದು ದೇವಗಣಗಳನ್ನಾಗಿ ಮಾಡಿಕೊಂಡಿರುವರೆಂದು ನಂಬಲಾಗಿತ್ತು, ಇತ್ತೀಚೆಗೆ ಕನ್ನಡಿಗರಿಗೆ ಪರಿಚಿತವಾದ ಛಂದೋನುಶಾಸನ, ಮಾನಸೋಲ್ಲಾಸ, ಸಂಗೀತರತ್ನಾಕರ ಈ ಗ್ರಂಥಗಳು ಈ ನಂಬಿಕೆಯನ್ನು ತಳ್ಳಿಹಾಕಿವೆ. ಈ ಗ್ರಂಥಗಳಲ್ಲಿ ಅಂಶಗಣಗಳಿಗೆ ಬ್ರಹ್ಮ ವಿಷ್ಣು ರುದ್ರಗಣಗಳೆಂದು ಹೆಸರು ಹೇಳಿರುವುದಿಲ್ಲ. ಕನ್ನಡದಲ್ಲಿ ಪ್ರಪ್ರಥಮವಾಗಿ ಕಾವ್ಯಗಳನ್ನೂ ಲಕ್ಷಣ ಗ್ರಂಥಗಳನ್ನೂ ರಚಿಸಿದವರು ಜೈನರು. ಛಂದಶ್ಶಾಸ್ತ್ರದಲ್ಲಿ ಬರುವ ಈ ಅಂಶಣಗಳಿಗೆ ಬ್ರಹ್ಮ ವಿಷ್ಣು ರುದ್ರರೆಂಬ ತ್ರಿಮೂರ್ತಿಗಳ ಹೆಸರನ್ನು ಅವರು ಕೊಡುವುದು ಶಕ್ಯವಿಲ್ಲ. ಮೇಲಿನ ಗ್ರಂಥಗಳಲ್ಲಿ ಇವುಗಳ ಬದಲಾಗಿ ರತಿ, ಮದನ, ಬಾಣ ಎಂಬ ಹೆಸರುಗಳು ಇರುತ್ತವೆ. ಇವೇ ಬುನಾದಿಯಿಂದ ನಡೆದು ಬಂದ ಸಂಜ್ಞೆಗಳಾಗಿರಬೇಕೆಂಬುದೂ ಮುಂದೆ ಬ್ರಾಹ್ಮಣಲಾಕ್ಷಣಿಕನೊಬ್ಬನಿಂದ ಈ ತ್ರಿಮೂರ್ತಿ ಗಣಗಳ ಹೆಸರು ಬಳಕೆಯಲ್ಲಿ ಬಂದಿರಬೇಕೆಂಬುದೂ ತಾನೇ ವ್ಯಕ್ತವಾಗುತ್ತದೆ. ಇಂದು ಗೊತ್ತಿದ್ದ ಸಂಗತಿಗಳ ಮೇಲಿಂದ ಈ ಕಾರ್ಯವು ಬ್ರಾಹ್ಮಣನಾದ ಛಂದೋಂಬುಧಿಯು ನಾಗವರ್ಮನಿಂದಲೇ ನಡೆದಿರಬೇಕೆಂದು ಹೇಳಿದರೆ ತಪ್ಪೆನಿಸಲಿಕ್ಕಿಲ್ಲ.

ಜಯಕೀರ್ತಿಯ ಛಂದೋನುಶಾಸನದಲ್ಲಿ ಅಂಶಗಣಗಳಿಗೆ ರತಿ, ಮದನ, ಬಾಣ ಎಂಬ ಸಂಜ್ಞೆಗಳನ್ನು ಕೊಡಲಾಗಿದೆಯಲ್ಲದೆ ರ, ಲ, ಧ ಎಂಬ ಸಂಕೇತಗಳನ್ನು ಹೇಳಲಾಗಿದೆ. ಇವುಗಳನ್ನು ಜಯಕೀರ್ತಿಯು ತನಗೆ ಪೂರ್ವದಲ್ಲಿದ್ದ ಲಾಕ್ಷಣಿಕರ ಗ್ರಂಥಗಳಿಂದ ಎತ್ತಿಕೊಂಡಿದ್ದಾನೆಂಬುದು ಸ್ಪಷ್ಟವಿದೆ. ಅವನ ಛಂದೋನುಶಾಸನದ ಸಪ್ತಮಾಧಿಕಾರದಲ್ಲಿ ಬರುವ 'ಪೂರ್ವಂ ಕರ್ಣಾಟಚ್ಛಂದೋಮತೇ' ಎಂಬ ವಾಕ್ಯವು ಅವನು ತನಗೆ ಪೂರ್ವದಲ್ಲಿ ಕನ್ನಡದಲ್ಲಿ ಪ್ರಚಾರದಲ್ಲಿದ್ದ ಛಂದೋವಿಷಯಕ ಗ್ರಂಥಗಳನ್ನು ಪರಿಶೀಲಿಸಿದುದನ್ನು ವ್ಯಕ್ತಪಡಿಸುತ್ತದೆ. ಜಯಕೀರ್ತಿಯು ಪೂರ್ವದಲ್ಲಿ ಅಂಶಗಣಗಳಿಗೆ ಬ್ರಹ್ಮ ವಿಷ್ಣು ರುದ್ರ ಎಂಬ ದೇವತಾವಾಚಕ ಸಂಜ್ಞೆಗಳಿದ್ದರೆ ಅವುಗಳನ್ನೂ ಅವನು ಉಲ್ಲೇಖ ಮಾಡದೆ ಇರುತ್ತಿರಲಿಲ್ಲ. ಯಾವುದೊಂದು ವೃತ್ತಕ್ಕೆ ಎರಡೆರಡು ಹೆಸರುಗಳು ಬಳಕೆಯಲ್ಲಿದ್ದರೆ ಅವೆರಡನ್ನೂ ತನ್ನ ಗ್ರಂಥಗಳಲ್ಲಿ ಹೇಳಿದ್ದಾನೆ:— "ನಜಭಜ ಜಜ್ರಿ ಚಿತ್ರಲತಿಕಾ ಸತಿ ಚಂಪಕಮಾಲಿಕಾ ಕ್ವಚಿತ್" ಇದನ್ನು ಗಮನಿಸಿ

ದರೆ ಅವನ ಕಾಲದಲ್ಲಿ ಅಂಶಗಣಗಳಿಗೆ ದೇವತಾವಾಚಕ ಹೆಸರುಗಳು ಬಳಿಕೆಯಲ್ಲಿ ಇರಲಿಲ್ಲವೆಂದೂ ಅವನಿಂದೀಚೆಯವನಾದ ಬ್ರಾಹ್ಮಣಲಾಕ್ಷಣಿಕ ನಾಗವರ್ಮನೇ ಅವನ್ನು ಪ್ರಚಾರದಲ್ಲಿ ತಂದನೆಂದೂ ಹೇಳಬೇಕಾಗುತ್ತದೆ.

ಛಂದೋಂಬುಧಿಯನ್ನು ರಚಿಸಿದ ನಾಗವರ್ಮನು ಕ್ರಿ. ಶ. ಸು. ೯೮೦-ರಲ್ಲಿಯೋ ೯೯೦ ರಲ್ಲಿಯೋ ಜೀವಿಸಿದ್ದನೆಂದಾದರೆ ಜಯಕೀರ್ತಿಯು ಅದಕ್ಕೆ ಹಿಂದಿನ ಕಾಲದಲ್ಲಿ ಜೀವಿಸಿರಬೇಕಾಯಿತು. ಪಂಪನು ಕ್ರಿ. ಶ. ೯೪೧ ರಲ್ಲಿ ಆದಿ ಪುರಾಣವನ್ನು ರಚಿಸಿದನು. ಕನ್ನಡದ ಪ್ರಖ್ಯಾತ ಕವಿಯಾದ ಪಂಪನನ್ನೂ ಅವನ ಕಾವ್ಯಗಳಲ್ಲಿ ಬರುವ ಪಿರಿಯಕ್ಕರ ವೃತ್ತವನ್ನೂ ಉಲ್ಲೇಖ ಮಾಡದಿರುವ ಜಯಕೀರ್ತಿ ಪಂಪನಿಗಿಂತಲೂ ಹಿಂದಿನವನಿರಬೇಕೆಂದು ಹೇಳಿದ ಶ್ರೀ. ಗೋವಿಂದ ಪೈ ಅವರ ಮಾತಿನಲ್ಲಿ ತಥ್ಯವಿದೆಯೆಂದೆನಿಸುತ್ತದೆ. ಆದುದರಿಂದ ಜಯಕೀರ್ತಿಯ ಕಾಲದ ಬಗೆಗೆ ಶ್ರೀ. ಗೋವಿಂದ ಪೈ ಅವರ ಹೇಳಿಕೆಯು ಎಂದರೆ ಅವನು ಕ್ರಿ. ಶ. ೯೦೦ ರ ಆಚೀಚೆಗೆ ಜೀವಿಸಿರಬೇಕೆಂಬ ಅಭಿಪ್ರಾಯವು ಸಮಂಜಸವಾಗಿದೆಯೆಂದು ಹೇಳಬೇಕು.

★ ಪ್ರ. ಗೋ. ಕುಲಕರ್ಣಿ

ಕನ್ನಡ ಜಾನಪದದ ಮುಖ್ಯ ವಿಭಾಗಗಳು

ಕನ್ನಡ ಜನಪದಸಾಹಿತ್ಯ ಸಂಗ್ರಹಕಾರ್ಯ ಆರಂಭವಾದುದು ಪಾಶ್ಚಾತ್ಯ ವಿದ್ವಾಂಸರಿಂದ. ತರುವಾಯ ಕನ್ನಡ ಸಾಹಿತಿಗಳ ವ್ಯಾಸಂಗದಿಂದ ಕೆಲವು ಉತ್ತಮ ಸಂಗ್ರಹಗಳು ಪ್ರಕಟವಾದವು, ಹಲವು ರಸವಿಮರ್ಶೆಗಳು ಹೊರ ಬಂದವು. ೨೦ನೆಯ ಶತಮಾನದ ಮೂರು ನಾಲ್ಕನೆಯ ದಶಕಗಳಿಂದ ಈ ವರೆಗೆ ಈ ಸಾಹಿತ್ಯದ ಸಂಗ್ರಹ, ರಸಾಸ್ವಾದನೆ ಮತ್ತು ವಿಮರ್ಶಾಕಾರ್ಯ ಕೆಲವೇ ಅಭಿಮಾನಿಗಳಿಂದ ನಡೆದರೂ ಅವರ ಕಾರ್ಯ ಕನ್ನಡ ರಸಿಕರಲ್ಲಿ ಜನಪದ ಸಾಹಿತ್ಯದ ಬಗ್ಗೆ ಸದಭಿರುಚಿಯನ್ನು ಹುಟ್ಟಿಸಿದೆ.

ಈಗ ನಾಲ್ಕೈದು ವರ್ಷಗಳಿಂದ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚಿನ ಚಟುವಟಿಕೆ ಕಂಡು ಬರುತ್ತದೆ. ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಮೈಸೂರ ವಿಶ್ವವಿದ್ಯಾನಿಲಯಗಳು ಜನಪದಸಾಹಿತ್ಯವನ್ನು ಕನ್ನಡ ಎಂ ಎ ತರಗತಿಯ ಪಠ್ಯಕ್ರಮದಲ್ಲಿ ಸೇರಿಸಿವೆ, ಆದರಿಂದ ಜನಪದಸಾಹಿತ್ಯಕ್ಕೆ ಅಧಿಕೃತ ಮನ್ನಣೆ ಸಿಕ್ಕಂತಾಗಿ ಅದರ ಸಂಗ್ರಹ, ಅಭ್ಯಾಸ ವ್ಯಾಪಕವಾಗಿ ಮತ್ತು ವ್ಯವಸ್ಥಿತವಾಗಿ ಆರಂಭವಾಗಿದೆ. ಅದರ ಮೂಲ ಚೂಲಗಳ ಹಿನ್ನೆಲೆಯಲ್ಲಿ ವಿವರವಾದ ಅಭ್ಯಾಸ ಮಾಡುವುದಕ್ಕೆ ಇದರಿಂದ ಅವಕಾಶ ಪ್ರಾಪ್ತವಾಗಿದೆ.

ಜನಪದ ಸಾಹಿತ್ಯವು (Folk literature) ಜಾನಪದದ (Folkrole) ಒಂದು ಪ್ರಕಾರ ಮಾತ್ರ. ಜಾನಪದ ಎಂಬುದು ಇಂಗ್ಲೀಷಿನ Floklore ಎಂಬುದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಬಳಸಲು ಡಾ. ಹಾ. ಮಾ. ನಾಯಕ ಅವರು ಸೂಚಿಸಿದ ಪದ.[೧]

Folklore ಎಂಬುದು ವಿಶಾಲಾರ್ಥ ಒಳಗೊಂಡ ಪದ. ೧೮೪೬ ರಲ್ಲಿ W. J, Thomas ಅವರು ರೂಪಿಸಿದ ಈ ಪದ ವಿಶಿಷ್ಟಾರ್ಥ ಹೊಂದಿದೆ. ಅವರು ಹಲವು ರೀತಿಯಲ್ಲಿ ಅದರ ಅರ್ಥ ವಿವರಣೆ ಮಾಡಿದ್ದಾರೆ. The Standard Dictionary of Folkloreದಲ್ಲಿ ಒಂದು ಪ್ರಮಾಣಭೂತ ವಿವರಣೆ ಹೀಗಿದೆ:

"Folklore consists of the beliefs, customs, superstitions, proverbs, riddles, songs, myths, legends, tales, ritualistic ceremonies, magic, witchcraft and all other manifestations and practices of primitive and illeterate peoples and of the common

---

೧. ಸುವರ್ಣ ಸಂಚಯ : ಮೈಸೂರ ವಿಶ್ವವಿದ್ಯಾನಿಲಯ ಪುಟ- ೨೧.

people of civilized society."[೧] ಅಂದರೆ ಜಾನಪದವು ಪ್ರಾಚೀನ ಮತ್ತು ನಿರಕ್ಷರಿ ಜನತೆಯ, ನಾಗರಿಕ ಸಮಾಜದ ಸಾಮಾನ್ಯ ಜನತೆಯ ನಂಬುಗೆ, ರೂಢಿ, ಮೂಢನಂಬಿಕೆ, ಗಾದೆ, ಒಗಟು, ಗೀತ, ಅದ್ಭುತರಮ್ಯಕಥೆ, ದಂತ ಕಥೆ, ಕಥೆ, ಧಾರ್ಮಿಕ ವಿಧಿ, ಮಂತ್ರ, ಮಾಟ ಮತ್ತು ಉಳಿದೆಲ್ಲ ಬಗೆಯ ಅಭಿವ್ಯಕ್ತಿ, ಆಚರಣೆ ಇವನ್ನೆಲ್ಲ ಒಳಗೊಳ್ಳುತ್ತದೆ. ಇದರಿಂದ ಜಾನಪದದ ವಿಶಾಲ ವ್ಯಾಪ್ತಿಯಲ್ಲಿ ಜನಪದಕ್ಕೆ (ಜನ ಸಾಮಾನ್ಯಕ್ಕೆ) ಸಂಬಂಧಿಸಿದ ಏನೆಲ್ಲವೂ ಬರುವುದೆಂದು ವಿದಿತವಾಗುತ್ತದೆ. ಈ ಜಾನಪದದ ಒಂದು ಅಂಗ ಜನಪದ ಸಾಹಿತ್ಯ. ಇದರ ಸರಿಯಾದ ಅಭ್ಯಾಸಕ್ಕೆ ಜಾನಪದದ ಹಿನ್ನೆಲೆ, ಅದರ ವಿವರವಾದ ವ್ಯಾಸಂಗ ಅತ್ಯಗತ್ಯ.

ವಿಶಾಲ ವಿಷಯವ್ಯಾಪ್ತಿ ಹೊಂದಿರುವ ಜಾನಪದದ ವ್ಯವಸ್ಥಿತವಾದ ಅಭ್ಯಾಸ ಮಾಡುವಾಗ ಅನುಕೂಲಕ್ಕಾಗಿ ಆದರಲ್ಲಿ ವಿಭಾಗ ಮಾಡಿಕೊಳ್ಳುವುದು ಅಂದರೆ ಬಗೆಗಳನ್ನು ಗುರುತಿಸುವುದು ಕ್ರಮ ಪ್ರಾಪ್ತ. ಇಂಥ ಒಂದು ಪ್ರಯತ್ನ ಡಾ. ಹಾ. ಮಾ. ನಾಯಕ ಅವರಿಂದ ನಡೆದಿದೆ. "ಜಾನಪದ ಸಾಮಾನ್ಯವಾಗಿ ನಾಲ್ಕು ಬಗೆಯಾದುದು: ಸಾಹಿತ್ಯಬಗೆ, ಭಾಷಿಕಬಗೆ, ವೈಜ್ಞಾನಿಕಬಗೆ, ಕ್ರಿಯಾತ್ಮಕಬಗೆ. ಪುರಾಣ, ಜನಪದ ಕಥೆ, ಹಾಡು ಮೊದಲ ಗುಂಪಿನವು. ಮಾತು, ಸನ್ನೆ, ಒಗಟು, ಗಾದೆ ಎರಡನೆಯ ಗುಂಪಿನವು. ಮದ್ದು, ಚಿಕಿತ್ಸೆ, ಯಕ್ಷಿಣಿ, ಭವಿಷ್ಯ. ಹಾಗೂ ವಿವಿಧ ನಂಬುಗೆಗಳು ವೈಜ್ಞಾನಿಕ ಬಗೆಗೆ ಸೇರುತ್ತವೆ. ಕೊನೆಯದರಲ್ಲಿ, ನೃತ್ಯ, ಸಂಗೀತ, ಆಟ, ವಿನೋದ, ನಾಟಕ, ಉಡುಗೆ, ಆಡುಗೆ, ಕಲೆ ಮುಂತಾದವು ಸೇರಿಕೊಳ್ಳುತ್ತವೆ"[೨] ಎಂದು ವಿಭಾಗ ಸೂಚಿಸಿ, ಮುಂದುವರಿದು "ಸಾಹಿತ್ಯಿಕ ವರ್ಗಕ್ಕೆ ಅಗತ್ಯವಾಗಿರುವುದು ಕಲಾತ್ಮಕ ಭಾಷೆ; ಭಾಷಿಕ ವರ್ಗದಲ್ಲಿ ವ್ಯಕ್ತವಾಗುವುದು ಭಾಷೆಯ ಸಾಮಾನ್ಯ ಸ್ವರೂಪ. ಕಾರ್ಯ ಕಾರಣಗಳನ್ನು ವೈಜ್ಞಾನಿಕ ವರ್ಗ ವಿವರಿಸಿದರೆ, ಕ್ರಿಯಾತ್ಮಕ ವರ್ಗದಲ್ಲಿ ಅಗತ್ಯವಾಗಿರುವುದು ದೇಹದ ಕಲಾತ್ಮಕ ಚಲನವಲನೆಗಳು; ಗತಿ ಗಮನಗಳು. ಈ ಎಲ್ಲದರ ಸಮಷ್ಟಿ ಸಂಪ್ರದಾಯವನ್ನೇ ನಾವು ಜಾನಪದವೆಂದು ಕರೆಯುವುದು". ಎಂದು ವಿವರಣೆ ಕೊಡುತ್ತಾರೆ.

ಜಾನಪದದ ಈ ವರ್ಗೀಕರಣ ಮತ್ತು ವಿವರಣೆ ಸ್ವಲ್ಪ ಗೊಂದಲವನ್ನುಂಟು ಮಾಡುತ್ತದೆ. ಡಾ. ನಾಯಕರ ಸೂಚನೆಯಂತೆ ಒಗಟು, ಗಾದೆಗಳನ್ನು ಭಾಷಿಕ ಬಗೆಯಲ್ಲಿ ಸೇರಿಸಿದರೆ ಅವುಗಳಲ್ಲಿಯ ಸಾಹಿತ್ಯಿಕ ಮೌಲ್ಯ ನಿರಾಕರಿಸಿದಂತಾಗುತ್ತದೆ. ಇವುಗಳಲ್ಲಿ ಸಾಹಿತ್ಯಿಕ ಮೌಲ್ಯದ ಕೊರತೆಯಿಲ್ಲ

---

೧. Aurelio M. Espinosa, Standard Dictionary of Folklore, 1949, Page 339.

೨. ಹೊನ್ನ ಬಿತ್ತೇವು ಹೊಲಕೆಲ್ಲ (ಸಂ.- ಸ. ಸ. ಮಾಳವಾಡ) ಪುಟ- ೪೯೭.

ಎಂಬುದನ್ನು ಮರೆಯುವಂತಿಲ್ಲ. ಗಾದೆ, ಒಗಟುಗಳಲ್ಲಿ ವ್ಯಕ್ತವಾಗುವುದು ಭಾಷೆಯ ಸಾಮಾನ್ಯ ಸ್ವರೂಪ ಮಾತ್ರವಲ್ಲ. ಈ ವಿಷಯ ಡಾ. ನಾಯಕರ ಗಮನಕ್ಕೂ ಬಂದಂತಿದೆ. ಅವರು ತಮ್ಮ ಸೂಚನೆಯ ವಿವರಣೆಯನ್ನು ಮುಂದುವರಿಸುತ್ತ "ಜನಪದ ಸಾಹಿತ್ಯ ಎಂದು ಪ್ರತ್ಯೇಕಿಸುವಾಗ ಭಾಷೆಯ ಉಪಯೋಗದ ದೃಷ್ಟಿಯಿಂದ ಸಾಹಿತ್ಯಿಕ ಹಾಗೂ ಭಾಷಿಕ ವರ್ಗಗಳೆರಡನ್ನೂ ಒಟ್ಟಾಗಿ ಸೇರಿಸಬೇಕಾಗುತ್ತದೆ. ಒಂದರಲ್ಲಿ ಭಾಷೆಯ ಕಲಾತ್ಮಕ ಸ್ವರೂಪವೂ, ಇನ್ನೊಂದರಲ್ಲಿ ಭಾಷೆಯ ಸಾಮಾನ್ಯ ಸ್ವರೂಪವೂ ಕಾಣಿಸಿಕೊಂಡು, ಎರಡರ ಮೂಲದ್ರವ್ಯವೂ ಭಾಷೆಯೇ ಆಗಿದೆ. ರಸಾತ್ಮಕವಾದುದಷ್ಟೇ ಕಾವ್ಯ ಎನ್ನುವುದಾದರೆ ಸಾಹಿತ್ಯಿಕ ಬಗೆಯನ್ನಷ್ಟೇ ಜನಪದ ಸಾಹಿತ್ಯಕ್ಕೆ ಎತ್ತಿಕೊಳ್ಳಬಹುದು. ಈ ಪ್ರಬಂಧದಲ್ಲಿ ಸಾಹಿತ್ಯಿಕ ಹಾಗು ಭಾಷಿಕ ಬಗೆಗಳೆರಡನ್ನೂ ಕೂಡಿಯೇ ನಾವು ಜನಪದ ಸಾಹಿತ್ಯ ಎಂಬ ಮಾತನ್ನು ಬಳಸಿದ್ದೇವೆ". ಎಂಬುದಾಗಿ ಹೇಳುತ್ತಾರೆ. "ರಸಾತ್ಮಕವಾದುದಷ್ಟೇ ಕಾವ್ಯ ಎನ್ನುವುದಾದರೆ ಸಾಹಿತ್ಯಿಕ ಬಗೆಯನ್ನಷ್ಟೇ ಜನಪದ ಸಾಹಿತ್ಯಕ್ಕೆ ಎತ್ತಿಕೊಳ್ಳಬೇಕಾಗುವದು" ಎಂಬ ಮಾತಿನಿಂದ ಗಾದೆ, ಒಗಟುಗಳೆಲ್ಲ ರಸರಹಿತವಾದುವೆಂದೂ, ಸಾಹಿತ್ಯಿಕ ಬಗೆಯಲ್ಲಿ ಒಳಗೊಳ್ಳುವವೆಂದು ಅವರು ಹೇಳಿರುವ ಜನಪದ ಕಥೆ, ಹಾಡುಗಳೆಲ್ಲ ರಸಾತ್ಮಕವಾದುವೆಂದೂ ಅರ್ಥವಾಗುತ್ತದೆ. ಆದರೆ ಎಷ್ಟೋ ಹಾಡು, ಕಥೆಗಳು ನೀರಸವಾಗಿರುತ್ತವೆ ಮತ್ತು ಎಷ್ಟೋ ಗಾದೆ, ಒಗಟಗಳು ರಸಯುಕ್ತವಾಗಿರುತ್ತವೆ. ಇದನ್ನು ಅಲ್ಲಗಳೆಯುವುದು ಸುಲಭವಲ್ಲ. ಇಲ್ಲಿ "ಭಾಷಿಕ ಬಗೆಗಳಾಗಿ ವಿಶೇಷ ಅಭ್ಯಾಸಕ್ಕೆ ಒಳಗಾಗಿರುವ ಗಾದೆ ಒಗಟಗಳು ಅಷ್ಟಕ್ಕೇ ಸೀಮಿತವಾಗದೆ, ಸಾಹಿತ್ಯಿಕ ಬಗೆಗಳೂ ಆಗಬಹುದು"[೪] ಎಂಬ ಪ್ರೊ. ದೇ. ಜವರೇಗೌಡ ಅವರ ಅಭಿಪ್ರಾಯದಲ್ಲೂ ಇದೇ ಬಗೆಯ ಅನಿರ್ದಿಷ್ಟತೆ ಅಡಗಿದೆ. ಸಾಹಿತ್ಯಿಕ ಹಾಗು ಭಾಷಿಕ ಬಗೆಗಳೆರಡನ್ನೂ ಕೂಡಿಸಿಯೇ ಜನಪದ ಸಾಹಿತ್ಯವೆಂದು ಕರೆಯಬೇಕಾದ ಪ್ರಸಂಗ ಡಾ. ನಾಯಕರಿಗೆ ಬಂದಿರುವುದು ಗಾದೆ, ಒಗಟುಗಳಿಂದಾಗಿಯೇ ಎಂದು ತೋರುತ್ತದೆ. ವರ್ಗೀಕರಣ ಮಾಡುವಾಗ ಇನ್ನೂ ಸ್ವಲ್ಪ ಆಲೋಚಿಸಿದ್ದರೆ ಅವರು ಈ ದೋಷದಿಂದ ದೂರಾಗಬಹುದಿತ್ತು. ಸಾಹಿತ್ಯಕ್ಕೆ ಭಾಷೆ ಮೂಲ ಧನ, ಭಾಷೆಯ ಕಲಾತ್ಮಕ ರೂಪ ಸಾಹಿತ್ಯ. ಭಾಷೆ, ಸಾಹಿತ್ಯ ಎರಡರಲ್ಲೂ ಅನ್ಯೋನ್ಯ ಸಂಬಂಧವಿದೆ. ವಿಶಾಲಾರ್ಥದಲ್ಲಿ ಎರಡನ್ನೂ ವಾಙ್ಮಯ ಎಂಬ ಪದದಿಂದ ಸೂಚಿಸಬಹುದು. ಆದಕ್ಕಾಗಿ ವರ್ಗೀಕರಣ ಮಾಡುವಾಗ ಸಾಹಿತ್ಯಕ ಬಗೆ, ಭಾಷಿಕ ಬಗೆ ಎರಡನ್ನೂ ಒಳಗೊಳ್ಳುವಂತೆ 'ಜನಪದ ವಾಙ್ಮಯ' ಎಂಬುದಾಗಿ ಒಂದೇ ವರ್ಗ ಮಾಡಿದ್ದರೆ ಈ

೪, ತಿಮ್ಮಕ್ಕನ ಪದಗಳು : ಡಾ. ಎಲ್. ಆರ್. ಹೆಗಡೆ : ಮುನ್ನುಡಿ— ಪುಟ- v.

ಸಮಸ್ಯೆಯೇ ಏಳುತ್ತಿರಲಿಲ್ಲ ಭಾಷಿಕ ಬಗೆಯಲ್ಲಿಯ ಗಾದೆ, ಒಗಟಗಳನ್ನು ಹೊರತು ಪಡಿಸಿ ಉಳಿಯುವ ಸನ್ನೆ, ಅಭಿನಯದಂತೆ ಕ್ರಿಯಾತ್ಮಕವಾದುದು. ಅದನ್ನು ಕ್ರಿಯಾತ್ಮಕ ಬಗೆಯಲ್ಲಿ ಸೇರಿಸಬಹುದು.

ವೈಜ್ಞಾನಿಕ ಬಗೆ, ಕ್ರಿಯಾತ್ಮಕ ಬಗೆಗಳ ವರ್ಗೀಕರಣ ಯೋಗ್ಯವಾಗಿದೆ. ಸನ್ನೆಒಂದನ್ನು ಕ್ರಿಯಾತ್ಮಕ ಬಗೆಯಲ್ಲಿ ಸೇರಿಸಿದರಾಯಿತು.

ಆದರೆ, ಜನಸಾಮಾನ್ಯರಲ್ಲಿ ದೇವರು, ಧರ್ಮ, ನೀತಿ ಮುಂತಾದವುಗಳ ಬಗ್ಗೆ ಅವರವೇ ಆದ ಪರಂಪರಾಗತ ನಂಬುಗೆಗಳಿವೆ, ಸಿದ್ಧಾಂತಗಳಿವೆ, ಧಾರ್ಮಿಕ ಆಚರಣೆಯ ವಿಧಿ ವಿಧಾನಗಳಿವೆ. ಇವುಗಳನ್ನು ಯಾವ ಬಗೆಯಲ್ಲಿ ಸೇರಿಸಬೇಕು? ಇದರಂತೆ ಜನಜೀವನದಲ್ಲಿ ಪರಂಪರಾಗತ ನಡೆದು ಬಂದ ಹಲವು ಸಂಪ್ರದಾಯಗಳಿವೆ. ಇವುಗಳನ್ನು ಯಾವ ಬಗೆಯಲ್ಲಿ ವರ್ಗೀಕರಿಸಬೇಕು? ಇವೆರಡೂ ಡಾ. ನಾಯಕರು ಸೂಚಿಸಿರುವ ಯಾವ ಬಗೆಯಲ್ಲೂ ಒಳಗೊಳ್ಳ ಲಾರವೆಂಬುದು ಸ್ಪಷ್ಟ. ಆದರೆ ಜಾನಪದದ (Folklore) ವಿಶಾಲಾರ್ಥದಲ್ಲಿ ಒಳಗೊಳ್ಳುವ ಇವುಗಳನ್ನು ಕೈ ಬಿಡುವಂತಿಲ್ಲ. ಅದಕ್ಕಾಗಿ ಜಾನಪದ ಸಮಸ್ತದಲ್ಲಿ ಬರುವ ವಿವಿಧ ವಿಷಯಗಳೆಲ್ಲ ಒಳಗೊಳ್ಳುವಂತೆ, ಮೇಲಣ ವರ್ಗೀಕರಣದಲ್ಲಿ ಮಾರ್ಪಾಡು ಮಾಡುವುದು ಅವಶ್ಯವೆನಿಸುವುದು. ಇಲ್ಲಿಯ ವರೆಗಿನ ಚರ್ಚೆಯ ಹಿನ್ನೆಲೆಯಲ್ಲಿ ಜಾನಪದವನ್ನು ೧) ಜನಪದ ವಾಙ್ಮಯ ೨) ಜನಪದ ಕ್ರಿಯೆ ೩) ಜನಪದ ಧರ್ಮ ೪) ಜನಪದ ವಿಜ್ಞಾನ ೫) ಜನಪದ ಸಂಪ್ರದಾಯ ಎಂದು ವರ್ಗೀಕರಿಸಿದರೆ ಎಲ್ಲ ಸರಿ ಹೋಗು ವುದೆಂದು ನನ್ನ ಭಾವನೆ. ಇವುಗಳನ್ನೇ ವಾಙ್ಮಯಾತ್ಮಕ ಬಗೆ, ಕ್ರಿಯಾ ತ್ಮಕ ಬಗೆ, ಧಾರ್ಮಿಕ ಬಗೆ, ವೈಜ್ಞಾನಿಕ ಬಗೆ, ಸಾಂಪ್ರದಾಯಿಕ ಬಗೆ ಎಂದೂ ಕರೆಯಬಹುದು. ಒಂದೊಂದು ವಿಭಾಗದಲ್ಲಿ ಕೆಳಗಿನಂತೆ ವಿಷಯ ಗಳನ್ನು ಅಳವಡಿಸಬಹುದು.

೧) ಜನಪದ ವಾಙ್ಮಯ :	ನುಡಿ, ನುಡಿಗಟ್ಟು, ಗಾದೆ, ಒಗಟು, ಒಡಪು, ಗೀತೆ, ಕಥೆ, ನಾಟಕ,
೨) ಜನಪದ ಕ್ರಿಯೆ :	ಸನ್ನೆ, ಅಭಿನಯ, ನೃತ್ಯ, ಸಂಗೀತ, ಆಟ–ನೋಟ, ಉಡಿಗೆ, ಅಡಿಗೆ.
೩) ಜನಪದ ಧರ್ಮ :	ದೇವರು, ಧರ್ಮ, ನೀತಿಯ ಬಗೆಗೆ ಜನರ ಕಲ್ಪನೆ, ಭಾವನೆ, ಉಪಾಸನೆ, ವಿಧಿ–ವಿಧಾನಗಳು.

೪) ಜನಪದ ವಿಜ್ಞಾನ: ವೈದ್ಯ, ಮಾಟ, ಮಂತ್ರ, ಭವಿಷ್ಯ, ಮಳೆ-ಬೆಳೆ, ದನಕರುಗಳ ಲಕ್ಷಣಾದಿಗಳ ವಿಚಾರ, ಕಾರ್ಯ-ಕಾರಣ ಸೂಚಿ ನಂಬುಗೆ.

೫) ಜನಪದ ಸಂಪ್ರದಾಯ: ರೂಢಿ, ಆಚಾರ, ಮೂಢನಂಬುಗೆ.

ಈ ಬಗೆಯಾಗಿ ಜಾನಪದವನ್ನು ವಿಭಾಗಿಸಿದರೆ ಯಾವುದೇ ಬಗೆಯು ಅನಿರ್ದಿಷ್ಟತೆಗೆ ಅವಕಾಶ ಉಳಿಯಲಿಕ್ಕಿಲ್ಲ. ಇಂಥದೊಂದು ಉಳಿಯಿತೆಂಬ ಕೊರತೆ ಭಾವವೂ ಇಲ್ಲದಾಗುವುದು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಪರವಾಗಿ ಜಾನಪದ ಮಾಲೆಯಲ್ಲಿ ಪ್ರಕಟವಾಗಿರುವ ಸಂಗ್ರಹಗಳ ಮುನ್ನುಡಿಯಲ್ಲಿ ಪ್ರಾಸಂಗಿಕವಾಗಿ ಜಾನಪದವು ಸಾಹಿತ್ಯಿಕ, ಭಾಷಿಕ, ವೈಜ್ಞಾನಿಕ, ಕ್ರಿಯಾತ್ಮಕ ಹೀಗೆ ನಾಲ್ಕು ಬಗೆ ಎಂದು ಬರೆಯಲಾಗಿದೆ. ಈ ಹೊಸ ಸೂಚನೆಯ ಹಿನ್ನೆಲೆಯಲ್ಲಿ ಅದರ ಪುನರಾಲೋಚನೆ ಮಾಡುವುದು ವಿಹಿತ.

★ ಜ್ಯೋತಿ. ಹೊಸೂರ

ಹಿಂದೂ ಧರ್ಮದಲ್ಲಿ ವಿವಾಹ

ಸಮಾಜವು ಸಾಮಾಜಿಕ ಸಂಬಂಧಗಳ ಜಾಳಿಗೆ. ಆದರಲ್ಲಿ ವಿವಿಧ ರೀತಿ, ರೂಢಿ, ಸಂಪ್ರದಾಯ, ಪದ್ಧತಿ ಮತ್ತು ಸಂಘಗಳು ಕೂಡಿಕೊಂಡಿರುತ್ತವೆ. ಈ ವಿವಿಧ ಪದ್ಧತಿಯಲ್ಲಿ ವಿವಾಹ ಒಂದು ಮುಖ್ಯವಾದ ಪದ್ಧತಿಯಿದ್ದು ಮನುಷ್ಯನ ಸಾಮಾಜಿಕ ಎಲ್ಲ ಹಂತಗಳಲ್ಲಿ ಒಂದಲ್ಲ ಒಂದು ರೀತಿಯಿಂದ ರೂಢಿಯಲ್ಲಿವೆ. ಆದರೆ ವಿವಾಹಕ್ಕೆ ಹಿಂದೂ ಧರ್ಮದಲ್ಲಿ, ಯಾವ ಧರ್ಮದಲ್ಲಿಯೂ ಕಾಣಬಾರದ ವಿಶಿಷ್ಟ ಸ್ಥಾನಮಾನಗಳಿವೆ. ಸಾಮಾನ್ಯವಾಗಿ ವಿವಾಹವೆಂದರೆ ಸ್ತ್ರೀ-ಪುರುಷರು ತಮ್ಮ ಲೈಂಗಿಕ ಸುಖಕ್ಕಾಗಿ ಕಲ್ಪಿಸಿಕೊಂಡ ಸಂಬಂಧವೆಂದು ಪರಿಗಣಿಸಲಾಗುತ್ತಿದೆ. ಆದರೆ ಸಂತಾನವಿಲ್ಲದವರಿಗೆ ಜೀವನದ ಅಂತಿಮ ಪುರುಷಾರ್ಥವಾದ ಮೋಕ್ಷವು ಲಭಿಸಲಾರದು ಎಂದು ಹಿಂದೂ ಧರ್ಮವು ಸಾರುತ್ತದೆ. ಮೋಕ್ಷ ಸಾಧನೆಗಾಗಿ ಸಂತಾನವೃದ್ಧಿಯು ಅವಶ್ಯವೆಂದು ಈ ಧರ್ಮದ ವಿಚಾರಧಾರೆಯಾಗಿದೆ. ಮನುವಿನ ದೃಷ್ಟಿಯಲ್ಲಿ ಮದುವೆಯಾಗದ ಮತ್ತು ಮಕ್ಕಳಾಗದವರ ಜೀವನವು ಅಪೂರ್ಣ. ಅದನ್ನೇ ಬೇರೆ ಶಬ್ದಗಳಲ್ಲಿ ವಿವರಿಸುವದಾದರೆ, ಪುರುಷರು ಪಿತೃವಾಗಲು ಮತ್ತು ಸ್ತ್ರೀಯರು ಮಾತೃವಾಗಲು ಜನ್ಮತಾಳಿದ್ದಾರೆ ಎಂದಾಗುತ್ತದೆ. ಪ್ರಾಚೀನ ಭಾರತೀಯ ಆಶ್ರಮಧರ್ಮದಲ್ಲಿ ಗೃಹಸ್ಥಾಶ್ರಮವು ಅವಿಭಾಜ್ಯ ಅಂಗವಾಗಿದೆ. ಅದನ್ನು ಪ್ರತಿಯೊಬ್ಬ ಸ್ತ್ರೀ-ಪುರುಷರು ತಮ್ಮ ಜೀವನದಲ್ಲಿ ತಪ್ಪಿಸಲು ಸಾಧ್ಯವಿಲ್ಲ. ತಪ್ಪಿಸಿದಲ್ಲಿ ಅದನ್ನು ಪಾಪವೆಂದು ಪರಿಗಣಿಸಲಾಗುತ್ತಿತ್ತು. ಇದರಿಂದ ಹಿಂದೂ ಧರ್ಮದಲ್ಲಿ ವಿವಾಹಕ್ಕೆ ಇರುವ ವಿಶಿಷ್ಟ ಸ್ಥಾನ–ಮಾನಗಳ ಕಲ್ಪನೆಯಾಗುತ್ತದೆ.

ವಿವಾಹದ ಉದ್ದೇಶ

ಸಾಮಾನ್ಯವಾಗಿ ಲೈಂಗಿಕ ಸಂಬಂಧವೇ ವಿವಾಹದ ಉದ್ದೇಶವೆಂದು ತಿಳಿಯಲ್ಪಡುತ್ತಿದ್ದರೂ ಹಿಂದೂ ಧರ್ಮದಲ್ಲಿ ಅದಕ್ಕೆ ತೃತೀಯ ಸ್ಥಾನವನ್ನು ಕೊಡಲಾಗುತ್ತಿದೆ. ಧರ್ಮಪರಿಪಾಲನೆ ಪ್ರಥಮ ಉದ್ದೇಶವೆಂದೂ, ಪ್ರಜೋತ್ಪತ್ತಿ ದ್ವಿತೀಯ ಉದ್ದೇಶವೆಂದೂ ಮತ್ತು ರತಿಸುಖ ತೃತೀಯ ಉದ್ದೇಶವೆಂದೂ ತಿಳಿಯಲಾಗುತ್ತಿದೆ. ಆದ್ದರಿಂದ ಶಾಸ್ತ್ರೀಯ ದೃಷ್ಟಿಯಿಂದ ನೋಡಿದರೆ ವಿವಾಹವು ಧರ್ಮಪಾಲನೆ, ಸಂತಾನ ಅಭಿವೃದ್ಧಿ, ಶಾರೀರಿಕಸುಖ,

ಸಮಾಜದ ಅಭಿವೃದ್ಧಿಗಳಿಗಾಗಿ ಸ್ತ್ರೀ ಪುರುಷರು ಮಾಡಿಕೊಂಡ ಸಂಬಂಧವೆಂದು ಹೇಳಬಹುದು.

ವಿವಾಹ ವಿಧಿ

ಹಿಂದೂ ಧರ್ಮದಲ್ಲಿ ವಿವಾಹ-ವಿಧಿಯು ವಿಶಿಷ್ಟ ಸ್ವರೂಪದ್ದಾಗಿದೆ. ಪ್ರಥಮವಾಗಿ ಕನ್ಯಾದಾನ ಸಮಾರಂಭದಲ್ಲಿ ಕನ್ಯಾಪಿತೃವು ತನ್ನ ಪುತ್ರಿಯನ್ನು ವರನಿಗೆ ಅರ್ಘ್ಯರೂಪದಲ್ಲಿ ದಾನವೆಂದು ಕೊಡುತ್ತಾನೆ. ದ್ವಿತೀಯ ಸಮಾರಂಭವಾದ "ಅಗ್ನಿಪರಿಣಯನ"ದಲ್ಲಿ ವರನು ಕನ್ಯೆಯ ಪಾಣಿಗ್ರಹಣ ಮಾಡಿ ಚತುರ್ದಿಕ್ಕುಗಳಲ್ಲಿ ಜಲಕಲಶಗಳಿಂದಾವೃತವಾದ ಅಗ್ನಿಸಮ್ಮುಖದಲ್ಲಿ ಪಂಚಪ್ರದಕ್ಷಿಣೆ ಮಾಡಿ ಕನ್ನೆಯನ್ನು ಧರ್ಮಪತ್ನಿಯೆಂದು ಸ್ವೀಕರಿಸುತ್ತಾನೆ. ತೃತೀಯದಾಗಿ ಬರುವ ಸಮಾರಂಭವು "ಸಪ್ತಪದಿ" ಯೆಂದು ಕರೆಯಲಾಗುತ್ತದೆ. ಇದರಲ್ಲಿ ಪತಿ–ಪತ್ನಿಯರು ಕೂಡಿಕೊಂಡು ಏಳು ಹೆಜ್ಜೆಗಳನ್ನು ನಡೆದು ತಮ್ಮ ವಿವಾಹ ಜೀವನವು ಆರಂಭವಾಯಿತೆಂದು ಸಂಕೇತಾತ್ಮಕವಾಗಿ ಸೂಚಿಸುತ್ತಾರೆ. ಈ ಎಲ್ಲ ವಿವಾಹ ವಿಧಿಗಳು ಮಂತ್ರಘೋಷಣಮಯವಾದ ವಾತಾವರಣದಲ್ಲಿ ಧರ್ಮ ಗುರುವಿನ ಆಶೀರ್ವಾದದಿಂದ ಕೊನೆಗೊಳ್ಳುತ್ತವೆ. ಇದರಲ್ಲಿ ಏನಾದರೂ ಲೋಪ–ದೋಷಗಳು ಉಂಟಾದರೆ ವಿವಾಹ ವಿಧಿಯು ಅಪೂರ್ಣವಾಯಿತೆಂದು ತಿಳಿಯಲ್ಪಡುತ್ತಿತ್ತು. ಈ ದೃಷ್ಟಿಯಿಂದ ಹಿಂದೂ ವಿವಾಹವು ಧಾರ್ಮಿಕ ಸಂಸ್ಕಾರವೆಂದು ಪರಿಗಣಿಸಲ್ಪಟ್ಟು ಅದು ಸ್ತ್ರೀ-ಪುರುಷರ ಪವಿತ್ರವಾದ ಸಂಬಂಧವೆಂದು ತಿಳಿಯಲ್ಪಡುತ್ತಿತ್ತು. ಆದ್ದರಿಂದ ವಿವಾಹವು ಕೇವಲ ಲೈಂಗಿಕ ಸಂಬಂಧವೆಂದು ತಿಳಿಯುವದು ವಿವಾಹದ ದೈವಿಕ ಸ್ವರೂಪವನ್ನೂ ಅಲ್ಲಗಳೆದಂತಾಗುತ್ತದೆ.

ನಮ್ಮ ಧರ್ಮದಲ್ಲಿ ವಿವಾಹವು ನಿರಂತರ, ಅವಿಚ್ಛೇದ, ಅವಿನಾಶಿ, ಸ್ಥಿರ ಮತ್ತು ಅಭೇದ್ಯ ದೈವೀಸ್ವರೂಪದ ಸಂಬಂಧವಾಗಿದೆ. ಅದು ಬೇಕಾದಾಗ ಮಾಡಿಕೊಂಡು ಬೇಡವಾದಾಗ ಕಡಿದುಕೊಳ್ಳುವ ಭೌತಿಕ ಸಂಬಂಧವಲ್ಲ. ಒಮ್ಮೆ ವಿವಾಹವು ಜರುಗಿತೆಂದರೆ ಪತಿ-ಪತ್ನಿಯರು ಭಿನ್ನ ಅಭಿರುಚಿ ಮತ್ತು ಭಿನ್ನ ಸ್ವಭಾವದವರಾಗಿದ್ದರೂ ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಈ ಪರಸ್ಪರ ಹೊಂದಾಣಿಕೆಯಲ್ಲಿ ಸ್ತ್ರೀ ಪುರುಷರು ತಮ್ಮ ವೈಯಕ್ತಿಕ ಅಭಿರುಚಿಗಳಿಗೆ ಬಲವಾಗಿ ಅಂಟಿಕೊಳ್ಳದೆ, ಪರಸ್ಪರ ಹಿತದ ದೃಷ್ಟಿಯಿಂದ ತ್ಯಾಗ ಮನೋಧರ್ಮದವರಾಗದ ಹೊರತು ಅವರ ಜೀವನದಲ್ಲಿ ಶಾಂತಿ ಸಮೃದ್ಧಿಗಳು ಬರಲಾರವು. ಈ ದೃಷ್ಟಿಯಿಂದ ಹಿಂದೂ ವಿವಾಹವು ಜೀವನದಲ್ಲಿ ಜರುಗುವ ಸಾಮಾನ್ಯವಾದ ಘಟನೆಯಲ್ಲ, ಜೀವನದ ಅಂತಿಮ ಪುರುಷಾರ್ಥವಾದ ಮೋಕ್ಷಕ್ಕೆ ಮಾಡಿಕೊಂಡ ದಿವ್ಯಸಾಧನೆ.

ಪತಿ-ಪತ್ನಿಯರ ಸಂಬಂಧ

ವಿವಾಹವು ಅವಿಚ್ಛೇದ ಮತ್ತು ಅಭೇದ್ಯ ಸಂಬಂಧವಾಗಿದ್ದರೂ ಪತಿ-ಪತ್ನಿಯರು ಸಮಾನ ಅಧಿಕಾರವುಳ್ಳವರೆಂದು ತಿಳಿಯದೆ, ಸ್ತ್ರೀಯು ಪುರುಷನ ಅಧಿಕಾರವ್ಯಾಪ್ತಿಗೆ ಒಳಪಟ್ಟವಳೆಂದು ತಿಳಿಯಲಾಗುತ್ತಿದೆ. ಪುರಾಣ ಸಾಹಿತ್ಯದಲ್ಲಿ ಸ್ತ್ರೀಯರ ವಿಷಯದಲ್ಲಿ "ಪಾತಿವೃತ್ಯ" ಧರ್ಮವು ಒತ್ತಿ ಹೇಳಲ್ಪಟ್ಟಿದ್ದು. ಸ್ತ್ರೀಯು ನದಿಯ ರೀತಿಯಲ್ಲಿ ಪುರುಷನೆಂಬ ಸಾಗರದಲ್ಲಿ ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡು ಪತಿಯ ಸುಖ ದುಃಖಗಳಲ್ಲಿ ಭಾಗಿಯಾಗಿ ಐಕ್ಯತೆಯನ್ನು ಪಡೆಯಬೇಕು. ಪತ್ನಿಯು ತನ್ನ ಪತಿಯ ಹಿತ ಮತ್ತು ಸುಖಗಳ ಸಲುವಾಗಿ ಏನು ಬೇಕಾದರೂ ತ್ಯಾಗ ಮಾಡಲು ಸಿದ್ಧವಾಗಿರಬೇಕು. ಇಂತಹ ಉದಾಹರಣೆಗಳು ಪುರಾಣ ಸಾಹಿತ್ಯದಲ್ಲಿ ಸಾಕಷ್ಟು ಕಂಡುಬರುತ್ತವೆ. ಧರ್ಮಪತ್ನಿಯೊಬ್ಬಳು ಸ್ವತಃ ತನ್ನ ಪತಿಯನ್ನು ವೇಶ್ಯೆಯ ಮನೆಯವರೆಗೆ ಸಾಗಿಸಿದ ಒಂದು ಉದಾಹರಣೆಯುಂಟು.

ಹಿಂದೂ ಸಂಸ್ಕೃತಿಯ ಸ್ತ್ರೀಧರ್ಮ ಅಥವಾ "ಸತೀಧರ್ಮ"ದಲ್ಲಿ ಪತ್ನಿಯು ತನ್ನ ಪತಿಯ ಮರಣದ ನಂತರ ದ್ವಿತೀಯ ವಿವಾಹದ ವಿಚಾರವನ್ನು ಲವಲೇಶಮಾಡದೆ ತನ್ನ ಮೃತ ಪತಿಯ ಆತ್ಮಶಾಂತಿಗಾಗಿ ಮತ್ತು ತನ್ನ ಆತ್ಮೋನ್ನತಿಗಾಗಿ ವಿಧವೆಯಾಗಿ ಸಚ್ಚಾರಿತ್ರ್ಯವುಳ್ಳವಳಾಗಿ ಕಾಲಹರಣಮಾಡಬೇಕು. ಇಲ್ಲವೆ ತನ್ನ ಪತಿಯ ಶವದೊಂದಿಗೆ ಸಹಗಮನಮಾಡಿ ತನ್ನ ಪತಿಯ ಆತ್ಮದೊಂದಿಗೆ ಐಕ್ಯ ಹೊಂದಬೇಕು. ಆದರೆ ಕೆಲವು ತಜ್ಞರ ಅಭಿಪ್ರಾಯದಂತೆ, ಸ್ತ್ರೀಯು ದ್ವಿತೀಯ ಪತಿಯನ್ನು ಕೆಲವೊಂದು ಸಬಲವಾದ ಆಧಾರಗಳಮೇಲೆ ಆಯ್ಕೆ ಮಾಡಿಕೊಳ್ಳಬಹುದು. ಒಂದು ವೇಳೆ ಪತಿಯು ನಂಪುಸಕನಾಗಿದ್ದರೆ, ದೇಶಾಂತರ ಪ್ರಯಾಣದಿಂದ ತಿರುಗಿ ಬಾರದೇ ಇದ್ದರೆ, ದುರಾಚಾರದಿಂದ ಕೂಡಿದವನಾಗಿದ್ದರೆ, ಜೀವಕ್ಕೆ ವಿಪತ್ತನ್ನುಂಟುಮಾಡುವವನಾಗಿದ್ದರೆ ಪತ್ನಿಯು ಬೇರೆ ಪತಿಯನ್ನು ಪಡೆಯಬಹುದು.

ವಯೋಮಿತಿ

ವಿವಾಹ ವಯೋಮಿತಿಯ ಬಗೆಗೆ ಹಿಂದೂ ವಿದ್ವಾಂಸರಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಆಶ್ರಮ ಧರ್ಮದಂತೆ ಪುರುಷನು "ಬ್ರಹ್ಮಚರ್ಯ"ವನ್ನಾಚರಿಸಿ ವಿದ್ಯಾಸಂಪಾದನೆ ಮಾಡಿದ ತರುವಾಯ ಮದುವೆಯಾಗಬೇಕು. ಸಾಮಾನ್ಯವಾಗಿ ವರನ ವಯಸ್ಸು ವಧುವಿನ ವಯಸ್ಸಿಗಿಂತ ಹೆಚ್ಚಾಗಿರಬೇಕು. ಈ ಸಂಪ್ರದಾಯವು ಹಿಂದೂ ಧರ್ಮದಲ್ಲಿ ಇಂದಿಗೂ ಪ್ರಚಲಿತವಿದೆ. ಮನುವಿನ

ಪ್ರಕಾರ ಮೂವತ್ತು ವರುಷದ ಪುರುಷನು ಹನ್ನೆರಡು ವರುಷದ ಕನ್ನೆಯನ್ನೂ, ಇಪ್ಪತ್ತನಾಲ್ಕು ವರುಷದ ಪುರುಷನು ಎಂಟು ವರುಷದ ಕನ್ನೆಯನ್ನೂ ಮದುವೆಯಾಗಬಹುದು. ವಾತ್ಸಾಯನಮಹರ್ಷಿಯ ಮತದಂತೆ ವರನ ವಯಸ್ಸು ಏನಿಲ್ಲೆಂದರೂ ವಧುವಿನ ವಯಸ್ಸಿಗಿಂತ ಮೂರು ವರುಷ ಹೆಚ್ಚು ಇರಬೇಕು. ಇದರಿಂದ ವಧುವಿನ ವಯಸ್ಸು ವರನ ವಯಸ್ಸಿಗಿಂತ ಹೆಚ್ಚು ಇರಬಾರದೆಂದು ವಿದಿತವಾಗುತ್ತದೆ.

ವಿವಾಹ ವಿಚ್ಛೇದ ಮತ್ತು ಪುನರ್ವಿವಾಹ

ಕೌಟಿಲ್ಯನ ಅರ್ಥಶಾಸ್ತ್ರದಂತೆ ಪರಸ್ಪರ ದ್ವೇಷ ಮತ್ತು ವೈರತ್ವವಿಲ್ಲದೆ ಪತಿ ಪತ್ನಿಯರು ವಿವಾಹ ವಿಚ್ಛೇದನ ಮಾಡಿಕೊಳ್ಳಲಾರರು. ಮನುವಿನ ವಿಚಾರದಂತೆ ಪತಿಯು ಆಕಸ್ಮಿಕವಾಗಿ ಧರ್ಮಕಾರ್ಯಕ್ಕೆ ದೇಶಾಂತರ ಹೋಗಿದ್ದರೆ ಸತಿಯು ಅವನಿಗಾಗಿ ಎಂಟು ವರುಷ ದಾರಿಕಾಯಬೇಕು. ವಿದ್ಯಾಭ್ಯಾಸಕ್ಕೆ ಹೋಗಿದ್ದರೆ ಆರು ವರುಷ, ಬೇರೆ ಪತ್ನಿಯ ಮನೆಗೆ ಹೋಗಿದ್ದರೆ ಮೂರು ವರುಷ ಕಾಯಬೇಕು. ತರುವಾಯ ಅವಳು ವಿವಾಹವಿಚ್ಛೇದನವನ್ನು ಪಡೆಯಬಹುದು.

ಮನುವಿನ ದೃಷ್ಟಿಯಲ್ಲಿ ವಿಧವೆಯರ ವಿವಾಹವು ನಿಷೇಧಿಸಲ್ಪಟ್ಟಿದೆ. ಏಕೆಂದರೆ ಅದು ಶಾಸ್ತ್ರಸಮ್ಮತವಲ್ಲ. ಪುರುಷನು ಕೆಲವು ಸಂದರ್ಭಗಳಲ್ಲಿ ಬಹುಪತ್ನೀತ್ವವನ್ನೂ ಹೊಂದಬಹುದು. ಪ್ರಥಮ ಪತ್ನಿಯು ತಾಯಿಯಾಗದೇ ಹೋದಲ್ಲಿ, ಕೇವಲ ಹೆಣ್ಣುಮಕ್ಕಳಿಗೆ ಜನ್ಮವೀಯುತ್ತ ಹೋದಲ್ಲಿ ಇಲ್ಲವೆ ಹುಟ್ಟಿದ ಕೂಸುಗಳು ಮೃತವಾಗಿ ಜನಿಸಿದರೆ ಪುರುಷನಿಗೆ ಪುನರ್ವಿವಾಹವಾಗಲು ಅವಕಾಶವಿದೆ. ಆದರೆ ಅವನು ಇಂಥ ಪ್ರಸಂಗಗಳಲ್ಲಿ ಪುನರ್ವಿವಾಹವಾಗಲು ಅವಧಿಯ ಕಟ್ಟಳೆಯಿದೆ. ಪತ್ನಿಯು ಕೇವಲ ಹೆಣ್ಣುಮಕ್ಕಳನ್ನು ಪಡೆಯುತ್ತ ಹೋದರೆ ಪತಿಯು ಏನಿಲ್ಲೆಂದರೂ ಹನ್ನೆರಡು ವರುಷದ ವರೆಗೆ ಗಂಡುಮಗುವಿಗಾಗಿ ದಾರಿ ಕಾಯಬೇಕು. ಹುಟ್ಟಿದ ಕೂಸುಗಳು ಮೃತವಾಗುತ್ತಿದ್ದರೆ, ಹತ್ತು ವರುಷ ದಾರಿ ಕಾಯಬೇಕು. ಪತ್ನಿಯು ಬಂಜೆಯಾಗಿ ಉಳಿದರೆ ಎಂಟು ವರುಷ ದಾರಿ ಕಾಯಬೇಕು. ಆ ಮೇಲೆ ಬೇರೊಂದು ಮದುವೆಯಾಗಬಹುದು. ಈ ದೃಷ್ಟಿಯಿಂದ ಹಿಂದೂಧರ್ಮದಲ್ಲಿ ಬಹುಪತ್ನೀತ್ವವು ನಿಯಮಬಾಹಿರವಾಗಿರದೆ ಕೇವಲ ಅಪವಾದ ಸ್ವರೂಪದ್ದಾಗಿದೆ. ಆದರೆ ಹಿಂದೂ ಧರ್ಮದಲ್ಲಿ ಕೇವಲ ಪುರುಷ ಸಂತಾನದ ಆಧಾರದ ಮೇಲೆಯೇ ಹೆಚ್ಚು ಪುನರ್ವಿವಾಹವು ಜಾರಿಯಲ್ಲಿದೆ. "ನ ಪುತ್ರೋsಗತಿರ್ನಾಸ್ತಿ" ಎಂಬುದು ಹಿಂದೂ ವಿಚಾರಧಾರೆಯಾಗಿದೆ. ಸಂಸ್ಕೃತದ "ಪುತ್" ಶಬ್ದದ ಅರ್ಥವು

"ನರಕ". "ಪುತ್ರ" ಎಂದರೆ ನರಕದಿಂದ ಪಾರುಮಾಡುವವನು ಎಂದಾಗುತ್ತದೆ. ಆದ್ದರಿಂದ ಪುತ್ರಸಂಪಾದನೆಗಾಗಿ ಬಹು ಪತ್ನೀತ್ವವನ್ನು ಹೊಂದಬಹುದು.

ಈ ದೃಷ್ಟಿಯಿಂದ ಹಿಂದೂ ವಿವಾಹವು ಕೇವಲ ಭೌತಿಕ ಸಂಬಂಧವಾಗಿರದೇ ದೈವಿಕ ಸಂಬಂಧವಾಗಿದ್ದು; ಧರ್ಮಪಾಲನೆಗಾಗಿಯೂ, ಸಂಸಾರ ಸುಖಕ್ಕಾಗಿಯೂ ಪತಿ-ಪತ್ನಿಯರು ಮಾಡಬೇಕಾದ ತ್ಯಾಗ ಮತ್ತು ಸಂಯಮಗಳ ದ್ಯೋತಕವಾಗಿದೆ. ಶಾರೀರಿಕ ಮತ್ತು ಲೈಂಗಿಕ ಸುಖಕ್ಕಾಗಿ ಪತ್ನಿಯ ವಯಸ್ಸು ಪತಿಯ ವಯಸ್ಸಿಗಿಂತ ಕಡಿಮೆ ಇರಬೇಕೆಂದೂ ವಿವಾಹವಿಚ್ಛೇದ ಮತ್ತು ಪುನರ್ವಿವಾಹಗಳು ಸಬಲವಾದ ಕಾರಣವಿಲ್ಲದೆ ಕೇವಲ ಕುಂಟುನೆಪಗಳ ಆಧಾರದಿಂದ ಜರುಗಬಾರದೆಂದೂ ಹಿಂದೂ ಧರ್ಮ ತಿಳಿಸುತ್ತದೆ. ಇದರ ಮೇಲಿಂದ ಈ ಧರ್ಮದಲ್ಲಿ ವಿವಾಹಕ್ಕೆ ಇರುವ ಸ್ಥಾನ-ಮಾನಗಳ ಅರಿವು ಆಗುತ್ತದೆ.

★ ಎಂ. ಬಿ. ಚರಂತಿಮಠ

ಬಿಜ್ಜಲದೇವ ಮತ್ತು ಸೋಯಿದೇವ ಇವರ ಉಮ್ರಾಣಿ ಶಾಸನ

ಉಮ್ರಾಣಿ ಗ್ರಾಮವು ಸಾಂಗಲಿ ಜಿಲ್ಲೆಯ ಜತ್ತಿ ತಾಲೂಕಿನಲ್ಲಿ ಜತ್ತಿಯಿಂದ ದಕ್ಷಿಣಕ್ಕೆ ಸುಮಾರು ಹತ್ತು ಮೈಲು ಅಂತರದಲ್ಲಿ, ಅಥಣಿಯಿಂದ ಈಶಾನ್ಯಕ್ಕೆ ಸುಮಾರು ಇಪ್ಪತ್ತು ಮೈಲು ಅಂತರದಲ್ಲಿ ಇದೆ. ಪ್ರಸ್ತುತ ಶಾಸನವನ್ನು ಇನ್ನೊಂದು ಶಾಸನದ ಜೊತೆಯಲ್ಲಿ ಆ ಗ್ರಾಮದ ಮಾದರಗೇರಿಯ ನಡುವಿನ ಅಂಗಳದಲ್ಲಿ ನಿಲ್ಲಿಸಲಾಗಿದೆ. ಮಾದಿಗರು ಈ ಎರಡೂ ಶಾಸನಗಳನ್ನು ತಮ್ಮ ದೇವತೆಗಳೆಂದು ಪೂಜಿಸುತ್ತಿರುವರು. ಈ ಶಾಸನದ ಬಹುಭಾಗ ಹೂತು ಹೋಗಿದ್ದು ಮಾದಿಗರ ಮನವೊಲಿಸಿ ಅದನ್ನು ಅಗಿಸಿ ನೋಡಲಾಗಿ ಅದು ಸುರಕ್ಷಿತವಾಗಿದ್ದುದು ಕಂಡು ಬಂದಿತು.

ಶಾಸನದ ಲಿಪಿ ಮತ್ತು ಭಾಷೆ ಕನ್ನಡ, ಆದರೆ ಮೊದಲಿನ ಮಂಗಳ ಪದ್ಯವು ಸಂಸ್ಕೃತದಲ್ಲಿ ಇದೆ.

ಶಾಸನದ ಅಕ್ಷರವಿನ್ಯಾಸ (Orthegraphy): (೧) ಒತ್ತಕ್ಷರ ಪ್ರಸಂಗ ದಲ್ಲಿ ಅನುನಾಸಿಕದ ಹಿಂದೆ ಬಿಂದುವನ್ನು ಉಪಯೋಗಿಸಿದೆ : ಉದಾ : ಹೆಂಮಾಡಿ (ಸಾಲು,೧೨,೨೭); ಪ್ರಂಣಮ (ಸಾ. ೬೩); ಮಂನಯರ (ಸಾ. ೬೫); ತಂನೊಳ್ (ಸಾ. ೫೬): ಮಾಳಿಯಂಣ (ಸಾ. ೭೧); (೨) ಕೆಲವೆಡೆ ಬಿಂದುವನ್ನು ಅನ ವಶ್ಯಕವಾಗಿ ಕೊಟ್ಟಿದೆ; ಉದಾ : ನೃಪರಂಸ್ವಯ (ಸಾ. ೯–೧೦); ಪುಂಣ್ಯಂ (ಸಾ. ೨೩): ದ್ದಂನ್ಯರೇ (ಸಾ. ೩೯); ಬ್ರಂಹ್ಮಪುರಿಯೊಳಗೆ (ಸಾ. ೪೯); (೩) ಕೆಲವೆಡೆ ಆಕಾರ ಸ್ಥಳದಲ್ಲಿ ಎಕಾರ ಉಪಯೋಗಿಸಲಾಗಿದೆ; ಉದಾ : ಭುವ ನಾಶ್ರೆಯಂ (ಸಾ. ೧೭); ರುಗ್ಯೆಜು– (ಸಾ. ೩೨–೩೩); ಪಂನೆಗ (ಸಾ. ೪೬); ಕೆಲವೆಡೆ ಎಕಾರ ಸ್ಥಳದಲ್ಲಿ ಆಕಾರ ಉಪಯೋಗಿಸಲಾಗಿದೆ; ಉದಾ : ಗ್ಗಣಯ (ಸಾ. ೪೦); ಜಸದೊಡಯಂ (ಸಾ. ೪೦); ಎಸಯಲು (ಸಾ. ೪೩); ಕೆಱಯ (ಸಾ. ೫೦); ಅಡ್ಡವಟ್ಟಯಿಂ (ಸಾ. ೫೧); ಪ್ರಜಯಂ (ಸಾ. ೫೫); ದೆಂಘತ್ತಾಱನಯ (ಸಾ. ೫೨) ಮತ್ತು ಕೊಂಡಯ್ಬನಯ (ಸಾ. ೬೩) (೪) ಸಾಮಾನ್ಯ ವಾಗಿ ರೇಫೆಯ ಮುಂದೆ ದ್ವಿತ್ವ ಬಂದಿದೆ. ಉದಾ ; ನುಬ್ಬಿಗೀಗೆ (ಸಾ. ೫), ಸಾಮಾಥಬ್ಬಣ, (ಸಾ. ೩೩), ಅನೇಕಚ್ಚತುರಾನನರ್ (ಸಾ. ೨೫), ಧೀಶಾಚ್ಚಿ ತಸ್ಸತ್ಯ (ಸಾ. ೩೩). ಕೆಲವಡೆ ದ್ವಿತ್ವ ಉಪಯೋಗಿಸಿರುವುದಿಲ್ಲ; ಉದಾ : ಚಂದ್ರಾರ್ಕ (ಸಾ. ೨೦). ಹೆಂಮರ್ (ಸಾ. ೨೯), ಇನ್ನು, ಗುಣಧಾಮಂಣ್ಣಯ ಶೀಳರ್ (ಸಾ. ೩೦) ಮತ್ತು ಶ್ರೀಮಾನಣ್ಣೆಳಸಿರ್ಪ (ಸಾ. ೩೦) ಈ ಪದ ಗಳಲ್ಲಿ ರೇಫೆಯ ಮೂಲಕ ದ್ವಿತ್ವ ಉಪಯೋಗಿಸಿ ನಕಾರವನ್ನು ಣಕಾರದಲ್ಲಿ

ಪರಿವರ್ತನ ಮಾಡಲಾಗಿದೆ. (೫) ಉಕಾರ ಮತ್ತು ವ್ಯಂಜನದರ್ಶಕ ಚಿಹ್ನೆಗಳು ಅದಲುಬದಲಾಗಿವೆ. ಉಕಾರದ ಚಿಹ್ನ ವ್ಯಂಜನಕ್ಕೆ: ತೆಂಕಲ್ (ಸಾ. ೬–೭), ಅನ್ವಯದೊಳ್ (ಸಾ. ೧೮), ಉದ್‌ಭಾಸಿ (ಸಾ. ೩೨), ತಾನೊಳ್ (ಸಂ. ೫೬), ಮುಂತಾದವು. ವ್ಯಂಜನದ ಚಿಹ್ನ ಉಕಾರಕ್ಕೆ ಸುದಿತಂ (ಸಾ. ೩೭). ಕೆಲವು ಸ್ಥಳಗಳಲ್ಲಿ ಒತ್ತಕ್ಷರ ಬದಲು ನಿಜವಾದ ವ್ಯಂಜನ ಚಿಹ್ನ ಬಳಸಲಾಗಿದೆ: ಉದಾ: ಕುಮುದೊತ್‌ಕರ (ಸಾ. ೧೫), ಭೂಭೃತ್‌ಕುಳ (ಸಾ. ೧೫) (೬) ದೇವಕ್ಕಣಟಿ (ಸಾ. ೩೪) ಈ ಪದದಲ್ಲಿ ರಳದ ಸ್ಥಳದಲ್ಲಿ ಕುಳ ಉಪಯೋಗಿಸಲಾಗಿದೆ.

ಶಾಸನದ ಸಾರಾಂಶ: ದೇವರ ಪ್ರಾರ್ಥನೆಯು ತರುವಾಯ ಜಂಬೂದ್ವೀಪ ಭರತಕ್ಷೇತ್ರ ಮತ್ತು ಕುಂತಳದೇಶ ಇವುಗಳ ಉಲ್ಲೇಖ ಬರುತ್ತದೆ. ತರುವಾಯ ತರಿಕಾಡು ನಾಡು ಮತ್ತು ಆ ನಾಡಿನ ಮುಖ್ಯ ಪಟ್ಟಣ ಮಂಗಳಿವಾಡ ಇವುಗಳ ವರ್ಣನೆ ಬರುತ್ತದೆ (ಸಾ. ೧–೪), ಆಮೇಲೆ ಕಲಚುರಿ ಕುಲದ ಅಲ್ಪ ವಂಶಾವಳಿ ಹೇಳಿದೆ: ಜೋಗಮ, ಆತನ ಮಗ ಹೆಮ್ಮಾಡಿ, ಹೆಮ್ಮಾಡಿಯ ಮಗ ಬಿಜ್ಜಳ (ಪ. ೫) ಮುಂದಿನ ಎರಡು ಪದ್ಯಗಳಲ್ಲಿ ಬಿಜ್ಜಳನ ಶೌರ್ಯವರ್ಣನೆ ಬರುತ್ತದೆ. ತರುವಾಯ ಕರಹಡ ನಾಡು, ತದಂತರ್ಗತ ಕಳಂಬಡೆ ನಾಡು ಮತ್ತು ಕಳಂಬಡೆ ನಾಡಿನಲ್ಲಿಯ ಮೂವತ್ತಾರುಬಾಡ ಇವುಗಳ ಉಲ್ಲೇಖ ಬರುತ್ತದೆ. (ಪ. ೮). ಈ ಮೂವತ್ತಾರುಬಾಡದ ರಾಜಧಾನಿ ಉಂಬರವಾಣಿ (ಪ. ೯). ಉಂಬರವಾಣಿಯ ವಿದ್ವಾಂಸರನ್ನು ಕವಿಯು ಹತ್ತನೆಯ ಪದ್ಯದಲ್ಲಿ ಸ್ವಾರಸ್ಯವಾಗಿ ವರ್ಣಿಸಿದ್ದಾನೆ. ಉಂಬರವಾಣಿ ಮೂವತ್ತಾರದ ಮನ್ನೆಯರ ವಂಶಾವಳಿಯನ್ನು ಮುಂದಿನ ಪದ್ಯದಲ್ಲಿ ಹೇಳಲಾಗಿದೆ; ಹೆಮ್ಮಾಡಿ. ಆತನ ಮಗ ಹೊಲಕೇಶಿ, ಹೊಲಕೇಶಿಯ ಮಗ ಪಾವಿನ ಹೆಮ್ಮಾಡಿ. ಇದೇ ಗ್ರಾಮದ ಬೇರೆ ಶಾಸನಗಳಲ್ಲಿ ಈ ವಂಶಾವಳಿ ಸವಿಸ್ತರವಾಗಿ ಬರುತ್ತದೆ. ತರುವಾಯ ಉಂಬರವಾಣಿಯ ಶ್ರೇಷ್ಠ ನಾಗರಿಕನಾದ ಕಲ್ಲಿಸೆಟ್ಟಿಯ ಉಲ್ಲೇಖ ಬರುತ್ತವೆ (ಪ. ೧೪). ಆತನ ತಂದೆ ಸೋಯಿಸೆಟ್ಟಿ, ತಾಯಿ ಗಂಗವ್ವೆ, ಹಿರಿಯಣ್ಣ ಗೋವಿಂದ ಮತ್ತು ಹೆಂಡತಿ ಚೌಡಿಯಕ್ಕ (ಪ. ೧೫). ಇತರ ವೈಶ್ಯರಂತೆ ಲೋಭಿಯಾಗಿರದೆ ಶಿಷ್ಟಜನರಿಗೆ ಆಧಾರನಾಗಿದ್ದ ಈತನು (ಪ. ೧೬). ತನ್ನ ಧನವನ್ನು ಭೂದಾನ, ಗೋದಾನ, ಗೃಹದಾನ ಮುಂತಾದ ದಾನಗಳಲ್ಲಿ, ಬಾವಿ, ಅರವಟ್ಟಿಗೆ, ಉದ್ಯಾನ ಇವುಗಳಲ್ಲಿ ವಿನಿಯೋಗಿಸಿ ಧನ್ಯನಾಗಿದ್ದನು (ಪ. ೧೭–೧೮). ಚಕ್ರವರ್ತಿ ಬಿಜ್ಜಳ ಮತ್ತು ಮನ್ನೆಯ ಮಹಾಮಂಡಳೇಶ್ವರ ಪಾವಿನ ಪೆಂಮಾಡಿ ಇವರ ಸನ್ನಿಧಾನದಲ್ಲಿ ನಾನಾ ದೇಶದ ಐದು ಜನ ಪ್ರವಾಸಿ ಬ್ರಾಹ್ಮಣರ ಅನ್ನಛತ್ರಕ್ಕೆ ಈ ಕಲ್ಲಸೆಟ್ಟಿಯು ಎರಡು ಮತ್ತರ ಭೂಮಿಯನ್ನು ಕ್ರಯಗೊಂಡು ದಾನಮಾಡಿದ (ಸಾ. ೪೪–೫೫).

ಮುಂದಿನ ಭಾಗದಲ್ಲಿ ಬಿಜ್ಜಳನ ಮಗನಾದ ಚಕ್ರವರ್ತಿ ರಾಯಮುರಾರಿ ಸೋಯಿದೇವನ ಆಳಿಕೆಯನ್ನು ಪ್ರಸ್ತಾಪಿಸಿ (ಪ.–೧೯), ಆತನ ಮತ್ತು ಮನ್ನೆಯನಾದ ಪಾವಿನ ಪೆರ್ಮಾಡಿಯ ಸನ್ನಿಧಾನದಲ್ಲಿ ಅದೇ ಕಲ್ಲಿಸೆಟ್ಟಿಯು ಸೋಯಿದೇವನ ಆಳಿಕೆಯ ಐದನೆಯ ವರ್ಷದಲ್ಲಿ ಪುನಃ ಮೂರು ಮತ್ತರ ಭೂಮಿಯನ್ನು ಕೊಂಡು ಅದೇ ಸತ್ರಕ್ಕೆ ದಾನಮಾಡಿ ಕೊಟ್ಟನೆಂದು ಹೇಳಿದೆ (ಸಾ. ೫೮–೬೫). ಆ ಸತ್ರಕ್ಕೆ ಅದೇ ಸಮಯದಲ್ಲಿ ಒಂಭತ್ತು ಕಯ್ಯ ಚದುರಸ ನಿವೇಶನವನ್ನು ಕ್ರಯಕ್ಕೆ ತೆಗೆದುಕೊಂಡು ಒಂದು ಭೋಜನ ಸಾಲೆಯನ್ನು ಕಟ್ಟಿಸಿಕೊಟ್ಟನೆಂದು ಮತ್ತು ಸತ್ರಕ್ಕೆ ಇನ್ನೂ ಎರಡು ಮತ್ತರ ಭೂಮಿಯನ್ನು ಕೊಂಡುಕೊಟ್ಟನೆಂದು ಶಾಸನದ ಕೊನೆಯಲ್ಲಿ ಹೇಳಲಾಗಿದೆ. (ಸಾ. ೬೫–೭೩),

ಸ್ವ ಪರಾಕ್ರಮದಿಂದ ಚಕ್ರವರ್ತಿ ಪಟ್ಟವನ್ನು ಗಳಿಸಿಕೊಂಡುದರ ಸಂಕೇತವಾಗಿ, ಬಿಜ್ಜಳನಿಗೆ ಮತ್ತು ಸೋಯಿದೇವನಿಗೆ 'ಭುಜಬಳಚಕ್ರವರ್ತಿ' ಎಂದು ಕರೆಯಲಾಗಿದೆ.

ಶಾಸನದ ತೇದಿ: ಪ್ರಸ್ತುತ ಶಾಸನದಲ್ಲಿ ಎರಡು ತೇದಿಗಳು ಬಂದಿವೆ. ಮೊದಲನೆಯ ತೇದಿ ೫೨–೫೩ ನೆಯ ಸಾಲುಗಳಲ್ಲಿ 'ಶಕವರುಶಂ ಸಾಸಿರದೆಂ-ಭತ್ತಾಱನೆಯ ತಾರಣ ಸಂವತ್ಸರದ ಮಾಘದಮಾವಾಸ್ಯೆಯಾದಿವಾರ ಸೂರ್ಯಗ್ರಹಣದಂದು' ಎಂದು ಹೇಳಲಾಗಿದೆ. ಈ ತಾರಣ ಸಂವತ್ಸರ ಶಕ ಸಾವಿರದೆಂಭತ್ತಾರಕ್ಕೆ ಸರಿಯಾಗಿ ಗತವರ್ಷ(expired year)ವಾಗಿದ್ದು ಕ್ರಿ. ಶ ೧೧೬೪–೬೫ಕ್ಕೆ ಸಮಾನವಾಗುತ್ತದೆ. ಪ್ರಸ್ತುತ ಸಂವತ್ಸರದಲ್ಲಿ ಮಾಘ ಅಮಾವಾಸ್ಯೆ ಫೆಬ್ರುವರಿ ತಿಂಗಳ ಹನ್ನೆರಡನೆಯ ದಿನಾಂಕ ಶುಕ್ರವಾರ ಬರುತ್ತದೆ. ಆದರೆ ಶಾಸನದಲ್ಲಿ ಆದಿವಾರವೆಂದು ಹೇಳಿದೆ. ಕಾರಣ ಉಕ್ತವಾದ ತೇದಿ ಆದಿತ್ಯವಾರ ದಿನಾಂಕ ೧೪, ಫೆಬ್ರುವರಿ ಎಂದು ನಿಶ್ಚಯಿಸಬಹುದು. ಆ ಅಮಾವಾಸ್ಯೆಗೆ ಸೂರ್ಯಗ್ರಹಣವೂ ಇರಲಿಲ್ಲ. ಈ ಕಾರಣಗಳಿಂದ ತೇದಿಯ ಉಲ್ಲೇಖ ಸಮಾಧಾನಕರವಿಲ್ಲ. ಸ್ಥೂಲವಾಗಿ ಶಾಸನದ ತೇದಿ ಕ್ರಿ. ಶ. ೧೧೬೫ ಫೆಬ್ರುವರಿ ೧೪ ಆದಿತ್ಯವಾರವೆಂದು ಗ್ರಹಿಸಬಹುದು.

ಎರಡನೆಯ ತೇದಿ: ೬೩–೬೪ ನೆಯ ಸಾಲುಗಳಲ್ಲಿ ಸೋಯಿದೇವನ 'ಐದನೆಯ ನಂದನ ಸಂವತ್ಸರದ ವೈಶಾಖದ ಪುಂಣಮೆ ಸೋಮವಾರ ಸೋಮಗ್ರಹಣದಂದು' ಎಂದು ಹೇಳಲಾಗಿದೆ. ಸೋಯಿದೇವನ ಆಳಿಕೆಯಲ್ಲಿ ಈ ಸಂವತ್ಸರಕ್ಕೆ ಸಮಾನವಾಗಿ ಕ್ರಿ. ವರ್ಷ ೧೧೭೨–೭೩ ಬರುತ್ತದೆ. ಈ ಸಂವತ್ಸರದಲ್ಲಿ ವೈಶಾಖದ ಹುಣ್ಣಿಮೆ ಶಾಸನದಲ್ಲಿ ಹೇಳಿದಂತೆ ಸೋಮವಾರ ಬರುತ್ತದೆ. ಆದರೆ ಆ ದಿವಸ ಪಂಚಾಂಗಗಳಲ್ಲಿ ಚಂದ್ರಗ್ರಹಣ ಹೇಳಿಲ್ಲ. ಗ್ರಹಣದ ಉಲ್ಲೇಖವನ್ನು ಅಲಕ್ಷಿಸಿ ತೇದಿಯು ಕ್ರಿ. ಶ. ೧೧೭೨ ಏಪ್ರಿಲ್ ೧೦ ಸೋಮವಾರವೆಂದು ಗ್ರಹಿಸಬಹುದು.

ಶಾಸನದಲ್ಲಿ ಕಂಡುಬಂದ ಸ್ಥಳಗಳು : (೧) ಜಂಬೂದ್ವೀಪ (ಸಾ. ೬), (೨) ಭರತಕ್ಷೇತ್ರ (ಸಾ. ೭) (೩) ಕುಂತಳದೇಶಂ (ಸಾ. ೭-೮), (೪) ತಜ಼ಿಕಾಡ ನಾಡು (ಸಾ. ೮-೯), (೫) ಮಂಗಳಿವಾಡ (ಸಾ. ೯), (೬) ಕಾಳಾಂಜನಪುರ (ಸಾ. ೧೮). (೭) ಕರಹಡ ನಾಡು (ಸಾ. ೨೧), (೮) ಕಳಂಬಡೆ ನಾಡು (ಸಾ. ೨೨), (೯) ಮೂವತ್ತಾಱುಂ ಬಾಡ (ಸಾ. ೨೨, ೫೯), (೧೦) ಉಂಬರ ವಾಣಿ (ಸಾ. ೨೩, ೪೮, ೬೦), (೧೧) ಕೋಪಣಪುರ (ಸಾ. ೪೫-೪೬), (೧೨) ಕೊಟ್ಟಲಗೆ (ಸಾ. ೪೯), (೧೩) ಪಾಂಚಾಳ, ಗೂರ್ಜರ, ಕಳಿಂಗ, ಕೇರಳ ಮತ್ತು ಲಾಳ ದೇಶಗಳು. (೧) ಜಂಬೂದ್ವೀಪವು ಸ್ಥೂಲವಾಗಿ ಏಶಿಯಾಖಂಡ ವಾಗಿತ್ತು. (೨) ಭರತಕ್ಷೇತ್ರ ಭಾರತದೇಶ (೩) ಕುಂತಳ ದೇಶವು ಸಾಮಾನ್ಯ ವಾಗಿ ಕರ್ನಾಟಕ. (೪), ತಜ಼ಿಕಾಡ ನಾಡು ಕಲಚುರಿಯರ ನೆಲೆನಾಡು. ಈ ವಂಶದ ಅರಸರನ್ನು 'ತಜ಼ಿಕಾಡ ಜೋಗಮ'[೧], 'ತಜ಼ಿಕಾಡ[೨] ಪೆರ್ಮ್ಮಾಡಿ ದೇವ', 'ತಜ಼ಿಕಾಡ[೩] ಬಿಜ್ಜಲದೇವ' ಎಂದು ಕರೆಯಲಾಗಿದೆ. ಈ ನಾಡಿಗೆ 'ದರಿಕಾಡ ನಾಡು'[೪] ಎಂದೂ ಹೆಸರವಿತ್ತು. ಈ ನಾಡಿನಲ್ಲಿ ಸೊಲ್ಲಾಪುರ ಜಿಲ್ಲೆಯ ಈಗಿನ ಮಂಗಳವೇಢೆ ತಾಲೂಕು, ಸಾಂಗಲಿ ಜಿಲ್ಲೆಯ ಖಾನಾಪೂರ ತಾಲೂಕಿನ ಪೂರ್ವ ಭಾಗ, ಅದೇ ಜಿಲ್ಲೆಯ ಜತ್ತಿ ತಾಲೂಕಿನ ದಕ್ಷಿಣಭಾಗ ಬಿಟ್ಟು ಉಳಿದ ಭಾಗ ಮತ್ತು ವಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನ ಪಶ್ಚಿಮ ಭಾಗದಲ್ಲಿಯ ಕೆಲವು ಹಳ್ಳಿಗಳು ಸಮಾವೇಶವಾಗುತ್ತಿದ್ದುವೆಂದು ತೋರು-ತ್ತದೆ. ಇಂಡಿ ತಾಲೂಕಿನ ಕಪ್ಪನಿಂಬರಗಿ ಗ್ರಾಮದ ಶಾಸನ[೫]ದಲ್ಲಿ ತಜ಼ಿಕಾಡ ನಾಡಿಗೆ 'ತಜ಼ಿಕಾಡ ಮೂನೂಱು' ಎಂದು ಸಂಬೋಧಿಸಲಾಗಿದೆ. ಈ ಆಧಾರ-ದಿಂದ ತಜ಼ಿಕಾಡುನಾಡು ಮೂರುನೂರು ಹಳ್ಳಿಗಳ ಒಂದು ಆಡಳಿತದ ವಿಭಾಗವಾಗಿತ್ತೆಂದು ತಿಳಿಯಬಹುದು. (೫) ಮಂಗಳಿವಾಡವು ತಜ಼ಿಕಾಡ ನಾಡಿನ ಮುಖ್ಯ ಪಟ್ಟಣ ಮತ್ತು ಕಲಚುರಿಯ ವಂಶಪರಂಪರಾಗತ ರಾಜಧಾನಿ. ಅದು ಈಗಿನ ಮಂಗಳವೇಢೆ, ಅದೆ ಹೆಸರಿನ ತಾಲೂಕ ಸ್ಥಳ. ಸೊಲ್ಲಾಪುರದಿಂದ ನೈಋತ್ಯಕ್ಕೆ ಸುಮಾರು ೩೫ ಮೈಲು ಮತ್ತು ಪಂಢರಪೂರದಿಂದ ಆಗ್ನೇಯಕ್ಕೆ

---

೧. E. C. XI, Davanagere 42, p. 122, L-22, Kannada texts.

೨. B. K. No. 95 of 1936-37; A.R,S.I.E. p. 190.

೩. Tambur Hero-stone. No. 29, p. 592 in my Thesis, 'The Kadambas of Goa and Their Inscriptions'.

೪. Bombay Government Gazetteer, Vol. I, P. II, p. 448. Dr. Fleet quoting from the Hiremadnur inscription in the earstwhile Nizam Dominion.

೫. B. ~. No. 39 of 1937-37; A.R.S.I.E. p. 202.

೬. Karnatak Inscriptions, Vol.-II. Akkalkot inscription, p. 36, L—12 and E. I., Vol. XV, Madgihal inscription, p. 319, L-9.

ಸುಮಾರು ೧೩ ಮೈಲು ಅಂತರದಲ್ಲಿದೆ. ಮಂಗಳಿವಾಡಕ್ಕೆ ಮಂಗಳಿವೇಢ,[೬] 'ಮಂಗಳವಾಡ'[೭] ಮತ್ತು ಮಂಗಲವೇಷ್ಠೈಕ[೮] (ಸಂಸ್ಕೃತದಲ್ಲಿ) ಎಂದು ಹೆಸರಗಳಿದ್ದವು ಇವುಗಳಲ್ಲಿ 'ಮಂಗಳವಾಡ' ಮೂಲ ಹೆಸರು ಇದ್ದಂತೆ ತೋರುತ್ತದೆ. ಈ ಹೆಸರಿಗೆ ನಾವು ಚಾಲುಕ್ಯರ ರಾಜಧಾನಿ ಕಲ್ಯಾಣ ಪುರ'ದ ಹೆಸರನ್ನು ಹೋಲಿಸಬಹುದು. ಎರಡು ಹೆಸರುಗಳ ಅರ್ಥವು ಒಂದೇ. ಒಂದು ಮಂಗಳ+ವಾಡ, ಇನ್ನೊಂದು ಕಲ್ಯಾಣ+ಪುರ. (೬) ಕಾಳಾಂಜನ ಪುರ; ಇದಕ್ಕೆ ಕಾಳಂಜರ್[೯] ಮತ್ತು ಕಾಳಾಂಜರ[೧೦]ವೆಂದೂ ಹೆಸರು ಗಳಿದ್ದವು. ಇದು ಬುಂದೇಲಖಂಡದ ಬಾಂದ ಜಿಲ್ಲೆಯಲ್ಲಿಯ ಈಗಿನ ಕಾಲಂಜರ.[೧೧] ಬಾಂದ ಜಿಲ್ಲೆಯು ಉತ್ತರಪ್ರದೇಶದ ನೈಋತ್ಯಕ್ಕೆ ಯಮುನಾ ನದಿಯ ದಕ್ಷಿಣಕ್ಕೆ ಇದೆ. ಕಾಲಂಜರವು ಅಲಹಾಬಾದದಿಂದ ನೈಋತ್ಯಪಶ್ಚಿಮಕ್ಕೆ ಸುಮಾರು ೯೦ ಮೈಲುಗಳ ಅಂತರದ ಮೇಲೆ ಇದೆ.[೧೨] ಇದು ತ್ರಿಪುರಿ ಕಲಚುರಿಯರ ಒಂದು ಅಜೇಯವಾದ ಗಿರಿದುರ್ಗ. ಕರ್ನಾಟಕದ ಕಲಚುರಿಯರು ಇದನ್ನು ತಮ್ಮ ಮೂಲ ಸ್ಥಳವೆಂದು ಭಾವಿಸಿದ್ದರು. ಆದುದರಿಂದ ಅವರು 'ಕಾಳಂಜರಪುರವರಾಧೀಶ್ವರ'ವೆಂಬ ಬಿರುದನ್ನು ತಮ್ಮ ಪ್ರಶಸ್ತಿಯಲ್ಲಿ ಸೇರಿಸು ತಿದ್ದರು. ಲಕ್ಕುಂಡಿ[೧೩] ಮತ್ತು ಅಣ್ಣಿಗೇರಿ[೧೪] ಶಾಸನಗಳಲ್ಲಿ ಕರ್ನಾಟಕದ ಕಲಚುರಿಯರ ಮೂಲ ಪುರುಷರು ಕಾಳಂಜರದಲ್ಲಿ ರಾಜ್ಯವಾಳುತ್ತಿದ್ದರೆಂದು ಹೇಳಿದೆ. (೭) ಕರಹಡ ನಾಡು : ಇದಕ್ಕೆ ಕರಹಡ ನಾಲ್ಸಾಸಿರವೆಂದೂ ಹೆಸರು ಇತ್ತು. ಇದೊಂದು ನಾಲ್ಕು ಸಾವಿರ ಗ್ರಾಮಗಳುಳ್ಳ ಆಡಳಿತದ ದೊಡ್ಡ ವಿಭಾಗ. ಈ ನಾಡಿನ ಮುಖ್ಯ ಪಟ್ಟಣ ಕರಹಡ ಅಥವಾ ಈಗಿನ ಕರ್ಹಾಡ ಇದು ಸಾಂಗಲಿ, ಜಿಲ್ಲೆಯ ಒಂದು ತಾಲೂಕ ಸ್ಥಳ. ಕೊಲ್ಹಾಪುರದಿಂದ ಉತ್ತರಕ್ಕೆ ಸುಮಾರು ೨೭ ಮೈಲು ಅಂತರದಲ್ಲಿದೆ.[೧೫] (೮) ಕಳಂಬಡೆ ನಾಡು : ಈ ನಾಡು ಕರಹಡ ನಾಡಿಗೆ ಸೇರಿದ ಆಡಳಿತದ ಒಂದು ವಿಭಾಗ. ಈ ನಾಡಿನಲ್ಲಿ ಸಾಂಪ್ರದಾಯಿಕ ವಾಗಿ ಮೂರುನೂರು ಗ್ರಾಮಗಳಿದ್ದವು. ಕಾರಣ ಆದಕ್ಕೆ 'ಕಳಂಬಡೆ

---

೭. Bombay Government Gazetteer, Vol-I, P. II, p. 448.

೮. Collected Works of Sir R. G. Bhandarkar, Vol. III, p. 194, verse 38.

೯. E. C., XI, Davanagere 42.

೧೦. Karnatak Inscriptions, Vol. II, No. 26, p. 97. 11, 6-7.

೧೧. Bombay Government Gazetteer, vol. I, P. II, p. 469.

೧೨. Basavesvara and His Times, p. 5. Dr. P. B. Desai.

೧೩. South Indian Inscriptions, Vol. XV, No. 125, p. 175, L-11.

೧೪. Ibid. No. 122, p.-153, L-7.

೧೫. ಕರಹಡ ನಾಲ್ಕು ಸಾಸಿರದ ಸೀಮೆಗಳ ವಿವರ ಸಲುವಾಗಿ ಇಂಡಿಯನ ಆಂಟಿಕ್ವರಿ, ಭಾಗ ೩೦, ಪುಟ ೩೭೭-೩೮೨ಗಳಲ್ಲಿ ಡಾ. ಫ್ಲೀಟ ಅವರ ಟಿಪ್ಪಣಿಗಳನ್ನು ನೋಡಿರಿ.

ಮೂನೂಱು’ ಎಂದು ಹೆಸರವಿತ್ತು. ಈ ವಿಭಾಗದ ಪ್ರಮುಖ ಗ್ರಾಮ ಕಳಂಬಡೆ. ಕಳಂಬಡೆ ಗ್ರಾಮ ವಿಜಾಪೂರ ತಾಲೂಕಿನಲ್ಲಿಯ ಈಗಿನ ಕನಮಡಿ ಗ್ರಾಮ. ಅದು ವಿಜಾಪೂರದ ವಾಯುವ್ಯಕ್ಕೆ ತಿಕೋಟಿ ಜತ್ತಿ ರಸ್ತೆಯ ಮೇಲೆ ವಿಜಾಪೂರದಿಂದ ಸುಮಾರು ಇಪ್ಪತ್ತು ಮೈಲು ಅಂತರದಲ್ಲಿ ಇದೆ[೧೬]. (೯) ಮೂವತ್ತಾಱುಂ ಬಾಡ: ಉಂಬರವಾಣಿ ಮೊದಲುಮಾಡಿಕೊಂಡು ಮೂವತ್ತಾರು ಗ್ರಾಮಗಳ ಒಂದು ಕಂಪಣ. ಜತ್ತಿ ತಾಲೂಕಿನ ದಕ್ಷಿಣ ಭಾಗ, ಆಥಣಿ ತಾಲೂಕಿನ ಉತ್ತರ ಭಾಗ ಈ ಕಂಪಣದಲ್ಲಿ ಸಮಾವೇಶವಾಗುತ್ತಿದ್ದವು. ಉಮ್ರಾಣಿಯ ವಾಯುವ್ಯಕ್ಕೆ ಸುಮಾರು ಆರು ಮೈಲು ಅಂತರದಲ್ಲಿದ್ದ ಜತ್ತಿ ತಾಲೂಕಿನ ಬಿಳ್ಳೂರು ಗ್ರಾಮವು, ನೈಋತ್ಯಕ್ಕೆ ಸುಮಾರು ಎಂಟು ಮೈಲು ಅಂತರದಲ್ಲಿದ್ದ ಆಥಣಿ ತಾಲೂಕಿನ ಬಳ್ಳಿಗೇರಿ ಗ್ರಾಮವು ಮತ್ತು ಬಳ್ಳಿಗೇರಿಯಿಂದ ಆಗ್ನೇಯಕ್ಕೆ ಉಮ್ರಾಣಿಯಿಂದ ಸುಮಾರು ಹನ್ನೆರಡು ಮೈಲು ಅಂತರದಲ್ಲಿದ್ದ ಆಥಣಿ ತಾಲೂಕಿನ ಯಲಿಹಡಲಗಿ ಗ್ರಾಮವು ಉಂಬರವಾಣಿ ಕಂಪಣದಲ್ಲಿದ್ದುವೆಂದು ಆ ಆ ಗ್ರಾಮಗಳ ಶಾಸನ[೧೭]ಗಳಿಂದ ತಿಳಿದು ಬರುತ್ತದೆ. ಅದೇ ಪ್ರಕಾರ, ಈ ಶಾಸನಗಳಲ್ಲಿ ನಿರ್ದಿಷ್ಟವಾದ ಜತ್ತಿ ತಾಲೂಕಿನ ಬಸರಗಿ ಮತ್ತು ಸಿಂದೂರ ಗ್ರಾಮಗಳು, ಮತ್ತು ಅಥಣಿ ತಾಲೂಕಿನ ಬೇವನೂರ, ಐಗಳಿ, ಕರಮುರಿ ಮತ್ತು ಬೇಚಿರಾಖ್ ನಾಗರಹಾಳ ಗ್ರಾಮವು ಉಂಬರವಾಣಿ ಕಂಪಣದಲ್ಲಿದ್ದುವೆಂದು ಕಂಡುಬರುತ್ತದೆ. (೧೦)ಉಂಬರವಾಣಿ ಈಗಿನ ಉಮ್ರಾಣಿ, ಇದು ಉಂಬರವಾಣಿ ಮೂವತ್ತಾಱದ ರಾಜಧಾನಿ ಪಟ್ಟಣವಾಗಿತ್ತು. (೧೧) ಕೋಪಣಪುರ: ರಾಯಚೂರ ಜಿಲ್ಲೆಯ ಒಂದು ತಾಲೂಕಸ್ಥಳ ಈಗಿನ ಕೊಪ್ಪಳ, ಇದು ಪ್ರಾಚೀನಕಾಲದಿಂದಲೂ ಪ್ರಸಿದ್ಧವಾಗಿದ್ದ ಪಟ್ಟಣ. ಅಶೋಕನ ಶಾಸನಗಳಿಂದ ಎಲ್ಲರಿಗೂ ವಿದಿತವಾಗಿರುತ್ತದೆ. ಆಮೇಲೆ ವಿಶೇಷವಾಗಿ ಜೈನಧರ್ಮದ ಕೇಂದ್ರವಾಗಿತ್ತು. (೧೨) ಕೊಟ್ಟಲಗೆ ಈಗಿನ ಕೊಟ್ಟಲಗಿ. ಇದು ಅಥಣಿ ತಾಲೂಕಿನಲ್ಲಿ ಈಶಾನ್ಯ ಮೂಲೆಯ ಕಡೆಯ ಹಳ್ಳಿಯಾಗಿರುತ್ತದೆ. ಉಮ್ರಾಣಿಯಿಂದ ಈಶಾನ್ಯಕ್ಕೆ ಸುಮಾರು ಐದು ಮೈಲು ಅಂತರದಲ್ಲಿದೆ. ಮೇಲೆ ಬಂದಿದ್ದ ಕನಮಡಿ ಗ್ರಾಮವು ಕೊಟ್ಟಲಗಿಯಿಂದ ಪೂರ್ವಕ್ಕೆ ಸುಮಾರು ಐದು ಮೈಲು ಅಂತರದ ಮೇಲೆ ಇದೆ. (೧೩) ಈ ದೇಶಗಳು ಪ್ರಸಿದ್ಧವಾಗಿವೆ.

---

೧೬. ಹೆಚ್ಚಿನ ವಿವರದಸಲುವಾಗಿ ‘ಕರ್ನಾಟಕ ಭಾರತಿ’ ಸಂಪುಟ ೭, ಸಂಚಿಕೆ ೩, ಪುಟ ೨೯-೩೩ಗಳಲ್ಲಿ ಪ್ರಕಟಿಸಿದ ‘ಕಣಂಬಡೆ ನಾಡು’ ಎಂಬ ನನ್ನ ಲೇಖನವನ್ನು ನೋಡಬಹುದು.

೧೭. ನನ್ನ ಸಂಗ್ರಹದಲ್ಲಿದ್ದ ಶಾಸನಗಳ ಅಚ್ಚುಗಳಿಂದ.

ಶಾಸನ ಪಾಠ[೧೮]

(1)* ಓಂ [೧೯]ನಾರಾಯಣಾಯ ನಮಾ (ಮಃ) ॥

[೨೦] ಸಕಳ ಜಗದಧೀಶಃ ಗೋಪಿನೀಜೀವಿತೇಶಃ
ವಿಜಿತ (2) ದನುಜಬೃಂದೋ ದೇವದೇವೋ ಮುಕುಂದಃ [1*]
ಧೃತವಿಕಚಸರೋಜೋ ಭಕ್ತಕಲ್ಪಾವನೀ (3)ಜಃ
ಪೃಥುಭುವನಸಮೂಹಂ ಪಾತು ಪುಣ್ಯಪ್ರಗೇಹಃ ॥ [1*]

(4) [೨೧]ಶ್ರೀ ರಮಣೀರಮಣಂ ಸ್ಮಿತ-
ನೀರೇಜಾಕ್ಷಂ ಸುಸಂಖಚಕ್ರಾಸಿಗದಾ-।
ಧಾರಂ ಗರುಡಾ (5)ರೂಢಂ
ನಾರಾಯಣನುಬ್ಬಿಗೀಗೆ ಸುಖಸಂಪದಮಂ ॥ [2*]

(6)ಸ್ಫುರದಂಬೋನಿಧಿವೇಷ್ಟಿತ-
ವರಜಂಬೂದ್ವೀಪಮಧ್ಯಮೇರುಗೆ ತೆಂ (7)ಕಲ್ ।
ಭರತಕ್ಷೇತ್ರಂ ಭಾಸುರ-
ತರಮನ್ತಾ ಕ್ಷೇತ್ರದಲ್ಲಿ ಕುಂ(8)ತಳದೇಶಂ ॥ [3*]

ಹಿರಿದುಂ ರಂಜಿಪುದದಱೊಳು
ಭರಿತಂ ತಱಕಾಡನಾ (9)ಡು ತದ್ವಿಷಯಕ್ಕಾ- ।
ಭರಣಂ ಮಂಗಳಿವಾಡಂ
ಪುರರತ್ನಂ ತತುಪುರೇಶನೃಪ (10)ರಂನ್ವಯದೊಳ್ ॥ [4*]

---

೧೮. ೧೮೫೨ರಲ್ಲಿ ನಾನು ಅಥಣಿಯಲ್ಲಿ ರೆಸಿಡೆಂಟ ಮಾಜಿಸ್ಟ್ರೇಟನಾಗಿದ್ದ ಸಮಯದಲ್ಲಿ ಮಾಡಿಕೊಂಡ ಶಾಸನದ ಅಚ್ಚುಗಳಿಂದ.

೧೯. ಚಿಹ್ನಾಂಕಿತ.

* ಈ ವರ್ತುಳ ಕಂಸಿನಲ್ಲಿಯ ಇಂಗ್ಲಿಷ್ ಅಂಕಿಗಳು ಶಾಸನದ ಸಾಲುಗಳನ್ನು ಸೂಚಿಸುತ್ತವೆ.

೨೦. ವೃತ್ತ : ಮಾಲಿನೀ.

೨೧. ವೃತ್ತ : ೨, ೩, ೪ ಪದ್ಯಗಳು ಕಂದ

[೨೨]ಜಗದೀಶಂ ಚಲದಂಕರಾಮನದಟಂ ವೈರೀಭಕಂಠೀರವಂ
(11) ನೆಗರ್ದಂ ವಿಶ್ರುತನಾದಿರಾಜಬಳವತ್ತ್ರೀಜೋಗಮಂ ಜೋಗಮಂ ।
ನೆಗರ್ದಂ ತತ್ಸುತನುದ್ಧ (12)ತಾರಿಬಳಮಂ ಹೆಣ್ಮಾಡಿ ಹೆಂಮಾಡಿ ತಾಂ
ನೆಗರ್ದಂ ತತ್ಸುತನಿಷ್ಟಚಾತಕನವಾಂ (13)ಭೋಭೃಜ್ಜಲಂ ಬಿಜ್ಜಲಂ ॥ [5*]

[೨೩]ಚೋಳಕಕುಳಾಂತಕನಪ ಪಾಂ—
ಚಾಳಂ ಗೂರ್ಜ್ಜರಕಳಿಂಗ ಕೇರಳ (14) ಧಾತ್ರೀ- ।
ಪಾಳಕವಿಳಯಂ ಲಾಳೋ-
ತ್ಕೋಳಾಹಳ ಸೌರ್ಯಶಾಳಿ ಬಿಜ್ಜನೃಪಾಳಂ ॥ [6*]

(15)ಅರಿಭೂಭೃತ್ ಕುಳಕುಮುದೋ-
ತ್ಕರನೆಂದು ಬಿಜ್ಜಭೂಭುಜಾಯುತಸೌರ್ಯ- ।
(16)ಸ್ಥಿರಮಿತ್ರೋದಯರೋಚಿಃ
ಪರಿಣತೆಯಿಂ ಮುಗಿವುತಿರ್ಪುದಿರುಳುಂ ಪಗಲುಂ ॥ (17) [7*]

ಸ್ವಸ್ತಿ [1*] ಸಮಸ್ತಭುವನಾಶ್ರಯಂ ಶ್ರೀ ಪೃಥ್ವೀವಲ್ಲಭಂ ಮಹಾರಾಜಾಧಿರಾಜಂ (18) ಪರಮೇಶ್ವರಂ ಕಾಳಾಂಜನಪುರವರಾಧೀಶ್ವರಂ ಸುವರ್ಣ್ನವೃಷಭಧ್ವಜಂ (19) ಪರನಾರೀಸೋದರಂ ಚಲದಂಕರಾಮ ಶ್ರೀಮತು ಕಳಚುರಿಯ ಭುಜಬಳಚಕ್ರವರ್ತ್ತಿ (20) ಬಿಜ್ಜಲದೇವ-ವಿಜಯರಾಜ್ಯಮುತ್ತುರೋತ್ತರಾಭಿವೃದ್ಧಿ ಪ್ರವರ್ದ್ಧಮಾನಮಾಚಂದ್ರಾರ್ಕತಾರಂ ಸಲುತ್ತಮಿರೆ [॥*] ತತುಪಾದಪದ್ಮೋಪಜೀವಿ ॥ ಕ ॥

ಕರಹಡವೆಂಬಾ ನಾಡಿಂ-
ಗುರು (22)ಭೂಷಣದಂತಿರೀ ಕಳಂಬಡೆ ನಾಡು- ।

೨೨. ವೃತ್ತ : ಮತ್ತೇಭವಿಕ್ರೀಡಿತಂ. ಈ ಪದ್ಯವು ಸೋಯಿದೇವನ ಮಾಡಗಿಹಾಳ ಶಾಸನದಲ್ಲಿ (ಕ್ರಿ. ಶ. ೧೧೭೨) ಮತ್ತೆ ಕಾಣುತ್ತದೆ. Epigraphia Indica, Vol, XV, p. 319 ll-11-12.

೨೩. ವೃತ್ತ : ೬,೭,೮,೯,೧೦ ಪದ್ಯಗಳು : ಕಂದ.

ದ್ದುರರಂಜಿತವದಟಿಯೊಳಗೆಂ-
ತಿರೆ ಮೂವತ್ತಾಱು ಬಾಡವನು (23) ಪಮ ಪುಣ್ಯಂ ॥ [8*]

ವರತದ್ದೇಶದ ಮೊದಲುಂ-
ಬರವಾಣೆ ರಾಜಧಾನಿ ಬನದಿಂದಬ್ಜಾ- ।
ಕರದಿಂ (24) ಕೆಯ್ವೊಲದಿಂ ಭಾ-
ಸುರ ನಾನಾ ಮರನಿಕೇತನಂಗಳಿನೆಸೆಗುಂ ॥ [9*[

ಕ್ಷಿತಿನೋಡೆ ತನ್ನೊಳಿಪ್ಪಂ (25)
ಚತುರಾನನನೊಬ್ಬನೆಂನೊಳಿಪ್ಪರನೇಕ- ।
ಚ್ಚತುರಾನನರೆನುತಂ ಸಂ-
ತತ (26) ವುಂಬರವಾಣಿ ವಾಣಿಯುಂ ನಗುತಿರ್ಕ್ಕುಂ ॥ [10*]

೨೪ ಅದನಾಳ್ವಂ ರಿಪುಭೂಪನಾಗಗರುಡಂ(27) ಹೆಂಮಾಡಿ ಭೂಪಾಳಕಂ
ತದಪತ್ಯಂ ಹೊಲಕೇಸಿದೇವಮಹಿಪಂ ವೀರಾರಿ ಭೂಪಾ (28) ಪಹಂ ।
ವಿದಿತಂ ತತ್‌ಸುತನಾದಿರಾಜಚರಿತಂ ವಿಖ್ಯಾತ-ಕಾಂತಾಮನೋ-
ಮದನಂ ಹಾವಿನ(29) ಹೆಂಮರ್ಭೂಪನತುಳಪ್ರಖ್ಯಾತಿಯುಂ ತಾಳ್ದಿದಂ ॥ [11*]

ಕ॥ ೨೫ ಆ ಮಹಿಪಾಗ್ರಣಿಗಳು(30) ಗುಣ-
ಧಾಮಂ ಣ್ನಯಶೀಳರಾಗಮಕಳಾಧಾರ-।
ಶ್ರೀ ಮಾನಣ್ನೆಲಸಿಪ್ಪರ್-
ಭೂರ್ಭ (31) ಮಹಿತ ಮಹಾಜನಂಗಳಂತಾ ಪುರದೊಳ್ ॥ [12*]

ಕಾಮಕ್ರೋಧವಿದೂರರಪ್ರತಿ (32) ಮಮಾರ್ತ್ತಂಡೋಜ್ವಳ ಭ್ರಾಜಿತ-
ಶ್ರೀಮತ್‌ಕೀರ್ತ್ತಿವಿಶಾಳರಬ್ಜಜಚರಿತ್ರೋದ್‌ಭಾಸಿಗಳ್ ರುಗ್ಯೆಜು-(33)
ಸ್ಸಾಮ(ಸ್ಸಾಮ)ಮಾಥರ್ಬ್ಬಣವೇದಪಾರಗರಿಳಾಧೀಶಾರ್ಚ್ಚಿತ ಸ್ಸರ್ತ್ಯಸತ್
ಸೀಮಾಸ್ತೋಮ(34) ರ್ನಿಪ್ಪರಾ ವಸುಮತೀದೇವರ್ಕ್ಕಟ ತ್ರ್ಯೂರ್ಜ್ಜಿತರ್ ॥ [13*]

---

೨೪. ವೃತ್ತ : ೧೧, ೧೫ ಪದ್ಯಗಳು : ಮತ್ತೇಭವಿಕ್ರೀಡಿತಂ.

೨೫. ವೃತ್ತ : ೧೩, ೧೪ ಪದ್ಯಗಳು : ಕಂದ.

ಆ ಮನುಮಾರ್ಗ್ಗ ಮಹಾಜನ
ರಾಮ(35) ಶ್ರೀಪದಸರೋಜಕಾರಾಧಕನೆಂ- ।
ಬೀ ಮಹಿಮೆಯಿನೆಸೆದಿರ್ಪ್ಪಂ
ಶ್ರೀಮಹಿಮಂ(36) ಕಲ್ಲಿಸೆಟ್ಟಿವೈಶ್ಯೋ(ಶ್ಯೋ)ತ್ತರನಂ ॥ [14*]

(೨೬)ತನಗಯ್ಯಂ ವಿಭು ಸೋಯಿಸೆಟ್ಟಿ ವಿಮಳಶ್ರೀ(37) ಮಾತೆ ಗಂಗವ್ವೆ ಭೂ-
ಜನತಾಸಂಸ್ತುತೆಯಗ್ರಜಾತನುದಿತಂ ಗೋವಿಂದದೇವಂ(38) ನಿಜಾಂ-
ಗನೆ ಲೋಕೋತ್ತಮೆ ದಾನಶೀಳೆ ವಿದಿತಶ್ರೀ ಚಾವಡಿಯಕ್ಕಂ ದಲೆಂ-
ದೆನೆ ವೈಶ್ಯೋ (ಶ್ಯಾ)ಗ್ರಣಿ ಕಲ್ಲಿಸೆಟ್ಟಿಯೆ(39)ವಲಂ ಧನ್ಯಂ ಪೆಜರ್ದ್ದನ್ಯಂರೇ [15*]

ಕ॥೨೭ ಹುಸಿದೆಯ್ದುಂ ತವಗಾಗಿರೆ
ಜಸವಜನಂ (40) ನೋಡದಳಜಿ ಧನವಂ ಹಡವಾ ।
ಬ್ಯಸನದ ವೈಶ್ಯ (ಶ್ಯ)ಗ್ಗ್ರಣಿಯೋ
ಜಸದೊಡಯಂ ಕಲ್ಲಿಸೆಟ್ಟಿ (41) ಸಿಷ್ಟಾಧಾರಂ ॥ [16*]
ಭೂದಾನಂ ಗೃಹದಾನಂ
ಗೋದಾನಂ ವಸ್ತ್ರವಿತ್ತಭೋಜನ ಕನ್ಯಾಂ- ।
(42) ಭೋದಾನವಿಂವಂ ಮಾಳ್ಪಂ
ಬಾದೇಂ ಶ್ರೀ ಕಲ್ಲಿಸೆಟ್ಟಿ ವಿಪ್ರಗ್ಗ್ರಲ್ಲಂ ॥ [17*]

ಅಂತುಮಲ್ಲದೆಯುಂ ॥

(43) ನಾನಾ ಕೂಪಮುನಗಳಿಸಿ
ನಾನಾ ಪಥದೊಳು ಪ್ರಪಾಗೃಹಂಗಳನೆಸಯುಲು ।
ನಾನಾ (44) ಕುಜದಾರವೆಗಳ-
ನಾನಂದದಿನಿಟ್ಟು ಕಲ್ಲಿಸೆಟ್ಟಿಯೆ ಧಂನ್ಯಂ ॥ [18*]

ಶ್ರೀಮತು ಕಳಚುರಿಯ ಭುಜಬಳಿ(45) ಚಕ್ರವರ್ತ್ತಿ ಬಿಜ್ಜಲ-ದೇವರು ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ಕೋಪಣ-(46)ಪುರವರಾಧೀಶ್ವರಂ ಮುಷ್ಟಮಂಡಳಿಕಪಂನೆಗವೈನತೇಯಂ ಸೌಚಾಂ-ಜನೇಯಂ ಪಗೆವ ಮಂಡಳಿಕ (47)ಮೃಗಬೇಂಟೆಕಾಱಂ ಬಪ್ಪನಂಕಕಾಱಂ

೨೬. ವೃತ್ತ : ಶಾರ್ದೂಲವಿಕ್ರೀಡಿತಂ.
೨೭. ವೃತ್ತ : ೧೬, ೧೭, ೧೮ ಪದ್ಯಗಳು : ಕಂದ.

ಶ್ರೀಮನ್ ಮಹಾಮಂಡಳೇಶ್ವರಂ ಪಾವಿನ (48)ಪೆಂಮಾಡಿಯರಸರು ಸಹಿತವಾ ಶ್ರೀಮದುಂಬರವಾಣಿಯುಲು ಸರ್ಬ್ಬಬಾಧಾಪರಿಹಾರಂ(49) ಸರ್ಬ್ಬನಮಶ್ಯವಾಗಿ ಬಿಟ್ಟ ಬ್ರಂಹ್ಮಪುರಿಯೊಳಗೆ ಕೊಟ್ಟಿಲಗೆಯು ಕರಿಯ ಕಾಳಿದಾಸಭಟ್ಟೋ(50)ಪಾಧ್ಯಾಯರ ಶ್ರೀಮದುಂಬರವಾಣಿಯ ಬಡಗ ಪೊಲದಲು ಕಱಿಯ ಕೆಯ್ಯಿಂ (51)ಹಡುವ ಬಡಗಿಗೆಯ್ಯಿಂ ತೆಂಕಲಡ್ಡ-ವಟ್ಟಯಿಂ ಬಡಗಣ ಸ್ಥಳದ ಪಿರಿಯ ಕೋಲಮತ್ತರೆರೆಡನವರ(52) ಕಯ್ಯಲಾ ಕಲ್ಲಿಸೆಟ್ಟಿ ಕ್ರಯುವಂ ಕೊಂಡು ಶಕವರುಶಂ ಸಾಸಿರದೆಂಭತ್ತಾ-ಱನಯ(ತ್ತಾಱನೆಯ) ತಾ [ರ*]ಣ(53) ಸಂವತ್ಸರದ ಮಾಘದಮಾವಾಸ್ಯೆಯಾದಿವಾರ ಸೂರ್ಯ್ಯಗ್ರಹಣದಂದು ನಾನಾದೇಸಿ(54) ಪ್ರವಾಸಿಗ ಬ್ರಾಹ್ಮಣ-ರಯ್ವರ ಸತ್ರದಾಹಾರದಾನಕ್ಕೆ ಧಾರಾಪೂರ್ಬ್ಬಕಂ ಮಾಡಿ ಬಿಟ್ಟನು(55)

ವೃ॥೨೮ ಪ್ರಜೆಯಂ ಪಾಳಿಸಿ ಭೃತ್ಯರಂ ಪೊರೆದು ವಿದ್ವಿಷ್ಟಾವನೀಪಾಳಕ-
ಬ್ರಜಮಂ ಕೊಂಡು ಸ(56)ತಾವನೀಶಕುಳಮಂ ತಂನೊಳ್ ಸಮಂ ಮಾಡಿ ಕೂ-
ಡೆ ಜಸಂ ದಿಕ್ ತಟವೆಂಟುಮಂ ಬೆಳಗೆ ಪೆಂಪಿಂ ಪೋಲ್ತನಾಧಿಕ್ಯಮಾ(ಭೂ*)
ಭುಜರಂ ರಾಯಮುರಾರಿ ಸೋಮಮಹಿಪಂ ಶ್ರೀಬಿಜ್ಜಭೂಪಾತ್ಮಜಂ॥ [೨೮*]

ಸ್ವಸ್ತಿ[*] ಶ್ರೀ(58)ಮತು ಕಳಚುರಿಯ ಭುಜಬಳಚಕ್ರವರ್ತ್ತಿ ರಾಯಮುರಾರಿ ಸೋಯಿದೇವರಾ(59) ಮುಪತ್ತಾಱುಂ ಬಾಡದ ಮಂನೆಯುಂ ಪಾವಿನ ಪೆಂಮಾಡಿಯರಸರು ಸಹಿತವಾ ಶ್ರೀಮದುಂ(60)ಬರವಾಣಿಯುಲು ಸರ್ಬ್ಬಬಾಧಾಪರಿಹಾರಂ ಸರ್ಬ್ಬನಮಶ್ಯವಾಗಿ ಬಿಟ್ಟ ಬ್ರಹ್ಮಪುರಿಗಳೊ(61)ಳಗೆ ಬಸವರಸಂಗಳಾ ಪೂರ ಮೂಡಪೊಲದಲು ನಾವಿದಗೆಯುಂ ತೆಂಕಲನಾಮಿಕಜಿನಾಲಯ(62)ಗೆಯುಂ ಪಡುವಲಿರ್ದ್ದ ಸ್ಥಳದ ಪಿರಿಯ ಕೋಲ ಮತ್ತರು ಮೂಱನವರ ಕಯ್ಯಲಾ ಕಲ್ಲಿಸೆಟ್ಟಿ (63) ಕ್ರಯುವಂ ಕೊಂಡಯ್ದನಯ (ಕೊಂಡಯ್ದನೆಯ) ನಂದನ ಸಂವತ್ಸರದ ವೈಶಾಖದ ಪುಂಣಮೆ ಸೋಮವಾರ(64) ಸೋಮಗ್ರಹಣದಂದು ನಾನಾದೇಸಿ ಪ್ರವಾಸಿಗ ಬ್ರಾಹ್ಮಣರಯ್ವರ

---

೨೮. ವೃತ್ತ : ಮತ್ತೇಭವಿಕ್ರೀಡಿತಂ

ಸತ್ರದಾಹಾರದಾನಕ್ಕೆ ಧಾರಾ(65)ಪೂರ್ಬ್ಬಕಂ ಮಾಡಿಬಿಟ್ಟನು || ಆ ರಾಯ ಮುರಾರಿ ಸೋಯಿದೇವರಾಯನ ಮಂನೆಯರ(66) ಕಯ್ಯಲು ಬಸದಿಯಿಂ ಪಡುವ ತೆಂಕಣ ಬೀರನ ಬಟ್ಟೆಯಿಂ ಬಡಗ ರಾಜಬೀದಿಯಿಂ ಮೂಡ(67) ಲಿರ್ದ್ದ ಚದುರಸ ವೊಂಭತ್ತು ಕಯ್ಯ ನಿವೇಶಣವನಾ ಕಲ್ಲಿಸೆಟ್ಟಿ ಧಾರೆಯಂ ಹಡದು ನಾನಾ ದೇಸಿ ಪ್ರವಾಸಿಗ(68) ಬ್ರಾಂಹ್ಮಣರ ಸತ್ರಕ್ಕೆ ಭೋಜನಸಾಲಿ ಯಂ ಮಾಡಿ ಬಿಟ್ಟನು || ಶ್ರೀಮದುಂಬರ(69)ವಾಣಿಯ ಬಡ ಗವೊಲದಲು ಹೆರ್ಗ್ಗಡೆ ಕಂಠೆಯ ರಾಮದೇವಂಗಳ ಬ್ರಹ್ಮಪುರಿಗೆಯಿಂ ಪಡುವ(70) ಮಲ್ಲಯ ಹೊಱಕೂಚಿಯಂಣಂಗಳ ಕೆಯಿಂ ಮೂಡಲಾ ಚಿದ್ದಿಯಂಣ ಫೈಸಾಸರ(71) ಕೆಯಿಂ ತೆಂಕಲು ಮಾಳಿಯಂಣ ಫೈಸಾಸರ ವೃತ್ತಿಯ ಪಿರಿಯ ಕೋಲ ಮತ್ತರೆರಡನವರ ಕಯ್ಯಲಾ(72) ಕಲ್ಲಿಸೆಟ್ಟಿ ಕ್ರಯವಂ ಕೊಂಡು ಮತ್ತಂ ನಾನಾದೇಸಿ ಪ್ರವಾಸಿಗ ಬ್ರಾಹ್ಮಣರಯ್ಪರ ಸತ್ರ(73) ದಾಹಾರದಾನಕ್ಕೆ ಬಿಟ್ಟನು ||

★ ಆರ್. ಎನ್. ಗುರವ

ದ್ಯೂತಪ್ರಸಂಗ

ಕುಮಾರವ್ಯಾಸ ಭಾರತವು ಸಂಸ್ಕೃತ ವ್ಯಾಸಭಾರತದ ಭಾವಾನುವಾದವೆಂಬಂತೆ ಇದೆಯಾದರೂ, ಕುಮಾರವ್ಯಾಸನು ತನ್ನ ಕಾವ್ಯದಲ್ಲಿ ಸಾಕಷ್ಟು ಸ್ವಾತಂತ್ರ್ಯವಹಿಸಿ ತನ್ನ ಪ್ರತಿಭೆಯನ್ನು ಮೆರೆದಿರುವನು. ಆದರಿಂದ ಅದು ವ್ಯಾಸಭಾರತದ ಕೇವಲ ಪಡಿನೆಳಲಾಗಲಿಲ್ಲ. ಈ ಮಾತಿಗೆ ಕಾವ್ಯದಲ್ಲಿ ಹಲವಾರು ನಿದರ್ಶನಗಳು ದೊರೆಯುತ್ತವೆ. ಈಗ ದ್ಯೂತಪ್ರಸಂಗವನ್ನೇ ನೋಡಬಹುದು. ಕುಮಾರವ್ಯಾಸನ ದ್ಯೂತ ಸನ್ನಿವೇಶವು ಅತ್ಯಂತ ಸ್ವಾರಸ್ಯಕರವಾಗಿ ಚಿತ್ರಿತವಾಗಿದೆ. ಈ ಚಿತ್ರಣವು ಮೂಲವನ್ನು ಅನುಸರಿಸಿದರೂ ಕೆಲವೆಡೆಯಲ್ಲಿ ಮೂಲಕ್ಕಿಂತ ಹೆಚ್ಚಿನ ಮೆರುಗನ್ನು ಪಡೆದಿದೆಯೆನ್ನಲಡ್ಡಿಯಿಲ್ಲ. ಆದರ ನಿರೂಪಣೆಯ ಸೊಗಸನ್ನು ಎತ್ತಿ ತೋರಿಸುವುದೇ ಈ ಲೇಖನದ ಉದ್ದೇಶ. ಈ ಸೊಗಸು ಮನದಟ್ಟಾಗಬೇಕಾದರೆ ಮೂಲ ವ್ಯಾಸಭಾರತದ ಹಿನ್ನೆಲೆ ಅತ್ಯವಶ್ಯ. ಅದರಂತೆ, ಜೈನನಾದರೂ "ವ್ಯಾಸಮುನೀಂದ್ರರುಂದ್ರ ವಚನಾಮೃತವಾರ್ಧಿಯನೀಸುವೆಂ" ಎಂದು ಹೊರಟ ಕನ್ನಡದ ಇನ್ನೊಬ್ಬ ಮಹಾಕವಿ ಪಂಪನ 'ವಿಕ್ರಮಾರ್ಜುನವಿಜಯ'ದ ಹಿನ್ನೆಲೆಯೂ ಅಷ್ಟೇ ಅವಶ್ಯ. ವ್ಯಾಸ ಮತ್ತು ಪಂಪ ಇವರ ಚಿತ್ರಣಗಳನ್ನು ಹಿನ್ನೆಲೆಯಲ್ಲಿಟ್ಟುಕೊಂಡು ಕುಮಾರವ್ಯಾಸನ ನಿರೂಪಣೆಯನ್ನು ಪರಿಶೀಲಿಸುವುದು ಸೂಕ್ತವೂ ಸ್ವಾರಸ್ಯಕರವೂ ಆದೀತು.

ದ್ಯೂತಪ್ರಸಂಗವು ಉಂಟಾಗಲು ಕಾರಣವೇನೆಂಬ ಬಗ್ಗೆ ಈ ಮೂವರಲ್ಲೂ ತುಸು ಭಿನ್ನವಾಗಿಯೇ ನಿರೂಪಿತವಾಗಿದೆ.

ವ್ಯಾಸಭಾರತದ ದುರ್ಯೋಧನನು ಪಾಂಡವರ ಶೌರ್ಯ ಸಂಪತ್ತುಗಳನ್ನು ಕಂಡು ಕರುಬಿದನು. ಹರಿಶ್ಚಂದ್ರನಂಥ ಅವರ ವೈಭವವನ್ನು ಕಂಡು ಅವನಿಗೆ ಬದುಕೇ ಬೇಸರವೆನಿಸಿತು.[೧] ಅದಕ್ಕೂ ಹೆಚ್ಚಾಗಿ ಪಾಂಡವರ ಆ ರಾಜಭವನದಲ್ಲಿ ಆತ ಅರಿಯದೆ ಬಾಗಿಲೆಂದು ತಿಳಿದು ಗೋಡೆಗೆ ಹಾಯ್ದಾಗ, ಸಹದೇವನು ಪುನಃ ಪುನಃ ದಾರಿ ತೋರಿದನು. ಭೀಮಸೇನನಂತೂ ಧೃತರಾಷ್ಟ್ರಪುತ್ರನೇ[೨] ಎಂದು ಬೇಕೆಂತಲೇ ಕರೆದು "ಈ ಕಡೆಗೆ ಬಾಗಿಲು ಇದೆ" ಎಂದು ಹೇಳಿದನು. ಕೃಷ್ಣ ಆದಿಯಾಗಿ ಪಾಂಡವರೆಲ್ಲರೂ ನಕ್ಕರು. ದ್ರೌಪದಿಯೂ

---

೧. ಏತಾಂ ದೃಷ್ಟ್ವಾ ಶ್ರಿಯಂ ಪಾರ್ಥೇ ಹರಿಶ್ಚಂದ್ರೇ ಯಥಾ ವಿಭೋ
ಕಥಂ ತು ಜೀವಿತಂಶ್ರೇಯೋ ಮಮ ಪಶ್ಯಸಿ ಭಾರತ ॥ (ಸಭಾ—೫೩-೨೪)

೨. "ಕುರುಡನ ಮಗನೇ" ಎಂದು ಭೀಮನ ಕೊಂಕು ಮಾತು.

ಕೂಡ ಉಪಹಾಸಗೈದುದು ದುರ್ಯೋಧನನ ಮನವನ್ನು ಹೆಚ್ಚಾಗಿ ನೋಯಿಸಿತ್ತು.[೩] ಈ ಎಲ್ಲದರ ಪ್ರತೀಕಾರವೆಂದೇ ಅವನು ತಂದೆಯನ್ನು ಕಾಡಿ ಬೇಡಿ ಪಾಂಡವರನ್ನು ದ್ಯೂತಕ್ಕೆ ಕರೆಸಬೇಕೆಂದು ಒಪ್ಪಿಸಿದನು. ಧೃತರಾಷ್ಟ್ರನು ಮೊದಲು ವಿವೇಕವನ್ನು ಬೋಧಿಸಿ ಮಗನನ್ನು ಈ ದುಷ್ಟ ವಿಚಾರದಿಂದ ಪರಾವೃತ್ತಗೊಳಿಸಲು ಯತ್ನಿಸಿ ವಿಫಲನಾಗಿ ಕೊನೆಗೆ ಒಪ್ಪಿದನು.

ಕುಮಾರವ್ಯಾಸನೂ ಇದೇ ಕಾರಣವನ್ನು ಹೇಳಿದ್ದರೂ, ಇದರಲ್ಲಿ ಒಂದು ಅಂಶವನ್ನು ಇನ್ನೂ ಹೆಚ್ಚು ಸ್ಫುಟಗೊಳಿಸಿರುವನು. ಕುಮಾರವ್ಯಾಸನ ದುರ್ಯೋಧನನಿಗೆ ಪಾಂಡವರ ಸಂಪತ್ತನ್ನೆಲ್ಲ ಅಪಹರಿಸಿ ಅವರನ್ನು ನಗೆಗೀಡು ಮಾಡಿದರೆ ಮಾತ್ರ ಸಾಕಿಲ್ಲ. ಅವನ ಕೋಪ ಕುದಿಯುತ್ತಿರುವುದು ಮುಖ್ಯವಾಗಿ ದ್ರೌಪದಿಯ ಮೇಲೆ.

> " ಅಂದು ದ್ರೌಪದಿ ಸಹಿತ ನಾರೀ
> ವೃಂದ ಕೈಗಳ ಹೊಯ್ದು ಮಿಗೆ ಘೊ
> ಳ್ಳೆಂದು ನಕ್ಕುದು, ನೊಂದು ತಲೆವಾಗಿದೆನು ಲಜ್ಜೆಯಲಿ ||
>
> (ಸಭಾ—12.37)

ಅಂದು ಅವನು ಸ್ಥಳವನೇ ಜಲವೆಂದು, ಜಲವನೇ ಸ್ಥಳವೆಂದು ಮೋಸಹೋದಾಗ ದ್ರೌಪದಿ ಅಟ್ಟಹಾಸಗೈದು, ಈತ ಮುಖ ಕೆಳಗಿಕ್ಕುವಂತೆ ಮಾಡಿದಳು. ಭೀಮಾದಿಗಳೂ ನಕ್ಕಿದ್ದರು. ಆದರೆ ದ್ರೌಪದಿಯ ಅಟ್ಟಹಾಸವು ಅವನ ಮರ್ಮಾಘಾತವನ್ನೇ ಮಾಡಿತ್ತು. ಆತನ "ಅಭಿಮಾನ ಜಲನಿಧಿ ಬತ್ತಿತು." ಆತ ಗೋಡೆಗೆ ಅಡ್ಡಹಾಯ್ದಾಗ ಅವನ ಹಣೆ ನೊಂದಿದ್ದರೂ, ಅವನ ಮನವೇ ಅದಕ್ಕಿಂತ ಹೆಚ್ಚಾಗಿ ನೊಂದಿತ್ತು. ಬಿದ್ದ ಪೆಟ್ಟಿಗಿಂತ ನಕ್ಕ ಪೆಟ್ಟು ಹೆಚ್ಚಲ್ಲವೇ?

ಇದೆಲ್ಲವನ್ನೂ ಆತ ತಂದೆಗೆ ವಿವರಿಸಿ ಹೇಳುತ್ತ, "ನಗೆಯೊಳಗಡ್ಡಬಿದ್ದಳು ಪಾಂಡವರ ಬೊಡ್ಡಿ, ಜಿಂಕದಲವರು ಬಂದರು ಭೀಮ ಫಲುಗುಣರು; ವಿಘಾತಿಯ ಬಡ್ಡಿಗಿನ್ನಕ ಬದುಕಿದೆನು" (ಸಭಾ— ೧೨-೪೩) ಎಂದು ತನ್ನ ಹೃದಯದಲ್ಲಿ ಕುದಿಯುತ್ತಿದ್ದ ವಿಷವನ್ನೆಲ್ಲ ತೋಡಿಕೊಳ್ಳುವನು. ಈಗ ಪಾಂಡವರನ್ನು ದ್ಯೂತಕ್ಕೆ ಕರೆಸಿಕೊಡು ಸಾಕು ಎಂದು ತಂದೆಯನ್ನು ಬೇಡಿಕೊಂಡನು. ದ್ರೌಪದಿಯ ಮೇಲಿನ ತನ್ನ ಸೇಡಿನ ಭಾವವನ್ನೂ ಆತ ಬಚ್ಚಿಡಲಿಲ್ಲ!

---

೩. ತತ್ರ ಮಾಂ ಪ್ರಾಹಸತ್ಕೃಷ್ಣಃ ಪಾರ್ಥೇನ ಸಹ ಸುಸ್ವರಂ
ದ್ರೌಪದೀ ಚ ಸಹ ಸ್ತ್ರೀಭಿರ್ವ್ಯಥಯಂತಿ ಮನೋ ಮಮ ॥ (ಸಭಾ—೫೦-೩೧)

ನೀ ಕರುಣದಲಿ ನಮ್ಮ ಸಲುಹುವ
ಡಾ ಕುಮಾರರ ಕರೆಸಿಕೊಟ್ಟರೆ
ಸಾಕು; ಮತ್ತೊಂದಿಹುದಲೇ, ಪಾಂಚಾಲ ನಂದನೆಯ
ನೂಕಿ, ಮುಂದಲೆವಿಡಿದು ತೊತ್ತಿರೊ
ಳಾಕೆಯನು ಕುಳ್ಳಿರಿಸಿದಂದು ವಿ
ಶೋಕನಹೆನಾ ದಿವಸದಲಿ ಕೃತಕೃತ್ಯ ತಾನೆಂದ ||

(ಸಭಾ— ೧೨-೬೬)

ಧೃತರಾಷ್ಟ್ರ ಈ ಮಾತಿಗೆ ಹೇಗೆ ಒಪ್ಪಬಲ್ಲ? ಆದರೆ ದುರ್ಯೋಧನನದು ಒಂದೇ ಛಲ. ಪಾಂಡವರನ್ನು ದ್ಯೂತಕ್ಕೆ ಕರೆಸಬೇಕು. ಇಲ್ಲವಾದರೆ ತಾನು ತನ್ನ ತಮ್ಮಂದಿರ ಜೊತೆ ಹಸ್ತಿನಾವತಿಯನ್ನೇ ಬಿಟ್ಟು ಹೋಗಲಿಕ್ಕೂ ಸಿದ್ಧ. "ನಿಮ್ಮಯ ಕಿರಿಯ ತಮ್ಮನ ಮಕ್ಕಳಿಗೆ ಕೊಡಿ ಹಸ್ತನಾಪುರವ. ಹರುಕುಗಳು ನಾವ್ ನೂರು ಮಕ್ಕಳು ಹೊರಗೆ ಬದುಕುವೆವೈಸಲೇ. ನಿಮ್ಮುರುವ ಮಕ್ಕಳುಗೂಡಿ ಸುಖದಲಿ ರಾಜ್ಯವಾಳೆಂದ." ಸಿಟ್ಟಾಗಿ ಅಲ್ಲಿಂದ ಹೊರಟೂ ಹೋದ.

ಸಂತಾಪಗೊಂಡ ಧೃತರಾಷ್ಟ್ರ ಮಗನನ್ನು ಅಂಕಿತದಲ್ಲಿಡಲಾರದೆ ಹೆಂಡತಿಯ ಮೇಲೆ ಹರಿಹಾಯ್ದ. "ಎಲೆಗೆ ಕರೆಯಾ ಪಾಪಿ, ಕೌರವಕುಲ ಕಠಾರನ" ಎಂದು ಒದರಾಡಿದ. ಕೊನೆಗೂ ಪುತ್ರವಾತ್ಸಲ್ಯದಿಂದ ಕುರುಡನಾದ ಆ ಧೃತರಾಷ್ಟ್ರ ಮಗನ ಮಾತಿಗೆ ಒಪ್ಪಿದ. ಪಾಂಡವರೂ ಕೌರವರೂ "ಸುಖ ದ್ಯೂತದಲಿ ರಮಿಸಲಿ" ಎಂದು ಹೇಳಿ ವಿದುರನಿಂದ ಪಾಂಡವರನ್ನು ಕರೆ ಕಳುಹಿದ.

ಪಂಪನಿಗಿಂತ ವ್ಯಾಸನಲ್ಲಿ, ಮತ್ತು ವ್ಯಾಸನಿಗಿಂತ ಕುಮಾರವ್ಯಾಸನಲ್ಲಿ ದುರ್ಯೋಧನನ ಸೇಡು ಹೆಚ್ಚು ಸಕಾರಣವಾಗಿದೆಯೆನ್ನಬಹುದು. ಆದರೆ ಪಾಂಡವರೆಲ್ಲರೂ ದುರ್ಯೋಧನನನ್ನು ಅಪಹಾಸಗೈದುದು ಸಜ್ಜನಿಕೆಯೆ? ಎಂಬ ಪ್ರಶ್ನೆ ಮಾತ್ರ ಬಂದೇ ಬರುತ್ತದೆ. ಭೀಮಾದಿಗಳು ಔದ್ಧತ್ಯವನ್ನು ತೋರಿದರೂ ಧರ್ಮರಾಯನಾದರೂ ಅವರನ್ನು ತಡೆಯಬಹುದಿತ್ತು. "ನಗುವವರ ಜರೆದನೆ ಯುಧಿಷ್ಠಿರ?" ಎಂದು ದುರ್ಯೋಧನನೂ ಕೇಳಿದ್ದಾನೆ. ಅದರಂತೆ ಮಹಾಪತಿವ್ರತೆಯೂ, ಮನೆಯ ಯಜಮಾನಿಯೂ ಆದ ದ್ರೌಪದಿಯು ಉಪಹಾಸಗೈದುದು ಸರಿಯೇ? ದುರ್ಯೋಧನ ಅವಳ ಮೈದುನ, ಮಹಾರಾಜ, ಅಲ್ಲದೆ ಈಗ ಅತಿಥಿಯಾಗಿ ಬಂದವನು! ಹೇಗೆ ನೋಡಿದರೂ ಪಾಂಡವರ ಈ ವರ್ತನೆ ಕ್ಷಮ್ಯವೆಂದು ತೋರುವುದಿಲ್ಲ. ಅವರ ಮುಂದಿನ ವಿಪತ್ ಪರಂಪರೆಗಳಿಗೆ ಅವರ ಈ ಒಂದು ತಪ್ಪೂ ಕೆಲ ಮಟ್ಟಿಗೆ ಕಾರಣವಾಯಿತೇನೊ!

ತಪ್ಪು ತಪ್ಪೇ ಅದನ್ನು ಯಾರೇ ಮಾಡಲಿ, ಅದು ಎಷ್ಟೇ ಚಿಕ್ಕದಿರಲಿ, ಅದರ ಪ್ರತಿ ಫಲವನ್ನು ಉಣ್ಣಲೇಬೇಕು ಎಂಬ ಮಾತನ್ನು ಬಹುಶಃ ವ್ಯಾಸನು ಇಲ್ಲಿ ಸೂಚಿಸಿರಬಹುದು.

ಪಂಪನಲ್ಲಿ ಮಾತ್ರ ಈ ಪ್ರಶ್ನೆಯೇ ಬರುವುದಿಲ್ಲ. ದ್ರೌಪದಿಯಾದಿಯಾಗಿ ಪಾಂಡವರ ವ್ಯಕ್ತಿತ್ವಕ್ಕೆ ಕುಂದನ್ನುಂಟು ಮಾಡುವ ಈ ಸನ್ನಿವೇಶವನ್ನೇ ಅವನು ಬಿಟ್ಟುಕೊಟ್ಟಿರುವನು. ರಾಜಸೂಯ ಯಾಗಕ್ಕಾಗಿ ಬಂದಿದ್ದ ಕೌರವ ರಾಯ ಅಲ್ಲಿ ಪೃಥಾನಂದನರ "ಚಾಗದ ಯಾಗದ ಭೋಗದ ಮ್ಮೆಮೆಗೆ ಬೆರಗಾದಂ." (ಪಂಪ ಭಾರತ ೬–೬೭). ಆ ಬೆರಗೇ ಅವನಲ್ಲಿ ಅಸೂಯೆಯನ್ನು ಪ್ರದೀಪ್ತಗೊಳಿಸಿತು. ಆತ ದುಶ್ಶಾಸನ ಕರ್ಣ ಶಕುನಿ ಮತ್ತು ಸೈಂಧವರೆಂಬ ದುಷ್ಟಚತುಷ್ಟಯರೊಡನೆ "ಆವ ಮಾಜ್ಕೆಯೊಳ್ ಪಗೆಯಂ ಕೆಯ್ಗೆ ಮಾಡುವಂ ಪೇಳಿಂ" ಎಂದು ವಿಚಾರಿಸಿದನು. ಬೇರೆ ಯಾವ ಮಾರ್ಗವೂ ತೋರದೆ ಶಕುನಿಯು "ಯಮನಂದನನಲ್ತೆ ನೆತ್ತದೊಳ್ ಬಸನಿಗನಾತನಂ ಬರಿಸಿ ನೆತ್ತಮನಾಡಿಸಿ ಗೆಲ್ದುಕೊಳ್ವಮೀ ವಸುವತಿಯಂ. ಮನಂಬಸದೆ ನೀನ್ ಬಱಿಯುಟ್ಟು ಫಣೀಂದ್ರಕೇತನಾ (೬–೬೮) ಎಂದು ಬೋಧಿಸುವನು.

ಈ ಸಂದರ್ಭದಲ್ಲಿ ಪಂಪ ಧೃತರಾಷ್ಟ್ರನನ್ನು ತರುವುದೇ ಇಲ್ಲ. ವ್ಯಾಸ ಮತ್ತು ಕುಮಾರವ್ಯಾಸರಲ್ಲಿ ಧೃತರಾಷ್ಟ್ರ ಮಗನ ಮಾತಿಗೆ ಕಟ್ಟು ಬಿದ್ದು, ಪಾಂಡವರನ್ನು ದ್ಯೂತವನ್ನು ಆಡಲೆಂದೇ ಕರೆಸುವನು. ಧರ್ಮರಾಯನು ಕ್ಷತ್ರಿಯರ ಧರ್ಮವನ್ನು ನೆನೆದು, ದೊಡ್ಡಪ್ಪನಲ್ಲಿ ವಿಶ್ವಾಸವಿರಿಸಿ ಒಪ್ಪುವನು.

ಕರೆಸುವನು ಧೃತರಾಷ್ಟ್ರ ಗಡ ನ
ಮ್ಮರಸನಲಿ ಧೃತರಾಷ್ಟ್ರನಲಿ ನಮ
ಗೆರಡು ಮನವೇ ಭಾವ ಭೇದವೆ ಪಾಂಡು ಬೊಪ್ಪನಲಿ
ವರವೆ ದೊರಕಲಿ ಶಾಪವೇ ಮೇಣ್ಬ
ರಲಿ ಭಯವಿಲ್ಲೆಮಗೆ ಬೊಪ್ಪನ
ಕರಣ ಕೃತಿಗೆ ಹಸಾದವೆಂದನು ಧರ್ಮನಂದನನು || (೧೩-೮೮)

ದ್ಯೂತ, ಮೃಗಯಾ, ಮಧುಪಾನ, ಕಾಂತಾಪ್ರೀತಿ ಮೊದಲಾದುವು 'ಮೊದಲಲಿ ಸಂಪ್ರೀತಿಕರ'ವಾದರೂ ನಂತರ ಕೆಡಿಸುವುವೆಂದು ವಿದುರ ಹೇಳಿದರೂ, ಧರ್ಮರಾಯ ಅದನ್ನು ಗಮನಿಸುವುದಿಲ್ಲ. ಧರ್ಮರಾಯನಲ್ಲಿ ದ್ಯೂತ ವ್ಯಸನ ಎಷ್ಟು ಆಳವಾಗಿತ್ತೆಂಬುದನ್ನು ಕುಮಾರವ್ಯಾಸನು ಇಲ್ಲಿ ಸೂಚಿಸಿರುವನು.

ಒಂದು ರೀತಿಯಿಂದ ನೋಡಿದರೆ ಪಂಪನ ಚಿತ್ರಣವೇ ಹೆಚ್ಚು ಸಹಜವೂ ಉಚಿತವೂ ಆಗಿದೆ ಎನ್ನಬೇಕು. ಅಲ್ಲಿ ದುರ್ಯೋಧನನ ಸಂಗಡಿಗರು ಮೊದಲೇ

'ನಾಟಿವಾಸಗೆ'ಗಳನ್ನು ಸಿದ್ಧಮಾಡಿಕೊಂಡಿದ್ದರೂ, ಪಾಂಡವರಿಗೆ ದ್ಯೂತದ ಸುಳಿವನ್ನು ಕೊಡುವುದಿಲ್ಲ. “ತಾಮುಂ ಆಮುಂ ಕೆಲವು ದೆವಸಂ ಗೋಷ್ಠಿಯೊಳಿರ್ಪಂ ಬರ್ಕೆಂದು ಬಟಿಯನಟ್ಟಿದೊಡೆ. ಅವರ ಮನದ ಪುಲ್ವಗೆಯುಂ ಪೊಲ್ಲಮೆಯುಮುಂ ಅಱಿಯದೆ” ಪಾಂಡವರು ಸಮಸ್ತ ಪರಿವಾರಸಹಿತ ಬರುವರು.

ದುರ್ಯೋಧನನು ಅವರಿಗೆ ತನ್ನ ವೈಭವ–ವಿಲಾಸಗಳನ್ನು ತೋರಿ “ಕಂದುಕ ಕ್ರೀಡಾದಿ ನಾನಾವಿಧ ವಿನೋದಂಗಳಿಂ ಕೆಲವು ದಿವಸ”ಗಳನ್ನು ಕಳೆದ ನಂತರ, ಮುಂದೆ ಒಂದು ದಿವಸ ಶಕುನಿಗೆ ಮೊದಲೇ ಎಲ್ಲವನ್ನು ಸೂಚಿಸಿ, ಉಳಿದವರನ್ನು ಅಕ್ಷ ಕ್ರೀಡೆಗೆ ತೊಡಗಿಸಿ, ಧರ್ಮರಾಯನ ಜೊತೆಗೆ ತಾನೂ ನೋಡುತ್ತ ಕುಳಿತುಕೊಳ್ಳುವನು. ಕೆಲ ಸಮಯದ ನಂತರ ಶಕುನಿಯು “ನೋಡುವುದಱೊಳೇನಟ್ಟುಯೊಳಾಡುತ್ತಿರಲಾಗ ತಮ್ಮುಮಿರ್ವರುಮೆನೆನಾಮಾಡುವಮೆ ಬನ್ನಿಂ....”[೪] ಎಂದು ಆಹ್ವಾನಿಸಿ ಧರ್ಮನನ್ನು ದ್ಯೂತಕ್ಕೆ ತೊಡಗಿಸುವನು.

ಆಟಕ್ಕೆ ಕುಳಿತ ಮೇಲೆ “ಒಡ್ಡಮಂ ಪೇೞಿಂ” ಎಂದು ಶಕುನಿ ಕೇಳಿದರೆ, “ಪೊಟ್ಟು ಪೋಗಿಂಗಂ ಆಟ್ಟಿಗಂ ಆಡುವ ತಮ್ಮುಮಿರ್ವರುಂ ಪಲಗೆಗೆ ಸಾಯಿರ ಗದ್ಯಾಣದ ಪೊನ್ನೇ ಸಾಲ್ಗುಂ; ಅಗ್ಗಳಂಬೇಡ”ಎಂದು ದುರ್ಯೋಧನ ನುಡಿಯುವನು. ಅಷ್ಟೇ ಅಲ್ಲದೆ, ಮೊದಲಿನ “ಪತ್ತೆಂಟು ಪಲಗೆಯುಂ ಮೆಳ್ಪಡಿಸಲೆಂದು ಸೋಲ್ತು” ನಂತರ ಪಣವನ್ನು ಹೆಚ್ಚಿಸುತ್ತ ಆಡಿ ಧರ್ಮನ ಸಕಲ ಸಂಪತ್ತನ್ನೂ ಸೂರೆಗೊಳ್ಳುವನು.

ಇಲ್ಲಿಯ ದುರ್ಯೋಧನನ ವರ್ತನೆ ಕಪಟದಿಂದ ಕೂಡಿದ್ದರೂ ಎಷ್ಟು ಸಹಜವೆಂಬಂತೆ ಚಿತ್ರಿತವಾಗಿದೆಯೆಂಬುದನ್ನು ಗಮನಿಸಬೇಕು. ರಾಜಕವಿಯಾದ ಪಂಪ ರಾಜಸಭೆಯ ತಂತ್ರಕುತಂತ್ರಗಳನ್ನೆಲ್ಲ ಬಲ್ಲವನು!
“ಹಿತಮಿತಮೃದುವಚನ “ನಾದ ಪಂಪನು ಅವರ ದ್ಯೂತವನ್ನು ಹೆಚ್ಚು ವಿವರವಾಗಿ ಚಿತ್ರಿಸುವುದೇ ಇಲ್ಲ. ಕೇವಲ ೪-೫ ಪದ್ಯಗಳು ಮತ್ತು ಒಂದಿಷ್ಟು ಗದ್ಯದಲ್ಲೇ ಎಲ್ಲವೂ ಮುಗಿದು ಹೋಗುತ್ತದೆ. ಒಂದು ರೀತಿಯಿಂದ ಪಂಪನ ಈ ವಚನವು ಅಷ್ಟೊಂದು ಹಿತವಾಗಿ ತೋರುವುದಿಲ್ಲ. ಒಂದು ಸುಂದರವಾದ ಚಿತ್ರಪಟವನ್ನು ನೋಡುತ್ತಿರುವಂತೆ ಅದು ಒಮ್ಮೆಲೇ ಮುಗಿದುಹೋದರೆ ಹೇಗೋ, ಹಾಗೆ ಅತೃಪ್ತಿಯೆನಿಸುತ್ತದೆ.

ವ್ಯಾಸನಲ್ಲಿ ಮಾತ್ರ ದ್ಯೂತಪ್ರಸಂಗದ ಈ ಚಿತ್ರಣವು ಸಾಕಷ್ಟು ವಿವರವಾಗಿಯೇ ಬಂದಿದೆ. ಸಭೆಯಲ್ಲಿ ಶಕುನಿಯು “ಯುಧಿಷ್ಠರನೇ, ಪಣವನ್ನು

---

೪. ಪಂಪಭಾರತ ೬-೭೦

ಮಂಡಿಸಲಾಗಿದೆ; ಸಭೆಯೆಲ್ಲ ಸಿದ್ಧವಾಗಿದೆ. ಎಲ್ಲರೂ ಉತ್ಕಂಠೆಯಿಂದ ನಿನ್ನ ದಾರಿಯನ್ನೇ ಕಾಯುತ್ತಿರುವರು." ಎಂಬ ಮಾತುಗಳಿಂದಲೇ ಧರ್ಮರಾಯ ನನ್ನು ಎದುರುಗೊಳ್ಳುವನು. ಕಪಟದಿಂದ ಆಡುವ ದ್ಯೂತವು ಪಾಪಕರವು. ದ್ಯೂತದಲ್ಲಿಯ ಜಯವು ಧರ್ಮ ಯುದ್ಧದ ಜಯದಂತೆ ಅಲ್ಲ[೫] ಎಂದು ಮೊದಲಾಗಿ ಧರ್ಮರಾಯನು ದೊಡ್ಡ ತಾತ್ತ್ವಿಕ ಮಾತುಗಳನ್ನು ಆಡುವನು. ಕೊನೆಗೆ ಶಕುನಿ "ನಿನಗೆ ಭಯವಿದ್ದರೆ ಬಿಟ್ಟು ಬಿಡು" ಎಂದಾಗ, ಧರ್ಮ ಆಟಕ್ಕೆ ತೊಡಗುವನು. ಸಭೆಯಲ್ಲಿ ಧೃತರಾಷ್ಟ್ರ ಆದಿಯಾಗಿ ಎಲ್ಲರೂ ನೆರೆ ದಿದ್ದರು. ಧರ್ಮರಾಯ ಮೊದಲನೆಯ ಆಟದಿಂದ ಕಡೆತನಕ ಸೋಲುತ್ತಲೇ ಹೋಗುವನು. ಅವನು ಪಣಕ್ಕೆ ಹಚ್ಚಿ ಆಡಿದ್ದೆಲ್ಲವನ್ನೂ ಗೆದ್ದುಕೊಂಡ ಶಕುನಿ "ಜಿತಮಿತ್ಯೇವ" ಎಂದೇ ಉದ್ಗಾರ ತೆಗೆಯುತ್ತ ಹೋಗುವನು. ಎಲ್ಲ ಸಂಪತ್ತು ರಥ ಆನೆ ಕುದುರೆ ದಾಸ ದಾಸಿಯರು ಸೈನ್ಯ ಎಲ್ಲವನ್ನು ಸೋತಾಗ ಧರ್ಮರಾಯನು, "ಶಕುನಿಯೇ ನಿನ್ನ ಕಪಟದಿಂದಲೇ ನಾನು ಸೋತಿರುವೆನು. ಆದರೂ ಪಣ ಹಚ್ಚಿ ಆಡೋಣ"[೬] ಎಂದು ಪಣ ಹಚ್ಚುತ್ತ ಹೋಗುವನು; ಮತ್ತು ಶಕುನಿಯು "ಎಲ್ಲವನ್ನೂ ನಾನು ಗೆದ್ದೆ" ಎನ್ನುತ್ತ ಹೋಗುವನು. ಈ ವರ್ಣನೆ ಮೂವತ್ತಕ್ಕೂ ಹೆಚ್ಚಿನ ಪದ್ಯಗಳಲ್ಲಿ ಬಂದಿರುತ್ತದೆ.

ಈ ಭಯಂಕರ ದ್ಯೂತವನ್ನು ತಪ್ಪಿಸಬೇಕೆಂದೂ, ದುರ್ಯೋಧನನನ್ನು ನಿರ್ಬಂಧಿಸಬೇಕೆಂದೂ ವಿದುರನು ಧೃತರಾಷ್ಟ್ರನಿಗೆ ಪದೇ ಪದೇ ಹೇಳುವನು. ಅವನ ನೀತಿಯ ಎಲ್ಲ ಮಾತುಗಳೂ ವ್ಯರ್ಥವಾದುವು. ದುರ್ಯೋಧನನು ವಿದುರನನ್ನೇ ತೆಗಳಿದ. ಈ ಎಲ್ಲ ಮಾತು–ಪ್ರತಿಮಾತುಗಳು ರಸಭಂಗವನ್ನೇ ಉಂಟು ಮಾಡುತ್ತವೆಯೆಂದರೂ ತಪ್ಪಿಲ್ಲ. ಅದು ಕಾರಣವೇ ಕುಮಾರ ವ್ಯಾಸ ಇದನ್ನು ಮೊಟಕುಗೊಳಿಸಿರುವನು.

ಎಲ್ಲವನ್ನೂ ಸೋತ ಧರ್ಮರಾಯ, ನಕುಲ ಸಹದೇವರನ್ನೂ ಪಣಕ್ಕೆ ಹಚ್ಚಿ ಸೋತನು. ಆಗ ಶಕುನಿ ಮಾದ್ರೀಪುತ್ರರಿಗಿಂತ ಭೀಮಾರ್ಜುನರು ಧರ್ಮನಿಗೆ ಹೆಚ್ಚು ಪ್ರೀತಿಯವರೆಂದು ಕೊಂಕು ನುಡಿವನು. ಧರ್ಮನು ಹೇವದಿಂದ ಆಡಿ ಭೀಮಾರ್ಜುನರನ್ನೂ, ತನ್ನನ್ನೂ ಸೋತು ಕೊನೆಗೆ ದ್ರೌಪದಿ ಯನ್ನೂ ಸೋತು ಹೋದ ಚಿತ್ರವನ್ನು ವ್ಯಾಸನು ಉಚಿತವಾಗಿಯೂ ಹೃದಯ ಸ್ಪರ್ಶಿಯಾಗಿಯೂ ಚಿತ್ರಿಸಿರುವನು.

* * * *

೫. ಇದಂ ವೈ ದೇವನಂ ಪಾಪಂ ನಿಕೃತ್ಯಾ ಕಿತವೈಃ ಸಹ
ಧರ್ಮೇಣ ತು ಜಯೋ ಯುದ್ಧೇ ತತ್ಪರಂ ನ ತು ದೇವನಮ್ ॥ (ಸಭಾ-೫೯-೧೦)

೬ ಮತ್ತ ಕೈತವ ಕೇನೈವ ಯಜ್ಜಿತೋಽಸ್ಮಿ ದುರೋದರೇ
ಶಕುನೇ ಹಂತ ದೀವ್ಯಾಮೋ ಗ್ಲಹಮಾನಾಃ ಪರಸ್ಪರಂ ॥ (ಸಭಾ-೬೧-೧)

ಕುಮಾರವ್ಯಾಸನು ವ್ಯಾಸನನ್ನೇ ಹೆಚ್ಚಾಗಿ ಅನುಸರಿಸಿದ್ದರೂ, ತನಗೆ ಸಮರ್ಪಕವೆಂದು ಕಂಡಲ್ಲಿ ಕೆಲವು ವ್ಯತ್ಯಾಸಗಳನ್ನು ಮಾಡಿಕೊಂಡು, ವ್ಯಾಸನ ಚಿತ್ರದಲ್ಲಿ ಕೆಲವು ಹೆಚ್ಚಿನ ಬಣ್ಣಗಳನ್ನು ಸೇರಿಸಿ, ಮೆರುಗನ್ನು ತಂದಿರುವನೆಂದು ಹೇಳಿದರೆ ತಪ್ಪಾಗಲಾರದು.

ಧೃತರಾಷ್ಟ್ರನ ಅಭಿಮತದಂತೆ ಹಸ್ತಿನಪುರಕ್ಕೆ ಬಂದ ಧರ್ಮರಾಯನನ್ನು ಕಂಡಾಗಲೇ.

"ಬಾಲಮೃಗವೊಳಗಾಯ್ತು ಲಾ ತೊಡು
ಕೋಲನೆಂದರು ನಗುತ ಮನದಲಿ
ಕೌಳಿಕದ ಕುಹಕಿಗಳು ಕೌರವರಾಯ ಶಕುನಿಗಳು" ||

(ಸಭಾ–೧೩–೧೩)

ಧರ್ಮರಾಯ ಬಂದು ಧೃತರಾಷ್ಟ್ರನಿಗೆ ವಂದಿಸುವನು. ಧೃತರಾಷ್ಟ್ರನೂ "ತಂದೆ ಬಾರೈ, ಎನ್ನಾನೆ ಬಾರೈ" ಎಂದು ಪ್ರೀತಿಯಿಂದಲೇ ಅವನನ್ನು ಬರಮಾಡಿಕೊಳ್ಳುವನು. ಕೌರವರಾಯ ಮಾತ್ರ ತನ್ನ ದುಷ್ಟ ಸ್ನೇಹಿತರ ಜೊತೆ ಮಾತನಾಡಿಕೊಂಡು ಕಪಟದ್ಯೂತಕ್ಕೆ ಆಗಲೇ ಅಣಿಯಾಗುವನು. ತನ್ನ ಗೆಲುವಿಗಾಗಿ ಆತನು ದೇವತೆಗಳನ್ನೂ ಪೂಜಿಸಿ ಒಲಸಿಕೊಂಡನೆಂದು ಕುಮಾರವ್ಯಾಸ ಹೇಳುವನು.

"ಹರಸಿಕೊಂಡರು ಗಣಪ ಯಕ್ಷೇ
ಶ್ವರಿ ಕಣಾವತಿ ದುರ್ಗಿ ಭುವನೇ
ಶ್ವರಿಗಳಿಗೆ ವಿವಿಧೋಪಚಾರದ ಬಲಿವಿಧಾನದಲಿ" ||

(ಸಭಾ–೧೩–೨೧)

ರಾಜಸಭೆ ಸಿದ್ಧವಾಗಿತ್ತು. ದ್ಯೂತಕ್ಕಾಗಿಯೇ ನೆರೆದಿದ್ದರೂ "ಒಂದು ಕಡೆಯಲಿ ಗದ್ಯಪದ್ಯವು, ಅದೊಂದು ಕಡೆಯಲಿ ವಾರವಧುಗಳ ಸಾರಸಂಗೀತ, ಒಂದು ಕಡೆಯಲಿ ತರ್ಕಗೋಷ್ಠಿ" ಮೊದಲಾದುವೂ ನಡೆದಿದ್ದುವು. ಕೌರವೇಂದ್ರನ ಮುಂದೆ ಮಾತ್ರ "ಜಡಿದುದು ರಭಸ ಹಾಸಂಗಿಗಳ ಸಾರಿಗಳ."

ಈ ಪ್ರಸಂಗದಲ್ಲಿಯ ಶಕುನಿಯ ಪಾತ್ರವನ್ನು ಕುಮಾರವ್ಯಾಸನು ಹೆಚ್ಚಿನ ಕೌಶಲ್ಯದಿಂದ ಚಿತ್ರಿಸಿರುವನೆಂಬುದು ಕ್ಷಣಕ್ಷಣಕ್ಕೆ ನಮ್ಮ ಅನುಭವಕ್ಕೆ ಬರುತ್ತದೆ. ಶಕುನಿಯು ಸಾವಕಾಶವಾಗಿ,

"ಆಡಲರಿವನು ಗಡ ಯುಧಿಷ್ಠಿರ-
ನಾಡುವರೆ ಬರಹೇಳು, ಮೇಣ್ನಾ
ನೋಡುತಿರಲಾಪಾಡುವೆವು ಸಭೆಯಲಿ ವಿನೋದದಲಿ" ||

ಎಂದು ಧರ್ಮನನ್ನು ಆಟಕ್ಕೆ ಆಕರ್ಷಿಸುವಲ್ಲಿ, ವ್ಯಾಸನಲ್ಲಿ ಇಲ್ಲದ ಸೊಗಸು ಕಾಣುತ್ತದೆ. ಅತ ಮುಂದುವರಿದು "ನೆತ್ತವನಾಡಲರಿಯದ ನೃಪತಿ ಮೃಗವೆಂದಾಡುತಿಹರರಿವರು, ತಾವಲ್ಲ" ಎಂದೂ ಚುಚ್ಚುವನು.

ಅದಕ್ಕೆ ಧರ್ಮನೂ ಕೂಡ "ಆಡಲು ಬಹುದು ಸುಜನರ ಕೂಡೆ,........ ಸುಹೃದಯರಿಗೆ ಅತಿ ಕುಟಿಲರಲಿ ದುಸ್ಸಹ ಕಣಾ ಸಮ್ಮೇಳ." ಎಂದು ನಗುತ್ತಲೇ ನುಡಿದು, ದ್ಯೂತವು ದುರ್ವ್ಯಸನ ಎನ್ನುವನು.

ದ್ಯೂತ ಮೃಗಯಾ ಸ್ತ್ರೀವ್ಯಸನ—ಇವು ನೃಪರಿಗಾಗಿಯೇ ಇವೆ. "ಇದರ ರಸಾತಿಶಯವರಿಯದವ ನರಮೃಗ" ಎಂದು ಶಕುನಿ ಹೇಳಿ,

"ಕರೆದೆವಾವ್ ಜೂಜಿಂಗೆ ; ಜೇಕೇ ?
ಧರಣಿಪತಿ ಬಾ, ರಾಜಧರ್ಮವ
ನೊರಸುವರೆ ನಿಲ್ಲೆಂದುಪೇಕ್ಷಿಸಿ ನುಡಿದನಾ ಶಕುನಿ" ||

(ಸಭಾ— ೧೩-೪೯)

ಜೂಜು ಯುದ್ಧಗಳು ರಾಜಧರ್ಮಗಳೆಂದು ಧರ್ಮರಾಯ ಒಪ್ಪಿದರೂ, "ಕಳವಿನ ಜೂಜು ಧರ್ಮದ ಮಗನೋ ಮೊಮ್ಮಗನೋ ?" ಎಂದು ಕೇಳು ವಲ್ಲಿಯ ಮೊನಚನ್ನು ಗಮನಿಸಬೇಕು.

ಆದರೂ ಕೊನೆಗೆ ಧರ್ಮನು ದ್ಯೂತಕ್ಕೆ ಒಪ್ಪುವನು. ಅಖಿಳನೃಪ ಸಂಹಾರ ಬೀಜದ ಕರ್ಮಫಲವೇ ಧರ್ಮನಂದನನನ್ನು ದ್ಯೂತಕ್ಕೆ ನೂಕಿತು ಎನ್ನುವನು ಕವಿ.

ದ್ರೌಪದಿ ಭೀಮಾದಿಗಳಿಗೆ ಅಶುಭ ಶಕುನಗಳಾದುವು. ಶಕುನಿ ಸುಯೋಧ ನಾದಿಗಳ ಮುಖ ಕಳೆಯೇರಿತು. ಧರ್ಮರಾಯನಿಗೆ "ವ್ಯಸನ ತೃಷ್ಣೆಯು ಕೀಳು ಚಿತ್ತದ ಮಿಸುನಿಯೊಳು ಬೆರೆಸಿತು, ತಿಳಿವು ಮುಸುಡ ತಿರುಹಿತು." ಅಂತೂ "ಭೂಪತಿ ಸಿಲುಕಿದನು ಅವದಿರು ಒಡ್ಡಿದ ಬಲೆಗೆ."

ದ್ಯೂತವೂ ಅಹಿತಕರವೆಂದು ಮೊದಲು ಹೇಳಿದ ಧರ್ಮನೇ ಈಗ ದ್ಯೂತಾವೇಶದಲ್ಲಿ ಕೊಚ್ಚಿಕೊಂಡು ಹೋದನು. ಮೇಲೆ "ಧರ್ಮನಂದನನ ಆಟ ಒಳ್ಳಿತು, ಬಲ್ಲೆನು" ಎಂಬ ಶಕುನಿಯ ಪ್ರೋತ್ಸಾಹ ಬೇರೆ! ಕೇಳಬೇಕೇ?

"ಎನ್ನ ಲೆಕ್ಕಕೆ ಶಕುನಿ ಭೂಪತಿ ನಿನ್ನೊಡನೆ ಕೈಹೊಯ್ವನು" ಎಂದು ದುರ್ಯೋಧನನು ಹೇಳಿದರೆ, ಧರ್ಮರಾಯ ಒಂದೇ ಮಾತಿನಲ್ಲಿ "ಆಗಲಿ, ನಿನ್ನ ಮಾವನೆ ಮುನ್ನ ಬರಲಿ. ಅದಕೇನು" ಎಂದು ಒಪ್ಪಿಕೊಂಡು ಬಿಟ್ಟನು. ವ್ಯಾಸ ಭಾರತದ ಧರ್ಮರಾಯನೂ ಹೀಗೆಯೇ ಒಪ್ಪಿಕೊಂಡಿದ್ದರೂ ಮೊದಲು ಆತ- ಒಬ್ಬರು ಇನ್ನೊಬ್ಬರಿಗಾಗಿ ದ್ಯೂತವನ್ನಾಡುವುದು ನನಗೆ ವಿಚಿತ್ರವಾಗಿ ತೋರು

ತ್ತದೆ—ಎಂದು ಪ್ರತೀಕಾರವನ್ನಾದರೂ ಮಾಡಿದ್ದನು.[೭]

ಮುಂದೆ ಧರ್ಮರಾಯನು ಪ್ರತಿ ಆಟಕ್ಕೆ ವಿಪುಲವಾದ ದ್ರವ್ಯವನ್ನು ಹಚ್ಚಿ ಪ್ರತಿಸಲವೂ ಸೋಲುತ್ತ ಹೋಗುವ ವಿವರವು ಮೂಲ ವ್ಯಾಸಭಾರತದಂತೆಯೇ ಮುಂದುವರೆಯುತ್ತದೆ. ಆದರೂ ಇಲ್ಲಿಯ ನಾಟಕೀಯ ಚಿತ್ರಣವು ಬಹು ರಮ್ಯವಾಗಿ ಬಂದಿದೆ.

"ಹೇಮಭಾರದ ವಿಮಲ ರತುನಸ್ತೋಮವಿದೆ ಪಣ" ಎಂದು ಧರ್ಮ ಆಟಕ್ಕೆ ಮುಂದಾದ, ಧರ್ಮ ಹೇಳಿದಷ್ಟೇ ಧನವನ್ನು ದುರ್ಯೋಧನನೂ ಒಡ್ಡುತ್ತಿದ್ದ. "ದುಗುನ ಹಾಯಿಕು ತನಗೆ ಹಾಯ್ಕಿತ್ತಿಗನ" ಎಂದು ಅಬ್ಬರ ದಿಂದ ಅವರು ಸಾರಿಗಳನ್ನು (ದಾಳ) ಹಾಕುತ್ತಿದ್ದರು, ಅವರನ್ನು ಕಂಡು "ದ್ಯೂತದ ತಾಮಸದಲಿ ಉಬ್ಬೆದ್ದುದು ಇಬ್ಬರ ಕರಣವೃತ್ತಿಗಳು" ಎಂದು ಕವಿ ಉದ್ಗಾರ ತೆಗೆಯುವನು.

ಪ್ರತಿ ಆಟಕ್ಕೂ ಧರ್ಮ ಸೋಲಬೇಕು; ಆಗ ಶಕುನಿ "ಕೌರವರಾಯ ಗೆಲಿದನು, ಮತ್ತೆ ಪಣವೇನು?" ಎಂದು ಕೇಳಬೇಕು; ಧರ್ಮರಾಯ "ಕನಕಮಯ ರಥವೆರಡು ಸಾವಿರ" ಎಂದು ಪಣ ಹೇಳಬೇಕು. "ಐಸಲೇ ಹಾಯ್ಕು" ಎನ್ನುತ್ತ ಸಾರಿಯ ಕೆದರಿ ಬೊಬ್ಬಿರಿಯುತ್ತಿದ್ದ ಶಕುನಿ.

ಧರ್ಮ ಸೋಲುತ್ತ ನಡೆದು, ಎಲ್ಲಿ ಆಟವನ್ನು ನಿಲ್ಲಿಸಿ ಬಿಡುವನೊ?— ಎಂಬ ಶಂಕೆ ಶಕುನಿಗೆ. ಅದು ಕಾರಣವೇ ಆತ, "ಸೋತೆಯರಸಾ! ನಿನಗೆ ಜೂಜಿನ ಭೀತಿಯುಂಟೇ? ಮಾಣು. ಮೇಣ್ ನಿರ್ಭೀತನೇ, ನುಡಿ ಮೇಲಣ ಒಡ್ಡವ" ಎಂದು ಪದೇಪದೇ ಆಹ್ವಾನಿಸುವನು.

"ಭೂಪತಿಯ ಗಜಘಟೆ ತೀದುವೇ? ಮೇಲೇನು ಪಣವುಂಟು?" ಎಂಬ ಶಕುನಿಯ ಚುಚ್ಚು ಮಾತುಗಳಿಗೆ ಧರ್ಮರಾಯ ''ಫಡ, ದರಿದ್ರನೇ ತಾನು?" ಎಂದು ಹೆಮ್ಮೆಯಿಂದ ಪಣವನ್ನು ಹೆಚ್ಚಿಸಿ ಆಡುತ್ತ ನಡೆದನು....ಆದರೇನು, ''ನರೇಂದ್ರನ ಸಾರಿ ಸೋತುದು ನಿಮಿಷ ಮಾತ್ರದಲಿ''...."ಮತ್ತೆ ಪಣವೇ ನೆಂದನಾ ಶಕುನಿ.''

ಧರ್ಮರಾಯ ಎಲ್ಲ ಸಂಪತ್ತನ್ನಲ್ಲದೆ ದಾಸದಾಸಿಯರನ್ನೂ ಸೋತನು, ಆಗ ಶಕುನಿ,

> ಅರಸ ಸೋತೈ ನಾರಿಯರ, ಜಯ
> ಮರಳಿತಿತ್ತಲು ; ಮನಕೆ ಭೀತಿಯ
> ಬೆರಕೆಯುಳ್ಳಡೆ ಬಿಟ್ಟು ಕಳೆ ಪೈಸರಕೆ ಸಮಯವಿದು |

---

೭. ಅನ್ಯೇನಾऽನ್ಯಸ್ಯ ವೈ ದ್ಯೂತಂ ವಿಷಮಂ ಪ್ರತಿಭಾತಿ ಮೇ ।
ಏತದ್ವಿದ್ವಿನ್ನುಪಾದಸ್ವ ಕಾಮಮೇವಂ ಪ್ರವರ್ತತಾಂ ॥ (ಸಭಾ—೫೯.೨೨)

ಅರಸುಪಂಥದ ಪಾಸಿಮುನಕು
ಬ್ಬರಿಸುವೊಡೆ ಪಣವೇನು ಹೇಳ್ಳೆ
ಧರಣಿಪಾಲಯೆನುತ್ತ ರಿಂಗಣಗುಣಿದನಾ ಶಕುನಿ || (ಸಭಾ–೧೩–೪೮)

ಒಂದೆಡೆ ರಿಂಗಣಗುಣಿವ ಶಕುನಿಯು ಚಿತ್ರವಾದರೆ, ಇನ್ನೊಂದೆಡೆ ಹೇವದಿಂದ ಪಣವನ್ನು ಹೆಚ್ಚಿಸುತ್ತ ಆಡುವ ಧರ್ಮರಾಯನ ಚಿತ್ರ!

ಧರ್ಮರಾಯ "ಎಲವೊ ಸೌಬಲ, ಪಾಂಡುವಿನ ಮಕ್ಕಳು ಕಣಾ" ತಾವೆಂದು ಅಭಿಮಾನದಿಂದ ಆಟವನ್ನು ಮುಂದುವರೆಸಿದ. ಆಗ "ನೀ ಸೋತೆ ಹೋಗೆಂದೊದರಿದನು ಶಕುನಿ."

ವ್ಯಾಸ ಭಾರತದಲ್ಲೂ ಧರ್ಮರಾಯ ಪ್ರತಿ ಆಟಕ್ಕೆ ಹೂಡಿದ ಪಣದ ವರ್ಣನೆ ಬಂದೇ ಬರುತ್ತದೆ. ಆದರ ನಂತರ ಶಕುನಿ ಪ್ರತಿಸಲವೂ "ಜಿತ ಮಿತ್ಯೇವ' ಎಂದೇ ಧರ್ಮನಿಗೆ ನುಡಿಯುವನು. ಅಲ್ಲಿಯ ವಿವರದಲ್ಲಾಗಲಿ, ಶಕುನಿಯ ಮಾತಿನಲ್ಲಾಗಲಿ ಹೆಚ್ಚಿನ ನಾವೀನ್ಯ ತೋರುವುದಿಲ್ಲ. ಕುಮಾರ ವ್ಯಾಸನಲ್ಲಿಯ ನಾಟಕೀಯತೆ ಅಲ್ಲಿ ಇಲ್ಲವೆಂದೇ ಹೇಳಬಹುದು. ದ್ಯೂತದಲ್ಲಿ ಮುಳುಗಿ ಹೋದ ಧರ್ಮರಾಯನ ಮತ್ತು ಆಗಕ್ಕಿಂತ ಹೆಚ್ಚಾಗಿ ಶಕುನಿಯ ಚಿತ್ರವನ್ನು ಕೊಡುವಲ್ಲಿ ಕುಮಾರವ್ಯಾಸ ಹೆಚ್ಚಿನ ನೈಪುಣ್ಯವನ್ನು ತೋರಿದ್ದಾನೆ ಎಂದರೆ ತಪ್ಪಾಗಲಾರದು. ಅಲ್ಲಿಯ ವಿವರ ಅದೇಅದೇತನದಿಂದ ತುಸು ಬೇಸರವನ್ನೂ ತರಿಸುತ್ತದೆ ಆದರೆ ಇಲ್ಲಿ ಹಾಗಲ್ಲ.

ಅಪಾರ ಧನವನ್ನು ಸೋತರೂ ಧರ್ಮರಾಯನ ಚೈತನ್ಯ, ಛಲ ಇನ್ನೂ ಸೋತಿಲ್ಲ. "ಸೋತ ವಸ್ತುವ ತೆಗೆವೆನೀಗಳೆ ಶಕುನಿ ನೋಡಾ ತನ್ನ ಕೌಶಲವ" ಎಂದು ಧರ್ಮರಾಯ ಎಲ್ಲಿಲ್ಲದ ಹುರುಪಿನಿಂದಲೇ ಆಟಕ್ಕೆ ಮುಂದಾಗುವನು. ಆದನ್ನು ಕಂಡು ಒಂದು ಕ್ಷಣ ಶಕುನಿಯೂ ಹೆದರಿದನೇನೊ! ನಿಮಗೆ ಕೃಷ್ಣನ ಸಹಾಯವುಂಟು, ಕುರುಪತಿಗೆ ಯಾರ ಸಹಾಯವೂ ಇಲ್ಲ; ದಾಯವೇ ಅವನನ್ನು ಗೆಲಿಸಬೇಕು-ಎನ್ನುತ್ತ "ದಾಯವೇ ಬಾಯೆಂದು ಮಿಗೆ ಬೊಬ್ಬಿರಿದನಾ ಶಕುನಿ."

ಮತ್ತೆ ಹೇಳುವವೇನು ಸೋಲವ
ಬಿತ್ತಿ ಬೆಳೆದನು ಭೂಪನವರಿಗೆ
ತೆತ್ತನೈ ಸರ್ವಸ್ವ ಧನವನು ಸಕಲ ಸೈನಿಕನ ||
(ಸಭಾ—೧೩—೬೬)

ಸಕಲ ಸೈನ್ಯವನ್ನೂ ಸೋತ ಧರ್ಮರಾಯ ಅರವತ್ತು ಸಾವಿರ ಕರಿಕಳಭ, ಎಂಬತ್ತು ಸಾವಿರ ತುರಗ ಶಿಶುಗಳನ್ನೂ ಒಡ್ಡಿದ. ಅದೇನು, "ಸಾರಿಯ ಸೋಕಿದಾಗಳೆ ಸೋತನಾ ಭೂಪ."

ಇದನ್ನೆಲ್ಲ ಕಂಡ ವಿದುರ ಖತಿಗೊಂಡನು.

"ಅಕಟ ಸಾಲವೆ ಜೂಜು ನಿರ್ಬಂ
ಧಕವೆ, ಶಿವಶಿವ ತಾನಿದೆತ್ತಣ
ಶಕುನಿ ಯೆತ್ತಣ ಭರತಕುಲದ ಮಹಾಮಹೀಶ್ವರರು

(ಸಭಾ—೧೩—೬೮)

ಎಂದು ವಿವೇಕಿಯಾದ ವಿದುರ ದುರ್ಯೋಧನನನ್ನೂ ದ್ಯೂತ ನಿಲ್ಲಿಸುವಂತೆ ಒತ್ತಾಯಪಡಿಸುವನು. "ವಿಷದ ಮಧುರವು ಕೊಲುವುದೋ ಮನ್ನಿಸುವುದೋ, ಸಾಕು ತೆಗೆ" ಎಂದು ಎಚ್ಚರಿಸುವನು.೮

ಹೀಗೆ ತನ್ನ ಉದ್ದೇಶಸಾಧನೆಗೆ ವಿಘ್ನವನ್ನುಂಟು ಮಾಡ ಬಂದ ವಿದುರನನ್ನು ದುರ್ಯೋಧನನು ತುಂಬಿದ ಸಭೆಯಲ್ಲಿಯೇ ತೆಗಳುವನು. "ನೀನು ಸಕಲಶಾಸ್ತ್ರ ಪಂಡಿತನಾದರೂ ನಿನಗೆ ವಿವೇಕವಿಲ್ಲ"— ಎನ್ನುವನು ಯಾಕೆಂದರೆ,

ಕೇಳದೊಡೆ ಮೇಣಹಿತ ಹಿತವನು
ಹೇಳುವುದು ಪಾಂಡಿತ್ಯ; ನಿನ್ನನು
ಕೇಳಿದವರಾರೆಂದು ಜರೆದನು ಕೌರವರರಾಯ ||

(ಸಭಾ-೧೩-೭೩)

ವಿದುರನು ವಿವಾದವನ್ನು ಬೆಳೆಸುವುದಿಲ್ಲ. ಒಂದೇ ಮಾತಿನಲ್ಲಿ "ಮಣಿಯೆ ನೀನಿಲ್ಲಿ" ಎಂದು ಹೇಳಿ, ಮುಂದೆ ಯುದ್ಧದಲ್ಲಿ ಪಾಂಡವರು ಇದರ ಸೇಡು ತೀರಿಸಿಕೊಳ್ಳುವರೆಂದು ಸುಮ್ಮನಾದನು.

---

೮. ವಿದುರನ ಮಾತು ಇಲ್ಲಿ ಐದೇ ಪದ್ಯಗಳಲ್ಲಿ ಮುಗಿಯುತ್ತದೆ. ಆದರೆ ಮೂಲ ವ್ಯಾಸ ಭಾರತದಲ್ಲಿ ವಿದುರನು ಧೃತರಾಷ್ಟ್ರನನ್ನು ಕುರಿತು,

ಮಹಾರಾಜ ವಿಜಾನೀಹಿ ಯತ್ತ್ವಾ ವಕ್ಷ್ಯಾಮಿ ಭಾರತ
ಮುಮೂರ್ಷೋರೌಷಧಮಿವ ನ ರೋಚೇತಾಽಪಿ ತೇ ಶ್ರುತಂ ||

(ಸಭಾ—೬೨—೨)

ಸಾಯುವವರಿಗೆ ಔಷಧವು ರುಚಿಸದಿದ್ದಂತೆ ನನ್ನ ಭಾಷಣವು ನಿನಗೆ ಹಿಡಿಸದಿದ್ದರೂ, ನಾನು ಹೇಳಲಿರುವುದನ್ನು ಕೇಳು-ಎಂದು (ವಾಚಕರಿಗೂ ಹಿಡಿಸದ) ತನ್ನ ಉದ್ದ ಭಾಷಣವನ್ನು ಆರಂಭಿಸುವನು. ದುರ್ಯೋಧನನು ವಿದುರನನ್ನು ನಿಂದಿಸಿದರೆ, ಅವನಿಗೂ ಉಪದೇಶವನ್ನು ಮಾಡತೊಡಗುವನು. ಕಾವ್ಯ ದೃಷ್ಟಿಯಿಂದ ಇದು ರಸಭಂಗಕರ; ಆದ್ದರಿಂದ ಅನಾವಶ್ಯಕ. ಕುಮಾರವ್ಯಾಸನು ಈ ಸಂದರ್ಭವನ್ನು ಮೊಟಕುಗೊಳಿಸಿರುವುದು ಉಚಿತವೇ ಆಗಿದೆ.

"ವಿದುರನ ಮಾತು ಮುರಿದು ನೃಪಾಲನೆಚ್ಚರಿಸಿದನು ಕಣ್ಸನ್ನೆಯಲಿ ಸೌಬಲನ". ಶಕುನಿಗೆ ಅಷ್ಟೇ ಸಾಕಾಗಿತ್ತು. ಆತ ಮತ್ತೆ ತನ್ನ ಗೊಡ್ಡಾಟವನ್ನು ಮುಂದುವರಿಸಿದನು,

ಏಳು ಧರ್ಮಜ ಸೋತೆಲಾ ನಿ
ನ್ನಾಳು ಕುದುರೆಯನಿನ್ನು, ಸಾಕು; ದ
ಯಾಳುವಲ್ಲ ಸುಯೋಧನನು ಧನವಿಲ್ಲ ನಿನಗೆಂದ || (ಸಭಾ—೧೪·೧)

"ಪಟವನ್ನು ತೆಗೆದು ಬಿಡಲೇ? ನಿನ್ನ ಮುಖದಲ್ಲಿ ಕಾಂತಿಯೇ ಇಲ್ಲ. ನಿನ್ನ ತಮ್ಮಂಧಿರ ಮುಖಗಳಂತೂ ಸಿಟ್ಟಿನಿಂದ ಬೆಂಕಿಯಾಗಿವೆ"—ಎಂದು ನುಡಿದ ಶಕುನಿಗೆ ಧರ್ಮರಾಯನು—

"ಎಲವೋ ಸೌಬಲ, ಎತ್ತವು ಈಸರಲಿ ಅಳಿದುದೇ ನೀ ನಗುವವೋಲ್ ಎಮ್ಮೊಳಗು ಡಿಳ್ಳವೇ?" ಎಂದು ಸಿಡಿದೇಳುವನು. "ಒಂದು ರೇಖೆಯು ಬಳಿಯಲಿ ಒಂದೇ ಕೋಟಿ ಧನ"...... "ಪದ್ಮಸಂಖ್ಯೆಯರ್ ಭೂರಿ ಧನವಿದೆರಪಣ". ಹೀಗೆ ಧರ್ಮನು ಪಣವನ್ನು ಒಡ್ಡಿ ಒಡ್ಡಿ ಸೋತನು. "ತೀರಿತು ಇಂದ್ರಪ್ರಸ್ಥದ ಉರುಭಂಡಾರ."...... "ಅರಮನೆಯು ಪೈಕದ ವಾರಕದ ಭಂಗಾರವೊಡ್ಡಿತು ಕೋಟಿ ಸಂಖ್ಯೆಯಲಿ, ಸೇರಿತದು ಕುರುಪತಿಗೆ." ಕೊನೆಗೆ ನಕುಲ ಸಹದೇವಾರ್ಜುನರ ಆಭರಣಗಳೂ ಕೈಬಿಟ್ಟವು.

ಆಗ ಶಕುನಿ "ಪ್ರೀತಿಯುಂಟೇ ನಿಮಗೆ ಮತ್ತೀದ್ಯೂತದಲಿ? ಧನವಿಲ್ಲಲಾ!" ಎಂದು ಉಪಹಾಸಗೈದನು. "ರಾಜ್ಯಲಕ್ಷ್ಮಿಯು ಬೆನ್ನಕಂಡ" ಧರ್ಮ ಈಗ ಖಿನ್ನನಾದನು. ಆದರೂ ಆತ ಹಿಂಜರಿಯಲಿಲ್ಲ.

ಎಲವೊ ಫಡ ಫಡ ಶಕುನಿ ಗರ್ವದ
ತಳಿ ಮುರಿವುದೇ? ನಿನ್ನ ದುರ್ಮತಿ
ಗಳಿಗೆ ಹೂಡಿದ ದುರ್ಗವಿದೆ ತನ್ನಂತರಂಗವಲಿ || (ಸಭಾ-೧೪·೧೨)

ಎಂದು ಹೇಳಿ ನಕುಲನನ್ನೇ ಪಣವಾಗಿ ಒಡ್ಡುವನು. ನಕುಲನನ್ನು ಸೋತ ಧರ್ಮರಾಯ "ವರಿಸಿದೆನು ಸಹದೇವನನು. ನೆರೆ ಮರಳಿಚುವೆನೆನ್ನ ಅಖಿಳ ವಸ್ತೂತ್ಕರವನು." ಎಂದು ಆಟವನ್ನು ಮುಂದುವರಿಸಿದ. ಆಗ ಶಕುನಿ ಈ ಆಟವನ್ನು ಗೆಲ್ಲಲೇಬೇಕೆಂದು ಉತ್ಸಾಹಾತಿರೇಕದಿಂದ—

ಅರಸು ದಾಯವೆ ಬಾ, ಜಯಾಂಗದ
ಸಿರಿಯೆ ಬಾ, ಕುರುರಾಯ ರಾಜೋ
ತ್ಕರುಷ ಸಿದ್ಧಿಯೆ ಬಾ |

---

೯. .ಪದ್ಮ = ೧೦೦ ಅಬ್ಜ

ಎಂದು ಆಟಕ್ಕೆ ತೊಡಗುವನು. ಶಕುನಿಯ ಈ ಮಾತುಗಳನ್ನು ಕೇಳಿದರೆ, ನಮ್ಮ ಹಳ್ಳಿಗಳಲ್ಲಿ ಈಗಲೂ ದೀಪಾವಳಿಯಲ್ಲಿ ಪಗಡೆಯನ್ನು ಆಡುವವರ ಉತ್ಸಾಹದ ಚಿತ್ರ ಕಣ್ಣ ಮುಂದೆ ಕಟ್ಟುತ್ತದೆ. ಕುಮಾರವ್ಯಾಸನು ಇಂಥ ಆಟಗಾರರನ್ನು ಪ್ರತ್ಯಕ್ಷ ಕಂಡಿರಬೇಕು; ತಾನೂ ಆಡಿರಲೂಬಹುದು. ಅಂತೆಯೇ ಈ ಚಿತ್ರಣದಲ್ಲಿ ಅಂಥ ಸಹಜತೆ, ಜೀವಂತಿಕೆ ಕಳೆಕಟ್ಟಿದೆ.

ಧರ್ಮರಾಯ ಸಹದೇವನನ್ನೂ ಸೋತು ಹೋದ. ಆ ನೋವು ಒಂದು ಕಡೆಯಾದರೆ, ಆದರ ಮೇಲೆ "ಭೀಮಪಾರ್ಥರು ತಾನಿದೊಮ್ಮಿಗೆ ಬದುಕಿದರು ನಿಮಗೆ" ಎಂಬ ಶಕುನಿಯ ಭೇದಕ ಮಾತುಗಳು ಬೇರೆ.[೧೦]

> ಭೇದಮಂತ್ರವ ಮಾಡಿ ನಮ್ಮನು
> ಭೇದಿಸುವ ಗಡ ಸುಬಲಸುತನಕ-
> ಟೀ ದುರಾತ್ಮನ ನೋಡಿರೈ ಸಭ್ಯರು........ (ಸಭಾ— ೧೪·೧೮)

ಎಂದು ನುಡಿದು "ಅಕ್ಷವಿನೋದಕರ್ದಮಮಗ್ನ"ನಾದ ಧರ್ಮನು ಧನಂಜಯನನ್ನು ಒಡ್ಡಿದನು. ಆಗ ಶಕುನಿ—

> ಎಲೆ ಧನಂಜಯ ನಿನ್ನನೊಡ್ಡಿದ
> ಛಲಿ ಯುಧಿಷ್ಠಿರನಿಲ್ಲಿ ಸೋತರೆ
> ಬಳಿಕ ನಿನ್ನನು ಮಾರಿದನಲಾ ಕೌರವೇಶ್ವರಗೆ
> (ಸಭಾ —೧೪·೧೯)

ಎಂದು ನುಡಿದು ಭೀಮಾರ್ಜುನರನ್ನು ಒಡೆದುಕೊಳ್ಳಲು ಯತ್ನಿಸುವ ಚಿತ್ರವು ಮೂಲ ಭಾರತದಲ್ಲಿ ಕಾಣದ ಸೊಗಸು.

> "ಹೇಳುವುದರಿಂ ಮುನ್ನ ಶಕುನಿಗೆ
> ಬೀಳುವುದು ಬೇಕಾದ ದಾಯವು"

ಧರ್ಮರಾಯ ಅರ್ಜುನನ್ನೂ "ನೀಗಿದನು".

---

೧೦. ಈ ಮಾತುಗಳು ಮೂಲದಿಂದಲೇ ಪ್ರೇರಿತವಾದವುಗಳು. ಮೂಲದಲ್ಲಿ

> ಮಾದ್ರೀ ಪುತ್ರೌ ಪ್ರಿಯೌ ರಾಜಂಸ್ತವೇಮೌ ವಿಜಿತೌ ಮಯಾ
> ಗರೀಯಾಂಸೌ ತು ತೇ ಮನ್ಯೇ ಭೀಮಸೇನಧನಂಜಯೌ ॥
> (ಸಭಾ—೬೫·೧೯)

"ಸೋತಿರರಸರೆ ಮತ್ತೆ ಹೇಳೇ
ದ್ಯೂತ ಶಿಖಿಗಾಹುತಿಯನು...."

ಎಂದು ಶಕುನಿ ಆಹ್ವಾನಿಸಿದಾಗ, ಧರ್ಮ ಬಕಾಸುರಾಂತಕನನ್ನು ಒಡ್ಡಿದನು. ಈ ಆಟ ತುಂಬ ತುರುಸಿನದಾಗಿತ್ತು. ಜಯಮಾಲೆ ಯಾರ ಕೊರಳಿಗೂ ಬೀಳುವಂತಿತ್ತು. ಅದು ಹೇಗೆ ನಡೆಯಿತೆಂದರೆ,

ಆತುದೊಂದರೆಗಳಿಗೆ, ಸೌಬಲ
ಸೋತ ಧರ್ಮಜ ಗೆಲಿದ, ಧರ್ಮಜ
ಸೋತ ಸೌಬಲ ಗೆಲಿದನೆಂಬವೊಲಾಯ್ತು ಘನ ರಭಸ !

(ಸಭಾ—೧೪—೨೨)

ಆ ಹಲಗೆಯೂ ಸೋತು ಹೋಯಿತು, "ಯುಧಿಷ್ಠಿರನ ಊಹೆ ಮುರಿದುದು, ಮುಂದುಗೆಟ್ಟನು." ಕೊನೆಗೆ ತನ್ನನ್ನೇ ಪಣವಾಗಿ ಒಡ್ಡಿದನು.

ಧರ್ಮಜನನ್ನು ಮೊದಲು ದ್ಯೂತಕ್ಕೆ ಆಹ್ವಾನಿಸಿದ ಶಕುನಿಯೇ ಈಗ,

"ಜನಪ ಮಾರಿದೆ ಭೀಮಸೇನಾ
ರ್ಜುನರು ಸಹಿತೊಡಹುಟ್ಟಿದರ ನಿ-
ರ್ಧನಿಕನಾಗಿಯು ಮತ್ತೆ ಬಿಡವೆ ದ್ಯೂತವ್ಯಸನ ?"

(ಸಭಾ—೧೪—೨೪)

ಎಂದು ಛೀಮಾರಿ ಹಾಕುವನು. ಕುಮಾರವ್ಯಾಸನ ಶಕುನಿಯ ಚಿತ್ರವು ಇಲ್ಲಿ ಹೆಚ್ಚು ಸ್ಫುಟಗೊಳ್ಳುತ್ತದೆ.

"ಶಕುನಿಯೊಡ್ಡಿದ ಕಾಲುಕುಣಿಕೆಯೊಳಾರು ಬೀಳರು ?" ಧರ್ಮಜ ತನ್ನನ್ನೂ ಬೀಳುಕೊಟ್ಟ. "ಜನಜಾಲವಿದ್ದುದು ಬಿಗಿದ ಬೆರಗಿನೊಳು". ಶಕುನಿ ಮಾತ್ರ ಇನ್ನೂ "ಜೀಯಾ ಪಣವೇನು ?" ಎಂದು ಕೇಳುತ್ತಿದ್ದಾನೆ! ಅದಕ್ಕೆ ಧರ್ಮರಾಯ,

"ಎಲವೊ ಸೌಬಲ ಸಾಕಿದೊಂದೇ
ಹಲಗೆ ಸರ್ವಸ್ವಾಪಹಾರವ
ನಿಳುಹುವೆನು ನೀಲಾಳಕಿಯ ನೊಡ್ಡುವೆನು ಬಾಲಕಿಯ" ||

(ಸಭಾ—೧೪—೨೬)

ಎಂದು ತಾನಾಗಿಯೇ ದ್ರೌಪದಿಯನ್ನು ಪಣಕ್ಕೆ ಹಚ್ಚುವನು.೧೧

ಆಡಿದನು ಯಮಸೂನು ಮಿಗೆ ಹೋ
ಗಾಡಿದನು ಮನುಮಥನ ಪಾಡಾ
ಪಾಡಿ ಪಾತಿಯನಕಟ ಮದನನ ಮಂತ್ರದೇವತೆಯ || (ಸಭಾ—೧೪—೨೭)

ಕ್ಷಣಾರ್ಧದಲ್ಲಿ ಧರ್ಮರಾಯ ಆ ಸುಂದರಿಯನ್ನು ಸೋತುಹೋದ! ಆಗ ಅವನ ಗತಿಯೇನಾಯಿತು?

ಬೆರಗು ಬೆಳೆದುದು ಮನದ ಮಿಡುಕಿನ
ಮರುಕ ಮುಂದಲೆಗೊಟ್ಟುದರಿವಿನ
ಸೆರಗು ಹಾರಿತು ಲಜ್ಜೆ ಬೆಳಗಿತು ಬಿಟ್ಟ ಬೀದಿಯಲಿ |
ಉರುಬಿತಪದೆಸೆ ರಾಜ್ಯಲಕ್ಷ್ಮಿಯ
ತುರುಬು ಕೈದೊಳಸಾಯ್ತು ಹಗೆಗೆ....   (ಸಭಾ—೧೪—೨೮)

ಇಷ್ಟು ಹೇಳಿ ಕವಿ "ಆನರಿಯೆನು ಅರಸನ ವಿರಸ ಚೇತೋಭಾವಭಂಗಿಗಳ" ಎಂದು ಕೈಚೆಲ್ಲುವನು.

ಕುಮಾರವ್ಯಾಸ ಕೊಟ್ಟಿರುವ ಆಗಿನ ಸಭೆಯ ರೇಖಾಚಿತ್ರವಿದು.

---

೧೧. ಈ ಸಂದರ್ಭವೂ ವ್ಯಾಸಭಾರತದಲ್ಲಿ ತುಂಬ ಮಾರ್ಮಿಕವಾಗಿ ಬಂದಿದೆ. ಅಲ್ಲಿ ಧರ್ಮ ತನ್ನನ್ನೇ ಸೋತಾಗ ಶಕುನಿಯು,

ಏತತ್ಪಾಪಿಷ್ಟಮಕರೋರ್ಯದಾತ್ಮಾನಂ ಪರಾಜಯೇ
ಶಿಷ್ಟೇ ಸತಿ ಧನೇ ರಾಜನ್ ಪಾಪ ಆತ್ಮ ಪರಾಜಯಃ || (ಸಭಾ—೬೫—೩೨)
ಅಸ್ತಿ ತೇ ವೈ ಪ್ರಿಯಾ ರಾಜನ್ ಗ್ಲಹ ಏಕೋಽಪರಾಜಿತಃ
ಪಣಸ್ವ ಕೃಷ್ಣಾಂ ಪಾಂಚಾಲೀಂ ತಯಾಽಽತ್ಮಾನಂ ಪುನರ್ಜಯ ||
(ಅದೇ ೬೫·೩೪)

"ರಾಜಾ, ನಿನ್ನನ್ನೇ ನೀನು ಸೋತು ಬಹಳ ಕೆಟ್ಟ ಕೆಲಸ ಮಾಡಿದೆ. ಸಂಪತ್ತು ಇನ್ನೂ ಬಾಕಿ ಇರುವಾಗ ತನ್ನನ್ನೇ ತಾನು ಸೋಲುವುದು ಪಾಪವು, ನೀನು ದ್ಯೂತದಲ್ಲಿ ಸೋಲದೆ ಇದ್ದ ನಿನ್ನ ಒಬ್ಬ ಪ್ರಿಯಳಿದ್ದಾಳೆ. ಆ ಪಾಂಚಾಲಿಯನ್ನು ಪಣಕ್ಕೆ ಹಚ್ಚಿ ಅದರಿಂದ ಪುನಃ ನಿನ್ನನ್ನು ಗೆದ್ದುಕೊಳ್ಳು..." ಎಂದು ಸೂಚಿಸುವನು. (ಈ ಸೂಚನೆಯಲ್ಲಿ ಅವನ ದುರುದ್ದೇಶವು ತುಂಬ ಚೆನ್ನಾಗಿ ಪ್ರಕಟವಾಗಿದೆ.) ಧರ್ಮನು ಅದನ್ನು ಗ್ರಹಿಸಿ, ದ್ರೌಪದಿಯ ಸೌಂದರ್ಯ ಮತ್ತು ಸದ್ಗುಣಗಳನ್ನು ಬಣ್ಣಿಸಿ (ಸಭಾ—೬೫·೩೫ ರಿಂದ ೪೧), "ಇಂಥ ಸುಂದರ ಕೃಶೋದರಿಯಾದ ಪಾಂಚಾಲಿಯನ್ನು ಪಣಕ್ಕೆ ಹಚ್ಚಿ ಆಡುವೆನು" ಎನ್ನುವನು.

ಇದೇ ರೀತಿಯಾಗಿ ಆತನು ನಕುಲಾದಿಗಳನ್ನು ಪಣಕ್ಕೆ ಹಚ್ಚುವಾಗಲೂ ಕೂಡ ಅವರವರ ಗುಣಾತಿಶಯಗಳನ್ನು ಬಣ್ಣಿಸುತ್ತಾನೆ. ಈ ವರ್ಣನೆಗಳಲ್ಲಿ ಸ್ವಾರಸ್ಯವಿದೆ. ಆದರೆ ಕುಮಾರವ್ಯಾಸ ಇಂಥ ವರ್ಣನೆಗಳನ್ನು ತರುವುದಿಲ್ಲ. ಅದರಿಂದ ದ್ಯೂತದ ಕಾವು ಕಡಿಮೆಯಾಗುವುದೆಂದು ಆತ ಭಾವಿಸಿ, ಅವುಗಳನ್ನು ಬಿಟ್ಟಿರಬಹುದು.

"ಮೀಸೆಯೊಳಿವ ಬೆರಳ್ಗಳ ಕರ್ಣ ಸೈಂಧವ ಖಳತಿಲಕ ದುಶ್ಶಾಸನಾದಿಗಳಿದ್ದರೀಚೆನಲಿ" ಮತ್ತು ಆ ಕಡೆಗೆ,

"....ನಿದ್ರ್ರವದ ತಾಳಿಗೆಯ
ತಳಿತ ಮೋನದ ಬೀತ ಹರುಷದ
ಜಲದ ನಯನದಲಿದ್ದರಾ ವಿ
ಹ್ವಲರು ಭೀಷ್ಮ ವಿಕರ್ಣ ವಿದುರ ದ್ರೋಣ ಗೌತಮರು ||
(ಸಭಾ ೧೪·೨೦)

ಮತ್ತು,

"ಇಟ್ಟ ಮೂಗಿನ ಬೆರಳ ನೆಲದಲಿ
ನಟ್ಟ ದೃಷ್ಟಿಯ ಕಳವು ಜೂಜಿನ
ದಿಟ್ಟರಾಟಕೆ ಬಲಿದ ಬೆರಗಿನ ಬಿಗಿದ ಖಾತಿಗಳ"

ಜಗಜಟ್ಟಿ ಭೀಮಾರ್ಜುನರು ಇದ್ದರು ಈಚೆಯಲಿ.

ಇವರೆಲ್ಲ ಹೀಗಾದರೆ, ಧೃತರಾಷ್ಟ್ರನ ಭಾವವೇ ಬೇರೆ.

ಹಾಸ ಗರ್ವದ ಮೋನದಲಿ ಸಂ
ತೋಷ ಗರ್ವದ ದುಗುಡದಲಿ ಸುವಿ
ಳಾಸ ಗರ್ವದ ಖೇದದಲಿ ಮದಗರ್ವ ಚಿಂತೆಯಲಿ
ವೈಸಿಕದ ಕಣಿ ಕುಟಿಲ ಮಂತ್ರದ
ಮೀಸಲಳಿಯದ ಕುಹಕ ವಿದ್ಯಾ
ವಾಸಗೃಹ ಧೃತರಾಷ್ಟ್ರನಿದ್ದನು ವಿಕೃತ ಭಾವದಲಿ ||
(ಸಭಾ—೧೪·೨೨)

ಹೀಗೆ ಭಾವಭಾವಗಳ ತುಮುಲದಿಂದ ಪ್ರಕ್ಷುಬ್ಧಗೊಂಡ ಸಾಗರದಲ್ಲಿ ಮುಳುಗಿ ಹೋದ ಧೃತರಾಷ್ಟ್ರನ ಈ ಚಿತ್ರವನ್ನು ಬರೆಯುವಲ್ಲಿ ಕುಮಾರವ್ಯಾಸ ನಿಸ್ಸಂಶಯವಾಗಿ ತನ್ನ ಪ್ರತಿಭೆಯನ್ನು ಮೆರೆದಿರುವನು. "ಏನನ್ನು ಗೆಲ್ಲಲಾಯಿತು? ಏನನ್ನು ಗೆಲ್ಲಲಾಯಿತು?" ಎಂದು ಪುನಃ ಪುನಃ ಕೇವಲ ಹರ್ಷೋದ್ಗಾರವನ್ನೇ ತೆಗೆಯುವ ವ್ಯಾಸ ಭಾರತದ ಧೃತರಾಷ್ಟ್ರನ ಚಿತ್ರಕ್ಕಿಂತ ಕುಮಾರವ್ಯಾಸನ ಚಿತ್ರವು ಖಂಡಿತವಾಗಿಯೂ ಅರ್ಥಪೂರ್ಣವಾಗಿದೆ! ೧೨

---

೧೨. ಧೃತರಾಷ್ಟ್ರಸ್ತು ಸಂಹೃಷ್ಟ ಪರ್ಯಪೃಚ್ಛತ್ಪುನಃ ಪುನಃ
ಕಿಂ ಜಿತಂ ಕಿಂ ಜಿತಮಿತಿ ಹ್ಯಾಕಾರಂ ನಾಭ್ಯರಕ್ಷತ ||
(ಸಭಾ-೬೫·೪೫)

[ಮುಂದಿನ ಪುಟಕ್ಕೆ]

ಸಭೆಯಲ್ಲಿಯ ಇತರರೆಲ್ಲ ಯಾರನ್ನು ದೂಷಿಸಬೇಕೆಂದು ತಿಳಿಯದೆ "ಮನದ ಅಳಲಿನಲಿ ಬೈದರಚ್ಯುತ ಹರ ಚತುರ್ಮುಖರ"! (ಸಭಿಕರ ಅಸಹಾಕತೆ, ದಿಙ್ಮೂಢತೆ ಎಷ್ಟು ಸಹಜಸುಂದರವಾಗಿ ಚಿತ್ರಿತವಾಗಿದೆ!)

ಎಲ್ಲಕ್ಕಿಂತ ಹೆಚ್ಚಿನ ಸಂತೋಷವಾದುದು ಶಕುನಿಗೇ.

ಗೆಲಿದುಕೊಟ್ಟೆನು ಸಕಲ ಜಾತು
ರ್ಬಲವನಾ ಭಂಡಾರ ಸಹಿತ
ಗ್ಗಳೆಯರೈವರ ಕಮಲಮುಖಿಯನು ರಾಜ್ಯಸಿರಿಸಹಿತ
ಕಲಶವಿಟ್ಟೆನು ಕೊಟ್ಟ ಭಾಷೆಗೆ
ಎಲೆ ಸುಯೋಧನಯೆಂದು ನಯನಾಂ
ಗುಲಿಯ ಸಂಕೇತದಲಿ ಸನ್ನೆಯ ಮಾಡಿದನು ಶಕುನಿ (೧೪–೫೫)

ದುರ್ಯೋಧನನ ಸಂಕಲ್ಪಸಿದ್ಧಿಯನ್ನು ಸಾಧಿಸಿದವನು ಶಕುನಿಯೇ. ಮೊದಲೇ ಮಾತು ಕೊಟ್ಟಂತೆ, ಪಾಂಡವರನ್ನೂ ಅವರ ಎಲ್ಲ ಸಂಪತ್ತು ಸೈನ್ಯ ರಾಜ್ಯ, ಅಷ್ಟೇ ಅಲ್ಲ, ಆ ಅಗ್ಗಳೆಯರ ಆ ಕಮಲಮುಖಿಯನ್ನೂ ಗೆದ್ದು ಕೊಟ್ಟ ಆತನಿಗೆ ಎಲ್ಲರಿಗಿಂತಲೂ ಹೆಚ್ಚಿನ ಸಂತೋಷವಾಗಿರುವುದು ಸಹಜವೇ ಸರಿ. ಆದರೆ ಅದನ್ನು ಪ್ರಕಟವಾಗಿ ಸಾರಿ ಹೇಳುವ ಎದೆಗಾರಿಕೆ ಇಲ್ಲದ ಆ ಶಕುನಿ ನಯನಾಂಗುಲಿಯ ಸಂಕೇತದಲಿ ಸನ್ನೆ ಮಾಡಿದಂತೆ! ಇಂಥ ಶಕುನಿಯ ಚಿತ್ರ ಪಂಪನಲ್ಲೂ ಇಲ್ಲ; ವ್ಯಾಸನಲ್ಲೂ ಇಲ್ಲ.

ಹೀಗೆ ಆ ಎಲ್ಲ ಸಭಿಕರ ಹೃದಯಗಳನ್ನೇ ಒಳಹೊಕ್ಕು ಅಂತರಾಳವನ್ನು ಅರಿತ ಕುಶಲ ಕಲಾವಿದನಂತೆ ಅವರವರ ಶಬ್ದ ಚಿತ್ರಗಳನ್ನು ಕೊಟ್ಟಿದ್ದಾನೆ ಕವಿ ಕುಮಾರವ್ಯಾಸ.

* * * *

ಆದರೆ ವ್ಯಾಸನಂತೆ ಕುಮಾರವ್ಯಾಸನೂ ಅನುದ್ಯೂತವನ್ನು ತಂದು ಬಿಡುತ್ತಾನೆ. ದ್ರೌಪದಿಯ ಪರಿಭವ, ಭೀಮಾದಿಗಳ ಪ್ರತಿಜ್ಞೆಗಳ ನಂತರ ವಿವೇಕೋದಯವಾಗಿ ಧೃತರಾಷ್ಟ್ರ ಪಾಂಡವರ ಸಕಲ ರಾಜ್ಯವನ್ನು ಹಿಂದಕ್ಕೆ ಕೊಟ್ಟುಬಿಡುವನು, ಇದನ್ನು ಸಹಿಸದ ದುರ್ಯೋಧನಾದಿಗಳು ಕುರುಡನ

[ಹಿಂದಿನ ಪುಟದಿಂದ]

ಆದರೆ ಭೀಷ್ಮದ್ರೋಣರಂತೆ ಅಲ್ಲಿ ಚಿಂತಾಕ್ರಾಂತನಾಗಿ ತಲೆ ಹಿಡಿದುಕೊಂಡೇ ಕುಳಿತು ಭುಸುಗುಡುವ ಸರ್ಪದಂತೆ ನಿಟ್ಟುಸಿರು ಬಿಡುವ ವಿದುರನ ಚಿತ್ರ ಕುಮಾರವ್ಯಾಸನಲ್ಲಿಲ್ಲ.

ಶಿರೋ ಗೃಹೀತ್ವಾ ವಿದುರೋ ಗತಸತ್ತ್ವ ಇವಾಭವತ್
ಆಸ್ತೇ ಧ್ಯಾಯನ್ನಧೋವಕ್ತ್ರೋ ನಿಶ್ಶ್ವಸನ್ನಿವ ಪನ್ನಗಃ ||
(ಸಭಾ—೬೫·೪೪)

ಮನಸ್ಸನ್ನು ಒಲಿಸಿಕೊಂಡು ಪಾಂಡವರನ್ನು ಮತ್ತೆ ದ್ಯೂತಕ್ಕೆ ಕರೆಯಿಸುವರು.

ಪ್ರಾತಿಕಾಮಿಯು ಧರ್ಮನನ್ನು ಕಂಡು ಪುನಃ ದ್ಯೂತಕ್ಕೆ ಬರಬೇಕೆಂಬ ಧೃತರಾಷ್ಟ್ರನ ಆಮಂತ್ರಣವನ್ನು ಮುಟ್ಟಿಸುವನು. ಆಗ "ವೃದ್ಧನ ಆಜ್ಞೆಯ ಪ್ರಕಾರ ಅಕ್ಷದ್ಯೂತದ ಸಲುವಾಗಿ ಬಂದ ಈ ಕರೆ ನಾಶವನ್ನೇ ಮಾಡುತ್ತದೆ ಯೆಂಬುದು ನನಗೆ ಗೊತ್ತಿದ್ದರೂ ಅದನ್ನು ನಾನು ಮೀರಲಾರೆ"[೧೩] ಎಂದು ಧರ್ಮನಿಂದ ಹೇಳಿಸಿಬಿಟ್ಟು, ವ್ಯಾಸನು "ಬಂಗಾರದ ಪ್ರಾಣಿ ಅಸಂಭವವೆಂದು ಗೊತ್ತಿದ್ದರೂ ಆದರ ಬಗ್ಗೆ ರಾಮನಿಗೆ ಲೋಭವುಂಟಾಯಿತು. ಯಾರ ನಾಶ ಕಾಲವು ಸಮೀಪಿಸಿರುತ್ತದೆಯೋ ಅವರಿಗೆ ಬುದ್ಧಿ ವಿಪರ್ಯಾಸವು ಹೆಚ್ಚಾಗುತ್ತದೆ"[೧೪] ಎಂದು ದೈವವನ್ನು ಹಳಿದು ಸುಮ್ಮನಾಗುತ್ತಾನೆ.

ಕುಮಾರವ್ಯಾಸನ ಧರ್ಮನೂ ಕುರುಡ ದೊಡ್ಡಪ್ಪನ ಮೇಲಿನ ಕುರುಡು ವಿಶ್ವಾಸದಿಂದ ಪುನಃ ದ್ಯೂತಕ್ಕೆ ಬರಲು ಒಪ್ಪುತ್ತಾನೆ. ಆದರೆ ಆಗ ಭೀಮ ಮಾತ್ರ ಸಿಡಿದೇಳದೆ ಬಿಡುವುದಿಲ್ಲ.

ಕರೆಸುವವದಿರು ಭಂಡರೋ ಮೇ
ಣ್ಮರಳಿ ಹೋಹರು ಭಂಡರೋ ನೀ
ನರಿವುದೇನ್ಹೆ ಪ್ರಾತಿಕಾಮಿಕನೆಂದನಾ ಭೀಮ (೧೬·೩೧)

ಅಲ್ಲದೆ ಮುಂದೆ ಆಗಬಹುದಾದ ಅನಿಷ್ಟವನ್ನು ಕುರಿತು ಧೌಮ್ಯಾದಿ ಮಂತ್ರಿಗಳೂ ಧರ್ಮರಾಯನನ್ನು ಎಚ್ಚರಿಸಿದರು. ಆದರೆ

ಕರೆಯೆ ಕಾದುವುದಾಡುವದು ಸಂ
ಗರಕೆ ಜೂಜಿಂಗಿದು ಮಹೀಶರ
ಪರಮ ಧರ್ಮವಲೇ ನಿಧಾನಿಸೆ ವೈದಿಕಾಂಗದಲಿ
ಗುರುವಲಾ ಧೃತರಾಷ್ಟ್ರನಾತನು
ಕರೆಸಿದಲ್ಲಿ ವಿಘಾತಿ ಬಂದರೆ
ಬರಲಿ ಸೈರಿಸಬಲ್ಲೆನೆಂದನು ಧರ್ಮನಂದನನು || (೧೬·೩೫)

---

೧೩. ಅಕ್ಷದ್ಯೂತೇ ಸಮಾಹ್ವಾನಂ ನಿಯೋಗಾತ್ ಸ್ಥವಿರಸ್ಯ ಚ
ಜಾನನ್ನಪಿ ಕ್ಷಯಕರಂ ನಾತಿಕ್ರಮಿತುಮುತ್ಸಹೇ || (ಸಭಾ—೬೭·೪)

೧೪. ಅಸಂಭವೇ ಹೇಮಮಯಸ್ಯ ಜಂತೋಸ್ತಥಾಪಿ ರಾಮೋ ಲುಲುಭೇ ಮೃಗಾಯ
ಪ್ರಾಯಃ ಸಮಾಸನ್ನ ಪರಾಭವಾಣಾಂ ಧಿಯೋ ವಿಪರ್ಯಸ್ತತರಾ ಭವಂತಿ
(ಸಭಾ—೬೭·೫)

ಪಾಂಡವರ ಪುನರಾಗಮನದಿಂದ ಪುರಜನರಿಗೂ ವಿಸ್ಮಯವುಂಟಾಯಿತು. ಸ್ತ್ರೀ-ಬಾಲ-ವೃದ್ಧರಾದಿಯಾಗಿ ಎಲ್ಲರೂ ವಿರಸವಚನದಿಂದಲೇ ಮಾತನಾಡಿ ಕೊಂಡರಂತೆ.

ಆದರೂ ಧರ್ಮರಾಯನು "ವಿಷಯದ ಕುಳಿಯೊಳಗೆ ಕಾಲ್ದೊಡಕಿ ಬಿದ್ದ ಸುಯೋಗಿಯಂದದಲಿ." ದ್ಯೂತವನ್ನು ಮೆಚ್ಚಿ, ತನ್ನ ಸರ್ವಸ್ವವನ್ನೂ ಕಳೆದು ಕೊಂಡು ವನವಾಸಕ್ಕೆ ತೆರಳಿದನು.

ಮೂಲವನ್ನು ಅನುಸರಿಸಿ ಈ ಅನುದ್ಯೂತದ ಪ್ರಸಂಗವನ್ನು ಚಿತ್ರಿಸಿದ ಕುಮಾರವ್ಯಾಸನು ತನ್ನ ಚಿತ್ರಣದಲ್ಲಿ ತುಸು ಜೀವಕಳೆಯನ್ನು ತರಲು ಯತ್ನಿಸಿದ್ದರೂ, ಹೆಚ್ಚಿನ ವಿಮರ್ಶಾ ಬುದ್ಧಿಯನ್ನು ತೋರಲಿಲ್ಲವೆಂದೇ ಹೇಳ ಬೇಕಾಗುತ್ತದೆ.

ಈ ಪ್ರಸಂಗದ ಅವಶ್ಯಕತೆಯೇ ಅಷ್ಟಾಗಿ ಕಾಣುವುದಿಲ್ಲ. ಮೊದಲ ದ್ಯೂತದಲ್ಲಿ ಅಷ್ಟೊಂದು ಬವಣೆಗೊಂಡಿದ್ದರೂ ಪುನಃ ದ್ಯೂತಕ್ಕೆ ಒಪ್ಪಿದ, ಅದು ಕಪಟದ್ಯೂತವೆಂದು ಅರಿತೂ ಒಪ್ಪಿದ—ಧರ್ಮನ ವ್ಯಕ್ತಿತ್ವವು ಇಲ್ಲಿ ಅತೀವ ದುರ್ಬಲವಾಗಿದೆ. ಅವನು ಧೃತರಾಷ್ಟ್ರನ ಮಾತಿಗೆ ಕಟ್ಟುಬಿದ್ದ ನೆಂದಾಗಲಿ, ಕ್ಷತ್ರಿಯ ಧರ್ಮಕ್ಕೆ ಕಟ್ಟುಬಿದ್ದನೆಂದಾಗಲಿ ಹೇಳಿ ಪಾರಾಗಲಿಕ್ಕೆ ಪ್ರಯತ್ನಿಸಬಹುದಾದರೂ, ಅವನ ವ್ಯಕ್ತಿತ್ವದ ದುರ್ಬಲತೆಯನ್ನು ಮುಚ್ಚಿ ಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಪ್ರಸಂಗವು ಧರ್ಮನ ದ್ಯೂತವ್ಯಸನವು ಎಷ್ಟು ಆಳವಾಗಿತ್ತೆಂಬುದನ್ನು ತೋರಿಸುತ್ತದೆಯಲ್ಲದೆ ಬೇರೇನೂ ಇಲ್ಲ.

ಮೂಲ ವ್ಯಾಸಭಾರತದಲ್ಲಿ ಹೇಗಾದರೂ ಇರಲಿ ಹಲವಾರು ಪ್ರಸಂಗಗಳಲ್ಲಿ ಸ್ವಾತಂತ್ರ್ಯವಹಿಸಿ, ಔಚಿತ್ಯಪ್ರಜ್ಞೆಯನ್ನು ತೋರಿ ಅಲ್ಲಲ್ಲಿ ವ್ಯತ್ಯಾಸಗಳನ್ನು ಮಾಡಿಕೊಂಡ ಕುಮಾರವ್ಯಾಸನು ಅನುದ್ಯೂತದಲ್ಲಿ ಮಾತ್ರ ವ್ಯಾಸನನ್ನು ಇದ್ದಕ್ಕಿದ್ದಂತೆ ಅನುಕರಿಸಿದುದು ಕಾವ್ಯದೃಷ್ಟಿಯಿಂದ ಅಷ್ಟು ಸಮಂಜಸವೆಂದು ತೋರುವುದಿಲ್ಲ.

* * * *

ಇಲ್ಲಿ ಪಂಪನ ಮಾರ್ಪಾಡನ್ನು ಮಾತ್ರ ನಾವು ಮೆಚ್ಚದೆ ಇರಲಾರೆವು. ಪಂಪನಲ್ಲಿ ಒಮ್ಮೆ ದ್ಯೂತ, ದ್ರೌಪದಿಯ ಮಾನಭಂಗ, ಧೃತರಾಷ್ಟ್ರನಿಂದ ರಾಜ್ಯಪ್ರದಾನ, ಪುನಃ ಅನುದ್ಯೂತ ಇವು ಬರುವುದೇ ಇಲ್ಲ. ಎರಡೂ ದ್ಯೂತಗಳ ಪರಿಣಾಮವನ್ನು ಆತ ಒಂದರಲ್ಲೇ ಸಾಧಿಸಿಬಿಟ್ಟಿರುವನು.

ಹೊತ್ತು ಕಳೆಯಲು ಪ್ರೀತಿಯಿಂದ ಆಡೋಣವೆಂದು ದ್ಯೂತವನ್ನು ಆರಂಭಿಸಿದ ಶಕುನಿಯು ಧರ್ಮರಾಯನ ಸರ್ವ ಸಂಪತ್ತನ್ನೂ ಸೂರೆಗೊಳ್ಳು ವನು. ತಮ್ಮ ಅಣ್ಣನ ಸೋಲನ್ನು ಕಂಡು ಸಹನೆಯನ್ನು ಕಳೆದುಕೊಂಡ ಭೀಮಸೇನನು.

ಭಯಮರಿಯದ ಕಲಿಯುಂ ಚಾ
ಗಿಯುಮೆನಿಸದೆ ನಾಡೆ ಲೋಭಿಯುಂ ಪಂದೆಯುಮಾ
ಗಿಯೆ ಬಾಟ್ಟ್ವಂಗಲ್ಲದೆ ಸೂ
ಳೆಯ ಕಣ್, ಪಾಸಗೆಯ ಕಣ್ಣುಮೇನುಱುಗುಗುಮೇ ||
(ಪಂಪಭಾರತ ೬·೭೩)

ಎಂದು ಕಹಿಯಾಗಿಯೇ ಮಾತನಾಡಿದನು.

ಗಾಂಗೇಯನೂ ವಿದುರನೂ ದ್ಯೂತದ ಸಮಾಚಾರವನ್ನು ಕೇಳಿ ತಿಳಿದು, ದುರ್ಯೋಧನನಲ್ಲಿಗೆ ಬಂದು,[೧೫] "ಸಾಲದೆ ಜೂದು ನಿಮ್ಮೊಳಗಿದೇಂ ಗಡ ಮಾಣಿಸಿಂ" ಎಂದು ಗದರಿಸಿದನು. ಅದಕ್ಕೆ ಧರ್ಮರಾಯ, "ಅಜ್ಜ, ಸೋಲ ದೊಳಾದಂ ಖಿಮಯಿಸಿದೆಂ. ನುಡಿಗಿನ್ನೆಡೆಯಿಲ್ಲ; ಪೋಗಿಂ ಆತ್ಮಾಲಯಕೆ"[೧೬] ಎಂದು ನುಡಿಯಬೇಕೇ!

ಅವರು ಧೃತರಾಷ್ಟ್ರನಲ್ಲಿಗೇ ಹೋಗಿ ಹೇಳಿದರು. ಸ್ವತಃ ಧೃತರಾಷ್ಟ್ರನೇ ಬಂದರೂ ದ್ಯೂತವನ್ನು ನಿಲ್ಲಿಸಲಾಗಲಿಲ್ಲ.

ಧರ್ಮರಾಯ ಎಲ್ಲ ದ್ರವ್ಯವನ್ನು ಸೋತಿದ್ದರೂ. ಶಕುನಿ ಅಷ್ಟಕ್ಕೆ ಬಿಡದೆ "ರಪಣಮಂ ತೋರಿಯುಂ ಒತ್ತೆಯಂ ಉಗ್ಗಡಿಸಿಯುಂ ಆಡಿಂ" ಎನ್ನುತ್ತಿದ್ದ. ಬೇರೆ ಏನೂ ಉಪಾಯವಿಲ್ಲದೆ ಧರ್ಮರಾಯನು "ಎಮ್ಮಾಳ್ವ ನೆಲನೊತ್ತೆ" ಎಂದನು. ಆದರೆ ಸುಯೋಧನನು "ಬಗೆದು ನೋಡಿ ಗೆಲ್ದಿಂ ಬಟೀಯಂ ಮುದುಗಣ್ಗಳ್ ಮಗುಟೆ ಕುಡಿಸುವರೆಂಬ" ವಿಚಾರದಿಂದಲೂ, ಭೀಮಾ-ರ್ಜುನರು ತಿರುಗಿ ಸೆಳೆದುಕೊಳ್ಳುವರೆಂಬ ಸಂಶಯದಿಂದಲೂ "ನಿನ್ನ ನನ್ನಿಯೊಳಂ ವರ್ಷಾವಧಿಯೊಳಲ್ಲದೆ ನೆಲನಂ ಒತ್ತೆವಿಡಿಯೆಂ" ಎನ್ನುವನು. ಆಗ ಧರ್ಮರಾಯ ವನವಾಸ ಅಜ್ಞಾತವಾಸಗಳ ಕರಾರನ್ನು ತಾನೇ ನುಡಿದು ಆಡಿ ಸೋತುಬಿಟ್ಟನು.

ಆಪಲಗೆಯುಮಂ ಸೋಲ್ತು ಮ
ಹೀಪತಿ ಜಲದಿಂ ಬಟೀಕ್ಕೆ ಸೋಲ್ತಂ ಗಡಮಾ
ದ್ರೌಪದಿಯುಮಂ.,. (ಪಂಪಭಾರತ ೭·೪)

ರಾಜ್ಯವನ್ನು ಸೋತ ಧರ್ಮನಂದನ ಛಲದಿಂದ ಮತ್ತೆ ಆಡಿ ದ್ರೌಪದಿಯನ್ನೂ ಸೋತನೆಂದು ಪಂಪ ಅತ್ಯವಸರದಲ್ಲಿ ಹೇಳಿ ಬಿಟ್ಟಿರುವುದು ಸ್ವಾರಸ್ಯಕ್ಕೆ

೧೫. ದ್ಯೂತವು ನಡೆದ ಕಾಲಕ್ಕೆ ಸಭಾಗೃಹದಲ್ಲಿ ವ್ಯಾಸ ಮತ್ತು ಕುಮಾರವ್ಯಾಸ ಭಾರತಗಳಲ್ಲಿಯಂತೆ ಪಂಪಭಾರತದಲ್ಲಿ ಭೀಷ್ಮ ದ್ರೋಣ ವಿದುರಾದಿಗಳಾಗಲಿ ಧೃತರಾಷ್ಟ್ರನಾಗಲಿ ಇರುವುದಿಲ್ಲ.

೧೬. ಪಂಪಭಾರತ (೬·೭೪).

ಕುಂದನ್ನುಂಟು ಮಾಡಿದ್ದರೂ ಅನುದ್ಯೂತ ಪ್ರಸಂಗವನ್ನು ತಪ್ಪಿಸಿರುವುದು ಮಾತ್ರ ಅವನ ಔಚಿತ್ಯ ಪ್ರಜ್ಞೆಯನ್ನೇ ಎತ್ತಿ ತೋರಿಸುತ್ತದೆ ಎನ್ನಬಹುದು.

* * *

ಹೀಗೆ ಕುಮಾರವ್ಯಾಸನ ದ್ಯೂತ ಪ್ರಸಂಗದ ಚಿತ್ರಣವು ಮುಖ್ಯವಾಗಿ ವ್ಯಾಸಭಾರತವನ್ನೇ ಅನುಸರಿಸಿರುವುದಾದರೂ ಈ ಭಾಗವು ಕೇವಲ ಮೂಲದ ಭಾವಾನುವಾದವಾಗಿಲ್ಲವೆಂಬುದು ಸ್ಪಷ್ಟವಿದೆ. ಮೂಲದಲ್ಲಿ ಅನಾವಶ್ಯಕವಾದ ಮತ್ತು ನೀರಸವಾದ ವಿವರಗಳು ಹೆಚ್ಚಾಗಿವೆ. ಆದರೆ ಕುಮಾರವ್ಯಾಸ ಚಿತ್ರಿಸಿದ ದ್ಯೂತಪ್ರಸಂಗವು ಹೆಚ್ಚು ಸಹಜಸುಂದರವಾಗಿದೆ ಎಂದರೆ ತಪ್ಪಾಗಲಾರದು. ಆತ ಚಿತ್ರಿಸಿದ ಈ ಕಾವ್ಯಭಾಗವನ್ನು ಓದುತ್ತಿರುವಂತೆ ದ್ಯೂತದ ಚಿತ್ರವು ನಮ್ಮ ಕಣ್ಣಮುಂದೆ ಮೂಡಿ ಬಿಡುತ್ತದೆ. ವ್ಯಾಸನಲ್ಲಿ ಅಷ್ಟಾಗಿ ಕಾಣದ ಈ ಚಿತ್ರಶೈಲಿಯ ಸೊಗಸನ್ನು ಕುಮಾರವ್ಯಾಸ ಇಲ್ಲಿ ಹೆಚ್ಚಾಗಿ ಮೆರೆದಿರುವನು.

ಈ ಪ್ರಸಂಗದಲ್ಲಿ ಕಂಡಿರುವ ಧೃತರಾಷ್ಟ್ರ, ವಿದುರ, ಭೀಮ, ದುರ್ಯೋಧನ, ಧರ್ಮ, ಶಕುನಿ ಮೊದಲಾದವರ ಪಾತ್ರಗಳನ್ನು ಕುಮಾರವ್ಯಾಸನು ಅವರವರ ಮಾತುಕೃತಿಗಳ ಉಳಿಯಿಂದಲೇ ಕಂಡರಿಸಿರುವನು. ಅದರಲ್ಲಿಯೂ ಜ್ಞಾನಿಯೂ ಧರ್ಮಮಾರ್ಗಿಯೂ ಆಗಿದ್ದರೂ ದ್ಯೂತಾವೇಶದಲ್ಲಿ ಕೊಚ್ಚಿಕೊಂಡು ಹೋಗಿ ತನ್ನತನವನ್ನೇ ಕಳೆದುಕೊಂಡ ಧರ್ಮರಾಯ, ಮತ್ತು ತನ್ನ ನುಡಿದ ಭಾಷೆಗೆ ಕಳಸವಿಟ್ಟಂತೆ ಧರ್ಮರಾಯನನ್ನು ತನ್ನ ಕಪಟದ್ಯೂತದ ಬಲೆಯಲ್ಲಿ ಸಿಲುಕಿಸಿ ರಿಂಗಣಗುಣಿವ ಶಕುನಿ— ಇವರ ಚಿತ್ರಣದಲ್ಲಂತೂ ಕುಮಾರವ್ಯಾಸನ ಕುಂಚ ಅತ್ಯಂತ ಸೂಕ್ಷ್ಮವಾಗಿದೆ. ಈ ಎರಡೂ ಚಿತ್ರಗಳು, ಅದರಲ್ಲೂ ಶಕುನಿಯ ಚಿತ್ರವು, ಓದುಗರ ಚಿತ್ತಭಿತ್ತಿಯಲ್ಲಿ ಅಳಿಸಲಾರದಂತೆ ಮೂಡಿ ನಿಲ್ಲುತ್ತವೆ.

ದ್ಯೂತ ಪ್ರಸಂಗವು ಮಹಾಭಾರತದಲ್ಲಿ ಬಹು ದೂರಗಾಮಿಯಾದ ಪರಿಣಾಮವನ್ನುಂಟು ಮಾಡುವಂಥ ಮಹತ್ತ್ವವನ್ನು ಪಡೆದಿದೆ. ಇದುವೇ ಪಾಂಚಾಲಿಯ ಕೇಶಪಾಶ ಪ್ರಪಂಚವನ್ನು ಕೆದರಲು ಕಾರಣವಾಯಿತು. ಭೀಮನ ಭೀಮಪ್ರತಿಜ್ಞೆಯ ಮುನ್ಸೂಚನೆ ಇಲ್ಲಿಯೇ ಕಂಡಿತು. ಒಂದೇ ಮಾತಿನಲ್ಲಿ, ಇದು ಹನ್ನೊಂದು ಅಕ್ಷೋಹಿಣೀಸೈನ್ಯಸಮೇತ ಕೌರವ ಕುಲದ ನಾಶಕ್ಕೇ ಕಾರಣವಾಯಿತು. ಇಂಥ ಮಹಾ ವಿಘಾತಿಯನ್ನುಂಟು ಮಾಡುವ ಈ ಪ್ರಸಂಗದ ಮಹತಿಯನ್ನರಿತ ಕುಮಾರವ್ಯಾಸನು ಈ ಸನ್ನಿವೇಶವನ್ನು ಇನ್ನಿಲ್ಲದ ಸಹಜತೆಯಿಂದಲೂ, ಅದರೂ ಅಷ್ಟೇ ನಾಟ್ಯಪೂರ್ಣವಾಗಿಯೂ ಚಿತ್ರಿಸಿರುವನು. ಈ ಚಿತ್ರಣದಲ್ಲಿಯ ಕೆಲವು ನ್ಯೂನತೆಗಳನ್ನು ಆಗಲೇ ನೋಡಿದೆವು. ಆದರೆ ಅವು ಇಲ್ಲಿಯ ಸೌಂದರ್ಯಪ್ರಕರ್ಷದಲ್ಲಿ ಮುಚ್ಚಿ ಹೋಗುತ್ತವೆಯೆಂಬುದೂ ಅಷ್ಟೇ ಸತ್ಯವಾಗಿದೆ.

ಪಂಪ ತನ್ನ ಸಮಸ್ತ ಭಾರತದಲ್ಲಿ ಈ ದ್ಯೂತಪ್ರಸಂಗದ ಚಿತ್ರಣಕ್ಕೆ ಹೆಚ್ಚಿನ ಅವಕಾಶವನ್ನು ಕೊಡಲಿಲ್ಲವಾದುದರಿಂದ ಅದು ಒಂದು ರೀತಿ ಅತೃಪ್ತಿಯನ್ನುಂಟು ಮಾಡುತ್ತದೆ; ವ್ಯಾಸನಲ್ಲಿ ಈ ಪ್ರಸಂಗವು ಸಾಕಷ್ಟು ಅವಕಾಶವನ್ನು ಪಡೆದಿದೆಯಾದರೂ ಅಲ್ಲಿಯದು ಕೇವಲ ವಿವರವಾದ ಕಥನ (Narration) ಎನಿಸುತ್ತದೆ. ಆದರೆ ಕುಮಾರವ್ಯಾಸ ಹೆಚ್ಚಾಗಿ ವ್ಯಾಸನನ್ನೇ ಅನುಸರಿಸಿದ್ದರೂ ಕೆಲವೆಡೆ ಮೂಲಕ್ಕಿಂತ ಹೆಚ್ಚಿನ ಸ್ವಾರಸ್ಯವನ್ನುಂಟು ಮಾಡಲು ಪ್ರಯತ್ನಿಸಿರುವನು. ಆತ ತಂದಿರುವ ನಾಟಕೀಯತೆಯೇ ಇಲ್ಲಿಯ ಮುಖ್ಯ ಸೊಗಸು ಎನ್ನಬಹುದು.

ಆಧಾರ ಗ್ರಂಥಗಳು

(೧) **ಕರ್ಣಾಟ ಭಾರತ ಕಥಾಮಂಜರಿ**—ಶ್ರೀ ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ

(೨) **ವಿಕ್ರಮಾರ್ಜುನ ವಿಜಯಂ**—ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪ್ರಕಟಣೆ.

(೩) **ಸಾರ್ಥ ಮಹಾಭಾರತ** (ಸಂಸ್ಕೃತ)—ಸಿ. ವ್ಹಿ. ವೈದ್ಯ ಅವರಿಂದ ಸಂಪಾದಿತ.

★ **ಕೃಷ್ಣಮೂರ್ತಿ ಕಿತ್ತೂರ**

ಸ್ವಂತಿಕೆ

ಅಧೀನದ
ಔಡಲೆಣ್ಣೆಯ ಕುಡಿದು
ಆಸೆ ಆಕಾಂಕ್ಷೆಗಳ ಮಲವನ್ನು
ಒಳಬಿಡದೆ—ಹೊರಗೆ
ಹಾಕಿರುವೆ.

ಅಭಿಮಾನ ಜಂತುವನು
ಸಂಕುಚಿತ ಮೈಯಿಂದ ತೆಗೆದು
ಎಡಗೈಯಿಂದ ಕಿತ್ತು—ಆಚೆ
ಎಸೆದಿರುವೆ

ಮಡುವಾದ ಉದರ—ಬಡ
ವಾದರೂ ಚಿಂತೆಯಿಲ್ಲೆನುವ
ಉಮೇದಿಯಿಂದ—ಈ
'ಹೆಮ್‌ಲಾಕಿನ' ಕಪ್ಪನ್ನು
ಎತ್ತಿರುವೆ.

ಮುತವರ್ಜಿಗಳ ಏಟುಗಳಿಂದ
ಬಡಬಡಿಸುವ ಜೀವವನು
ಜಜ್ಜಿ ಜಜ್ಜಿ—ಕಣಕವನ್ನಾಗಿಸಿ
ಎತ್ತಿದರೆ ಕಿತ್ತು ಬರುವಂತೆ
ಮಾಡಿರುವೆ.

ಕೋಪಾದೇಶಗಳಿಗೆ
ನಮ್ರತೆ ಪಾತ್ರೆಯನಿತ್ತು
ಸೌಮ್ಯದೇವಿಗೆ—ನನ್ನ
ತನದ ಬಲಿಯಿತ್ತು
ಮಡದಿ ಮಕ್ಕಳ—ಒಂದೊಂದು
ಆಸೆಗೆ—ಸಹನೆಯಾಧಾರ—ಹಚ್ಚಿ
ರಮಿಸಿರುವೆ.

ಬೆಳಕು ಕೊಳಕಾಗಿ
ಕತ್ತಲು ರೊಜ್ಜಾಗಿ
ತಂತಾನೆ ಗಳಿಗೆ—ದಿನ
ವಾ । ಗು । ವು । ದು.

ಮರೆವಿನಾ ತಂತಿಯೊಳು
ನೆನಪಿನಾ ಸ್ಪಂತಿಕೆಯು,
ಕೂಡಿಟ್ಟ ಓಲೆಗಳು,
ಆ । ಗು । ವು । ದು.

★ ಜಿ. ಕೃಷ್ಣರಾವ್

ಶ್ರೀ ವೀರಭದ್ರದೇವರ ಪಾರಿಜಾತ

ಕರತಾರ ಶ್ರೀ ವೀರಭದ್ರನ್ನ ೧ಗಂಡ೨ರುದ್ರನ್ನೂ ದುಕ್ಷನ ಸಂಹರನು || ಪಲ್ಲ ||

ಕರದು ತಾರಮ್ಮ ನೀನು ಉರಿಗಣ್ಣ ಕಲಿವೀರನಾ
ಹರನ ಉರಿಗಣ್ಣಿನಿಂದ ನಿರ್ಮಳವಾ೩ದಯ್ಯನಾ೪
ಬಿರದು ಬಿಲ್ಲಿಂಬು ಬಾಕು ಕರದಲ್ಲಿ ಪಿಡಿ೫ದಯ್ಯನಾ೬
ಪರಕ್ರಮವುಳ್ಳ ಜಾಣ ಬಾರನ್ಯಾಕಮ್ಮಾ ಜಾಣಿ || ಪದ ||

ಜಾಣನ್ಯಾತಕೆ ಮುನಿದು ಬಾರ್ವುನೇ ಮುದ್ದುವೀರನೆ ಕಾಣದಿರಲಾರೆ ನಾನು
ಏಣಾಕ್ಷಿ ನೀಹೋಗಿ ಬೋಧಿಸೀ ಮನವ ೭ನೊಲಿಸೀ೮ ಕ್ಷಣದಲ್ಲಿ ಕೂಡಿಸೀ :
ಪ್ರಾಣನಾಯಕರನ್ನು ಕರತಾರೆ ಆತನ ತೊರೇ ಪ್ರಾಣವುಳಿಯಾದು ನೀರೆ
೯ರಾಣೀಯು ಕೂಡಿನ್ನು೧೦ ಮುನಿಸ್ಯಾಕೆ ಪ್ರೀತಿ ಇರಬೇಕೆ ಹೆಣ್ಣುಜನ್ಮವ್ರುಸಾಕು ॥ ೧ ॥

ಕರತಾರ ಶ್ರೀ ವೀರಭದ್ರನ್ನ ಗಂಡ ರುದ್ರನ್ನ .... || ಪಲ್ಲ ||

ನೋಡಿ ಬಾರಮ್ಮ ನೀನು ಈ ರೂಢಿಗೆ ಪತಿಯಾದನು
ಕೂಡಿದು ರಮಣಿಯುನ್ನು ನೋಡದ್ಯಾತಕೆ ಪೋದನು
ಮಾಡಿದು ತಪ್ಪು ಏನು ಮಾತಾಡದ್ಯಾತಕೆ ಪೋದನು
೧೧ಬೇಡಿಕೊಂಬೆನು ನಾನು ಕೂಡಿಸ್ಹೋಗಮ್ಮ ನೀನು೧೨ || ಪದ ||

ದುಷ್ಟತನಗಳೆಷ್ಟು ಹೇಳಲೇ ಹೊಗು ತಾಳ್ವುಲೇ ಪಟ್ಟೆಮಂಚದ ಮೇಲೆ
ಉಟ್ಟುಕೋ ಎಂದು ಕೊಟ್ಟಾನು ಸೀರಿ೧೩ಮೋಹ ಎನಮ್ಯಾಲೆ೧೪ ಇಟ್ಟು ಮುತ್ತಿನವಾಲಿ
ಕಟ್ಟಿದ್ದ ಕಟ್ಟಾಣಿ ಕೊರಳ್ವುಲಿ ರತ್ನದರಳೋಲೆ ಎಷ್ಟು ಪ್ರೀತಿ ಹೇಳಲಿ
ನಿಷ್ಟೂರಮಾಡಿ ಪೋದ್ವುನು ಬಾಲಿ, ವೀರ ಎನಮ್ಯಾಲೆ ಇಷ್ಟು ಹೆಂಗ ಮರೆಯಲಿ ॥ ೨ ॥

ಕರತಾರ ಶ್ರೀ ವೀರಭದ್ರನ್ನ ಗಂಡ ರುದ್ರನ್ನ .... || ಪಲ್ಲ ||

೧-೨ ಮಹಾ, ೩-೪, ದಾತನಾ, ೫-೬ ದಾತನಾ, ೭-೮ ಸೋದಿಸಿ, ೯-೧೦ ಜಾಣೆಯನ್ನಯ ಕೂಡೆ, ೧೧-೧೨ ರೂಢಿಯೊಳು ದುದುಕುತನವ ಮಾಡಬಾರದಮ್ಮಾ, ೧೩-೧೪ ಮೋಹನ್ನಾಲೆ.

ಅಂಬುಜಾಕ್ಷ ಮುಖಿಯೆ ಕೇಳು ಶಂಭು ಶಂಕರನ ಮಗನು
ನಂಬುಗೆಯ ಕೊಟ್ಟು ಎನ್ನ ಹಂಬಲವ[೧] ಮರೆತ್ಹೋದನೆ[೨]
ತುಂಬಿದರಮನೆಯೊಳಿನ್ನು ರಂಭೆ[೩] ಹೆಂಗಿರಲೊಬ್ಬಳು[೪]
ಗಂಭೀರ[೫] ಗನಶೂರನಾ[೬] ರಂಜಿಸಿ ಕರೆದು ತಾರೆ || ಪದ ||

ಸುಗುಣನ್ಯಾತಕೆ ಮುನಿದು ಬಾರನೇ ಧೀರವೀರನೇ ಹಗರಣವು ಇನ್ನೇಕೆ
ಭೋಗವು ಎಷ್ಟೆಂದು ಹೇಳ್ಯಲಿ ಹೆಂಗಸು ತಾಳಲೀ ಹೆಂಗೆ ಹೊತ್ತುಗಳಿಯಲೀ
ಬಗೆಬಗೆಯ ಮಾತುಗಳಾಡಿದಾ ಸುಳ್ಳು ಹೇಳಿದಾ ಬರುವೆನೆಂದು ಓಡಿದಾ
ಮುಗಿಲ ಮಿಂಚಂತೆ ಕಂಡಸನೇ ಎನ್ನ ಗಂಡಸನೇ ಜಗಕೆಲ್ಲ ಪುಂಡಸನೇ || ೩ ||

ಕರತಾರ ಶ್ರೀ ವೀರಭದ್ರನ್ನ ಗಂಡ ರುದ್ರನ್ನ .... || ಪಲ್ಲ ||

ದೂತಿ ನೀ ಹೋಗಿ ಬೇಗ ನೀತಿ ಹೇಳವ್ವ ತಮಗೆ
ಪ್ರೀತಿಯಿಲ್ಲದ ತಾವು ಯಾತಕ್ಕ ಮದುವ್ಯಾದರ
ಸ್ವಾತೀಯ ಮಳಿಯು ಬಂದು ಜಾತಿ ಮುತ್ತು ಹುಟ್ಟಿದ್ಹಂಗ
ಸೋತು ಬಂದೆನು ತಮಗೆ ಘಾತಕವ ಮಾಡಿ[೭]ದನು ಎನಗೆ[೮] || ಪದ ||

ಬಾಸೆ ಪಾಲಿಪನೆಂದು ನೋಡಿದೆ ಆಸೆ ಮಾಡಿದೆ ಲೇಸಿನಿಂದ ಕೂಡಿದೆ
ಸೋಸಿದ ಶ್ರೀಗಂಧ ಪೂಸಿದೆ ಗಾಳಿ ಬೀಸಿದೆ ಹಾಸ ಮಂಚವ ಹಾಸಿದೆ
ರಸಬಾಳೆ ರುಚಿಮಾವು ತರಸಿದೆ ಮುಂದಿರಿಸಿದೆ ಕುಶಲ ಮಾತನಾಡಿಸಿವೆ
ಮೋಸಗಾರಸುಂದರಿಯನೇ[೯] ಆಸೆ[೧೦]ಗಾರನೇ ಬಾಸೆ ಕೊಟ್ಹೋಡಿದನೇ. || ೪ ||

ಕರತಾರ ಶ್ರೀ ವೀರಭದ್ರನ್ನ ಗಂಡ ರುದ್ರನ್ನ .... || ಪಲ್ಲ ||

[೧೧]ಎರಳೆಗೆ[೧೨]ಗಂಗಾಳೆ ಕೇಳು ಇರುಳು ಕಂಡೇನೆ ಕನಸು
ದುರುಳ ಕಲಿವೀರ ಬಂದು ತರಳೆ ಬಾರೆಂದು ಕರೆದಾ
ಶರಣಾರ್ತಿ ಎಂದು ಹೇಳಿ ಚರಣಕ್ಕೆ ಎರಗಿದೇನೆ
ತರುಮಲಿಯ ಫಲವಕೊಟ್ಟು ಮರಳಿ ಹೋದಂತಾಯಿತೇ || ಪದ ||

ಏನ ಹೇಳಲಿ ಮುದ್ದು ಬಾವಕೀ ಪ್ರಾಣಸಖೀ ಎನ್ನ ಮನದಾ ಬಳಲಿಕಿ
ಕನಸಿನೊಳಗೆ ತನ್ನ ರೂಪು ತೋರೀದಾ ಸಖೀ ಹಾಗೆ ಮರಳಿ ಜಾರಿದಾ
ಜನಕೆಲ್ಲ ಮಹಿಮೆ ತೋರಿದಾ ಪೌರುಷ ಬೀರಿದಾ ಬೀರಿ ಬಯಲಾದಾ
ಗನವಂತ ಗಂಡನ ಮಹಿಮೆಯ ಎಷ್ಟಂತ ಹೇಳಲಿ ಹೆಂಗೆ ಮರೆಯಲೀ || ೫ ||

೧-೨ ಬಿಟ್ಹೋದನೆ. ೩-೪ ನಾ ಇರುವಳೊಬ್ಬಳು. ೫-೬ ಮಡಿವಾಳನಾ.
೭-೮ ಪೋದನೆ. ೯-೧೦ ಬಾಸೆ ೧೧-೧೨ ತರಳೆ.

ಕರತಾರ ಶ್ರೀವೀರಭದ್ರನ ಗಂಡ ರುದ್ರನ್ನ ... . || ಪಲ್ಲ ||

ಸರಸಿಜವದನೆ ಕೇಳು ಪುರುಷನ್ಯಾತಕೆ ಬಾರೆನೇ
ಅರಸ ನಿನ ಕಾಣದೇ ವಿರಹ ವೆಗ್ಗಳವಾಯಿತೇ
ಕರುಣವಿಲ್ಲವೇ ತನಗೆ ಎರವಾದ ಇಂದು ಎನಗೆ
ಚರಣಕ್ಕೆ ಎರಗಿದೇನೆ ಹರುಷದಿಂದಲಿ ಕರೆದು ತಾರೆ || ಪದ ||

ಚನ್ನಿಗ ಚದುರನೆತ್ತ ಪೋದನೆ ಮಾಯವಾದನೇ ಶಂಭುಶಂಕರನ ಮಗನೆ
ಕನ್ನೆ ಪ್ರಾಯದವನೆ ಚಿನ್ನದ ಅವಿಗಿ ಮೆಟ್ಟಿದ್ರಾ ಕಾಸಿ ಕಟ್ಟಿದ್ರಾ
ಪೊನ್ನ ಆಭರಣವಿಟ್ಟಿದ್ರಾ ರನ್ನಮಾಣಿಕ ಪದಕದುಂಗುರಗಳು ಚಾಮರಗಳು
ಚಿನ್ನ ಸರಮಾಲಿಗಳು ವನಿತೇರು ಕಂಡ್ವರೆ ಹೇಳೀರೆ ಸುಖಿ ಬಾಳೀರೆ ॥ ೬ ॥

ಕರತಾರ ಶ್ರೀ ವೀರಭದ್ರನ್ನ ಗಂಡ ರುದ್ರನ್ನ .... || ಪಲ್ಲ ||

ಕಮಲಾಕ್ಷಿ ರಮಣಿ ಕೇಳು ಒಡೆಯ ಶ್ರೀ ವಿರುಪಾಕ್ಷನು
ಸಡಗರದಿಂದೆ ಎನ್ನಽ ಬೇಡಲಿಕ್ಕೇ ಬಂದರೂ
ಹಡದ ತಾಯಿತಂದೆ ಮನೆಯೊಳು ಹುಡುಗಿ ನಾನೊಬ್ಬಳೆ
ದೊಡ್ಡವರ[೧] ಮಗನು[೨] ಎಂದು [೩]ನೋಡಿ ಬಾಸೆಯು ಕೊಟ್ಟರು[೪] || ಪದ ||

ತಂದೆತಾಯಿ ಅಗಲಿಸಿ ತಂದನೇ ಎನ್ನ ಕೊಂಡು ಬಂದ್ನನೆ ಇಂದು ಧರನ ಮಗನು
ಮಂದಿರದೊಳು ಮನೆಯ ಮಾಡಿದಾ ಬಿಟ್ಟು ಓಡಿದಾ ಬಂಧು ಬಳಗ ಕೂಡಿದಾ–
ಚಂದವ ಎಷ್ಟೆಂದು ಹೇಳಲೀ ಹೆಂಗೆ ತಾಳಲೀ ಬಂದು ಬಾವಿ ಬೀಳಲೀ
ಮುಂದಗಮನೆ ಹೋಗಿ ಹೇಳವ್ವ ಅತ್ತಿ ಕೇಳವ್ವ ತಂದೆಗಡ್ಡ ಬೀಳವ್ವ ॥ ೭ ॥

ಕರತಾರ ಶ್ರೀ ವೀರಭದ್ರನ್ನ ಗಂಡ ರುದ್ರನ್ನ ... ... || ಪಲ್ಲ ||

ಪುತ್ಥಳಿಯ ಬೊಂಬೆ ಕೇಳು ಚಿತ್ರದೊಲ್ಲಭನ ಕೂಡೆ
ಹೆತ್ತವರ ಮರೆದು ತನ್ನ ಚತ್ತವ ಹಿಡಿದಾಽಽನೆ
ಉತ್ತಮರ ಮಗಳು ಎಂದು ಕುತ್ತಿಗೆಯ ಮುರಿವರೇನೆ
[೫]ಸತ್ಯವೇನೆಂದು [೬]ನಮ್ಮ ಅತ್ತೆಮಾವಂಗೆ ಹೇಳರಿ. || ಪದ ||

೧–೨ ಮಗಳು, ೩–೪ ಬೇಡಿ ಬಯಸಿ ತಂದರು.
೫–೬ ಇದು ನೀತಿಯಲ್ಲವೆಂದು.

ನಲ್ಲನೆಲ್ಲಿದ್ದಾನೆ ಬಾವಕೀ ತೋರಿಸೇ ಮುಬಿ ಮೆಲ್ಲನೆ ಪಾಶವ ಹಾಕಿ
ಗುಲ್ಲು ಮಾಡಿಕೊಂಡು ಬರುವೇನೆ ಹಿಡಿದು ತರುವೇನೆ ಗಲ್ಲ ಹಿಡಿದು ಚುಂಬಿಸುವೆ
ಮಲ್ಲಿಗೆ ಹಾರವ ತರಿಸುವೆ ಹಾಕಿ ಮೆರೆಸುವೇ ಮೇಲುಪ್ಪರಿಗೆಯೊಳಿರಿಸುವೆ
ಎಲ್ಲಾದರಾಶಿಥ್ಯ ತೋರುವೆ ಹೆತ್ತರಿಸುವೇ ಲೋಲದಿಂದ ಕೂಡಿರುವೆ ॥ ೫ ॥

ಕರತಾರ ಶ್ರೀ ವೀರಭದ್ರನ್ನ ಗಂಡ ರುದ್ರನ್ನ ... ... ॥ ಪಲ್ಲ ॥

ಕುಡುತೆಗಂಗಳೆ ಕೇಳು ಕಡು ಕೋಪದಲ್ಲಿ ತಾನು
ನಡು ರಾತ್ರಿಯೊಳಗೆ ಬಂದು ದುಡುಕು ಮಾಡಿ ಪೋದನೆ
ಬಡನಡುವಿನ ಸ್ತನಗಳು ಪುಡಿಪುಡಿಯಾದವಲ್ಲೆ
ಮಡದಿಯು ಕೂಡ ಇಂತ ಹುಡುಗಾಟತನವು ಸಲ್ಲ. ॥ ಪಪ ॥

ಕಡುಚಲ್ವ ಚಂದುಟಿ ಕಾಮಿನಿ ಮಂದಗಾಮಿನಿ ಹುಡುಗಿ ಬಾರವ್ವ ನೀನು
ಸಡಗರ ಸಂಪತ್ತು ಯಾತಕ್ಕ ಇದ್ದೂ ಸುಡಬೇಕ ಗಂಡಬಾರನ್ಯಾತಕ್ಕೆ
ರೂಢಿಗಧಿಕವಾದ ಹಲುಗಟ್ಟಿ ವೀರಜಗಜಟ್ಟಿ ಮಾಡಿದ ಬಹು ಸೃಷ್ಟಿ
[೧]ಮಡದಿ ವೀರಭದ್ರನ ಗಂಡ ರುದ್ರನ ಕೂಡಿಸ್ಕೋಗಮ್ಮ ನೀನು.[೨] ॥ ೬ ॥

ಕರತಾರ ಶ್ರೀ ವೀರಭದ್ರನ್ನ ಗಂಡ ರುದ್ರನ್ನ ದಕ್ಷನ ಸಂಹರನ
ಕರತಾರ ಶ್ರೀ ವೀರಭದ್ರನ್ನ ಗಂಡ ರುದ್ರನ್ನ ... ...

★ ಭೋಜರಾಜ. ಪಾಟೀಲ

೧-೨ 'ಒಡೆಯು ಚನ್ನಿಗ ವೀರಭದ್ರಗೆ ಸಾಮುದ್ರಗೆ ಕೂಡಿಸಿ ತಾರವ್ವ ಗಂಟು ತೆಗೆ.'

ಭಗವತೀ ಆರಾಧನಾ

ಟೀಕೆ ಕಥಾಕೋಶ ಮತ್ತು ಹಳಗನ್ನಡ ಸಾಹಿತ್ಯ*

ಆರಾಧನೆ ಎಂದರೆ ಸಾಮಾನ್ಯವಾಗಿ ಪೂಜೆ, ಸೇವೆ ಎಂದು ಅರ್ಥ. ಆದರೆ ಜೈನ ಪರಂಪರೆಯಲ್ಲಿ ಅದಕ್ಕೆ ವಿಶಿಷ್ಟ ರೂಪರೇಷೆಯಿದೆ. "ಸರ್ವಜ್ಞನು ಹೇಳಿಕೊಟ್ಟ ಮತ್ತು ನಿರ್ವಾಣಕ್ಕೆ ದಾರಿ ಮಾಡಿಕೊಡುವ ತತ್ವಗಳನ್ನು ಭಕ್ತಿಪೂರ್ವಕವಾಗಿ ಪರಿಪಾಲಿಸುವುದು."[೧] ಎಂದು ಶ್ರೀ. ಮುನಿಶ್ರೀ ರತ್ನಚಂದ್ರಜೀ ಹೇಳಿದರೆ, ತಾತ್ವಿಕ ಹಿನ್ನೆಲೆಯೊಡನೆ ಮತ್ತು ಕೆಲವು ಪ್ರಾಚೀನ ಗ್ರಂಥಗಳ ಆಧಾರಗಳೊಂದಿಗೆ ಇದರ ವ್ಯಾಪಕ ಅರ್ಥವನ್ನು ''ಆರಾಧನೆಯೆಂದರೆ ಜೈನ ಧರ್ಮದಲ್ಲಿ ಹೇಳಲ್ಪಟ್ಟ ಶ್ರಮಣ ಜೀವನದ ಆದರ್ಶಗಳಾದ ದರ್ಶನ, ಜ್ಞಾನ, ಚಾರಿತ್ರ ಮತ್ತು ತಪ ಇವುಗಳನ್ನು ಹೃತ್ಪೂರ್ವಕವಾಗಿ ಮತ್ತು ಯಶಸ್ವಿಯಾಗಿ ಸಾಧಿಸುವುದು; ಮರಣದ ಆ ಸಂದಿಗ್ಧ ಸಮಯದಲ್ಲಿ ಉಚ್ಚ ಮಟ್ಟದ ಅನಾಸಕ್ತಿ, ಸ್ಥೈರಣೆ ಮತ್ತು ಆತ್ಮ ಸಂಯಮನಗಳನ್ನು ಕಾಯ್ದುಕೊಳ್ಳುವುದು; ಮತ್ತು ಆತ್ಮದ ಶುದ್ಧಿಯನ್ನು ಸಂಪಾದಿಸುವುದು"[೨]. ಎಂದು ಡಾ. ಎ. ಎನ್. ಉಪಾಧ್ಯೆ ವಿವರಿಸಿರುವರು.

ಆರಾಧನೆಯ ವಿಷಯ ಜೈನ ಪರಂಪರೆಯಷ್ಟೇ ಪ್ರಾಚೀನವಾಗಿದೆ. ಅರ್ಧಮಾಗಧಿ ಆಗಮದ (Ardhamāgadhi Canon) ೫ನೆಯ ಅಂಗವಾದ ಭಗವತೀ ಸೂತ್ರವು (೮·೧೦·೩೫೪) ೨೪ನೆಯ ತೀರ್ಥಂಕರ ಮಹಾವೀರನು ಹೇಳಿಕೊಟ್ಟ ಆರಾಧನೆಯ ಸಾಮಾನ್ಯ ರೂಪರೇಷೆಯನ್ನೊಳಗೊಂಡಿದೆ.[೩] ತರುವಾಯ ಆರಾಧನೆಯ ಮಹತ್ವಪೂರ್ಣತೆಯು ಎಷ್ಟೋ ದಿಗಂಬರ ಮತ್ತು ಶ್ವೇತಾಂಬರ

---

* JAINOLOGICAL STUDIES IN INDIA AND ABROAD (First Special Number of the Journal of the Jainological Research Society) ಇದರಲ್ಲಿ ಪ್ರಕಟವಾಗಲಿರುವ ನನ್ನ 'BHAGAVTĪ ĀRADHANĀ, COMMENTARIES ON IT, KATHĀKOŚAS ASSOCIATED WITH IT AND OLD KANNADA LITERATURE' ಎಂಬ ಲೇಖನದ ಕನ್ನಡ ರೂಪ.

೧. ಮುನಿಶ್ರೀ ರತ್ನಚಂದ್ರಜೀ, An Illustrated Ardhamagdhi Dictionary, Vol. II, ಶ್ವೇತಾಂಬರ ಸ್ಥಾನಕವಾಸಿ ಜೈನಸಭಾ, ಮುಂಬಯಿ ೧೯೨೭.

೨. ಪ್ರಸ್ತಾವನೆ, ಬೃಹತ್ಕಥಾ ಕೋಶ, ಸಿಂಘಿ ಜೈನ ಗ್ರಂಥಮಾಲೆ, ಮುಂಬಯಿ ೧೯೪೩, ಪು. ೪೭.

೩. ಸುತ್ತಾಗಮೆ I, ಸಂ. ಪುಪ್ಫ ಭಿಕ್ಖು, ಸೂತ್ತಾಗಮ ಪ್ರಕಾಶಕ ಸಮಿತಿ, ಗುಡಗಾಂವ ೧೯೫೩, ಪುಪು. ೫೧೦-೫೧೧.

ಪಂಡಿತರನ್ನು ಆಕರ್ಷಿಸಿ ಈ ವಿಷಯದ ವಿವಿಧ ಮುಖಗಳ ಬಗ್ಗೆ ಅನೇಕ ಗ್ರಂಥಗಳನ್ನು ನಿರ್ಮಿಸುವಂತೆ ಮಾಡಿತು. ಇಂಥ ಸಣ್ಣ ದೊಡ್ಡ ಕೃತಿಗಳು ಪ್ರಾಕೃತ ಮತ್ತು ಸಂಸ್ಕೃತ ಭಾಷೆಗಳಲ್ಲಿ ದೊರೆಯುತ್ತವೆ. ಅವುಗಳಲ್ಲಿ ಭಗವತೀ ಆರಾಧನಾ (ಮೂಲಾರಾಧನಾ), ಆರಾಧನಾಸಾರ, ಆರಾಧನಾಸಮುಚ್ಚಯ ಮುಂತಾದ ಕೆಲವು ಮಾತ್ರ ಪ್ರಕಟವಾಗಿವೆ. ಉಳಿದವು ಹಸ್ತಪ್ರತಿಗಳ ರೂಪದಲ್ಲಿ ಅನೇಕ ಗ್ರಂಥ ಭಂಡಾರಗಳಲ್ಲಿ ಬಿದ್ದುಕೊಂಡಿವೆ. ಡಾ. ಉಪಾಧ್ಯೆಯವರು ಈ ಆರಾಧನಾ ಗ್ರಂಥಗಳ ಪಟ್ಟಿಯೊಂದನ್ನು ಅವುಗಳ ಬಗ್ಗೆ ದೊರೆಯುವ ಸಂಗತಿಯೊಂದಿಗೆ ರೂಪಿಸಿದ್ದಾರೆ.[೪] ಇವುಗಳ ಹೊರತಾಗಿ ಬೇರೆ ಕೆಲವು ಸಂಸ್ಕೃತ ಮತ್ತು ಪ್ರಾಕೃತ ಆರಾಧನಾ ಮೂಲ ಕೃತಿಗಳು ಕನ್ನಡ ಲಿಪಿಯಲ್ಲಿ ಸುರಕ್ಷಿತವಾಗಿರಿಸಲ್ಪಟ್ಟವೆಯೆಂದು 'ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥಸೂಚಿ'ಯಿಂದ ತಿಳಿದು ಬರುತ್ತದೆ.[೫]

ಪ್ರಕಟವಾದ ಮತ್ತು ಪ್ರಕಟವಾಗದ ಈ ಆರಾಧನಾ ಗ್ರಂಥಗಳಲ್ಲಿ ಭಗವತೀ ಆರಾಧನಾ[೬] ಎಂಬ ಹೆಸರಿನಿಂದ (ಮೂಲಾರಾಧನಾ ಎಂಬ ಹೆಸರಿನಿಂದ ಕೂಡ) ಪ್ರಸಿದ್ಧಿಪಡೆದ ಆರಾಧನಾ ಎಂಬುದು ಎಲ್ಲಕ್ಕೂ ಮಹತ್ವದ್ದಾಗಿದೆ. ಇದು ೨೧೬೦ ಕ್ಕಿಂತ ಹೆಚ್ಚು ಪ್ರಾಕೃತ ಪದ್ಯಗಳುಳ್ಳ ಒಂದು ದೊಡ್ಡ ಗ್ರಂಥವಾಗಿದೆ. ಇದು ದಿಗಂಬರರ ಉಪಾಗಮದ ಮೊದಲಿನ ಸ್ತರಕ್ಕೆ ಸೇರಿದ್ದು, ಸುಮಾರು ಕ್ರಿ. ಶ. ಮೊದಲನೆಯ ಶತಮಾನದಲ್ಲಿ ರಚಿಸಲ್ಪಟ್ಟಿದೆ. ಇದು ನಾಲ್ಕು ಮುಖಗಳುಳ್ಳ ಆರಾಧನೆಯ ವಿಷಯವನ್ನು ಕ್ರಮಬದ್ಧವಾಗಿಯೂ, ಸಮಗ್ರವಾಗಿಯೂ ವಿವರಿಸುತ್ತ, ಜೈನ ಧರ್ಮದ ಸೊಗಸಾದ ಸಮೀಕ್ಷೆಯನ್ನು ಒದಗಿಸುತ್ತದೆ. ಈ ಗ್ರಂಥಕರ್ತನು ಬೊಗಸೆಯಲ್ಲಿ ಊಟ ಮಾಡುತ್ತಿದ್ದ (ಪಾಣಿ-

೪. ಬೃಹತ್ಕಥಾ ಕೋಶದ ಪ್ರಸ್ತಾವನೆ, ಪುಪು. ೪೮–೪೯.

೫. ಸಂ. ಪಂಡಿತ ಕೆ. ಭುಜಬಲಿ ಶಾಸ್ತ್ರಿ, ಭಾರತೀಯ ಜ್ಞಾನಪೀಠ, ಕಾಶಿ ೧೯೪೮.

೬. ಈ ಮಹಾ ಗ್ರಂಥದ ಎರಡು ಆವೃತ್ತಿಗಳಿವೆ : (೧) ಭಗವತೀ ಆರಾಧನಾ, ಅನಂತಕೀರ್ತಿ ದಿಗಂಬರ ಜೈನ ಗ್ರಂಥಮಾಲೆ ೮, ಮುಂಬಯಿ ಸಂವ. ೧೯೮೯. ಇದು ಗ್ರಂಥಪಾಠದ ಹಿಂದೀ ಅನುವಾದವನ್ನೂ ಹೊಂದಿದೆ. (೨) ಮೂಲಾರಾಧನಾ, ಶ್ರೀ ಶಾಂತಿಸಾಗರ ಗ್ರಂಥಮಾಲೆ ೧೩, ಸೊಲ್ಲಾಪೂರ ೧೯೩೫. ಇದು ಅಪರಾಜಿತ (ಶ್ರೀವಿಜಯ) ಮತ್ತು ಆಶಾಧರ ಇವರ ಸಂಸ್ಕೃತ ಟೀಕೆಗಳನ್ನೂ, ಅಮಿತಗತಿಯ ಛಂದೋಬದ್ಧ ಭಾವಾನುವಾದವನ್ನು ಮತ್ತು ಹಿಂದೀ ರೂಪಾಂತರವನ್ನೂ ಹೊಂದಿದೆ.

(ii) ಈ ಗ್ರಂಥಕ್ಕೆ ಸಂಬಂಧಿಸಿದ ನನ್ನ ಉಲ್ಲೇಖಗಳು ಸೋಲ್ಲಾಪೂರ ಆವೃತ್ತಿಗೆ ಅನ್ವಯಿಸುವವು.

(iii) ಈ ಗ್ರಂಥದ ನಿಜವಾದ ಹೆಸರು, ಗ್ರಂಥಕಾರನೇ ಹೇಳಿರುವಂತೆ, 'ಆರಾಧನಾ' ಎಂದಿರುವದು : ಗಾಹೆ ೨೧೬೬.

ತಲಭೋಜಿ) 'ಶಿವಾರ್ಯನು.' ಈತನನ್ನು ಜಿನಸೇನಾಚಾರ್ಯರು ತಮ್ಮ ಆದಿ ಪುರಾಣದಲ್ಲಿ ಒಳ್ಳೆಯ ಆದರದಿಂದ ಉಲ್ಲೇಖಿಸಿರುವದುಂಟು.[೭]

ಇಂಥ ಪ್ರಖ್ಯಾತ ಮುನಿಯಿಂದ ರಚಿಸಲ್ಪಟ್ಟ, ಮಹತ್ವಪೂರ್ಣ ವಸ್ತುವನ್ನೊಳಗೊಂಡ ಈ ಭಗವತೀ ಆರಾಧನೆಯು ಮುಂದೆ ಅನೇಕ ಟೀಕೆಗಳನ್ನು ಪಡೆಯಿತು.[೮] ಇದುವರೆಗೆ ದೊರೆತ ಟೀಕೆಗಳಲ್ಲಿ ಎಲ್ಲಕ್ಕೂ ಪ್ರಾಚೀನವಾದುದು ೮ ಮತ್ತು ೧೦ ನೆಯ ಶತಮಾನಗಳ ಮಧ್ಯ ಕಾಲಕ್ಕೆ ಸೇರಿದ ಅಪರಾಜಿತ ಸೂರಿಯ (ಶ್ರೀವಿಜಯನ) ಶ್ರೀವಿಜಯೋದಯಾ ಎಂಬ ಟೀಕೆ. ಇದು ಸಂಸ್ಕೃತದಲ್ಲಿದ್ದು ಎಲ್ಲ ಆವಶ್ಯಕ ತಾಂತ್ರಿಕ ಮತ್ತು ತಾತ್ವಿಕ ಸಂಗತಿಯನ್ನು ಪೂರೈಸುತ್ತ ಮೂಲ ಗಾಹೆಗಳನ್ನು ತಿಳಿಸಿ ಹೇಳುತ್ತದೆ; ಆರಾಧನೆಯ ನಿಜ ಸ್ವರೂಪವನ್ನು ತಿಳಿದುಕೊಳ್ಳಲು ತುಂಬಾ ಸಹಾಯ ನೀಡುತ್ತವೆ. ಆದರೆ ಇದು ಮುನಿಗಳಿಗೆ ಮತ್ತು ಇತರರಿಗೆ ಸಂಬಂಧಿಸಿದ ಆಖ್ಯಾನಾದಿಗಳನ್ನು ಉಲ್ಲೇಖಿಸುವ ಗಾಹೆಗಳ ಮೇಲಿನ ಕಥೆಗಳನ್ನು ಕೊಡುವದಿಲ್ಲ. ಶ್ರೀವಿಜಯೋದಯಾ ಟೀಕೆಯ ತರುವಾಯ ವಿಷಯವ್ಯಾಪಕತೆಯ ದೃಷ್ಟಿಯಿಂದ ಮಹತ್ವದ್ದಾದ ಟೀಕೆಯೆಂದರೆ ೧೨ ನೆಯ ಶತಮಾನದ ಆಶಾಧರನು ಸಂಸ್ಕೃತದಲ್ಲಿ ರಚಿಸಿದ ಮೂಲಾರಾಧನಾ ದರ್ಪಣ. ಇದು ಕೂಡ ಉಲ್ಲೇಖಕ ಗಾಹೆಗಳ ಮೇಲಿನ ಕಥೆಗಳನ್ನು ಕೊಡುವದಿಲ್ಲ. ಆರಾಧನಾ ಪಂಜಿಕಾ ಮತ್ತು ಭಾವಾರ್ಥದೀಪಿಕಾ ಎಂಬ ಬೇರೆ ಎರಡು ಚಿಕ್ಕ ಟೀಕೆಗಳು ಇನ್ನೂ ಹಸ್ತಪ್ರತಿ ರೂಪದಲ್ಲಿವೆ. ಆಶಾಧರನು ತಾನು ಉಪಯೋಗಿಸಿದ ಭಗವತೀ ಆರಾಧನೆಯ ಮೇಲಿನ ಕೆಲವು ಟಿಪ್ಪಣಿಗಳಲ್ಲಿ ಜಯನಂದಿ ಮತ್ತು ಶ್ರೀಚಂದ್ರ ಎಂಬ ಇಬ್ಬರು ಟೀಕಾಕಾರರನ್ನು ಹೇಳುತ್ತಾನೆ. ಅಪರಾಜಿತಸೂರಿ ಮತ್ತು ಆಶಾಧರ ಇವರ ಟೀಕೆಗಳಲ್ಲಿಯ ಕೆಲವು ಉಲ್ಲೇಖಗಳು, ಅವರ ಕಣ್ಣೆದುರಿಗೆ ಭಗವತೀ ಆರಾಧನೆಯ ಮೇಲಿನ ಕೆಲವು ಸಂಸ್ಕೃತ ಮತ್ತು ಪ್ರಾಕೃತ ಟೀಕೆಗಳಿದ್ದವೆಂಬುದನ್ನು ಸೂಚಿಸುತ್ತವೆ. ಭಗವತೀ ಆರಾಧನೆಯಲ್ಲಿರುವ ಉಲ್ಲೇಖಕ ಮತ್ತು ಅರ್ಥಗರ್ಭಿತ ಗಾಹೆಗಳ ಮೇಲಿನ ಕಥೆಗಳನ್ನೊಳಗೊಂಡ ಒಂದು ಪ್ರಾಕೃತ ಟೀಕೆಯನ್ನು ಆಶಾಧರನು

---

೭. ಶಿವಕೋಟಿ ಮುನೀಶ್ವರ (೧.೪೯).

೮. ಈ ವಿಷಯದ ಮೇಲಿನ ಸವಿಸ್ತರ ಚರ್ಚೆಯನ್ನು ಪಂಡಿತ ಪ್ರೇಮಿ ಮತ್ತು ಡಾ. ಉಪಾಧ್ಯೆಯವರು ಅನುಕ್ರಮವಾಗಿ ಜೈನ ಸಾಹಿತ್ಯ ಔರ ಇತಿಹಾಸ, ೨ ನೆಯ ಮುದ್ರಣ, ಮುಂಬಯಿ ೧೯೫೬, ಪು ಪು. ೭೮-೮೫ ಮತ್ತು ಬೃಹತ್ಕಥಾ ಕೋಶದ ಪ್ರಸ್ತಾವನೆ, ಪು ಪು. ೫೫-೫೭ ಇವುಗಳಲ್ಲಿ ನೀಡಿದ್ದಾರೆ.

ಸ್ಪಷ್ಟವಾಗಿ ಉಲ್ಲೇಖಿಸುತ್ತಾನೆ.[೯] ಅಲ್ಲದೆ ಇಂತಹ ಇನ್ನೊಂದು ಟೀಕೆಯು, ಭ್ರಾಜಿಷ್ಣು ಎಂಬವನಿಂದ ಹಳಗನ್ನಡದಲ್ಲಿ ರಚಿಸಲ್ಪಟ್ಟಿತ್ತೆಂಬುದು[೧೦] ರಾಮಚಂದ್ರ ಮುಮುಕ್ಷು ಕೃತ ಪುಣ್ಯಾಶ್ರವ ಕಥಾಕೋಶದ[೧೧] ಶ್ರೇಣಿಕನ ಕಥೆಯ (ನಂ. ೮) ಕೊನೆಯ ಭಾಗದಲ್ಲಿ ಹೀಗೆ ಬರುತ್ತದೆ :

“ भ्राजिष्णोराराधना-कर्णाटटीकाकथित क्रमेणोल्लेखमात्रं मथितेयं कथा इति ” ।

(ಕಥೆ ೮, ಪು. ೬೧).

ಭ್ರಾಜಿಷ್ಣು ಎಂಬವನು ಆರಾಧನೆಯನ್ನು ಕುರಿತು ಬರೆದ ಕನ್ನಡ ಟೀಕೆಯಿಂದ ಶ್ರೇಣಿಕನ ಕಥೆಯನ್ನು ಸಂಕ್ಷಿಪ್ತ ರೂಪದಲ್ಲಿ ಮಾರ್ಪಡಿಸಿಕೊಳ್ಳಲಾಗಿದೆ ಎಂದು ಇದರ ಅರ್ಥ.

ಇದುವರೆಗಿನ ಚರ್ಚೆಯಿಂದ ಕೆಳಗಿನ ವಿಚಾರಗಳನ್ನು ಸ್ಥೂಲವಾಗಿ ಸಂಗ್ರಹಿಸಬಹುದು: ಭ್ರಾಜಿಷ್ಣುವಿನ (ಕನ್ನಡ) ಟೀಕೆ ಮತ್ತು ಆಶಾಧರನು ಉಪ

---

೯. ಭಗವತೀ ಆರಾಧನಾ, ಪು. ೬೪೩, ಟೀಕೆ.

೧೦. ಆರಾಧನಾ ಮೂಲ ಗ್ರಂಥಗಳ ಮೇಲೆ ಕನ್ನಡದಲ್ಲಿ ಟೀಕೆಗಳನ್ನು ಬರೆಯುವ ಒಳ್ಳೆಯ ಪರಂಪರೆಯೊಂದು ಕನ್ನಡ ನಾಡಿನಲ್ಲಿತ್ತೆಂದು ಕಾಣುತ್ತದೆ. ಭ್ರಾಜಿಷ್ಣುವಿನ ತರುವಾಯ ಕೇಶವವರ್ಣಿಯು ಸು. ೧೩೫೯ರಲ್ಲಿ ದೇವಸೇನನ ಆರಾಧನಾ ಸಾರದ ಮೇಲೆ ಟೀಕೆಯೊಂದನ್ನು ಬರೆದನೆಂದು ತಿಳಿದುಬರುತ್ತದೆ: ಕರ್ಣಾಟಕ ಕವಿಚರಿತೆ, ಸಂಪುಟ ೧, ಬೆಂಗಳೂರ ೧೯೬೧, ಪು. ೪೬೯. ಮುಂದೆ ಶಾಂತಿಕೀರ್ತಿಯು ಅದೇ ಆರಾಧನಾಸಾರದ ಮೇಲೆ ಇನ್ನೊಂದು ಟೀಕೆಯನ್ನು ಬರೆದದ್ದು (ಕ್ರಿ.ಶ. ೧೭೫೫) ಕಂಡುಬರುತ್ತದೆ: ಕರ್ಣಾಟಕ ಕವಿಚರಿತೆ, ಸಂಪುಟ ೩, ಬೆಂಗಳೂರ ೧೯೨೯, ಪು. ೧೦೩. ಇವಲ್ಲದೆ ರವಿಚಂದ್ರನ ಆರಾಧನಾ ಸಮುಚ್ಚಯದ ಹಸ್ತಪ್ರತಿಗಳಲ್ಲಿ ಒಂದು (ರವಿಚಂದ್ರನು ಕ್ರಿ.ಶ. ೯೫೦-೧೫೫೬ರ ನಡುವೆ ಬಾಳಿ ಕೀರ್ತಿ ಪಡೆದನು. ಡಾ. ಉಪಾಧ್ಯೆ ಪ್ರಸ್ತಾವನೆ, ಆರಾಧನಾ ಸಮುಚ್ಚಯಂ ಯೋಗಸಾರ ಸಂಗ್ರಹಂಚ, ಭಾರತೀಯ ಜ್ಞಾನಪೀಠ, ಕಾಶಿ ೧೯೬೭, ಪು. ೮) ಕನ್ನಡ ಟೀಕೆಯನ್ನು ಹೊಂದಿದೆ: ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥಸೂಚಿ, ಪು. ೩೭, ಹಸ್ತಪ್ರತಿ ನಂ. ೪೦.

೧೧. (i) ಜೀವರಾಜ ಜೈನ ಗ್ರಂಥಮಾಲೆ ೧೯, ಸೊಲ್ಲಾಪೂರ ೧೯೬೪. ಪ್ರಮುಖ ಸಂಪಾದಕರಾದ ಡಾ. ಉಪಾಧ್ಯೆ ಮತ್ತು ಡಾ. ಹಿರಾಲಾಲ ಜೈನ ಇವರು ಈ ಕೃತಿ ಕ್ರಿ. ಶ. ೯೯೧-೧೩೩೧ರ ನಡುವೆ ರಚಿಸಲ್ಪಟ್ಟಿರಬೇಕೆಂದು ಅಭಿಪ್ರಾಯ ಪಡುತ್ತಾರೆ.

(ii) ಈ ಕೃತಿಯ ಕೆಲ ಮೂಲಗಳ ಬಗ್ಗೆ ಸವಿಸ್ತರ ಸಂಗತಿಗಾಗಿ, ನನ್ನ ಕೆಳಗಿನ ಲೇಖನವನ್ನು ನೋಡಿರಿ :

Obseryvations, on Some Sources of the puṇyāsrava-kathā kośa, Jouranl of the Karnatak Unirvesity (Hum,) Vol. XIV.

ಯೋಗಿಸಿದ್ದ ಪ್ರಾಕೃತ ಟೀಕೆಗಳಂತಹ ಪ್ರಾಚೀನ ಮತ್ತು ಸವಿಸ್ತರ ಟೀಕೆಗಳು ಉಲ್ಲೇಖಕ ಮತ್ತು ಚೌಕಟ್ಟಿನಂತಿರುವ ಗಾಹೆಗಳ ಮೇಲಿನ ಕಥೆಗಳನ್ನೂ ಕೊಟ್ಟಿದ್ದವು; ಆದರೆ ಅಪರಾಜಿತ ಮತ್ತು ಆಶಾಧರರಂಥವರು ಬರೆದ ತರುವಾಯದ ಟೀಕೆಗಳು ಕಥೆಗಳನ್ನು ಬಿಟ್ಟುಕೊಟ್ಟವು. ಬಹಳವಾಡಿ ಅವರ ಕಾಲಕ್ಕೆ ಕೆಲ ಪಂಡಿತರು ಮೊದಲಿನ ಟೀಕೆಗಳಿಂದ ಕಥಾಭಾಗವನ್ನು ಎತ್ತಿಕೊಂಡು ಸ್ವತಂತ್ರ ಕಥಾಕೋಶಗಳನ್ನು ರಚಿಸಿದ್ದು ಇದಕ್ಕೆ ಕಾರಣವಾಗಿರಬಹುದು.[೧೨] ಆದ್ದರಿಂದ ಭಗವತೀ ಆರಾಧನೆಯ ಸುತ್ತಲು ಬೆಳೆದು ನಿಂತಿರುವ ಟೀಕಾಸಾಹಿತ್ಯ ಮತ್ತು ಕಥಾಸಾಹಿತ್ಯದ ಒಲವು ಮತ್ತು ರೀತಿ ಕೆಳಗಿನಂತಿರಬೇಕೆನಿಸುತ್ತದೆ. ಆರಂಭದಲ್ಲಿ ಕಥೆಗಳನ್ನೊಳಗೊಂಡ ಸವಿಸ್ತರ ಟೀಕೆಗಳು ತರುಣ ಮುನಿಗಳ ಅಭ್ಯಾಸಕ್ಕಾಗಿ ಮತ್ತು ಆರಾಧಕರ ಉಪಯೋಗಕ್ಕಾಗಿ ಬರೆಯಲ್ಪಟ್ಟವು. ತರುವಾಯ ಇಂತಹ ಟೀಕೆಗಳಿಂದ ಕಥಾಭಾಗವನ್ನು ಬೇರ್ಪಡಿಸಿ ಆರಾಧನಾ ಕಥಾಕೋಶಗಳ ರೂಪದಲ್ಲಿ ಕೆಲವು ಕೃತಿಗಳು ವಿಶೇಷವಾಗಿ ಶ್ರಾವಕ ವರ್ಗದಮುಂದೆ ಇಡಲ್ಪಟ್ಟವು. ಆಮೇಲೆ ಕಥೆಗಳಿಲ್ಲದ ಟೀಕೆಗಳು ಮೂಲ ಗಾಹೆಗಳಲ್ಲಿಯ ಪಾರಿಭಾಷಿಕ ಮತ್ತು ತಾತ್ವಿಕ ವಿಷಯಗಳನ್ನು ವಿವರಿಸುವ ಉದ್ದೇಶದಿಂದ ಆರಾಧನೆ ಮತ್ತು ಜೈನ ಧರ್ಮ ಇವುಗಳಲ್ಲಿ ಅಭಿರುಚಿಯುಳ್ಳ ಜನರಿಗಾಗಿ ರಚಿಸಲ್ಪಟ್ಟವು. ಈ ಅವಧಿಯಲ್ಲಿ ಮತ್ತು ತರುವಾಯ ಕೂಡ ವಿವಿಧ ಸಂಖ್ಯೆಯಲ್ಲಿ ಕಥೆಗಳನ್ನೊಳಗೊಂಡು ಕೋಶಗಳು ವಿವಿಧ ಭಾಷೆಗಳಲ್ಲಿ ಬರೆಯಲ್ಪಟ್ಟವು.

ಒಟ್ಟಿನಲ್ಲಿ ಭಗವತೀ ಆರಾಧನೆಗೆ ಸಂಬಂಧಿಸಿದ ಕಥಾಕೋಶಗಳು ಸಂಸ್ಕೃತ, ಪ್ರಾಕೃತ (ಅಪಭ್ರಂಶವನ್ನೊಳಗೊಂಡು) ಮತ್ತು ಕನ್ನಡಗಳಲ್ಲಿ ದೊರೆಯುತ್ತವೆ. ಹೀಗೆ ದೊರೆಯುವ ಕಥಾಕೋಶಗಳಲ್ಲಿ ಹಳಗನ್ನಡ ಗದ್ಯದಲ್ಲಿರುವ ಮತ್ತು ಕ್ರಿ. ಶ. ೧೦ ನೆಯ ಶತಮಾನದ ಪ್ರಥಮ ಕಾಲುಭಾಗದ್ದೆನ್ನಬಹುದಾದ ವಡ್ಡಾರಾಧನೆಯು[೧೩] ಎಲ್ಲಕ್ಕೂ ಪ್ರಾಚೀನವಾದುದು. ಇದನ್ನು ಆಂಶಿತ

---

೧೨. ಡಾ|| ಉಪಾಧ್ಯೆಯವರು ಸೂಚಿಸುವಂತೆ (ಬೃಹತ್ಕಥಾ ಕೋಶದ ಪ್ರಸ್ತಾವನೆ, ಪು. ೫೮) ಈ ಇಬ್ಬರು ಪಂಡಿತರು ಇಚ್ಛಾಪೂರ್ವಕವಾಗಿಯೆ ಕಥಾಭಾಗವನ್ನು ಬಿಟ್ಟಿರಬೇಕೆಂಬುದೂ ಇನ್ನೊಂದು ಸಾಧ್ಯತೆಯಾಗಬಹುದು. ಆದರೆ ಇದನ್ನು ತೋರಿಸಲು ಸಹ ಯಾವ ಆಧಾರವೂ ಇಲ್ಲ.

೧೩. (i) ಇದುವರೆಗೆ ತಿಳಿಯದ ಒಬ್ಬ ಮೇಧಾವಿಯಿಂದ ರಚಿಸಲ್ಪಟ್ಟದ್ದು ಬಹಳ ಮಾಡಿ ಅವನು (ದಿಗಂಬರ) ಮುನಿಯಾಗಿರಬೇಕು.

(ii) ಇದರ ಮೇಲೆ ಡಾ|| ಉಪಾಧ್ಯೆಯವರು ಬರೆದ ಪರಾಮರ್ಶೆಯನ್ನು ನೋಡಿರಿ: ಬೃಹತ್ಕಥಾ ಕೋಶದ ಪ್ರಸ್ತಾವನೆ, ಪು ಪು. ೬೩-೭೨.

(iii) ಈ ಗ್ರಂಥವೇ ನನ್ನ ಪಿ.ಎಚ್.ಡಿ. ಮಹಾಪ್ರಬಂಧದ ವಿಷಯವಾಗಿತ್ತು (ಕರ್ನಾಟಕ ವಿ. ವಿ. ೧೯೬೮) ಮಹಾಪ್ರಬಂಧದ ಶಿರೋನಾಮ: Vaddārādhane : A study of religious, social, literary and linguistic aspects.

ಕಥಾಕೋಶವೆಂದೂ ಕರೆಯಬಹುದು. ಇದರಲ್ಲಿ ೧೯ ಕಥೆಗಳಿದ್ದು, ಅವು ವಿವರಣೆ ಮತ್ತು ಮೂಲಾಶಯಗಳ ದೃಷ್ಟಿಯಿಂದ ಇದುವರೆಗೆ ದೊರೆತಿರುವ ಯಾವುದೇ ಆರಾಧನಾ ಕಥಾಕೋಶದ ಅನುರೂಪ ಕಥೆಗಳಿಗಿಂತ ಚೆನ್ನಾಗಿವೆ. ವಡ್ಡಾರಾಧನೆ ಎಂಬುದು ಈ ಕೃತಿಯು ಕರ್ತೃವಿನಿಂದ ಬಂದ ಹೆಸರಲ್ಲ. ಈ ಮಹತ್ವದ ಕೃತಿಯ ನಿಜವಾದ ಹೆಸರು ಇದುವರೆಗೆ ಲಭ್ಯವಿರುವ ಹಸ್ತಪ್ರತಿಗಳಲ್ಲಿ ನಮಗೆ ಇಳಿದುಬಂದಿಲ್ಲ. ಈ ಕೃತಿಯ ಅರ್ಥವತ್ತಾದ ಮತ್ತು ನೈಜ ಸ್ವರೂಪದ ಶಿರೋನಾಮ ಆರಾಧನಾ ಕವಚ ಕಥಾಕೋಶ ಎಂದು ಇರಬಹುದು. ಏಕೆಂದರೆ ಇದರ ೧೯ ಕಥೆಗಳು ಭಗವತೀ ಆರಾಧನೆಯ ಭಕ್ತಪ್ರತ್ಯಾಖ್ಯಾನ ವಿಭಾಗದಲ್ಲಿಯ ಕವಚ ಅಧಿಕಾರದ ೧೯ ಗಾಹೆಗಳ (೧೫೩೯–೧೫೫೭) ಮೇಲೆ ಆಧಾರಿತವಾಗಿವೆ. ಮತ್ತು ಪ್ರತಿಯೊಂದು ಕಥೆಯೂ ಆರಾಧಕನಿಗೆ ನೀಡಲ್ಪಡುವ ಬಿಡಿಯಾದ ಕವಚದಂತೆ ವರ್ತಿಸುವ ಉದ್ದೇಶವನ್ನು ಹೊಂದಿದೆ. ಈ ವಡ್ಡಾರಾಧನೆಯ ಭಾಷೆಯ ಮೇಲೆ ಪ್ರಾಕೃತದ ಅನೇಕ ವಿಧದ ಪ್ರಭಾವ ಕಂಡುಬರುತ್ತದೆ.

ಅಲ್ಲದೆ ಈ ಗ್ರಂಥದಲ್ಲಿ ಉದ್ಧರಿಸಲ್ಪಟ್ಟ ೧೩೧ ಪದ್ಯಗಳಲ್ಲಿ, ೬೨ ಪ್ರಾಕೃತ ಪದ್ಯಗಳಾಗಿವೆ. ಉಳಿದವುಗಳು ಸಂಸ್ಕೃತ ಮತ್ತು ಕನ್ನಡ ಪದ್ಯಗಳು. ಈ ವಡ್ಡಾರಾಧನೆಯ ತರುವಾಯ ಬಂದ ಹರಿಷೇಣನ ಸಂಸ್ಕೃತ ಪದ್ಯರೂಪದ ಬೃಹತ್ಕಥಾ ಕೋಶವು (ಕ್ರಿ.ಶ. ೯೩೧–೩೨) ಎಲ್ಲಕ್ಕೂ ಹೆಚ್ಚು ಸಂಖ್ಯೆಯಲ್ಲಿ ಕಥೆಗಳುಳ್ಳ ಮತ್ತು ಎಲ್ಲಕ್ಕೂ ಉದ್ದವಾದ ಮೂಲ ಪಾಠವುಳ್ಳ ಮಹತ್ವದ ಆರಾಧನಾ ಕಥಾಕೋಶವಾಗಿದೆ. ಅಪಭ್ರಂಶ ಪದ್ಯದಲ್ಲಿರುವ ಶ್ರೀ ಚಂದ್ರನ ಕಥಾಕೋಶ[೧೪] ಕ್ರಿ.ಶ. ೧೧ನೆಯ ಶತಮಾನದ ಕೊನೆಯ ಭಾಗದಲ್ಲಿರಿಸಲ್ಪಟ್ಟಿದೆ. ಸಂಸ್ಕೃತ ಗದ್ಯದಲ್ಲಿರುವ ಪ್ರಭಾಚಂದ್ರನ ಕಥಾಕೋಶವು[೧೫] ಬಹುಮಟ್ಟಿಗೆ ಇದೇ ಕಾಲದ್ದಾಗಿದೆ. ಹೆಚ್ಚಾಗಿ ಪ್ರಭಾಚಂದ್ರನ ಕೃತಿಯ ಮೇಲೆಯೇ ಆಧಾರಿತವಾದ ಸಂಸ್ಕೃತ ಪದ್ಯದಲ್ಲಿರುವ ನೇಮಿಚಂದ್ರನ ಕಥಾಕೋಶವು[೧೬] ಕ್ರಿ.ಶ. ೧೬ ನೆಯ ಶತಮಾನದ ಆದಿಯಲ್ಲಿ ರಚಿಸಲ್ಪಟ್ಟಿದೆ. ಈ ಆರಾಧನಾ ಕಥಾಕೋಶಗಳ ಹೊರ

---

೧೪. ಡಾ|| ಹಿರಾಲಾಲ ಜೈನರಿಂದ ಸಂಪಾದಿಸಲ್ಪಟ್ಟ ಈ ಗ್ರಂಥ ಇತ್ತೀಚಿಗೆ ಪ್ರಕಟವಾಗಿದೆ. Prakrit Text Society Series No. 13, ಅಹಮ್ಮದಾಬಾದ ೧೯೬೯.

೧೫. ಡಾ|| ಉಪಾಧ್ಯೆಯವರಿಂದ ಸಂಪಾದಿಸಲ್ಪಟ್ಟದ್ದು ಇಷ್ಟರಲ್ಲಿಯೆ ಪ್ರಕಟವಾಗಲಿವೆ ಎಂದು ತಿಳಿದುಬರುತ್ತದೆ.

೧೬. ಇದು ಹಿಂದೀ ಅನುವಾದದೊಂದಿಗೆ ಮೂರು ಸಂಪ್ರುಟಗಳಲ್ಲಿ ಪ್ರಕಟವಾಗಿದೆ: ಜೈನ ಮಿತ್ರ ಕಾರ್ಯಾಲಯ, ಮುಂಬಯಿ ಸಂವ. ೨೪೪–೪೨.

ತಾಗಿ, ಸಂಸ್ಕೃತ ಮತ್ತು ಪ್ರಾಕೃತಗಳಲ್ಲಿ ರಚಿಸಲ್ಪಟ್ಟ ಇತರ ಅನೇಕ ಕೃತಿಗಳು ಅನೇಕ ಭಂಡಾರಗಳಲ್ಲಿ ಹಸ್ತಪ್ರತಿಗಳ ರೂಪದಲ್ಲಿ ಸಿಗುತ್ತವೆ.[೧೭]

ಪ್ರಕಟಿತ, ಅಪ್ರಕಟಿತ ಮತ್ತು ಉಲ್ಲೇಖ ಮಾತ್ರದಿಂದ ಇದುವರೆಗೆ ತಿಳಿದು ಬಂದ ಭಗವತೀ ಆರಾಧನೆಯ ಮೇಲಿನ ಟೀಕೆ ಮತ್ತು ಅದಕ್ಕೆ ಸಂಬಂಧಿಸಿದ ಕಥಾಕೋಶಗಳ ಪರಿಶೀಲನೆಯಿಂದ ನಮಗೆ ಕಂಡುಬರುವ ಒಂದು ಅರ್ಥವತ್ತಾದ ಸಂಗತಿಯೆಂದರೆ, ಹಳಗನ್ನಡವನ್ನು ಬಿಟ್ಟು ಇನ್ನುಳಿದ ಬೇರೆ ಭಾರತೀಯ (ಆರ್ಯ ಅಥವಾ ದ್ರಾವಿಡ) ಪ್ರಾಂತ ಭಾಷೆಯಲ್ಲಿಯೂ ಭಗವತೀ ಆರಾಧನೆಯ ಮೇಲಿನ ಟೀಕೆಯಾಗಲಿ ಅಥವಾ ಅದಕ್ಕೆ ಸಂಬಂಧಿಸಿದ ಕಥಾಕೋಶವಾಗಲಿ ಇದುವರೆಗೆ ದೊರೆತಿಲ್ಲ. ಇದರ ಕಾರಣವನ್ನು ಸ್ಥೂಲವಾಗಿ ಹೀಗೆ ಸ್ಪಷ್ಟೀಕರಿಸಬಹುದು ದಕ್ಷಿಣ ಭಾರತಕ್ಕೆ ಜೈನ ಧರ್ಮದ ಆಗಮನದ ವಿಷಯದಲ್ಲಿ ಕಾಲದ ದೃಷ್ಟಿಯಿಂದ ಕರ್ನಾಟಕವೂ ಮೊದಲಿನ ಸಾಲಿನಲ್ಲಿ ನಿಲ್ಲುತ್ತದೆ. ಈ ಆಗಮನ ಭದ್ರಬಾಹು ಮುನಿಗಳ ಮುಂದಾಳುತನದಲ್ಲಿ ಚಂದ್ರಗುಪ್ತ ಮೌರ್ಯನೊಂದಿಗೆ ಉತ್ತರದಿಂದ ಬಂದು ನೆಲಸಿದ ಜೈನ ಸಂಘಕ್ಕೆ ಸಂಬಂಧಿಸಿದುದು. ಈ ಪರಂಪರೆಯು ಶ್ರವಣ ಬೆಳ್ಗೊಳದಲ್ಲಿರುವ ಕೆಲ ಸ್ಮಾರಕಗಳಲ್ಲಿ ಪ್ರತಿನಿಧಿಸಲ್ಪಟ್ಟಿದೆ, ನಾಡಿನ ಈ ಭಾಗದ ಕೆಲ ಶಾಸನಗಳಲ್ಲಿ, ಸಾಹಿತ್ಯದ ಮತ್ತು ಅರ್ಧ-ಐತಿಹಾಸಿಕ ಕೃತಿಗಳಲ್ಲಿ ನಮೂದಿಸಲ್ಪಟ್ಟಿದೆ; ಮತ್ತು ರಾಯಿಸ್, ಸ್ಮಿಥ್, ಅಯ್ಯಂಗಾರ, ಶೇಷಗಿರಿರಾವ, ಸಾಲೆತೋರ್ ಮೊದಲಾದ ಖ್ಯಾತ ಇತಿಹಾಸಜ್ಞರಿಂದ ಐತಿಹಾಸಿಕ ಸತ್ಯವೆಂದು ಅಂಗೀಕರಿಸಲ್ಪಟ್ಟಿದೆ. ಕರ್ನಾಟಕದಲ್ಲಿ ಜೈನ ವಸಾಹತುಗಳ ಸ್ಥಾಪನೆಯಾದ ತರುವಾಯ (ಬಹಳ ಮಾಡಿ ಮೊದಲನೆಯ ವಸಾಹತು ಶ್ರವಣಬೆಳ್ಗೊಳದಲ್ಲಿ) ಜೈನಾಚಾರ್ಯರು ಎಂದಿನಂತೆ ಸ್ಥಾನಿಕ ಭಾಷೆಯನ್ನು ಕಲಿತು ಅದನ್ನು ತಮ್ಮ ಧರ್ಮ ಬೋಧೆಗಾಗಿ ಬಳಸಿದರು; ಈ ರೀತಿ ಕನ್ನಡಕ್ಕೆ ಸಾಹಿತ್ಯದ ಬುನಾದಿಯನ್ನು ಹಾಕಿದರು[೧೮] ಮತ್ತು ಕ್ರಮವಾಗಿ ಅದನ್ನು ಒಂದು ಭವ್ಯ ಕಟ್ಟಡದ ರೂಪಕ್ಕೇರಿಸಿದರು. ಈ ಕಟ್ಟಡದ ನಸುನೋಟಗಳು ರಾಷ್ಟ್ರಕೂಟ ಅರಸ ನೃಪತುಂಗನಿಂದ (ಕ್ರಿ.ಶ. ೮೧೪-೮೭೭) ರಚಿತವಾಗಿದೆಯೆಂದು ಹೇಳಲಾದ ಕವಿರಾಜಮಾರ್ಗವೆಂಬ[೧೯] ಅಲಂಕಾರ ಗ್ರಂಥದಲ್ಲಿ ವರ್ಣಿಸಲ್ಪಟ್ಟಿರುವದನ್ನು ನಾವು ಕಾಣಬಹುದು. ಈ ರೀತಿಯಾಗಿ ಪೂರ್ವದ ಜೈನಾಚಾರ್ಯರು ಆತ್ಮೀಯತೆಯಿಂದ ಸಾಧಿಸಿದ ಕೃಷಿಯು

---

೧೭. ಈ ಎಲ್ಲ ಕಥಾಕೋಶಗಳ ಬಗ್ಗೆಯ ವಿವರಣೆಗಾಗಿ ಬೃಹತ್ಕಥಾ ಕೋಶದ ಪ್ರಸ್ತಾವನೆ, ಪುಪು. ೫೭-೭೩, ನೋಡಿರಿ.

೧೮. ಬುಹ್ಲರ್‌ನ The Indian Sect of the Jainas, Eng. Tr. by Burgess, ಲಂಡನ್ ೧೯೦೩, ಪು. ೨೨ ನೋಡಿರಿ.

೧೯. ಬೆಂಗಳೂರು, ೧೮೯೮.

ಪರಿಣಾಮವಾಗಿ ಕನ್ನಡಕ್ಕೆ ಸಾಹಿತ್ಯದ ಗತಿ ಬೇಗ ದೊರೆಯಿತು. ಮುಂದೆ ಅದು ಸಂಪನ್ನ ಕೃತಿಗಳನ್ನೂ ಪಡೆಯಿತು. ಆದರೆ ಕನ್ನಡ ಸಾಹಿತ್ಯದ ಬೆಳವಣಿಗೆಯ ಪ್ರಾರಂಭದ ಹೆಜ್ಜೆಗಳು ಗುರುತಿಸಲಾಗದಂತಾಗಿವೆ.[೨೦] ಜೈನಾಚಾರ್ಯರಿಂದ ಈ ಬಗೆಯ ಸಾಹಿತ್ಯ–ಚಟುವಟಿಕೆಗಳು ಸಾಗಿದಾಗ, ಮುನಿಧರ್ಮದ ಆದರ್ಶಗಳನ್ನು ಬೋಧಿಸುವ ಮಹತ್ವದ ಕೃತಿಯಾದ ಆರಾಧನೆಯು (ಭಗವತೀ ಆರಾಧನೆಯು) ಕರ್ನಾಟಕದ ಮುನಿಗಳ ಅನೇಕ ಸಂಘಗಳಲ್ಲಿ, ಅಭ್ಯಸಿಸಲ್ಪಟ್ಟಿರಬೇಕು, ಚರ್ಚಿಸಲ್ಪಟ್ಟಿರಬೇಕು. (ವಡ್ಡಾರಾಧನೆಯು ಇದನ್ನು ಒಳ್ಳೇ ಪೂಜ್ಯಭಾವನೆಯಿಂದ ಒಂದಕ್ಕಿಂತ ಹೆಚ್ಚು ಸಲ ಉಲ್ಲೇಖಿಸುತ್ತದೆ.[೨೧] ಹಾಗೆಯೆ ಚಾವುಂಡರಾಯ ಕೃತ

---

೨೦. (i) ಈಗ ಶಾಸನದ ರೂಪದಲ್ಲಿ ದೊರೆಯುವ ಕನ್ನಡ ಸಾಹಿತ್ಯ ಕ್ರಿ.ಶ. ೪೫೦ರಷ್ಟು ಹಿಂದಿನ ಕಾಲದ್ದಾಗಿದೆ.

(ii) ಕವಿರಾಜ ಮಾರ್ಗವು (ಪದ್ಯ ೨೭-೩೨) ವಿವಿಧ ಮತ್ತು ಸಂಪನ್ನ ಸಾಹಿತ್ಯದ ರೂಪಗಳನ್ನು ಹೆಸರಿಸಿ ಅವುಗಳಲ್ಲಿಯ ಕೆಲವು ಬರಹಗಾರರ ಹೆಸರನ್ನೂ ಕೊಡುತ್ತದೆ.

೨೧. (i) ಪು. ೬, ೮೩, ೧೪೨, ೩.

(ii) ಈ ಸಂದರ್ಭದಲ್ಲಿ ಗಮನಾರ್ಹವಾದ ಒಂದು ಸಂಗತಿಯೆಂದರೆ ಕರ್ನಾಟಕದಲ್ಲಿಯ ಮುನಿಗಳು ಮತ್ತು ಆಚಾರ್ಯರು ಭಗವತೀ ಆರಾಧನೆಯನ್ನು ಓದುವ ಕೆಲಸವನ್ನಷ್ಟೇ ಮಾಡಲಿಲ್ಲ ; ಆದರೆ ಅವರು ಸಮಾಧಿಮರಣವೆ ಕಳಸಪ್ರಾಯದಂತಿರುವ ಅದರಲ್ಲಿಯ ತತ್ವಗಳನ್ನು ಪ್ರಾಚೀನ ಮಧ್ಯಕಾಲದ ಕರ್ನಾಟಕದಲ್ಲಿ ಆತ್ಮೀಯತೆಯಿಂದ ಪಾಲಿಸಿದರು : ಶ್ರವಣಬೆಳ್ಗೊಳದ ಒಂದು ಬೆಟ್ಟದ ಮೇಲೆ ಚಂದ್ರಗುಪ್ತ ಮೌರ್ಯನು ತನ್ನ ಗುರುಗಳಾದ ಭದ್ರಬಾಹುಮುನಿಗಳನ್ನು ಹಿಂಬಾಲಿಸಿ ಸಮಾಧಿಮರಣವನ್ನಪ್ಪಿದ ತರುವಾಯ, ಅದೇ ಮಾರ್ಗವನ್ನು ಅನೇಕರು ಅನುಸರಿಸಿದರು : ಈ ಬಗ್ಗೆಯ ಸ್ವಾರಸ್ಯಪೂರ್ಣ ಸಂಗತಿಯೆಂದರೆ, ಶ್ರ. ಬೆ. ಶಾಸನ ೧ರಲ್ಲಿ ವಿವೇಚಿಸಿದಂತೆ ಪ್ರಭಾಚಂದ್ರನು ಸಲ್ಲೇಖನಾ ಮರಣವನ್ನಪ್ಪಿದ ದಾರಿಯನ್ನನುಸರಿಸಿದ ೭೦೦ರ ಗುಂಪನ್ನು ಬಿಟ್ಟು, ಇಂತಹ ಬೇರೆ ೯೪ ವೈಯಕ್ತಿಕ ಉದಾಹರಣೆಗಳು ಶ್ರವಣಬೆಳ್ಗೊಳದಲ್ಲಿಯಷ್ಟೆ ನಮೂದಿಸಲ್ಪಟ್ಟಿವೆ. ಇಂತಹ ಮರಣವನ್ನು ನಮೂದಿಸುವ ಶ್ರವಣಬೆಳ್ಗೊಳದ ಬೇರೆ ಶಾಸನಗಳೆಂದರೆ ನಂ. ೧೧, ೬೪-೬೬, ೧೧೭, ೧೧೮, ೧೨೬-೧೨೯, ೧೫೯, ೩೮೯, ೪೭೭ ಮತ್ತು ೮೦ ಇನ್ನುಳಿದವುಗಳು. ಇವುಗಳಲ್ಲಿ ಎಲ್ಲಕ್ಕೂ ಹಳೆಯದೆಂದರೆ ಕ್ರಿ.ಶ. ೭ನೆಯ ಶತಮಾನದ್ದು. ಇವೆಲ್ಲ ಪುರುಷ-ಸ್ತ್ರೀಯರಿಬ್ಬರನ್ನೂ ಒಳಗೊಂಡಿವೆ ; ಅವರಲ್ಲಿ ಹೆಚ್ಚಾಗಿ ಮುನಿಗಳು ಮತ್ತು ಸಾಧ್ವಿಗಳಿರುವರು ; ೬೪ ಪುರುಷರು ಮತ್ತು ೧೬ ಸ್ತ್ರೀಯರು. ಇವರಲ್ಲಿ ೪೮ ಪುರುಷರು ಮತ್ತು ೧೧ ಸ್ತ್ರೀಯರು ಕ್ರಿ.ಶ. ೭ ಮತ್ತು ೮ನೆಯ ಶತಮಾನಗಳ ನಡುವೆ ಕಾಲವಾದರು : ಪ್ರೊ. ಎಸ್. ಆರ್. ಶರ್ಮಾ, Jainism & Karnatak Culture, ಧಾರವಾಡ ೧೯೪೦, ಪು. ೯೩.

(iii) ವಡ್ಡಾರಾಧನೆಯು ತನ್ನ ೧೪ನೆಯ ಕಥೆಯಲ್ಲಿ ಸಮಾಧಿಮರಣವನ್ನು ಚನ್ನಾಗಿ ನಿದರ್ಶಿಸುತ್ತದೆ.

ತ್ರಿಷಷ್ಟಿ–ಲಕ್ಷಣ ಮಹಾಪುರಾಣ[೨೨]ದಲ್ಲಿಯೂ ಇದರ ಉಲ್ಲೇಖ ಬರುತ್ತದೆ.) ತರುವಾಯ ಕೆಲ ಆಚಾರ್ಯರು ಸವಿಸ್ತರವಾದ ಟೀಕೆಗಳನ್ನು (ಕಥೆಗಳೊಂದಿಗೆ) ಕನ್ನಡದಲ್ಲಿ ಬರೆದಿರಬೇಕು. ಭ್ರಾಜಿಷ್ಣುವಿನ ಆರಾಧನಾ ಟೀಕೆಯು ಇಂತಹ ಒಂದು ಟೀಕೆ. ತರುವಾಯ, ಮೇಲೆ ವಿವರಿಸಿದ ಈ ಪ್ರಕಾರದ ಸಾಹಿತ್ಯದ ಬೆಳವಣಿಗೆಯ ಒಲವನ್ನನುಸರಿಸಿ, ಭ್ರಾಜಿಷ್ಣುವಿನ ಕೃತಿಯಂತಹ ಟೀಕೆಗಳಿಂದ ಕಥಾ ಭಾಗವನ್ನು ಬೇರ್ಪಡಿಸುವ ಗತಿಯಲ್ಲಿ, ಒಂದು ಅಥವಾ ಹಲವು ಸಮಗ್ರ ಆರಾಧನಾ ಕಥಾ ಕೋಶಗಳು ಕನ್ನಡದಲ್ಲಿ ಹುಟ್ಟಿರಬೇಕು. ಭಗವತೀ ಆರಾಧನೆಯಲ್ಲಿಯ ಭಕ್ತಪ್ರತ್ಯಾಖ್ಯಾನ ವಿಭಾಗದ ಕವಚ ಅಧಿಕಾರವನ್ನು ವೈಶಿಷ್ಟಪೂರ್ಣ ರೀತಿಯಲ್ಲಿ ಪ್ರತಿನಿಧಿಸುವ ಅಂಶಿಕ ಆರಾಧನಾ ಕಥಾಕೋಶವಾದ ವಡ್ಡಾರಾಧನೆಯು ಒಂದು ಅಥವಾ ಹಲವು ಸಮಗ್ರ ಆರಾಧನಾ ಕಥಾಕೋಶದ ತರುವಾಯ ರಚಿಸಲ್ಪಟ್ಟಿರಬೇಕು. ದುರ್ದೈವದಿಂದ ಇಂತಹ ಪೂರ್ಣ ಆರಾಧನಾ ಕಥಾಕೋಶದ ಬಗ್ಗೆ ಇದುವರೆಗೆ ಏನೂ ತಿಳಿದುಬಂದಿಲ್ಲ. ಕವಿರಾಜಮಾರ್ಗದಲ್ಲಿ ಹೆಸರಿಸಲ್ಪಟ್ಟಿರುವ ಕನ್ನಡ ಗದ್ಯ ಕವಿಗಳ ಮಾಲೆಯಲ್ಲಿ[೨೩] ಒಬ್ಬನಾದರೂ ಆರಾಧನಾ ಕಥಾಕೋಶಕಾರನಾಗಿರಬಹುದೆ? ನಾಗವರ್ಮನು ತನ್ನ ಕಾವ್ಯಾವಲೋಕನದಲ್ಲಿ (ಸು. ೧೧೫೦) ಉಲ್ಲೇಖಿಸಿರುವ ಶ್ರೀಮಂತ ಕನ್ನಡ ಕಥಾಸಾಹಿತ್ಯವು[೨೪] ಇಂತಹ ಒಂದಾದರೂ ಆರಾಧನಾ ಕಥಾಕೋಶವನ್ನು ಹೊಂದಿರಬಹುದೆ?

ಮೇಲೆ ಚರ್ಚಿಸಲ್ಪಟ್ಟ ಸಾಹಿತ್ಯಿಕ, ಐತಿಹಾಸಿಕ, ಪ್ರಾಮಾಣಿಕ ಮೊದಲಾದ ಸಂಗತಿಗಳ ಸತ್ಯ ಮತ್ತು ಸಾಧ್ಯತೆಯ ಬೆಳಕಿನಲ್ಲಿ ನಾವು ಕೆಳಗಿನ ತೀರ್ಮಾನಗಳಿಗೆ ಬರಬಹುದಾಗಿದೆ[೨೫]: ಸಂಸ್ಕೃತ ಪ್ರಾಕೃತ ಮತ್ತು ಅಪಭ್ರಂಶಗಳನ್ನು ಒಂದೆಡೆಗಿರಿಸಿ, ಹಳಗನ್ನಡವೊಂದನ್ನು ಬಿಟ್ಟರೆ ಬೇರಾವ ಭಾರತೀಯ (ಆರ್ಯ ಅಥವಾ ದ್ರಾವಿಡ) ಪ್ರಾಂತ ಭಾಷೆಯಲ್ಲಿಯೂ ಭಗವತೀ ಆರಾಧನೆಯ ಮೇಲಿನ ಟೀಕೆಯಾಗಲಿ ಅಥವಾ ಅದಕ್ಕೆ ಸಂಬಂಧಿಸಿದ ಕಥಾ ಕೋಶವಾಗಲಿ ಇದ್ದುದು ಇದುವರೆಗೆ ತಿಳಿದುಬಂದಿಲ್ಲ. ಪ್ರಾಚೀನ ಮತ್ತು ಮಧ್ಯಕಾಲದ

---

೨೨. ಚಾವುಂಡರಾಯ ಪುರಾಣ, ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೨೮, ಪು. ೩೪.

೨೩. ೧.೨೯ : ಹೆಸರಿಸಲ್ಪಟ್ಟ ಈ ಮಣಿಗಳು ವಿಮಲ, ಉದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ೩.

೨೪. ಕಾವ್ಯಾವಲೋಕನಂ, ಮೈಸೂರ ವಿ. ವಿ. ೧೯೩೯, ಪು. ೯೪.

೨೫. ಈ ತೀರ್ಮಾನಗಳು ಸ್ವಾಭಾವಿಕವಾಗಿ ಮುಂಬರುವ ಹೊಸ ಶೋಧಗಳಿಂದ ಪರಿಷ್ಕರಣೀಯವಾಗಿವೆ.

ಕರ್ನಾಟಕದಲ್ಲಿ ಆರಾಧನೆಯು (ಭಗವತೀ ಆರಾಧನೆಯು) ಒಳ್ಳೇ ಶ್ರದ್ಧೆ ಮತ್ತು ಪೂಜ್ಯಭಾವಗಳೊಂದಿಗೆ ಅಭ್ಯಸಿಸಲ್ಪಡುತ್ತಿತ್ತು. ಭ್ರಾಜಿಷ್ಣುವಿನ ಕನ್ನಡ ಆರಾಧನಾ ಟೀಕೆಯು ಪರಿಪೂರ್ಣ (ಕಥೆಗಳನ್ನೊಳಗೊಂಡ) ಟೀಕೆಗಳಲ್ಲಿ ಒಂದಾಗಿತ್ತು ಮತ್ತು ದೇಶದ ಈ ಭಾಗದಲ್ಲಿ ರಚಿಸಲ್ಪಟ್ಟಿತ್ತು. ತರುವಾಯ ಕನಿಷ್ಠ ಒಂದಾದರೂ ಪೂರ್ಣ ಆರಾಧನಾ ಕಥಾಕೋಶವು ಹಳಗನ್ನಡದಲ್ಲಿ ರಚಿಸಲ್ಪಟ್ಟಿರಬೇಕು. ಆದರೆ ದುರ್ದೈವದಿಂದ ಅದು ನಮ್ಮ ಕೈಗೆ ಬಂದಿಲ್ಲ. ಇಂತಹ ಪೂರ್ಣ ಆರಾಧನಾ, ಕಥಾಕೋಶದ ತರುವಾಯವೆ, ಆಂಶಿಕವಾದ ಮತ್ತು ವಿಶೇಷವಾಗಿ ರಚಿಸಲ್ಪಟ್ಟ(ಆರಾಧನಾ ಕವಚ ಕಥಾಕೋಶ ಎಂದು)ವಡ್ಡಾರಾಧನೆಯು ಕ್ರಿ. ಶ. ೧೦ ನೆಯ ಶತಮಾನದ ಮೊದಲ ಕಾಲುಭಾಗದಲ್ಲಿ ಮೈದೋರಿತು. ಈಗ ಅದು ಇದುವರೆಗೆ ದೊರೆತಿರುವ ಎಲ್ಲ ಆರಾಧನಾ ಕಥಾ ಕೋಶಗಳಲ್ಲಿ ಎಲ್ಲಕ್ಕೂ ಮೊದಲಿನದಾಗಿ ಮತ್ತು ಈ ವರೆಗೆ ತಿಳಿದುಬಂದಂತೆ ಕನ್ನಡದ ಗದ್ಯದಲ್ಲಿ ಎಲ್ಲಕ್ಕೂ ಮೊದಲ ಮತ್ತು ಶ್ರೇಷ್ಠ ಕೃತಿಯಾಗಿ ಮೆರೆಯುತ್ತಿದೆ

★ ಬಿ. ಕೆ. ಕಡಬಡಿ

ಘನ

ನನ್ನದೊಂದು ಪುಟ್ಟ
ಚೌಕಟ್ಟಿದೆಯಲ್ಲ !
ಅದರ ಮೂಲೆ–ಭುಜ
–ಗಳ ಮೇಲೆ
ಹೊರಳಿ ನಾನು ಆಗಾಗ
ಅಚ್ಚುಕಟ್ಟಾಗಿ ಬಿದ್ದಿರುತ್ತೇನೆ.
ಒಮ್ಮೆ ಮಗ್ಗಲು, ಒಮ್ಮೆ ಬೋರಲು
ಅಂಗಾತ–ಹೀಗೆಲ್ಲ
ಸ್ಥಿತಿ ಸಂತಾನವನೇ ಸಾಕ್ಷಿಯಿಟ್ಟು
ನೆಮ್ಮದಿ ಕೊಳ್ಳುತ್ತೇನೆ.
ಆದರೆ . . .
ಈಗಿತ್ತಲಾಗಿ
'ಸಮಭುಜ' ಇದ್ದದ್ದು 'ವಿಷಮಭುಜ'
ಆದಂತಾಗಿ ನನ್ನ ಕರ್ಣ–
(ಅಕ್ಷ) ವೇ ಬದಲಾಗಿದೆಯಲ್ಲಾ ! ಅರೆ !
ಎಂದು ಅಚ್ಚರಿ ನನಗೆ.
ಇದ್ದ ಈ ಚೌಕಟ್ಟು ಬಿಟ್ಟು ಧುಮ್ಮೆಂದು
ಧುಮುಕುವದು
ನನ್ನ ಲಂಬಕ್ಕೆ ದೂರ . . .ಬಲು ದೂರ
ಹೀಗಾಗಿ ಬಹುತೇಕ
ಇನ್ನೊಂದು ಚೌಕಟ್ಟು–'ನಾಲ್ಕು ಭುಜ'–ಗಳನ್ನೇ
ತಂದು ಘನವನ್ನೇ
ಮಾಡಿ ತೆಪ್ಪಗೆ ಇದ್ದುಬಿಡುವ
ವಿಚಾರವಿದೆ.
ಎಷ್ಟು ತ್ರಾಸಾದರೂ ಸರಿಯೆ–
ಬಿದ್ದರೂ ನನ್ನೊಳಗೆ !
ಎದ್ದರೂ ನನ್ನೊಳಗೇ ! !
ಹೌದು–ಅಲ್ವೆ ?

★ ಜಯಂತ ಕ್ಯಾಕಿಣಿ

ಹಲವು ಹೋರಾಟಗಳ ಕಲಿ: ಅ. ನ. ಕೃ.

[ವ್ಯಕ್ತಿ ಮತ್ತು ಸಾಹಿತ್ಯ]

ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಅ.ನ.ಕೃ. ಒಂದು ಅದ್ಭುತ ಚೇತನ ಅವರನ್ನು, ಅವರ ಸಾಹಿತ್ಯವನ್ನು ಮೆಚ್ಚಿಕೊಂಡು ಸ್ಫೂರ್ತಿಪಡೆದ ತರುಣರ ಸಂಖ್ಯೆ ಅಪಾರ. ಅವರ ಚಾಕಚಕ್ಯತೆಯನ್ನು, ಮಾತಿನ ಚತುರತೆಯನ್ನು, ಸೃಜನಾತ್ಮಕ ಪ್ರತಿಭೆಯನ್ನು, ಉದಾರ ಮನೋಧರ್ಮವನ್ನು ಬಲ್ಲ ಹಿರಿಯರೂ ನಾಡಿನಲ್ಲಿ ಅಲ್ಲಲ್ಲಿ ಇದ್ದಾರೆ, "ಹಿರಿಯರ ಪೈಕಿ ಬಿ. ಎಂ. ಶ್ರೀ ಮತ್ತಿತರರು ದುಡಿದ ರೀತಿಯಲ್ಲಿ ಅ. ನ. ಕೃ. ದುಡಿದರು" ಎಂದು ಅವರ ಸಾಹಿತ್ಯ ಸೇವೆಯನ್ನು ಸ್ಮರಿಸುತ್ತ ನುಡಿದ ಕುವೆಂಪು ನಿಜಕ್ಕೂ ದೊಡ್ಡ ಗೌರವವನ್ನು ಅವರಿಗೆ ಸಲ್ಲಿಸಿದ್ದಾರೆ. ಸದಾ ತಾರುಣ್ಯದ ಪ್ರತೀಕವಾಗಿದ್ದ ಅ. ನ. ಕೃ. ತಮ್ಮ ದೃಢವಾದ ನಿಲುಮೆ, ನಿರಂತರ ಹೋರಾಟದ ಮನೋಭಾವದಿಂದ ಕನ್ನಡದ ದೀಪವನ್ನು ಉಜ್ವಲವಾಗಿ ಬೆಳಗಿಸುವ ಧ್ಯೇಯವಾದಿತ್ವದಲ್ಲಿ ಎಣ್ಣೆ, ಬತ್ತಿ ಎರಡೂ ಆದರು. ಸರಸವಾದ ಸುಭಗವಾದ ತಮ್ಮ ಬರೆವಣಿಗೆಯಿಂದ ಸಹಸ್ರ ಸಹಸ್ರ ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಹುಟ್ಟಿಸಿದ ಈ ಹುಟ್ಟುಕಥೆಗಾರ ನಾಡಿನ ಹಿತರಕ್ಷಣೆಯ ಸಂದರ್ಭದಲ್ಲಿ ಯಾರ ಅಡೆತಡೆಯನ್ನೂ ಲೆಕ್ಕಿಸದೆ, ಯಾರ ಮಾತಿಗೂ ಸೊಪ್ಪುಹಾಕದೆ, ಯಾವ ಸಂಘ ಸಂಸ್ಥೆ ಸಂಪ್ರದಾಯಗಳಿಗೂ ಶರಣಾಗದೆ ಎದೆಗಾರಿಕೆಯಿಂದ ಮುನ್ನುಗ್ಗಿ ಹೋರಾಡಿದರು. ಆ ಧೈರ್ಯ ಆ ಕನ್ನಡತನದ ಕೆಚ್ಚು ಅ.ನ.ಕೃ. ಅವರಿಗೇ ಮೀಸಲು. ಅನೇಕ ಪ್ರಸಂಗಗಳಲ್ಲಿ ಎದುರು ಪಕ್ಷದವರ ಧ್ಯೇಯ-ಧೋರಣೆಗಳನ್ನು, ಅಭಿಪ್ರಾಯ ಅನುಮಾನಗಳನ್ನು ಅವರು ಟೀಕಿಸುತ್ತಿದ್ದರೇ ವಿನಃ ವ್ಯಕ್ತಿ ದ್ವೇಷವಾಗಲಿ, ಪೂರ್ವ ಗ್ರಹಗಳಾಗಲಿ ಅವರನ್ನು ಮುಟ್ಟುತ್ತಿದ್ದಿಲ್ಲ, ಎಂಥ ವೈರಿಯೂ ಮೆಚ್ಚಬಹುದಾದ ಸ್ನೇಹ ಔದಾರ್ಯಗಳ ಬಂಗಾರದ ಖನಿಯಾಗಿದ್ದರು ಅ. ನ. ಕೃ. "ಮಾನವ ರೂಪದ ಮಾನವೀಯ ಗುಣಗಳ ಡೈನಮೊ ಅ. ನ. ಕೃ." ಎಂದು ಅವರನ್ನು ಮಿತ್ರರೊಬ್ಬರು (ಎಲ್. ಎಸ್. ಶೇಷಗಿರಿರಾವ್) ಕರೆದಿರುವಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ. ಇಂಥ ವ್ಯಕ್ತಿಯ ಕಣ್ಮರೆಯಿಂದ ಕನ್ನಡ ನಾಡು–ನುಡಿಗಳಿಗಾದ ನಷ್ಟ ಅಪಾರ ಎಂದರೆ ಎಳ್ಳಷ್ಟೂ ಔಪಚಾರಿಕವೆನಿಸದು. ಕನ್ನಡತನದ ಜನ್ನಗುದುರೆಯಾಗಿ ಕೈಕೊಂಡ ಕಾರ್ಯದಲ್ಲೆಲ್ಲ ಸಾಹಸವನ್ನುಮೆರೆದು, ನಿಸ್ಸಂಕೋಚವಾದ ಬಾಳನ್ನು ಬಾಳಿ, ಜನಾನುರಾಗದ ಶಿಖರವನ್ನು ತಲುಪಿ, ಬಹುಮುಖವಾದ ವರ್ಣಮಯ ವ್ಯಕ್ತಿತ್ವವನ್ನು ಪಡೆದಿದ್ದ ಅ. ನ. ಕೃ. ರಂಥ ವ್ಯಕ್ತಿ



ದಿ. ಅ. ನ. ಕೃಷ್ಣರಾಯರು

ಇನ್ನೂ ಬಹು ಕಾಲ ನಮ್ಮ ಮಧ್ಯದಲ್ಲಿರಬೇಕಾಗಿತ್ತು ಎಂದು ಯಾರು ಬಯಸರು ?

ಈ ಸಂದರ್ಭದಲ್ಲಿ ಅ.ನ.ಕೃ. ಅವರೊಂದಿಗೆ ಸಂಪರ್ಕ ಒದಗಿದ ಹಲವಾರು ಸನ್ನಿವೇಶಗಳು ನನ್ನ ಮನಸ್ಸಿನೆದುರು ಮೂಡಿನಿಲ್ಲುತ್ತಿವೆ. ಅ. ನ. ಕೃ. ಧಾರವಾಡಕ್ಕೆ ಬಂದಾಗ ಹೆಚ್ಚಾಗಿ ದಿ. ಶಿವಲಿಂಗಯ್ಯನವರಲ್ಲಿಯೇ ವಾಸವಾಡುತ್ತಿದ್ದರು. ಸಂಜೆಯು ಹೊತ್ತು ಅವರ ಪುಸ್ತಕದಂಗಡಿ 'ಸಾಹಿತ್ಯ ಮಂದಿರ' ದಲ್ಲಿ ಗೆಳೆಯರೊಡನೆ ಹರಟೆಹೊಡೆಯುತ್ತ ಅ. ನ. ಕೃ. ಕುಳಿತುಕೊಳ್ಳುವ ರೂಢಿ. ಒಮ್ಮೆ ಯಾವುದೋ ಪುಸ್ತಕವನ್ನು ಕೊಳ್ಳಲು 'ಸಾಹಿತ್ಯ ಮಂದಿರ' ಕ್ಕೆ ನಾನು ಹೋದಾಗ ಅವರ ಪರಿಚಯವಾಯಿತು. (ನಾನು ಹಾಯಸ್ಕೂಲ ವಿದ್ಯಾರ್ಥಿಯಿದ್ದಾಗಲೇ ಅವರನ್ನು ನೋಡಿದ್ದೆನಾದರೂ ಅವರೊಡನೆ ಮಾತನಾಡಿ ಪರಿಚಯಿವಿರಲಿಲ್ಲ.) ನಾನಾಗ ಬಿ.ಎ. ದಲ್ಲಿ ಓದುತ್ತಿದ್ದೆ (೧೯೫೦). ಆ ಹೊತ್ತಿಗೆ ಪ್ರಕಟವಾಗಿದ್ದ ನನ್ನ ಕವಿತೆಗಳಲ್ಲಿ ಕೆಲವನ್ನವರು ಓದಿದ್ದರು. ಅದೇ ವಾರ 'ಜನಪ್ರಗತಿ' ಯಲ್ಲಿ ಪ್ರಕಟವಾಗಿದ್ದ ನನ್ನ 'ಶ್ವೇತಪುತ್ರಿ' ಕವಿತೆಯ ಬಗ್ಗೆ ತಮ್ಮ ಮೆಚ್ಚಿಗೆ ಸೂಚಿಸಿದರು. ಅದು ಸಿಗರೇಟನ್ನು ಕುರಿತ ಕವಿತೆಯಾಗಿತ್ತು. ಮರುದಿನ ಅವರು ಮಾಳಮಡ್ಡಿಯಲ್ಲಿದ್ದ ನಮ್ಮ ಅಭ್ಯಾಸದ ಕೋಣೆಗೆ ಬಂದು ಮೂರು-ನಾಲ್ಕು ತಾಸು ಹರಟೆಹೊಡೆದರು. ನಾನು ಸ್ಟೋವಿನ ಮೇಲೆ ಚಹಾ ಮಾಡಿಕೊಟ್ಟೆ. ಅಂದಿನ ಮಾತುಕತೆಯಲ್ಲಿ ಹಳಗನ್ನಡ ಕಾವ್ಯ, ಬಸವಣ್ಣ, ಪ್ರಗತಿಶೀಲ ಸಾಹಿತ್ಯ, ಕಥೆ-ಕಾದಂಬರಿ, ನಾಡಹಬ್ಬದಲ್ಲಿ ಕನ್ನಡ ನಾಡಿನ ಸುತ್ತಾಟ, ರಬಕವಿ ಸಾಹಿತ್ಯಸಮ್ಮೇಳನ, ಮಲ್ಲಿಕಾರ್ಜುನ ಮನ್ಸೂರರ ಸಂಗೀತ ಕಲೆ—ಇತ್ಯಾದಿ ಹಲವಾರು ವಿಷಯಗಳು ಹಾಯ್ದುಹೋದವು. ಕಿರಿಯರೊಡನೆ ಕಿರಿಯರಾಗಿ ಸ್ನೇಹದಿಂದ ಅಸ್ವಾಭಾವಿಕತೆಗೆ ಎಡೆಯಿರದಂತೆ ವರ್ತಿಸಿದ ಅವರ ಬಗ್ಗೆ ನಿಜವಾಗಿಯೂ ನನ್ನಲ್ಲಿ ಪ್ರೀತಿ ಗೌರವಗಳುಂಟಾದವು. ಅವರು ತಿರುಗಿ ಬೆಂಗಳೂರಿಗೆ ಹೋದ ಮೂರು-ನಾಲ್ಕು ದಿನಗಳಲ್ಲಿ ಕೃತಜ್ಞತೆ ಸೂಚಿಸಿ ಕಾಗದ ಬರೆದಿದ್ದರು. ಇದು ಅ. ನ. ಕೃ. ಅವರ ಹಿರಿಯ ಗುಣ.

೧೯೬೦ ರಲ್ಲಿ ಮಣಿಪಾಲದಲ್ಲಿ ನೆರವೇರಲಿದ್ದ ಕನ್ನಡ ಸಾಹಿತ್ಯ ಸಮ್ಮೇಳನದ ೪೨ ನೆಯ ಅಧಿವೇಶನದ ಅಧ್ಯಕ್ಷಪದದ ಆಯ್ಕೆಗೆ ಸಂಬಂಧಿಸಿ ಪತ್ರಿಕೆಗಳಲ್ಲಿ ತುಂಬ ವಾದ, ಚರ್ಚೆ ನಡೆಯಿತು. ಈ ಹಿಂದೆ ಯಾವ ಸಮ್ಮೇಳನದ ಕಾಲಕ್ಕೂ ಜನತೆ ಈ ಬಗೆಯ ವಿಶಿಷ್ಟ ಪ್ರತಿಕ್ರಿಯೆ ವ್ಯಕ್ತಪಡಿಸಿರಲಿಲ್ಲ. ಅಂತೂ ಅ. ನ. ಕೃಷ್ಣರಾಯರು ಸರ್ವಾನುಮತದ ನಿರ್ಣಯದಿಂದ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾದದ್ದು ಅವರ ಅಭಿಮಾನಿಗಳಿಗಷ್ಟೇ ಅಲ್ಲದೆ ಸರ್ವ ಕನ್ನಡಿಗರಿಗೂ ಸಂತೋಷದ ಸಂಗತಿಯೆನಿಸಿತು. ಅದುವರೆಗೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠಕ್ಕೇರಿದವರಲ್ಲಿ ಡಿ. ವಿ. ಜಿ. ಅವರ ಅನಂತರ ಅ. ನ ಕೃ. ಅವರೇ ವಯಸ್ಸಿ

ನಿಂದ ಕಿರಿಯರು. ಸಮ್ಮೇಳನಾಧ್ಯಕ್ಷರಾದವರಿಗೆ ಪೌರಸನ್ಮಾನ ದೊರಕುತ್ತಿರುವುದೂ ಅದೇ ಮೊದಲ ಬಾರಿ. ಅ. ನ. ಕೃ. ಪಡೆದಿದ್ದ ಜನಪ್ರಿಯತೆಗೆ ಇದಕ್ಕಿಂತ ಬೇರೆ ನಿದರ್ಶನ ಬೇಕಿಲ್ಲ. ಆ ಸಂದರ್ಭದಲ್ಲಿ ಹುಬ್ಬಳ್ಳಿ–ಧಾರವಾಡಗಳಲ್ಲಿ ಏರ್ಪಟ್ಟ ಸತ್ಕಾರ ಸಮಾರಂಭಗಳಲ್ಲಿ ಮಾತನಾಡುತ್ತ ಅ. ನ. ಕೃ. ಒಂದು ಮಾತನ್ನು ಹೇಳಿದರು: "ನಮ್ಮ ಜನಜೀವನದಲ್ಲಿ ಒಂದು ಅಧ್ಯಕ್ಷಪದವಿ ಬಂದರೆ ಒಂದು ಪಾರಿತೋಷಕ ಬಂದರೆ ಕಥೆ ಮುಗಿದು ಹೋಯಿತು. ಆದರೆ ನಾನು ಅಧ್ಯಕ್ಷನಾಗಿ ಸಾಯುವದಕ್ಕಿಂತ ಲೇಖಕನಾಗಿ ಬದುಕಬೇಕೆಂದಿದ್ದೇನೆ." ಕ್ರಿಯಾಶೀಲ ಲೇಖಕನಿಗೆ ಒಪ್ಪತಕ್ಕ ಮಾತುಗಳೇ. ಅ. ನ ಕೃ. ಸಾಹಿತ್ಯ ಕ್ಷೇತ್ರದಲ್ಲಿ ಕಾಲಿಟ್ಟಂದಿನಿಂದಲೂ ಒಂದಲ್ಲ ಒಂದು ರೀತಿಯಿಂದ ತಮ್ಮ ಕಲಿತನವನ್ನು ತೋರಿಸುತ್ತಲೇ ಬಂದಿದ್ದಾರೆ. 'ನನ್ನನ್ನು ನಾನೇ ಕಂಡೆ' ಎಂಬ ಹೊತ್ತಿಗೆಯಲ್ಲಿ ಅವರು ತಮ್ಮನ್ನು 'ಹಲವು ಹೋರಾಟಗಳ ಕಲಿ' ಎಂದು ಕರೆದುಕೊಂಡಿರುವುದು ಯಥಾರ್ಥವಾಗಿದೆ.

ಅ. ನ. ಕೃ. ತಮ್ಮ ಮೊಟ್ಟಮೊದಲನೆಯ ಕೃತಿ 'ಮದುವೆಯೋ ಮನೆಹಾಳೋ' ಎಂಬ ನಾಟಕದಿಂದ ೧೯೨೪ರಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಕಾಲಿಟ್ಟರು. ಆಗ ಅವರಿಗೆ ೧೬ ನೆಯ ವಯಸ್ಸು. ಅಂದಿನಿಂದ ತಮ್ಮ ಕೊನೆಗಾಲದ ವರೆಗೂ ನಾಡು ನುಡಿಗಳ ಸೇವೆಯನ್ನು ಅವರು ಅಖಂಡವಾಗಿ ಸಾಗಿಸಿಕೊಂಡು ಬಂದರು. ಬಾಲ್ಯದಲ್ಲಿಯೇ ಕನ್ನಡ ರಂಗಭೂಮಿಯ ಸಾಮ್ರಾಟ ವರದಾಚಾರ್ ಹಾಗೂ ಬಹುಮುಖ ಪ್ರತಿಭೆಯ ಪಂಡಿತ ತಾರಾನಾಥರಿಂದ ಅ. ನ. ಕೃ. ಪ್ರಭಾವಿತರಾಗಿದ್ದರು. "ಹಾಯಸ್ಕೂಲ್ ಮುಗಿಸುವ ವೇಳೆಗೆ ಇಂಗ್ಲಿಷ್, ಫ್ರೆಂಚ್, ಗ್ರೀಕ್, ಪರ್ಶಿಯನ್, ಕನ್ನಡ ಸಾಹಿತ್ಯಗಳ ಸಾಕಷ್ಟು ಪರಿಚಯ ನನಗಾಗಿತ್ತು" ಎಂದು ಒಂದೆಡೆ ಅವರು ಹೇಳಿದ್ದಾರೆ. ಜೊತೆಯಲ್ಲಿ "ಇಂಗ್ಲಿಷ್ ಸಾಹಿತ್ಯವನ್ನನುಕರಿಸದೆ ಅದರ ಸತ್ವದಂಥ ಸತ್ವವನ್ನು ಕನ್ನಡ ಸಾಹಿತ್ಯಕ್ಕೆ ತಂದುಕೊಡಬೇಕು. ಗಗನದಲ್ಲಿ ವಿಹರಿಸುತ್ತಿರುವ ಸಾಹಿತ್ಯ ಭದ್ರವಾದ ಬುನಾದಿಯ ಮೇಲೆ ಇಹಲೋಕದಲ್ಲಿಯೂ ನಿಲ್ಲಬೇಕು" ಎಂಬ ಪಣ ಅವರದಾಗಿತ್ತು. ಅವರ ಆಸ್ಥೆ ಸಾಹಿತ್ಯವೊಂದಕ್ಕೇ ಮೀಸಲಾಗಿರಲಿಲ್ಲ. ಇಂಗ್ಲಿಷಿನಲ್ಲಿ ಹಾಗೂ ಇತರ ಭಾರತೀಯ ಭಾಷೆಗಳಲ್ಲಿಯ ಸಾಹಿತ್ಯೇತರ ವಿಷಯಗಳ ಅನೇಕ ಗ್ರಂಥಗಳನ್ನು ಅವರು ತಿರುವಿ ಹಾಕಿದರು. ಸ್ವಾಮಿ ವಿವೇಕಾನಂದರ ವೀರವಾಣಿಯಿಂದ ಸ್ಫೂರ್ತಿಪಡೆದ ಅ. ನ. ಕೃ. ತಮ್ಮ ಅವ್ಯಾಹತವಾದ ಲೇಖನಿಯಿಂದಲೂ ವಾಗ್ವೈಖರಿಯಿಂದಲೂ ಜನತೆಯನ್ನು ಬಡಿದೆಬ್ಬಿಸಿ ಗುರಿಯ ಕಡೆಗೆ ಮುನ್ನಡೆಸಲು ಅಣಿಯಾದರು. ಕನ್ನಡದಲ್ಲಿ ಬರೆಯುವದು ಒಂದು ರೀತಿ ಅಗೌರವ ಎಂಬ ಭಾವನೆ ಹರಡಿದ್ದ, ಹಾಗೂ ಕನ್ನಡಿಗರಲ್ಲಿ ಓದುವ ಹವ್ಯಾಸ ಬೆಳೆದಿರದಿದ್ದ ಕಾಲದಲ್ಲಿ ಅವರು ತಮ್ಮ ಬರೆವಣಿಗೆಯನ್ನು ಪ್ರಾರಂಭಿಸಿದರು. ತಮ್ಮ ವಿಚಾರಗಳ

ಲ್ಲಿಯೇ ಆಸಕ್ತರಾದ ಸಂಪ್ರದಾಯವಾದಿಗಳ ರೂಢಿಬದ್ಧ ಶೃಂಖಲೆಯಿಂದ ಆಧುನಿಕ ಕನ್ನಡ ಸಾಹಿತ್ಯವನ್ನು ಮುಕ್ತಗೊಳಿಸಿ ಮುನ್ನಡೆಸಿದ ಶ್ರೇಯಸ್ಸು ಅ. ನ. ಕೃ. ಅವರಿಗೆ ಸಲ್ಲುತ್ತದೆ. ಕನ್ನಡ ಸಾಹಿತ್ಯ ಶೈಲಿಯನ್ನು ನಿರ್ಮಲವಾಗಿ ಸುಭಗವಾಗಿ ರೂಪುಗೊಳಿಸಿದ ಕೆಲವೇ ಗಣ್ಯಲೇಖಕರಲ್ಲಿ ಅವರೊಬ್ಬರು. ಹಿಂದಿನ ಕವಿಗಳ ಮೇಲೆಯೇ ಕೈಯೂರಿ ಹೆಮ್ಮೆಪಟ್ಟುಕೊಳ್ಳುತ್ತ ಅರೆನಿದ್ದೆಯಲ್ಲಿದ್ದ ಕನ್ನಡ ಸಾಹಿತ್ಯಾಭಿಮಾನಿಗಳಿಗೆ ತಮ್ಮದೇ ಆದ ಹೊಸ ಗಳಿಕೆಯನ್ನು ಅವರು ಕನ್ನಡಕ್ಕೆ ನೀಡಿದರು.

ಕಾದಂಬರಿ ಸಾರ್ವಭೌಮರೆಂದು ಹೆಸರಾಗಿದ್ದರೂ ಸಣ್ಣಕತೆ, ಪ್ರಬಂಧ, ವಿಮರ್ಶೆ, ಜೀವನ ಚರಿತ್ರೆ, ಕಲಾವಿವೇಚನೆ ಇತ್ಯಾದಿ ಸಕಲ ಪ್ರಕಾರಗಳಲ್ಲಿಯೂ ಕೃಷಿಗೈದು ಸುಮಾರು ಇನ್ನೂರು ಗ್ರಂಥಗಳನ್ನು ಅವರು ಕನ್ನಡಕ್ಕೆ ನೀಡಿದ್ದಾರೆ. ಇವುಗಳಲ್ಲಿ ಅರ್ಧಕ್ಕೂ ಮಿಕ್ಕಿ ಕಾದಂಬರಿಗಳೇ ಆಗಿರುವದು ಅವರ ಕಲೆಯ ಹಾಗೂ ಜೀವನಾನುಭವದ ಸರ್ವತೋಮುಖ ಅಭಿವ್ಯಕ್ತಿಗೆ ಕಾದಂಬರಿಯೇ ಪ್ರಮುಖ ಸಾಧನವಾಗಿದ್ದನ್ನು ಎತ್ತಿ ತೋರಿಸುತ್ತದೆ. ಅ. ನ. ಕೃ. ವ್ಯಕ್ತಿಯೊ ಅಥವಾ ಕಾದಂಬರಿಗಳ ಒಂದು ಕಾರಖಾನೆಯೋ ಎಂದು ಹಲವರು ದಂಗುಬಡಿದದ್ದುಂಟು. ಯಂತ್ರ ಒಂದೇ ಕಾಲಕ್ಕೆ ನಿಯತಗೊಂಡು ಒಂದೇ ಕೆಲಸ ಮಾಡಬಲ್ಲುದು. ಆದರೆ ಅ. ನ. ಕೃ. ಏಕಕಾಲಕ್ಕೆ ಸಾಮಾಜಿಕ, ಐತಿಹಾಸಿಕ ವಸ್ತುಗಳನ್ನೊಳಗೊಂಡ ಮೂರು ಕಾದಂಬರಿಗಳನ್ನು ಬರೆದು ಅಚ್ಚಿಗೆ ಕಳಿಸುತ್ತಿದ್ದುದನ್ನು ಅವರ ಮಿತ್ರರನೇಕರು ಬಲ್ಲರು. ಈ ದಿಶೆಯಲ್ಲಿ ಅ. ನ. ಕೃ ಕನ್ನಡ ಸಾಹಿತ್ಯದಲ್ಲಿಯೇ ಅದ್ವಿತೀಯರು.

ಹಾಯಸ್ಕೂಲಿನಲ್ಲಿ ಓದುತ್ತಿದ್ದಾಗ ನನ್ನ ಮನಸ್ಸನ್ನು ವಿಶೇಷವಾಗಿ ಸೆಳೆದ ಕನ್ನಡ ಕಾದಂಬರಿಗಳಲ್ಲಿ 'ಸಂಧ್ಯಾರಾಗ' ಮತ್ತು 'ಮಂಗಳಸೂತ್ರ' ಪ್ರಮುಖವಾಗಿದ್ದವು ಆಗ (ಈಗಲೂ) ವಿದ್ಯಾರ್ಥಿಗಳಿಗೆ ಅ. ನ ಕೃ. ಕೃತಿಗಳೆಂದರೆ ಹುಚ್ಚು. ಅವರ ಯಾವುದೇ ಬರೆವಣಿಗೆಯಲ್ಲೂ ಮೋಹಕವಾದ ಶೈಲಿ, ಪ್ರಗತಿಪರ ಮನೋಭಾವ, ಖಾರವಾದ ವಾಸ್ತವಿಕ ವಿಮರ್ಶೆ, ಅದಮ್ಯವಾದ ಉತ್ಸಾಹ—ಯುವಕರ ಮನಸ್ಸನ್ನು ಆಕರ್ಷಿಸಲು ಇನ್ನೇನು ಬೇಕು? ೧೯೪೪ರಲ್ಲಿ ಮೊಟ್ಟಮೊದಲು ನಾನು ಅವರ ಭಾಷಣವನ್ನು ಧಾರವಾಡದಲ್ಲಿ ಕೇಳಿದ್ದು. ವಿದ್ಯಾರ್ಥಿಗಳಿಂದ ಕಿಕ್ಕಿರಿದ ಸಭೆಯಲ್ಲಿ ನಿಲ್ಲಲು ಹೇಗೊ ಜಾಗ ಮಾಡಿಕೊಂಡು ಆ ವ್ಯಕ್ತಿಯನ್ನು ಕಂಡದ್ದು. ಬಿಳಿಯ ಖಾದಿಬಟ್ಟೆ, ಷೇರವಾನಿ, ಪಾಯಿಜಾಮು, ತಲೆಯಮೇಲೆ ಟೊಪ್ಪಿಗೆಯೂ ಇತ್ತೆಂದು ತೋರುತ್ತದೆ. ಕನ್ನಡ ಸಾಹಿತ್ಯ–ಕಲೆ-ಸಂಸ್ಕೃತಿಯ ಬಗ್ಗೆ ನಿರರ್ಗಳವಾಗಿ (ನಡು ನಡುವೆ ನೀರೂ ವೆಗ್ಗಳವಾಗಿ) ಮೂರು ಗಂಟೆಗಳಕಾಲ ಅಂದು ಅವರು ಮಾತನಾಡಿ

ದುದು, ದೇಶ ವಿದೇಶಗಳ ನೂರಾರು ಸಾಹಿತಿ, ಕಲಾವಿದರ ಹೆಸರುಗಳನ್ನೂ ಅರಳು ಹುರಿದಂತೆ ಉಚ್ಚರಿಸುತ್ತಿದ್ದುದು ಇಂದಿಗೂ ನನ್ನ ಕಣ್ಣ ಮುಂದೆ ಕಟ್ಟಿ ದಂತಿದೆ. ಭಾಷಣ ಮಾಡುತ್ತಿದ್ದಾಗಿನ ಹೊರತು ಉಳಿದೆಲ್ಲ ಹೊತ್ತಿನಲ್ಲಿ ಸಿಗರೇಟು ಅವರ ಕೈಯಲ್ಲಿ ಜೀವಂತವಾಗಿರುತ್ತಿತ್ತು. ಅದೇ ಆಗ ಪ್ರಕಟವಾದ ಅವರ 'ನನ್ನನ್ನು ನಾನೇ ಕಂಡೆ' ಎಂಬ ಸ್ವಯಂಸಂದರ್ಶನವನ್ನೊಳಗೊಂಡ ಪುಸ್ತ ಕದಲ್ಲಿ ಸಾಹಿತ್ಯಸೇವೆ, ಹಿಂದೀ ಸಮಸ್ಯೆ, ಪಾಕಿಸ್ತಾನ, ಕೋಮುವಾರು ಭೂತ, ಪ್ರಗತಿಶೀಲ ಸಾಹಿತ್ಯ, ವಿದ್ಯಾರ್ಥಿಗಳು, ಕನ್ನಡ ಮಾಧ್ಯಮ, 'ಸಾಹಿತ್ಯರತ್ನ' ಮುಂತಾದವುಗಳ ಬಗ್ಗೆ ಹರಿಯಿಸಿದ ವಿಚಾರಧಾರೆಯ ಸೆಳವಿನಲ್ಲಿ ಸಿಕ್ಕ ವಿದ್ಯಾರ್ಥಿ ಗಳಿಗೆ ಅ. ನ. ಕೃ. 'ಹೀರೊ' ಆಗಿ ಪರಿಣಮಿಸಿದ್ದಲ್ಲಿ ಆಶ್ಚರ್ಯವೇನು ? ಅವರ ಭಾಷಣವೆಂದರೆ ಆಣೆಕಲ್ಲಿನ ಸುರಿಮಳೆ; ನೀರು ಕೂಡಲೇ ರಭಸದಿಂದ ಹರಿದು ಹೋಗುತ್ತದೆ. ನೆಲ ಸಾಕಷ್ಟು ಹಸಿ ಹಿಡಿಯದೆ ಹೋಗಬಹುದು. ಆದರೂ ಏನಂತೆ ? ಕೊಳೆಕಸವಾದರೂ ಕೊಚ್ಚಿಕೊಂಡು ಹೋಗುತ್ತದಲ್ಲ.

೧೯೫೫ ರಲ್ಲಿ ಕಾರಂತರ ಅಧ್ಯಕ್ಷತೆಯಲ್ಲಿ ಮೈಸೂರು ಸಾಹಿತ್ಯ ಸಮ್ಮೇ ಳನಕ್ಕೆ ಹೋದಾಗ ಅಲ್ಲಿ ಅ. ನ.ಕೃ. ಅವರನ್ನು ನಾವು ಕಾಣಲಿಲ್ಲ. ಅಲ್ಲಿಂದ ತಿರುಗಿ ಬರುವಾಗ ನಾನೂ ಗೆಳೆಯ ಬಸವರಾಜ ಕಟ್ಟೀಮನಿಯವರೂ ಬೆಂಗಳೂ ರಿಗೆ ಹೋಗಿ 'ಅನ್ನಪೂರ್ಣ'ದಲ್ಲಿ ಅ. ನ. ಕೃ. ಅವರನ್ನು ಕಂಡೆವು. ಆಗ ಅವರ ಆರೋಗ್ಯ ಅಷ್ಟೊಂದು ಚೆನ್ನಾಗಿರದಿದ್ದರೂ ಸಾಕಷ್ಟು ಉತ್ಸಾಹದಿಂದಲೇ ನಮ್ಮೊಡನೆ ಮಾತನಾಡಿದರು. ನಾವು ಅಲ್ಲಿಂದ ಹೊರಡುತ್ತಿರುವಂತೆಯೇ ಕಟ್ಟೀಮನಿ ಅ. ನ. ಕೃ. ಅವರನ್ನು 'ಸಾಹಿತ್ಯಸಮ್ಮೇಳನಕ್ಕೆ ನೀವು ಅಧ್ಯಕ್ಷ ರಾಗುವದು ಯಾವಾಗ?' ಎಂದು ಕೊಂಚ ಭಾವನಾವಶರಾಗಿಯೇ ಕೇಳಿದರು. ಆಗ ಅ. ನ. ಕೃ. ತಮಗೆ ಸಹಜವಾದ ಮುಗುಳ್ನಗೆ ಬೀರಿ, ಆತ್ಮೀಯತೆಯಿಂದ ಅವರ ಹೆಗಲಮೇಲೆ ಕೈಹಾಕಿ, 'ನೀನು ಅಧ್ಯಕ್ಷನಾಗುವದನ್ನು ನಾನು ಕಾಣ ಬೇಕು' ಎಂದು ನುಡಿದರು. ಹಿಂದೆ ಅ. ನ. ಕೃ. ಅವರ ಪ್ರಗತಿಶೀಲ ಸಾಹಿ- ತ್ಯದ ಆಂದೋಲನಕ್ಕೆ ಕಟ್ಟೀಮನಿ ಸಂಪಾದಕರಾಗಿದ್ದ 'ಉಷಾ'ಮುಖ ಪತ್ರಿಕೆಯಾದಂತಿತ್ತು ಕೆಲವು ಕಾಲ. ಆದರೆ ಮುಂದೆ ಕೆಲವು ಕಾರಣಗಳಿಂದ ಅವರವರಲ್ಲಿ ಭಿನ್ನಾಭಿಪ್ರಾಯವುಂಟಾಗಿ ತೀಕ್ಷ್ಣವಾದ ಲೆಕ್ಕಣಿಕೆಯ ಕಾಳಗ ನಡೆದದ್ದೂ ಉಂಟು. ಆದರೂ ಅದು ವೈಯಕ್ತಿಕ ದ್ವೇಷಕ್ಕೆ ಎಡೆಗೊ ಟ್ಟಿರಲಿಲ್ಲವೆಂಬುವದು ಅ. ನ. ಕೃ. ಅವರ ಔದಾರ್ಯಕ್ಕೆ ಹಿರಿಯ ಸಾಕ್ಷಿ. ಅವರದು ನಿಜವಾಗಿಯೂ ದೊಡ್ಡ ಮನಸ್ಸು. ಅನೇಕ ಹಿರಿಯ ಸಾಹಿತಿ ಗಳೆಂಬವರಲ್ಲಿ ಕಂಡುಬರುವ ಸಣ್ಣತನ ಸಂಕುಚಿತ ಮನೋಭಾವನೆಗಳು ಅ. ನ. ಕೃ. ಅವರ ಸಮೀಪ ಕೂಡ ಸುಳಿಯಲಿಲ್ಲ. ತರುಣ ಲೇಖಕರ ಬೆನ್ನು ತಟ್ಟಿ ಪ್ರೋತ್ಸಾಹ ನೀಡುವುದರಲ್ಲಿ ಅವರು ಮೇಲ್ಪಂಕ್ತಿಯಾಗಿದ್ದರು.

ಅ. ನ. ಕೃ. ಅವರನ್ನು ಒಂದೆರಡು ವರ್ಷಗಳನಂತರ ಮತ್ತೆ ಧಾರವಾಡದಲ್ಲಿ ಕಂಡೆ. ಅದೇ ನಿಲುವು, ಅದೇ ವೇಷಭೂಷಣ, ಅದೇ ಆತ್ಮೀಯವಾದ ಸಂಭಾಷಣೆ. ಅವರಿಗೆ ಆಗ ೭೨ ವರ್ಷ ಎಂದರೆ ನಂಬುವಂತಿರಲಿಲ್ಲ ಅವರು ಜನಿಸಿದ್ದು ೧೯೦೮ ರಲ್ಲಿ; ವೈಶಾಖಶುದ್ಧ ನವಮಿಯ ದಿನ ಅವರ ಮುಂಬರುವ ಗ್ರಂಥಗಳ ಪಟ್ಟಿಯಲ್ಲಿ 'ವೈಶಾಖಶುದ್ಧ ನವಮಿ' ಎಂಬ ಹೆಸರನ್ನಿಟ್ಟುಕೊಂಡ ಆತ್ಮಚರಿತ್ರೆಯೂ ಒಂದಾಗಿತ್ತು, ಉತ್ತರ ಕನ್ನಡ ಜಿಲ್ಲೆಯನ್ನು ಸುತ್ತಿಬಂದ ಪ್ರವಾಸದ ಆಯಾಸದಿಂದ ಅ. ನ ಕೃ. ಅಂದು ತುಂಬ ದಣಿದಿದ್ದರು. ಆದರೂ ಸತ್ಕಾರಕ್ಕೆ ಜುಲುಮೆಯಿಂದ ಒಪ್ಪಿಕೊಂಡು ವಿದ್ಯಾವರ್ಧಕ ಸಂಘದಲ್ಲಿ—ಧ್ವನಿ ಒಡೆದುಹೋಗಿದ್ದರೂ-ಸ್ವಲ್ಪಹೊತ್ತು ಮಾತನಾಡಿದರು. ಮಾತಿನಲ್ಲಿ ಅದೇ ಮೊದಲಿನ ತೀಕ್ಷ್ಣತೆ, ಅದೇ ಖಂಡಿತವಾದಿತ್ವ. "ಇಂದು ಎಲ್ಲೆಲ್ಲೂ ರಾಜಕಾರಣಿಗಳ ಹಾವಳಿಯೇ ಆಗಿದೆ. ಸಾಹಿತ್ಯ ಪರಿಷತ್ತಿನಂಥ ಸಂಸ್ಥೆಯಲ್ಲೂ ಅವರು ದಾಳಿಮಾಡಿದರೆ ಅವರನ್ನು ಮೊದಲು ಒದ್ದು ಹೊರಗೆಹಾಕಬೇಕು." ಕನ್ನಡದ ಬಗ್ಗೆ ಅದೇ ಅಭಿಮಾನ: "ಅಮೇರಿಕೆಯಲ್ಲೊ ಅಥವಾ ಬೇರೆಲ್ಲಿಯೊ ನನಗೆ ಮರಣವೊದಗಿದರೂ ಕನ್ನಡ ನೆಲದಲ್ಲಿಯೇ ಬಂದು ಜೀವ ಬಿಟ್ಟೇನು". ಭಾಷಣ ಮೊದಲಿನಂತೆಯೇ ಖಾರವಾಗಿಯೇ ಇದ್ದರೂ ಅವರ ಮನಸ್ಸು ಹಣ್ಣಾಗಿರುವದನ್ನು ನಾನು ಗುರುತಿಸಿದೆ,

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅ. ನ. ಕೃ. ಅವರದು ಸಮೃದ್ಧವಾದ ಬೆಳೆ. ದಿನಕ್ಕೆ ಹನ್ನೆರಡು ತಾಸಿಗಿಂತಲೂ ಹೆಚ್ಚು ಕಾಲವನ್ನು ಅವರು ಬರೆವಣಿಗೆಯಲ್ಲಿ ಕಳೆಯುತ್ತಿದ್ದರಂತೆ. ಅವರ ಬರೆವಣಿಗೆಯ ಗತಿಯೂ ಶೀಘ್ರವಾಗಿದ್ದು ಅವರ ಎಷ್ಟೋ ಕಾದಂಬರಿಗಳು ಹದಿನೈದು ದಿನಗಳೊಳಗೇ ಬರೆದು ಮುಗಿಸಿದವುಗಳಾಗಿವೆ. ಚತುರ ಸಂಭಾಷಣಾ ಶೈಲಿ ಅವುಗಳ ಮೊದಲ ಆಕರ್ಷಣೆ. ಆ ಕಲೆ ಅವರಿಗೆ ನೀರು ಕುಡಿದ ಹಾಗೆ. ಎರಡನೆಯದಾಗಿ, ನಿತ್ಯ ಜೀವನದ ಘಟನೆಗಳನ್ನೇ ಘರ್ಷಣೆಯನ್ನೇ ಕಥಾವಸ್ತುವಿಗೆ ಅರ್ಥವತ್ತಾಗಿ ಬಳಸಿದ ರೀತಿ. ಮೂರನೆಯದಾಗಿ ಕತೆಯ ಶೀಘ್ರಗತಿ.' ಸಂಧ್ಯಾರಾಗ' ದಿಂದ 'ಸಂಜೆಗತ್ತಲು'ವರೆಗೆ. 'ಮಂಗಳಸೂತ್ರ'ದಿಂದ 'ಕಣ್ಣೀರಿ'ನವರೆಗೆ ಈ ಮೂರು ಅಂಶಗಳು ಏಕಪ್ರಕಾರವಾಗಿ ಮೂಡಿವೆ. ಆದರ ಜೊತೆಗೆ ಕಾದಂಬರಿಯ ಸತ್ವವೂ ಪೋಷಕವಾಗಿ, ಕೆಲವೆಡೆ ಭಾಷೆ, ಸನ್ನಿವೇಶಗಳಲ್ಲಿಯ ನಾಟಕೀಯತೆ ಕಡಿಮೆಯಾಗಿ, ಮನಸ್ಸಿನ ಪದರುಗಳನ್ನೆಲ್ಲ ಅದು ಮುಟ್ಟಿಬರುವಂತಾಗಿದ್ದರೆ ಬಹುಶಃ ಈ ದಿಶೆಯಲ್ಲಿ ಅದರ ಕೈಹಿಡಿಪವರೇ ಇರುತ್ತಿರಲಿಲ್ಲವೇನೋ ಪ್ರಾರಂಭದಲ್ಲಿಯೇ 'ಸಂಧ್ಯಾರಾಗ ಪ್ರಶಸ್ತಿ' ಪಡೆದ ಅ. ನ ಕೃ. ಅವರ ಮುಂದಿನ ಎಲ್ಲ ಕಾದಂಬರಿಗಳೂ ಒಂದೇ ಉನ್ನತಮಟ್ಟದವಾಗಿರಲಿಲ್ಲ. ಸಾಹಿತ್ಯವನ್ನೇ ವ್ಯವಸಾಯವನ್ನಾಗಿ ಮಾಡಿಕೊಂಡಾಗ ಹಾಗಾಗುವದೂ

ಸಹಜ. ಆದರೆ ಎಂಥ ಕಡಿಮೆ ತರಗತಿಯ ಕಾದಂಬರಿಯಲ್ಲೂ ಅವರು ಮಾನವಹಿತ ನಿಷ್ಠೆಯನ್ನೂ, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದಿರುವದನ್ನು ನಾವು ಕಾಣಬಹುದು. ಅವರ ಇತ್ತೀಚಿನ ಸಾಮಾಜಿಕ ಕಾದಂಬರಿಗಳಲ್ಲಿಯ ವಸ್ತು–ಪಾತ್ರ–ಚಿತ್ರಣಗಳು 'ತಿರುಗಾ ಮುರುಗಾ ಹರಗೋಣ' ಎಂಬಂತಿದ್ದರೂ ಐತಿಹಾಸಿಕ ವಸ್ತುವನ್ನು ಅಳವಡಿಸಿಕೊಂಡು ಅರಳಿರುವ ಕೃತಿಗಳಲ್ಲಿ ಅವರ ಲೇಖನಿಗೆ ಕೆಲಮಟ್ಟಿಗೆ ಗರಿಮೂಡಿದೆಯೆಂದೇ ಹೇಳಬಹುದು. ಅವರು ಬರೆಬರೆದಂತೆ ಅವರ ಕೃತಿಗಳ ಬಗ್ಗೆ ವಾದವಿವಾದಗಳೂ ನಡೆಯುತ್ತಿದ್ದವು. ಆದರೂ ಅವರು ಬರೆಯುತ್ತಲೇ ಇದ್ದರು. ಅಂಥ ಜಿಗುಟುತನ ಅವರ ಸ್ವಭಾವದಲ್ಲಿಯೇ ಮೈಗೂಡಿತ್ತು. ಹೀಗೆ ಕನ್ನಡದಲ್ಲಿ ಕಾದಂಬರಿ ಸಾರ್ವಭೌಮ ಪದವಿಯನ್ನು ಪಡೆಯಲು ಕಾರಣರಾದ ನಾಲ್ಕೈದು ಜನ ಕಾದಂಬರಿಕಾರರಲ್ಲಿ ಅ. ನ. ಕೃ. ಸ್ಥಾನ ಹಿರಿಯದು. "ವಿಸ್ತಾರದಲ್ಲಿ, ವೈವಿಧ್ಯದಲ್ಲಿ, ಜನಪ್ರಿಯತೆಯಲ್ಲಿ ಈ ಸಾಹಿತ್ಯ ಪ್ರಕಾರ ಕಳೆದ ಮೂರು ದಶಕಗಳಲ್ಲಿ ಸಾಧಿಸಿದ ಪ್ರಗತಿ ಆಶ್ಚರ್ಯಕರವಾದದ್ದು. ಇಂಥ ಆಶ್ಚರ್ಯಕಾರಕವಾದ ಪ್ರಗತಿಯನ್ನು ಸಾಧ್ಯವಾಗಿಸಿದವರಲ್ಲಿ ಮೊದಲ ಸ್ಥಾನ ಕೃಷ್ಣರಾಯರದು" ಎಂದಿರುವ ಶ್ರೀ ವಿ. ಎಂ. ಇನಾಮದಾರರ ಮಾತು ಸತ್ಯವಾದದ್ದು.

ಕನ್ನಡದಲ್ಲಿ 'ಸಣ್ಣ ಕತೆ'ಗೆ ನೀರೆರೆದು ಅದಕ್ಕೆ ದೊಡ್ಡ ಬೆಲೆಯನ್ನು ತಂದುಕೊಟ್ಟ ಮೊದಲಿಗರಲ್ಲಿ ಅ. ನ. ಕೃ. ಒಬ್ಬರು. 'ಕಥಾಂಜಲಿ' 'ವಿಶ್ವವಾಣಿ'ಗಳ ಸಂಪಾದಕರಾಗಿಯೂ ಅವರು 'ಸಣ್ಣ ಕತೆ'ಯನ್ನು ಪೋಷಿಸಿದರು. ಅಂದು ಅವರು ಸಂಪಾದಿಸಿಕೊಟ್ಟ 'ಕಾಮನಬಿಲ್ಲು' (ಭಾಗ ೧–೨) ಕನ್ನಡ ಕಥಾ ಸಂಕಲನಗಳಲ್ಲಿ ಇಂದಿಗೂ ತನ್ನ ಬಣ್ಣವನ್ನು ಮೋಹಕವಾಗಿ ಉಳಿಸಿಕೊಂಡಿದೆ. ಕಾದಂಬರಿ ಪ್ರವಾಹದ ಸೆಳವಿನಲ್ಲಿಯೇ ಅವರು ಇರುತ್ತಿದ್ದರೂ ಆಗಾಗ ಸಣ್ಣ ಕತೆಯ ಸುಂದರ ನಡುಗಡ್ಡೆಯಲ್ಲಿ ಅವರು ದಣಿವಾರಿಸಿಕೊಳ್ಳುತ್ತಿದ್ದರು. ಸಣ್ಣ ಕತೆಯ ವಸ್ತುವಿನ ವಿಸ್ತಾರ–ವೈವಿಧ್ಯಗಳನ್ನು ಹೆಚ್ಚಿಸುವುದರಲ್ಲಿ ಅವರ ಹಿರಿಮೆ ಹೇಳಿಕೊಳ್ಳುವಂಥದು. ನಮ್ಮ ನಾಡಿನ 'ಕುಲರಸಿಕರ' 'ಕರ್ನಾಟಕ ಕಲಾವಿದರ' ವ್ಯಕ್ತಿಚಿತ್ರಗಳನ್ನೂ, ಅಲ್ಲಮಪ್ರಭು, ಕೈಲಾಸಂ, ಕಬೀರ, ವಿವೇಕಾನಂದ ಮೊದಲಾದ ಮಹಾನುಭಾವರ ಜೀವನ ಚರಿತ್ರೆಗಳನ್ನೂ ಅವರು ಅಭಿಮಾನದಿಂದಲೂ ಆದರದಿಂದಲೂ ಚಿತ್ರಿಸಿದ್ದಾರೆ. ನಾಟಕಗಳಲ್ಲಿ ಮೊದಲಿನಿಂದಲೂ ಆಧುನಿಕ ದೃಷ್ಟಿಯನ್ನು ಮೆರೆದಿದ್ದಾರೆ.

ಈಗ್ಗೆ ಎರಡು ದಶಕಗಳ ಹಿಂದೆ ಕನ್ನಡದಲ್ಲಿ ಬೀಸಿದ ಪ್ರಗತಿಶೀಲ ಸಾಹಿತ್ಯದ ಆಂದೋಲನಕ್ಕೆ ಅ. ನ. ಕೃ. ಅಧ್ವರ್ಯುಗಳಾಗಿ ನಿಂತರು. ಆಂದೋಲನ ಅಲ್ಪಾಯುಷಿಯಾಗಿ ಪರಿಣಮಿಸಿದರೂ ಅಂದಿನ ತರುಣ ಲೇಖಕರಲ್ಲಿ ಅದು ಹೊಸ ದೃಷ್ಟಿಕೋನವನ್ನು ಮೂಡಿಸಿತೆಂದು ಧಾರಾಳವಾಗಿ ಹೇಳಬಹುದು.

ಪ್ರಗತಿಶೀಲತೆ ಪ್ರಯೋಗಶೀಲತೆಗೂ ಕೆಲಮಟ್ಟಿಗೆ ಎಡೆಮಾಡಿಕೊಟ್ಟಿತು. 'ಪ್ರಗತಿಶೀಲ ಸಾಹಿತ್ಯ' 'ಮ್ಯಾಕ್ಸಿಂಗಾರ್ಕಿ' 'ಭಾರತೀಯ ಕಥಾ ಸಾಹಿತ್ಯ' ಇವು ಅ. ನ. ಕೃ. ಸಂಪಾದಿಸಿ ನೀಡಿದ ಆ ಕಾಲದ ಮಹತ್ವದ ಕೊಡುಗೆಗಳು. ಕನ್ನಡ ಸಾಹಿತ್ಯದ ವಿಕಾಸಕ್ಕೆ ಪ್ರಗತಿಶೀಲ ಸಾಹಿತ್ಯದ ಆಂದೋಲನದಿಂದ ಸಾಕಷ್ಟು ಸಹಾಯವಾಯಿತೆಂದೇ ಅ. ನ. ಕೃ. ಕೊನೆಯವರೆಗೂ ನಂಬಿದ್ದರು. ಅವರ ಕೃತಿಗಳಲ್ಲಿ ಮುಖ್ಯವಾಗಿ ಕಾದಂಬರಿಗಳ ಬಗ್ಗೆ ವಿಮರ್ಶಕರಿಂದ ಅಶ್ಲೀಲತೆಯ ಆರೋಪವನ್ನು ಅವರು ಆಗಾಗ ಎದುರಿಸಬೇಕಾಯಿತು. 'ಸಾಹಿತ್ಯ ಮತ್ತು ಕಾಮಪ್ರಚೋದನೆ' ಗ್ರಂಥದಲ್ಲಿ ಅದಕ್ಕೆ ಉತ್ತರ ನೀಡಲು ತಮ್ಮ ವಾದವನ್ನು ಎತ್ತಿಹಿಡಿಯಲು ಅವರು ಪ್ರಯತ್ನಿಸಿದ್ದಾರೆ. ಎಷ್ಟೋ ಪಿ. ಎಚ್. ಡಿ. ಪ್ರಬಂಧಗಳಿಗಾಗುವಷ್ಟು ವಿಷಯ ಸಂಗ್ರಹವನ್ನು ಅದರಲ್ಲಿ ಕೊಟ್ಟಿರುವುದಾಗಿಯೂ ಹೇಳಿಕೊಂಡಿದ್ದಾರೆ. ಈ ಬಗ್ಗೆ ತಮ್ಮ ಪ್ರತಿವಾದವನ್ನು ಮಂಡಿಸುತ್ತ ಶ್ರೀ ಕೆ. ಡಿ. ಕುರ್ತಕೋಟಿಯವರು "ಪ್ರಣಯದ ಬಗ್ಗೆ ಮುಚ್ಚುಮರೆಯಿಂದ ಮಾತಾಡುವದು ಸಭ್ಯ, ಬಿಚ್ಚಾಗಿ ಹೇಳುವದು ಅಶ್ಲೀಲ ಎಂಬ ವಾದವನ್ನು ತಳಹದಿಯಾಗಿಟ್ಟುಕೊಂಡು ಅವರು ಅದಕ್ಕೆ ಉತ್ತರ ಕೊಡುತ್ತಾರೆ. ಆದರೆ ಯಾವುದೇ ರೀತಿಯ ಭಾವಸಂಕರ ಅಶ್ಲೀಲವಾಗಿದೆ ಯೆಂಬುದನ್ನು ಮರೆಯಲಾಗದು. ಭಾವನೆಗಳ ಅಗ್ಗದ ಬಳಕೆ ಅಶ್ಲೀಲ ವಲ್ಲದೆ ಮತ್ತೇನು?" ಎಂದು ಕೇಳಿದ್ದಾರೆ. ಇತ್ತೀಚೆಗೆ ಪ್ರಕಟವಾದ 'ಭಾರತೀಯ ಕಲಾದರ್ಶನ' ಹಾಗೂ 'ಭಾರತೀಯ ಸಂಸ್ಕೃತಿ ದರ್ಶನ' ಎಂಬೆರಡು ಮಹತ್ವದ ಹೆಬ್ಬೊತ್ತಿಗೆಗಳು ಅ. ನ. ಕೃ. ಅವರ ಗ್ರಂಥ ಸಂಪಾದನಾ ಕಾರ್ಯದ ಉತ್ತಮಿಕೆಯನ್ನು ಎತ್ತಿ ತೋರಿಸುತ್ತಿವೆ,

ಬಾಲ್ಯದಲ್ಲಿ ಸ್ವಾಮಿ ವಿವೇಕಾನಂದರ ಜೀವನದಿಂದ ಸ್ಫೂರ್ತಿ ಪಡೆದ ಅ. ನ. ಕೃ. ಅವರಿಗೆ ವೀರಶೈವ ಸಾಹಿತ್ಯ ಸಂಸ್ಕೃತಿಗಳಲ್ಲಿ ಆಸ್ಥೆ ಹುಟ್ಟಿದುದು ಅಚ್ಚರಿಯ ಮಾತಲ್ಲ. ಆ ಸಾಹಿತ್ಯದಲ್ಲಿ ಕಂಡುಬರುವ 'ಕನ್ನಡತನ'ವನ್ನೂ ಪ್ರಗತಿಪರ ಧೋರಣೆಯನ್ನೂ ಅವರು ತಮ್ಮದನ್ನಾಗಿ ಮಾಡಿಕೊಂಡರು. 'ಬಸವಣ್ಣನವರ ಅಮೃತವಾಣಿ' 'ವೀರಶೈವ ಸಾಹಿತ್ಯ ಸಂಸ್ಕೃತಿ' ಗ್ರಂಥಗಳು ಅವರ ಶ್ರದ್ಧೆಯ ಫಲಗಳು. ಸಮಕಾಲೀನ ಸಾಹಿತ್ಯ ವಿಮರ್ಶೆಯನ್ನು ಇವರು ತಮ್ಮ 'ಸಾಹಿತ್ಯ ಮತ್ತು ಜೀವನ' 'ಸಾಹಿತ್ಯ ಮತ್ತು ಯುಗಧರ್ಮ', 'ಸಾಹಿತ್ಯ ಸಮಾರಾಧನೆ' 'ನಾಟಕ ಕಲೆ' ಇತ್ಯಾದಿ ಗ್ರಂಥಗಳಲ್ಲಿ ಕೊಡುತ್ತ ಬಂದಿದ್ದಾರೆ, ಇಲ್ಲಿಯೂ ಚರ್ಚೆಗೆ ಅವಕಾಶವಿಲ್ಲದಿಲ್ಲ. 'ಕಾವ್ಯ ಬರೆಯುವದು ಸುಲಭ....... ಗದ್ಯಕೆಟ್ಟರೆ ಪದ್ಯವಾಗುತ್ತದೆ........" ಇತ್ಯಾದಿ ಮಾತುಗಳು ಇದಕ್ಕೆ ಉದಾಹರಣೆಯಾಗಿದ್ದರೂ ಅವರು ಕವಿ–ಕಾವ್ಯದ್ವೇಷಿಗಳಲ್ಲ. ಉಮರನ ರುಬಾಯಿಯಾತನ್ನು ತಾವೂ ಪದ್ಯದಲ್ಲಿ ಅನುವಾದಿಸಲು ಹೆಣಗಿ

ರುವುದನ್ನು ನಾವು ಕಂಡಿದ್ದೇವೆ. ಕನ್ನಡದಲ್ಲಿ 'ಪ್ರಣಯ ಗೀತೆ'ಗಳ ಪ್ರಥಮ ಸಂಕಲನವನ್ನು ಸಂಪಾದಿಸಿಕೊಟ್ಟವರು ಅವರು ಎಂಬುದು ನಮ್ಮಲ್ಲಿ ಎಷ್ಟು ಜನರಿಗೆ ಗೊತ್ತಿದೆ? ಅವರೇ ಸಂಪಾದಿಸಿರುವ 'ರಸಋಷಿ' ಪ್ರಗತಿಶೀಲ ಕವನಗಳ ಒಂದು ಒಳ್ಳೆಯ ಕವನ ಸಂಕಲನ. ಶ್ರೀ ಗೋಕಾಕರು ಅದನ್ನು ಕುರಿತು ಹೀಗೆ ಬರೆದಿದ್ದಾರೆ:

"The 'progressive' movement of the thirties gathered strength about this time and left a strongimpress on the literature of this period. It also became a pivotal point for the rise of the younger literary generation. 'Rasarishi' was a collection of lyrics which testified to their new awareness" ['*Contemporary Indian Literature*', page: 101]

ಕನ್ನಡ ನಾಡು, ನುಡಿ, ಸಂಸ್ಕೃತಿಗೆ ಧಕ್ಕೆಯೊದಗುವ ಪ್ರಸಂಗಗಳು ಬಂದಾಗಲೆಲ್ಲ ಅ. ನ. ಕೃ. ಧೀರತನದಿಂದ ಮುಂಚೂಣಿಯಲ್ಲಿ ನಿಂತು ತಮ್ಮ ಕತ್ತಿಯನ್ನು ಝಳಪಿಸಿದ್ದಾರೆ. ಕನ್ನಡಕ್ಕೆ ಅಪಚಾರ ಅವಮಾನ ಯಾರಿಂದಲೇ ಆದರೂ ಅದನ್ನವರು ಸಹಿಸರು. ಹಿಂದೆ ಅವರು 'ಕನ್ನಡನುಡಿ' 'ಸಾಹಿತ್ಯ ಪರಿಷತ್ಪತ್ರಿಕೆ'ಗಳ ಸಂಪಾದಕರಾಗಿದ್ದಾಗ ಹಿಂದೀ ಭಾಷೆಯ ದಾಳಿಯನ್ನು ಪ್ರತಿಭಟಿಸಿ ನಿಂತ ಪ್ರಸಂಗವನ್ನು ನಾವಿಲ್ಲಿ ನೆನೆದುಕೊಳ್ಳಬಹುದು. ನಾಡಿನ ಏಕೀಕರಣಕ್ಕಾಗಿ ಅವರು ಗೆಳೆಯರೊಡನೆ ಅಖಂಡ ಕರ್ನಾಟಕವನ್ನೆಲ್ಲ ಸುತ್ತಾಡಿ ಜನತೆಯಲ್ಲಿ ಜಾಗೃತಿಯನ್ನುಂಟುಮಾಡಿದರು. 'ಅಖಂಡ ಕರ್ನಾಟಕ,' 'ಕನ್ನಡದ ದಾರಿ,' 'ಕನ್ನಡದ ಹಿತಚಿಂತನೆ' ಮುಂತಾದ ಗ್ರಂಥಗಳು ಅವರ ಕನ್ನಡದ ಹೋರಾಟವನ್ನು ಚಿತ್ರಿಸುತ್ತವೆ. "ಕನ್ನಡನಾಡು ಒಂದಾದ ಮೇಲೂ 'ಕನ್ನಡ ಜನರ ಮನಸ್ಸನ್ನು ಒಡೆಯುವ ಪ್ರಯತ್ನ ಪುನಃ ನಡೆದರೆ ಆಶ್ಚರ್ಯವೇನಲ್ಲ. ಮೈಸೂರು ಬೇರೆ, ಉತ್ತರ ಕರ್ನಾಟಕ ಬೇರೆ ಎನ್ನುವಂಥ ಚಳುವಳಿ ಮತ್ತೆ ನಡೆದರೆ ಸೋಜಿಗವೇನಲ್ಲ" ಎಂದು ಅವರು ಇತ್ತೀಚೆಗೆ ತಮ್ಮ ಭಾಷಣಗಳಲ್ಲಿ ಎಚ್ಚರಿಕೆ ಕೊಡುತ್ತಲೇ ಇದ್ದರು. ಅ. ನ. ಕೃ. ಅವರ ಮಾತಿನಲ್ಲಿ, ಬರಹದಲ್ಲಿ, ಸಾಹಿತ್ಯ ಸೃಷ್ಟಿಯಲ್ಲಿ ಒಮ್ಮೊಮ್ಮೆ ಪರಸ್ಪರ ವಿರೋಧಾಭಾಸವನ್ನು ನಾವು ಕಂಡಿರಬಹುದು. ಆದರೆ ಕನ್ನಡದ ಬಗೆಗಿರುವ ಅವರ ಅಭಿಮಾನ, ಕೆಚ್ಚು ಯಾವಾಗಲೂ ಒಂದೇ ಬಗೆಯಾಗಿದ್ದಿತು. ಈ ಹುಟ್ಟು ಸೇನಾನಿಯ ಬಗ್ಗೆ ಶ್ರೀ ಜಿ. ಪಿ. ರಾಜರತ್ನಂ ಅವರು ಒಂದೆಡೆ ಬರೆಯುತ್ತ "ಈ ನಲವತ್ತು ವರ್ಷಗಳಕಾಲದಲ್ಲಿ ಅವರು ಎದುರಿಸಬೇಕಾಗಿ ಬಂದಿರುವ ವಿರೋಧಗಳಿಗೆ ಬೇರಾರಾದರೂ ಸಿಕ್ಕಿದ್ದರೆ ಪುಡಿ ಪುಡಿಯಾಗಿ ಹೋಗುತ್ತಿದ್ದರು. ಹಾಗಾಗಿ ಕೃಷ್ಣರಾಯರ ಕೆಲವು ಮುಖಗಳನ್ನು ಸಹಿಸದೆ ಆಡಿ

ಕೊಳ್ಳುವವರು ಕೂಡ ಈ ಧೀರ ಮುಖವನ್ನು ನಿಸ್ಸಂಕೋಚವಾಗಿ ಮೆಚ್ಚಿಕೊಳ್ಳುತ್ತಾರೆ" ಎಂದು ಮುಕ್ತಮನಸ್ಸಿನ ಪ್ರಶಂಸೆ ನೀಡಿದ್ದಾರೆ.

ಎರಡು ವರ್ಷಗಳ ಹಿಂದೆ ಬೆಂಗಳೂರಿಗೆ ಹೋದಾಗ 'ಅನ್ನಪೂರ್ಣ'ದಲ್ಲಿ ಮತ್ತೊಮ್ಮೆ ಅ. ನ. ಕೃ. ಅವರನ್ನು ಕಂಡೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವಿಶೇಷೋಪನ್ಯಾಸಗಳನ್ನು ಕೊಡಲು ಅವರಿಗೆ ಆಮಂತ್ರಣವಿತ್ತು. ಲಲಿತಕಲೆಗಳನ್ನು ಕುರಿತು ಉಪನ್ಯಾಸವೀಯಲು ಅವರು ಒಪ್ಪಿಕೊಂಡಿದ್ದರು. ಆಗಲೇ ಅವರ ಆರೋಗ್ಯ ಕ್ಷೀಣಿಸುತ್ತಿರುವದನ್ನು ಕಂಡು ನನಗೆ ಮನಸ್ಸಿನಲ್ಲಿಯೇ ಹರಳುಕಡಿದಂತಾಗಿತ್ತು. 'ಅನ್ನಪೂರ್ಣ'ದ ಈ ಅಖಂಡ ಚೈತನ್ಯನಿಧಿ ಇಂದಿಲ್ಲವೆನಿಸಿದರೂ ಅವರು ಪ್ರೀತಿಸಿದ ಈ ನಾಡಿನಲ್ಲಿ, ಜನತೆಯ ಹೃದಯದಲ್ಲಿ ಅ. ನ. ಕೃ. ಹೆಸರು ಚಿರಂತನವಾಗಿ ಪ್ರತಿಧ್ವನಿಗೊಳ್ಳುತ್ತದೆ.

★ ಚೆನ್ನವೀರ ಕಣವಿ

ಪಂಪಭಾರತದ ಒಂದು ಪದ್ಯ

ಕೆಲ ದಿನಗಳ ಹಿಂದೆ "ಕಮ್ಮಟದ ಕಿಡಿಗಳು" ಎಂಬುದರ ಅಂಗವಾಗಿ 'ಮಾಳಜಿ'ಯು ಬಗ್ಗೆ ಒಂದು ವಿಚಾರವನ್ನು ಸಹೃದಯು ವಿದ್ವಾಂಸರ ಮುಂದೆ ಮಂಡಿಸಿದೆ.[೧] ಆ ಲೇಖನದಲ್ಲಿ ಉದ್ಧರಿಸಿದ ಪಂಪಮಹಾಕವಿಯ 'ವಿಕ್ರಮಾರ್ಜುನ ವಿಜಯು'ದ ಪದ್ಯ :

ತೊಳಗುವ ಬಾಳ್ ತಟಿತ್ತತಿಃಪ ಕಕ್ಕಡೆ ಬುಂಭುಕದೊಳ್ ತಗುಳ್ದ ಪ |
ಜ್ಜಳಿಸುವ ಪಂಚರಾಯುಧ ಮಂಗುರ್ವಿಸುವಾವುತಿ ಪೂಸಿದಂತಿರಿ ||
ಟ್ಟಳಮಮರ್ದಿರ್ದ ಮಾಳಜಿಗೆ ಪಕ್ಕರೆಯಿಕ್ಕಿದ ಜಾಯಿಲಂ ಭಯಂ
ಗೊಳಿಸೆ ಕಡಂಗಿ ತಾಗಿದುದಸುಂಗೊಳೆ ತುಂಗ ತುರಂಗ ಸಾಧನಂ ||

(ವಿ. ವಿ. ಆ. ೧೦–೨೬)

ಎಂಬುದರ ವಿಸ್ತೃತವಿಮರ್ಶೆ ಬೇರೊಂದು ಲೇಖನದ ವಿಷಯು ಎಂದೂ ಬರೆದಿದ್ದೆ.[೨] ಆ ವಿಸ್ತೃತ ವಿಮರ್ಶೆಯನ್ನೀಗ ಸಾದರಪಡಿಸಿರುವೆ. ಈ ಪದ್ಯದಲ್ಲಿ ಕೆಲವು ಕಠಿಣ ಹಾಗೂ ಅಪ್ರಚಲಿತ (ಸದ್ಯ) ಶಬ್ದಗಳಿವೆ. ಕಾರಣ ಅವುಗಳನ್ನು ಮೊದಲು ಅರ್ಥಯಿಸಿದರೆ, ಪದ್ಯದ ಭಾವವು ಅನಂತರದಲ್ಲಿ ಕೆನೆಹಾಲುಕಡೆದರೆ ತೇಲಿ ಬರುವ ನವನೀತದ ಹಾಗೆ ತಂತಾನೆ ತೇಲಿ ಬರುತ್ತದೆ. ಆ ಶಬ್ದಗಳೆಂದರೆ: (೧) ಕಕ್ಕಡೆ (೨) ಬುಂಭುಕ (೩) ಪಂಚರಾಯುಧ (೪) ಆವುತಿ (೫) ಮಾಳಜಿಗೆ ಮತ್ತು ೬ ನೆಯದಾಗಿ 'ಜಾಯಿಲ'. ಈ ಎಲ್ಲ ಶಬ್ದಗಳ ಅರ್ಥ ಹಾಗೂ ನಿಷ್ಪತ್ತಿಯು ವಿಚಾರಗಳು ಈ ಲೇಖನದ ವಿಶೇಷಾಂಗ.

೧. ಕಕ್ಕಡೆ :— ಈಗ ತಿಳಿದಮಟ್ಟಿಗೆ ಇದೊಂದು ಆಯುಧ ವಿಶೇಷ. ಆದರೆ ಕಲ್ಬುರ್ಗಿ, ವಿಜಾಪೂರ ಮೊದಲಾದ ಉತ್ತರ ಕರ್ನಾಟಕ ಪ್ರದೇಶಗಳಲ್ಲಿ ದೀಪವು ದೊಡ್ಡದಾಗಿ ಉರಿಯುತ್ತಿರುವಾಗ ಅದನ್ನು ಕಕ್ಕಡ ಕಕಡs ಎಂದು ಮುಂತಾಗಿ ರೂಢಿಮಾತಿನಲ್ಲಿ ದೀಪದ ವಿಶೇಷ ರೀತಿಗೆ ಜನರು ಹೇಳುವುದುಂಟು. ಈ ಅರ್ಥಕ್ಕೆ ಮರಾಠಿಯು 'ಕಾಕಡಾ' ಕಾರಣವಿರಬಹುದು. ಇದು ಮಹಾರಾಷ್ಟ್ರೀ ಪ್ರಾಕೃತ ಶಬ್ದ ಎಂಬುದರಲ್ಲಿ ಸಂಶಯುವಿಲ್ಲ.

---

೧. ಪ್ರ. ಕ. ಸಂ ೪೯– ಸಂಚಿಕೆ ೩.

೨. ಅದೇ ಪುಟ ೧೬೩ ಅಡಿ ಟಿಪ್ಪಣಿ ೨೫.

ಇಂದಿನ ಮಹಾರಾಷ್ಟ್ರದ ಬಹುಭಾಗ ಪಂಪನ ಕಾಲಕ್ಕೆ ಕರ್ನಾಟಕ ಇಲ್ಲವೇ ಕರ್ನಾಟಕಾಂತರ್ಗತವಾಗಿತ್ತೆಂಬುದು ಸುವಿದಿತ. ಈ ಸಂದರ್ಭದಲ್ಲಿ ಪಂಪನಾಶ್ರಯದಾತರಾದ ವೇಮುಲವಾಡದ ಚಾಳುಕ್ಯರ ಪರಭಣಿ ತಾಮ್ರಶಾಸನವನ್ನು ನೆನಸಿಕೊಂಡರೆ ಸಾಕು. ಕಾರಣ 'ಕಾಕಡ'ದಿಂದ ಬಂದ 'ಕಕ್ಕಡೆ' ಎಂದರೆ ಅದು ಒಂದು ದೀಪ ವಿಶೇಷ. ಬಟ್ಟೆಯಿಂದ ಎಂದರೆ ಬಟ್ಟೆಯ ಹುರಿಯಿಂದ ಮಾಡಲಾದ ಒಂದು ಬಗೆಯ ಉರಿಯುವ ವಸ್ತು; ಇದನ್ನು ಇಂದಿಗೂ ನಾವು ತುಳಜಾಪುರದ ಅಂಬಾಭವಾನಿಯ ಭಕ್ತರ ಮನೆಯಲ್ಲಿ ಕಾಣಬಹುದು. ವಿಶೇಷವಾಗಿ ಅವರು 'ಗೊಂದಣ'[೩] ಹಾಕಿಸಿದಾಗ ಆ ಸಂಭ್ರಮದ ಕಾರ್ಯಕ್ಕೆ ಆಹ್ವಾನಿಸಿದ ಗೊಂದಣಿಗ ಅಂದಿನ ರಾತ್ರಿಯಲ್ಲಿ ಕತೆ ಹೇಳುವಾಗ್ಗ ಇದನ್ನು ಕೈಯಲ್ಲಿ ಹಿಡಿದಿರುತ್ತಾನೆ. ಇದರ ಪೂಜೆ ಇತ್ಯಾದಿಗಳು ಜರುಗಿರುತ್ತವೆ–ತತ್ಪೂರ್ವದಲ್ಲಿ. ಬಿಡಿದಿನಗಳಲ್ಲೂ ಕೂಡ ಗೊಂದಲಿಗರು ಒಮ್ಮೊಮ್ಮೆ ಯಾಚನೆಗೆ ಹೊರಟಾಗ ಇದನ್ನು ಕೈಯಲ್ಲಿ ಹಿಡಿದುಕೊಂಡೇ ಹೊರಟಿರುತ್ತಾರೆ; ಇದಕ್ಕಾಗಿ ಅವರು ಹಳೆಯ ಬಟ್ಟೆಯನ್ನು ಸಹ ಯಾಚಿಸುವುದುಂಟು. ಕಲ್ಬುರ್ಗಿ ಸೋಲಾಪುರ, ವಿಜಾಪುರ ಮತ್ತು ಉಸ್ಮಾನಾಬಾದ ಜಿಲ್ಲೆಗಳಲ್ಲಿ ಈ ದೇವಿಯ ಭಕ್ತ ಜನಾಂಗ ಪ್ರೊಂದಿದ್ದು ಅದನ್ನು ಗೊಂದಲಿಗರೆಂದು ಕರೆಯುತ್ತಾರೆ. ಕನ್ನಡ ಹಾಗೂ ಮರಾಠಿ ಎರಡೂ ಭಾಷೆಗಳನ್ನು ಅವರು ಬಳಸುತ್ತಾರೆ. ತೆಲುಗಿನಲ್ಲಿ ಬಹು ಕಾಲದಿಂದ 'ಕಾಗಡ' ಎಂದು ಬಳಕೆಯಲ್ಲಿದೆ.

೨ **ಬುಂಭುಕ :** ಕುಚ್ಚು. ಗೊಂಚಲು[೪] ಈ ಅರ್ಥದಲ್ಲಿ ಎರಡು ಕಡೆಯಲ್ಲಿ ಪಂಪನು ಈ ಪದವನ್ನು ಬಳಸಿದುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದರೆ ಎಲ್ಲ ಕಡೆಗಳಲ್ಲೂ ಈ ಅರ್ಥ ಹೊಂದುವದಿಲ್ಲ. ಆದುದರಿಂದಲೇ ಶಾಸನಗಳಲ್ಲಿ ಬಂದಿರುವ ಈ ಪದಕ್ಕೆ ಅರ್ಥವನ್ನು ಹೇಳುವಾಗ್ಗ ಮಹಾಮಹೋಪಾಧ್ಯಾಯರಾದ ದಿ. ರಾ. ನರಸಿಂಹಾಚಾರ್ ಅವರು ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಿದ್ದಾರೆ.[೫] ಅರ್ಥಾತ 'ಕುಚ್ಚು ಅಥವಾ ಗೊಂಚಲು' ಎಂಬ ಅರ್ಥ ಆ ಪ್ರಯೋಗಗಳಿಗೆ ಹೊಂದುವದಿಲ್ಲವೆಂಬುದು ಸ್ಪಷ್ಟ. ಈಗ ಬಳಕೆಯಲ್ಲಿ ನಿಂತು ಹೋದ ಈ ಶಬ್ದ, ೧೦–೧೧

೩. ಗೊಂದಣ:- ತುಳಜಾಪುರದ ಅಂಬಾಭವಾನಿಯನ್ನು ಕುಲದೇವತೆಯಾಗಿ ಉಳ್ಳವರ ಮನೆತನಗಳಲ್ಲಿ ಮದುವೆ, ಮುಂಜಿವೆ ಮುಂತಾದ ಶುಭಕಾರ್ಯಗಳು ನೆರವೇರಿದಾಗ ಕೊನೆಯಲ್ಲಿ ಆ ದೇವತೆಯ ಪೂಜೆಯನ್ನು ಮಾಡುತ್ತಾರೆ, ಅದಕ್ಕೆ 'ಗೊಂದಣ' ಇಲ್ಲವೆ 'ಗೊಂದಲ' ಹಾಕಿಸುವುದು ಎಂದು ಹೇಳುತ್ತಾರೆ.

೪. 'ಪಂಪ ಭಾರತ' ಪುಟ ೪೭೫.

೫. "ಶಾಸನ ಪದ್ಯಮಂಜರಿ"—ಟಿಪ್ಪಣಿ ಪು. ೨೬೭.

ನೆಯ ಶತಮಾನಗಳಲ್ಲಿ ಕನ್ನಡನಾಡಿನ ಜನಸಾಮಾನ್ಯರ ಬಳಕೆಯಲ್ಲಿದ್ದಿತೆಂಬುದು ಕೆಲ ಶಾಸನಗಳು ಮತ್ತು ಪಂಪ, ರನ್ನರ ಕಾವ್ಯಗಳಿಂದ ನಿಶ್ಚಿತವಾಗುತ್ತದೆ. ಪಂಪನು 'ಆದಿಪುರಾಣ' ಹಾಗೂ 'ವಿಕ್ರಮಾರ್ಜುನ ವಿಜಯ' ಎರಡರಲ್ಲೂ ಈ ಪದವನ್ನು ಪ್ರಯೋಗಿಸಿದ್ದಾನೆ. ಆದಿಪುರಾಣದಲ್ಲಿ ಒಂದೆಡೆ ಬಳಸಿದ್ದರೆ ವಿಕ್ರಮಾರ್ಜುನ ವಿಜಯದಲ್ಲಿ ಎರಡು ಕಡೆ ಬಳಸಿದ್ದಾನೆ. ವಿಕ್ರಮಾರ್ಜುನ ವಿಜಯದಲ್ಲಿಯ ಪ್ರಯೋಗಗಳನ್ನೇ ನೋಡಿದರೂ ಇದನ್ನು ಎರಡು ಅರ್ಥದಲ್ಲಿ ಪ್ರಯೋಗಿಸಿದಂತೆ ತೋರುತ್ತದೆ. ದ್ರೌಪದಿಯ ಸ್ವಯಂವರ ಮಂಟಪವನ್ನು ನಿರ್ಮಾಣಮಾಡಿದ ಸಂದರ್ಭದಲ್ಲಿ "ಮುತ್ತಿನ ಮಂಡವಿಗೆಗಳನೆಡೆಯಱದೆತ್ತಿಸಿ ಪೊನ್ನ ಮಾಂಗಾಯ ಗೊಂಚಲ್ಗಳುಮಂ ಮುತ್ತಿನ ಬುಂಭುಕಂಗಳುಮನೆೞಲೆ ಕಟ್ಟಿಸಿ"[1] ಎಂಬ ಪ್ರಯೋಗಬರುತ್ತದೆ. 'ಮುತ್ತಿನಬುಂಭುಕ' ಎನ್ನುವದರಿಂದ ಮುತ್ತಿನ ಕುಚ್ಚು ಇಲ್ಲವೆ ಮುತ್ತಿನ ಗೊಂಚಲು ಎಂದು ನಿಸ್ಸಂದೇಹವಾಗಿ ಹೇಳಬಹುದು. ಆದರೆ ನಮ್ಮ ಮುಂದಿರುವ ಪದ್ಯದಲ್ಲಿ ಬರುವ 'ಬುಂಭುಕದೊಳ್ ತಗುಳ್ದು' ಎಂಬಲ್ಲಿ ಹೀಗೆ 'ಕುಚ್ಚು' ಇಲ್ಲವೆ 'ಗೊಂಚಲು' ಎಂದು ಅರ್ಥೈಸಲು ಕಷ್ಟಕರವಾಗಿ ತೋರುತ್ತದೆ. ಏಕೆಂದರೆ, ಏತರ ಕುಚ್ಚು ಅಥವಾ ಏತರ ಗೊಂಚಲು ಎಂಬ ಪ್ರಶ್ನೆ ಸಶೇಷ. ಇನ್ನು 'ಆದಿಪುರಾಣ'ದ ಪ್ರಯೋಗ[2] 'ಕುಚ್ಚು' 'ಗೊಂಚಲು' ಎಂಬ ಅರ್ಥವುಳ್ಳದ್ದಾದರೆ ರನ್ನನ 'ಗದಾಯುದ್ಧ'ದ ಪ್ರಯೋಗ[3] ಅದಕ್ಕೆ ವ್ಯತಿರಿಕ್ತವಾಗಿದೆ. ಶಾಸನಗಳಲ್ಲಿ ಬರುವ ಪ್ರಯೋಗಗಳನ್ನು ನೋಡಿದರೂ ಇದೇ ವ್ಯಕ್ತವಾಗುತ್ತದೆ. ಕೆಲ ಪ್ರಯೋಗಗಳನ್ನೀಗವಲೋಕಿಸೋಣ :

ಬಳವದರಾತಿಸೇನೆ ಕಿಡೆ ವಾಜಿಬಳಂ ಪೆಱಪಿಂಗೆ ಹಸ್ತಿಸಂ ।
ಕುಳಮುಳಿರ್ವಳ್ಕಿ ಬಳ್ಕಿ ತನಗಾಂತಧಿಕೋಗ್ರವಿರೋಧಿಸಾಧನಂ ॥

---

೧. ಪಂಪಭಾರತ, ಆಶ್ವಾಸ ೩ ಪುಟ ೭೯ (ಕ. ಸಾ. ಪ. ಮುದ್ರಣ).

೨. 'ಆದಿಪುರಾಣ'ದಲ್ಲಿ ನಾಭಿರಾಜನ ವಿವಾಹ ವೇದಿಕೆಯನ್ನು ವರ್ಣಿಸುವಲ್ಲಿ ಈ ಪದ ಪ್ರಯೋಗವು ಬರುತ್ತದೆ: ವಧೂವರರ ರಾಗಾಂಕುರಂಗಳಿರ್ಪಂತಿರ್ದ ರತ್ನ ಪ್ರದೀಪಂಗಳುಮೆಸೆಯೆ ಬಳಸಿದ ಚೆಂಬೊನ್ನ ಮಾಂಗಾಯ ಗೊಂಚಲ್ಗಳ ಪೊಂದಳಿರ ತೊಂಗಲ್ಗಳ ಸುತ್ತುಂಗೊಂಡ ಸುರಿಗೆಯ ಮುತ್ತಿನ ಬುಂಭುಕಂಗಳ ನಡುವೆ—ಆಶ್ವಾಸ ೮ ಪದ್ಯ ೧೫ ವ.

೩. ಮನೆ ಪೆಣ್ಣುಂ ಮಕ್ಕಳೆಂಬೀ ನುಡಿ ಪುಸಿ ನಿಜ ಕೃಷ್ಣಾಂಗದೊಳ್ ಪುಟ್ಟಿ ಕೀರ್ತ್ಯಂ ।
ಗನೆ ಶುಭ್ರಚ್ಛಾಯೆಯಾದಳ್ ಬಳೆದಳನಿಲ ಮಾರ್ಗಂಬರಂ ಸರ್ಬಿದಳ್ ದಿ ॥
ಗ್ವನಿತಾ ಸಂದೋಹಮಂ ತಾಪಿನಮುಡಿಯಿಡುವಳ್ ಗೋತ್ರಶೈಲಾಗ್ರದೊಳ್ ಮ ।
ಜ್ಜನಪ್ಯೋಮಾ ಮಾಪಗಾವಾರಿಯೊಳೆನೆ ಪಿರಿದುಂ ಬುಂಭುಕಂ ಸಾಹಸಾಂಕಂ ॥
—ಗದಾಯುದ್ಧ, ೩ ೧೦-೧೨ ನೆಯ ಪದ್ಯ

ವಳಿಕೆ ಬೞಲ್ದು ನುರ್ಗಿ ಪಲರಂ ತವೆಕೊಂದು ಮಹಾಜಿರಂಗದೊಳ್ |
ತೊಲಗದ ಗಂಡಸಾಂತಿೞಿಯೆ ಭುಂಭುಕಮುಮ್ ತವಾದುದೆತ್ತಲುಂ ||[೯]

—ಸೊರಬ ೧೮೪, ಕ್ರಿ. ಶ. ೧೦೩೨

'ಭುಂಭುಕಮ್' ಎಂಬಲ್ಲಿ ಆದಿಯ 'ಬು' ಕಾರ ಮಹಾಪ್ರಾಣವಾಗಿದೆ. ಇಲ್ಲಂತೂ 'ಕುಚ್ಚು' 'ಗೊಂಚಲು' ಎಂಬ ಅರ್ಥವು ಹೊಂದುವುದಿಲ್ಲ. ಈ ಶಾಸನದಲ್ಲಿ ಚಾಳುಕ್ಯ ರಾಜನಾದ ೧ನೆಯ ಜಯಸಿಂಹನ ಆಳಿಕೆಯಲ್ಲಿ ಮಹಾ ಸಾಮಂತಾಧಿಪತಿ ಆಲಯ್ಯನು ಕುಪ್ಪಗಡ್ಡೆಯಲ್ಲಿ ಮಂಡಲಿಕ ಕುಂದಮನೊಡನೆ ಕಾದಿ ಸಾಯಲು ಆತನ ಪುತ್ರ ಜಯಸಿಂಗನು ತಂದೆಯ ಹೆಸರಿನಲ್ಲಿ ಆಲೇಶ್ವರ ದೇವಸ್ಥಾನವನ್ನು ಕಟ್ಟಿಸಿ ಭೂಮಿಯನ್ನು ದತ್ತಿಬಿಟ್ಟುದಾಗಿ ಹೇಳಿದೆ.[೧೦] ಈ ಆಲಯ್ಯನ ಶೌರ್ಯವನ್ನೆ ಮೇಲಿನ ಪದ್ಯವೊಳಗೊಂಡಿದೆ. ಆಲಯ್ಯನು ಯುದ್ಧದಲ್ಲಿ ಎದುರಿಸಿದ ಸೈನ್ಯದಲ್ಲಿ ನುಗ್ಗಿ ಅಚಲ ಪೌರುಷದಿಂದ ಹೋರಾಡಿ ಹಲವರನ್ನು ಕೊಂದಿದ್ದಾನೆ: ಕೊನೆಗೆ ತಾನೂ ಮರಣಹೊಂದಿದ್ದಾನೆ. ಅವನು ಹೀಗೆ 'ಅಂತು ಇಱಿಯಲ್ ಭುಂಭುಕ (ಬುಂಭುಕ) ಮಾದುದೆತ್ತಲುಂ.' ಹೀಗೆಂದರೆ 'ಕೋಲಾಹಲ' ಅಥವಾ 'ಚೀತ್ಕಾರಧ್ವನಿ' ರಣರಂಗದ ತುಂಬ ಆಯಿತೆಂದು ತಾನೇ ಅರ್ಥ? ಅಥವಾ ಅವರಿವರ ಗರ್ಜನೆಗಳಿಂದ ಯುದ್ಧರಂಗವು ವಿಶೇಷ ಧ್ವನಿಯಿಂದ ಕೂಡಿ ವಿಸ್ಮಯ ಇಲ್ಲವೆ ಆಶ್ಚರ್ಯಕ್ಕೆಡೆಯಾಯಿತು. ವಿಸ್ಮೃತಿಯು ವಿಸ್ಮಯದಿಂದ ವಿಸ್ತೃತವಾಯಿತು. ಇದೇ ಅರ್ಥದಲ್ಲಿ ಕೆಲ ಕಾಲವಿದ್ದು ಮುಂದೆ ಅದು ಬರಿ 'ವಿಸ್ತೃತ' ಎಂಬ ಅರ್ಥವನ್ನು ತಳೆದಂತೆ ತೋರುತ್ತದೆ. 'ಭುವನ ಬುಂಭುಕ' ಎಂಬ ಪದಗುಂಫನವೊಂದೇರ್ಪಟ್ಟು ಕರ್ಣಪಾರ್ಯ (೧೧೪೦) ನೇಮಿಚಂದ್ರ (೧೧೭೦) ಮಧುರ[೧೧] (೧೩೮೫) ಮೊದಲಾದವರ ಕಾವ್ಯದಲ್ಲಿ ಕಾಣದೊರೆಯುತ್ತದೆ. ಆದರೆ ಶಾಸನಗಳಲ್ಲಿ ಅದು ನಮಗೆ 'ಬುಂಭುಕ' 'ಭುಂಭುಕ' ಎಂಬ ರೂಪದಲ್ಲಿ ವಿಶೇಷವಾಗಿ ಕಾಣ ದೊರೆಯುತ್ತದೆ. 'ವಿಸ್ತೃತ' ಎಂಬ ಅರ್ಥವನ್ನೆ ಉಳ್ಳದ್ದಾಗಿದೆ:

---

೯. ಶಾಸನಪದ್ಯಮಂಜರಿ (ಸಂ- ದಿ। ರಾ. ನರಸಿಂಹಾಚಾರ್) ಪುಟ ೯.

೧೦. ಅದೇ.

೧೧. 'ಬುಂಭುಕ। ಭುಂಭುಕ' ಎಂದು ಇರಬೇಕಾದುದು ಮಧುರನ 'ಧರ್ಮನಾಥ ಪುರಾಣ'ದಲ್ಲಿ "ಚುಂಭುಕ" ಆದ ವಿಷಯವನ್ನು ಪ್ರೊ. ಡಿ. ಎಲ್. ನರಸಿಂಹಾಚಾರ್ ಅವರು ತೋರಿಸಿದ್ದಾರೆ— 'ಕನ್ನಡ ಗ್ರಂಥ ಸಂಪಾದನೆ' ಪುಟ ೯೦.

೨) ಭುಜಬಳ ಸಾಂತರ ನೃಪತಿಯು |
ಭುಜ ಬಳದಳವುಂ ಪ್ರತಾಪಮುಂ ಶೂರತೆಯುಂ ||
ವಿಜಿಗೀಷು ವೃತ್ತಿಯುಂ ನಿಜ |
ವಿಜಯಮುಮೀಲೋಕದೊಳಗೆ **ಭುಂಭುಕನೆನಿಕುಂ** ||[೧೨]

೩) 'ಸಕಳೋರ್ವೀಸ್ತುತಮಪ್ಪ ಧರ್ಮಮನಿದಂ ಕಾಪಂ ಜಗೈಶ್ವರ್ಯ
ಭುಂಭುಕನಕ್ಕುಂ'[೧೩]

೪) ಕರಿತುರಗಸ್ಯಂದನರಣ
ಪರಿಣತಿಯೊಳು ಚಾಪವಾದಿಯಾಗಿರೆ ಮೂವ
ತ್ತೆರಡಱ ಮುಕ್ತಚತುಷ್ಟಯ
ಪರಿಣತಿಯೊಳು ತಾನೆ **ಭುವನಭುಂಭುಕನಾದಂ** ||[೧೪]

ಸಾರಾಂಶವೇನೆಂದರೆ ಈ ಎಲ್ಲ ಪ್ರಯೋಗಗಳನ್ನು ಕಂಡ ನಮಗೆ 'ಬುಂಭುಕ' (ಭುಂಭುಕ) ಎರಡು ಭಿನ್ನಾರ್ಥಗಳನ್ನುಳ್ಳ ಒಂದು ಸಮಸ್ತಪದವೆಂದು ತೋರುತ್ತದೆ. ಪ್ರಾಯಃ ಅದರ ಮೂಲ ಈ ಪ್ರಾಕೃತ ಶಬ್ದಗಳಲ್ಲಿರಬಹುದು;

(ಅ) ಬುಂಬು ಅ (ವೃಂದ, ಸಮೂಹ = ಕುಚ್ಚು | ಗೊಂಚಲು + ಬುಕ್ಕ (ವಿಸ್ಮೃತ; ಗಲಿಬಿಲಿಯಿಂದ ಕೂಡಿದ)[೧೫] ಬುಂಭುಕ,—ಎಂದರೆ ಇನಿತು ಸ್ವನಗೈವ ಕುಚ್ಚು. 'ಮುತ್ತಿನ ಬುಂಭುಕ' ವೆಂದರೆ (ಗಾಳಿ ಬಿಟ್ಟಾಗ) ಒಂದ ಕ್ಕೊಂದು ತಾಕಿ ಧ್ವನಿಗೈವ ಮುತ್ತಿನ ಗೊಂಚಲು ಎಂದರ್ಥ.

(ಆ) ಬುಂಬು (ಚಿಲ್ಲಾಹಟ=ಚೀತ್ಕಾರ) + ಬುಕ್ಕ (ಗರ್ಜನ ಕರನಾ= ಗರ್ಜನೆ[೧೬]) > ಬುಂಭುಕ = ಚೀತ್ಕಾರದ ಗರ್ಜನೆಗಳಿಂದ ಒಡಗೂಡಿದ ಅಥವಾ ಭಯಾನಕ ವಿಶೇಷ ಧ್ವನಿಯಿಂದ ಕೂಡಿದ ಎಂದು ಅರ್ಥವಾಗಬಹುದು. ವಿಶೇಷತೆ ಇದ್ದಲ್ಲಿ 'ಪ್ರಸಿದ್ಧಿ' ಸಹಜ ತಾನೆ? 'ಪ್ರಸಿದ್ಧಿ' ಮತ್ತು 'ವಿಶ್ರುತ' ಕಿಂಚಿದ್ ಭಿನ್ನವೆನಿಸಿದರೂ ಇವು ಸಮಾನ ಶಬ್ದಗಳೆಂದು ತಿಳಿದವರಿಗೆ ಬೇರೆ ಹೇಳಬೇಕಾಗಿಲ್ಲ. ಪ್ರಾರಂಭದಲ್ಲಿ ಈ ಶಬ್ದ ವಿಶೇಷ ಧ್ವನಿಯನ್ನು ಸೂಚಿಸುತ್ತಿದ್ದು ಕಾಲಗತಿಯಲ್ಲಿ ಪ್ರಸಿದ್ಧಿಯನ್ನು ಸೂಚಿಸುವ ಸಂಕೇತವಾಗಿ, ಕೊನೆಗೆ ಬಳಕೆ

---

೧೨. 'ಶಾಸನ ಪದ್ಯ ಮಂಜರಿ' ಪುಟ ೨೨.

೧೩. ಅದೇ ಪುಟ ೪೨.

೧೪. 'ರಂಜೋಲ್ ಗ್ರಾಮದ ಸಿಂದರ ಶಾಸನ' —ಬಾ. ರಾ. ಗೋಪಾಲ, 'ಕರ್ನಾಟಕ ಭಾರತಿ' ಪುಟ ೧೫೧.

೧೫. 'ಪಾ ಇ ಅ ಸದ್ದ ಮಹಣ್ಣೋ' —ಪುಟ ೬೩೮.

೧೬. ಪಾ ಇ ಅ ಸದ್ದ ಮಹಾಣ್ಣೋ, ಪುಟ ೬೩೮.

ಯಲ್ಲಿ ನಿಂತುಹೋಯಿತೆಂದು ಹೇಳಬಹುದು. ಭಾಷಾಶಾಸ್ತ್ರಜ್ಞರಿಗೆ ಇಂಥವು ಹೊಸ ವಿಷಯಗಳೇನಲ್ಲ. ಕಾರಣ 'ಬುಂಭಕದೊಳ್ ತಗುಳ್ದು' ಎಂದರೆ ವಿಶೇಷ ಧ್ವನಿಯಿಂದ ಕೂಡಿದ ಎಂದು ನಾವು ಅರ್ಥಯಿಸಬಹುದು. ಆದುದರಿಂದ ಪಂಪನು ಈ ಎರಡೂ ಅರ್ಥಗಳಲ್ಲಿ ಈ ಶಬ್ದವನ್ನು ಬಳಸಿಕೊಂಡಿದ್ದಾನೆಂದು ಹೇಳಬಹುದು. ಇದು ಕನ್ನಡ ದೇಸಿಯ ಶಬ್ದವಲ್ಲವೆಂಬುದಕ್ಕೆ ಇಲ್ಲಿನ ಮಹಾಪ್ರಾಣಾಕ್ಷರ 'ಭು' ವೇ ಸಾಕ್ಷಿ. ಆಯುಧ ವಿಶೇಷವಂತೂ ಅಲ್ಲ.

೩. **ಪಂಚರಾಯುಧ:** ಈ ಶಬ್ದಕ್ಕೆ ಪಂಪಭಾರತದ ನಿಘಂಟುಕಾರರು ಪ್ರಶ್ನಾರ್ಥಕ (?)[೧೭] ಚಿಹ್ನವನ್ನು ಹಾಕಿದ್ದಾರೆ, ಅರ್ಥವನ್ನು ಹೇಳಿಯೇ ಇಲ್ಲ. ಆದುದರಿಂದ ಇದು ಅವರಿಗೆ ಅರ್ಥವಾಗಿಲ್ಲವೆಂಬುದು ಸ್ಪಷ್ಟ. ಪ್ರಾಯಃ ಈ ಆಯುಧ ವಿಶೇಷ ಮೈಸೂರತ್ತಣ ಪ್ರಾಂತದಲ್ಲಿ ಹೊಸದೆಂದು ತೋರುತ್ತದೆ. ಆದರೆ ಪಂಚರಾಯುಧದ ಬಳಕೆ ನಮ್ಮ ಪ್ರಾಂತದಲ್ಲಿ (ಕಲಬುರ್ಗಿ ಮತ್ತು ಬಿಜಾಪುರ ಜಿಲ್ಲೆಗಳ ತಾಲೂಕುಗಳಾದ ಸುರಪುರ, ಮುದ್ದೇಬಿಹಾಳ ಹಾಗೂ ಸಿಂದಗಿ) ಇನ್ನೂ ಕೆಲವು ಮನೆತನಗಳಲ್ಲಿ ಉಳಿದು ಬಂದಿದೆ. ಇದು 'ದೇವಿ' ಇಲ್ಲವೇ 'ವೀರಭದ್ರ' ಎಂಬ ದೇವತೆಗಳನ್ನು 'ಕುಲದೈವತ' ಗಳಾಗಿ ಉಳ್ಳ ಅಕ್ಕಸಾಲಿಗರ (ಪಂಚಾಳದವರು) ಮನೆಗಳಲ್ಲಿ ಇರುವ ಆಯುಧವಿಶೇಷ. ಅದು ಗಾತ್ರದಲ್ಲಿ ದಬ್ಬಣ (ಡಬ್ಬಣ) ಇಲ್ಲವೆ ಅದಕ್ಕೂ ಸ್ವಲ್ಪ ದಪ್ಪವಾಗಿದ್ದು ವಿಶೇಷತಃ ತಾಮ್ರ ಮತ್ತು ಇತರ ಪಂಚಲೋಹಗಳಿಂದಕೂಡಿರುತ್ತದೆ. ಸುಮಾರು ಎರಡು ಇಲ್ಲವೆ ಎರಡೂವರೆ ಅಡಿ ಉದ್ದವಾಗಿರುತ್ತದೆ. ದೇವಿಯನ್ನು ಇಲ್ಲವೇ ವೀರಭದ್ರದೇವರನ್ನು ಕುರಿತು ಹಬ್ಬವನ್ನಾಗಲಿ ಇಲ್ಲವೆ ಜಾತ್ರೆಯೋಪಾದಿಯ ಎಂದರೆ ದೊಡ್ಡ ಪ್ರಮಾಣದ ಉತ್ಸವವನ್ನು ನೆರವೇರಿಸಿದಾಗ, ಆವೇಶಯುತರಾದ ಭಕ್ತರು, ಈ ಆಯುಧವನ್ನು ತೆಗೆದುಕೊಂಡು ತಮ್ಮ ಎರಡೂ ಕಪೋಲಗಳಲ್ಲಿಯೂ ಹಾಯ್ದು ಬರುವಂತೆ ತಿವಿದುಕೊಳ್ಳುತ್ತಾರೆ. ಈ ಕಾರ್ಯಕ್ಕೆ 'ಶಸ್ತ್ರ ಹಾಕಿಕೊಳ್ಳೋಣ, ಆಯುಧ ಹಾಕಿಕೊಳ್ಳೋಣ' ಎಂದು ಹೇಳಲಾಗುತ್ತದೆ. ಅಕ್ಕಸಾಲಿಗರಲ್ಲಿ 'ಪಾಂಚಾಳರು' ಅಥವಾ 'ಪಂಚಾಳದವರು' ಎಂಬ ಒಂದು ವಿಶೇಷ ಪಂಗಡದವರಿದ್ದಾರೆ. ಇವರಲ್ಲಿ ಕೆಲವರು ಬಡಿಗತನವನ್ನೂ ಮತ್ತೆ ಕೆಲವರು ಕಮ್ಮಾರತನ (ಕಂಬಾರಕಿ)ವನ್ನೂ ಈಗಲೂ ಮಾಡುತ್ತಿದ್ದಾರೆ. ಒಟ್ಟಾರೆ ಇವರು ಕರ್ಮಶಾಲಿಗಳು'[೧೮]. 'ಕರ್ಮಶಾಲಾ' ಎಂದರೆ

---

೧೭. ಪಂಪಭಾರತ, ಪುಟ ೪೬೧.

೧೮. ಚಿನ್ನದಲ್ಲಿ, ಬೆಳ್ಳಿಯಲ್ಲಿ ಕೆಲಸ ಮಾಡುವವರು ಅಕ್ಕಸಾಲಿಗರು; ಕಬ್ಬಿಣದ ಕೆಲಸ ಮಾಡುವವರು ಕಮ್ಮಾರರು ಕಟ್ಟಿಗೆಯಲ್ಲಿ ಕೆಲಸ ಮಾಡುವವರು ಬಡಿಗರು. ಸಂಗೀತ, ನಾಟಕ ಇತ್ಯಾದಿಗಳಲ್ಲೂ ಅವರು ಕುಶಲರಾಗಿರುತ್ತಾರೆ. ಆದರೂ ಲಲಿತ ಕಲೆಗಳು ಅವರಿಗೆ ಉಪವೃತ್ತಿಗಳಷ್ಟೆ. ಅವರು ಮಾಡುವ ಉದ್ಯಮೆಯನ್ನು ಅವರ ಹೆಸರಿಗೆ ಅಂಟಿಸಿಹೇಳುವುದುಂಟು.

"ಪಂಚಕಾರುಕರುಂ ಕೆಲಸಂಗೆಯ್ವ ಮನೆ"[೧೯]. 'ಪಂಚಕಾರುಕರು' [ಪಂಚ+ಶಾಲಾ > ಪಂಚಾಲ > ಪಂಚಾಳ] ಪಂಚಾಳದವರಾಗಿ ಅನಂತರದಲ್ಲಿ ತಾವು ಗೆಯ್ಯುವ ವೃತ್ತಿಯಿಂದಲೆ ಸಮಾಜದಲ್ಲಿ ಪ್ರತಿಷ್ಠಿತರಾದ ಇವರು ಒಂದು ಬಗೆಯಲ್ಲಿ ಶಕ್ತಿಪೂಜಕರಾಗಿರುತ್ತಾರೆ. ವಿಶೇಷತಃ ಕಾಳಿಕಾದೇವಿಯ[೨೦] ಅರ್ಥಾತ್ ಮಹಾಲಕ್ಷ್ಮಿಯ ಭಕ್ತರಾಗಿರುತ್ತಾರೆ. ಕೆಲವರು ವೀರಭದ್ರದೇವರ ಉಪಾಸಕರೂ ಆಗಿರುತ್ತಾರೆ. ಆದುದರಿಂದ ಈ ಪಂಚಕಾರುಕರ ಮನೆಯಲ್ಲಿ ಇರುವ ಆಯುಧ ವಿಶೇಷವೇ 'ಪಂಚರಾಯುಧ'ವೆಂದು ಪ್ರಸಿದ್ಧಿಯನ್ನು ಪಡೆದಂತೆ ತೋರುತ್ತದೆ ಪಂಪನ ಕಾಲದಲ್ಲಿ. ಆಗಿನ ಕಾಲದಲ್ಲಿ ಶಕ್ತಿಯನ್ನು ಪೂಜಿಸುತ್ತಿದ್ದ ಎಲ್ಲ ಜಾತಿಯ ಜನರೂ ಈ ಶಸ್ತ್ರ (ಆಯುಧ)ವನ್ನು ವಿಶೇಷ ಸಂದರ್ಭಗಳಲ್ಲಿ ಹಾಕಿಕೊಳ್ಳುತ್ತಿರಬಹುದು.[೨೦A] ಅಥವಾ ಆ ಸಂದರ್ಭದಲ್ಲಿ ಶಕ್ತಿಯನ್ನು ಪೂಜಿಸಿದ ವ್ಯಕ್ತಿ ಹಾಕಿಕೊಳ್ಳುತ್ತಿದ್ದನೆಂದು ಹೇಳಿದರೂ ತಪ್ಪಾಗದು. ಪಂಪಭಾರತದ ಮತ್ತಿನ ಪದ್ಯವೊಂದರಲ್ಲಿ ಕವಿ 'ಪಂಚರಾಯುಧ'ವು ಪಂದಲೆಯ ಜೊತೆಗೆ ಇದ್ದುದನ್ನೆ ವರ್ಣಿಸಿದ್ದಾನೆ;

ಕರ ಕರವಾಳ ಘಾತದೊಳರಾತಿಯ **ಪಂದಲೆ ಪಂಚರಾಯುಧಂ** ।
ಬೆರಸೆಸೆವಟ್ಟೆ ತೊಟ್ಟ ಕವಚಂ ಬೆರಸೇಱಿದ ವಾಜಿ ಲೋಹವ ॥
ಕ್ಕರೆವೆರಸೊಂದೆ ಸೂಳ್ಕೊಳೆ ಪಡಲ್ವಡೆ ದೋರ್ವಲದುರ್ವ ಬೀರದೊಳ್ ।
ಪೊರೆವಿರೆ ಬಿಸ್ಸಜಂ ನೆಗೞೆ ತಳ್ತಿಱಿದರ್ ಕೆಲರಾಜಿರಂಗದೊಳ್ ॥

—ಪಂ. ಭಾ. ಆ. ೧೦ ಪದ್ಯ ೭೮

೪. **ಆವುತಿ: ಆವುತಿ =** ಒಂದು ಬಗೆಯ ಆಯುಧ[೨೧] ಎಂದು ಪಂಪಭಾರತದ ಸಂಪಾದಕರು ಅರ್ಥ ಹೇಳಿದ್ದಾರೆ.

---

೧೯. 'ಅಭಿಧಾನ ರತ್ನಮಾಲಾ' (ಸಂ. ಎ. ವೆಂಕಟರಾವ್ ಮತ್ತು ಎಚ್. ಶೇಷಯ್ಯಂಗಾರ್) ಶ್ಲೋಕ ೧೪೨ (ಭೂಮಿಕಾಂಡ)ರ ಕನ್ನಡ ಟೀಕೆ, ಪುಟ ೫೦.

೨೦. 'ಮಹಾಂಕಾಳಿ' ಎಂದೂ ಕೆಲಕಡೆಗೆ ಹೇಳಲಾಗುತ್ತದೆ.

೨೦. A ಈಗಲೂ ಕೂಡ ಕೆಲ ವೀರಶೈವರ ಮನೆಗಳಲ್ಲಿ ಎಂದರೆ ಯಾರ ಮನೆಯ ಆರಾಧ್ಯ ದೇವತೆ 'ವೀರಭದ್ರದೇವರು' ಆಗಿರುತ್ತಾನೆಯೊ ಅವರ ಮನೆಯಲ್ಲಿ ಈ ಸಂಪ್ರದಾಯ ಇದ್ದುದು ಕಂಡುಬರುತ್ತದೆ. ಈ ವಿಷಯವನ್ನು ಮತ್ತು ಕೆಳಗಿನ ಕೆಲ ವಿಷಯಗಳನ್ನು ದಾರಿಯಲ್ಲಿ ಅಕಸ್ಮಾತ್ ಭೇಟಿಯಾದ ಹಲವು ಶಸ್ತ್ರಗಳನ್ನು ಹೊತ್ತುಕೊಂಡಿದ್ದ ಶ್ರೀ ಈರಯ್ಯಸ್ವಾಮಿ ಹಿರೇಮಠ, ಮಡಕೇಶರ (ಜಿಲ್ಲಾ ವಿಜಾಪುರ, ತಾಲೂಕು ಮುದ್ದೇಬಿಹಾಳ) ಅವರು ತಿಳಿಸಿದರು. ಈ ಶಸ್ತ್ರವನ್ನು ಅದುವರೆಗೆ 'ಪುರವಂತಿಗೆ' ಆಯುಧವು ಎಂದು ಹೇಳಲಾಗುತ್ತದೆ. ಇದು ಎರಡು ವಿಧವಾಗಿರುತ್ತದೆ. (೧) ಗುಗ್ಗಳ ಮತ್ತು (೨) ಅರಣ ಮೆರವಣಿಗೆ (ಅರಣ ಮೆರವಣಿಗೆ) ಗುಗ್ಗಳ:-

'ವಿಕ್ರಮಾರ್ಜುನ ವಿಜಯ'ದಲ್ಲಿ ಪಂಪನು ಈ ಶಬ್ದವನ್ನು ಎರಡು ಕಡೆಯಲ್ಲಿ ಪ್ರಯೋಗಿಸಿದ್ದಾನೆ. ಇಲ್ಲೆಲ್ಲ ಆಯುಧ ವಿಶೇಷ ಎಂದು ಅರ್ಥ ಇಟ್ಟುಕೊಂಡರೆ ಪದ್ಯದ ಅರ್ಥಕ್ಕೆ ಬಾಧೆ ಬಂದು ಸೌಂದರ್ಯ ಕೆಡುತ್ತದೆ. ಇಷ್ಟೆ ಅಲ್ಲ, ನಮ್ಮ ಮುಂದಿರುವ ಪದ್ಯದಲ್ಲಿಯ 'ಅವುತಿ'ಯ ತರವಾಯದ 'ಪೂಸಿದಂತಿರೆ' ಎಂಬ ಶಬ್ದವನ್ನು ಪ್ರಯೋಗಿಸುವಲ್ಲಿ ಔಚಿತ್ಯ ತಪ್ಪುತ್ತದೆ; ಆ ಪದಕ್ಕೆ ಅರ್ಥವೇ ಇಲ್ಲದಂತಾಗಿ ಅದನ್ನು ವೃಥಾ ಪ್ರಯೋಗಿಸಿದಂತಾಗುತ್ತದೆ. ಹಿತವಾಗಿ ಮಿತವಾಗಿ ಶಬ್ದಗಳನ್ನು ಬಳಸುವ ಪಂಪನ ಶೈಲಿಗೆ ಧಕ್ಕೆ ತಗಲುತ್ತದೆ. ಆದುದರಿಂದ 'ಆಯುಧ ವಿಶೇಷ'ವೆಂದು ಅರ್ಥಯಿಸದೆ 'ಆಹುತಿ'ಯ ತದ್ಭವ ಎಂದು ಅರ್ಥಯಿಸಿದರೆ ಎಲ್ಲವೂ ಸರಿಹೋಗುತ್ತದೆ. ಇದಕ್ಕೂ ಮುಂಚಿನ ಪದ್ಯದಲ್ಲಿಯ ಪ್ರಯೋಗವನ್ನೂ ನೋಡೋಣ:

ಇದನ್ನು ಅಡುವಾಗ್ಗೆ ಐದು ಅಗ್ನಿಗಳನ್ನು ಗಡಿಗೆಗಳಲ್ಲಿ ಹಿಡಿಯಲಾಗಿರುತ್ತದೆ; ಅನಂತರ ಆ ಅಗ್ನಿಗಳನ್ನೆ ಉಪಯೋಗಿಸಿಕೊಂಡು ದೊಡ್ಡ ಕಿಚ್ಚೊಂದನ್ನು ಮಾಡಲಾಗುತ್ತದೆ. ಅದನ್ನು ಈ ಭಕ್ತರಿಂದ ತುಳಿಸಲಾಗುತ್ತದೆ. ಅದರ ಮೆರವಣಿಗೆ:— ಇದರಲ್ಲಿ ಐದು ಹಲಗೆಗಳನ್ನು ಶ್ರೀ ವೀರಭದ್ರನ ಮೆಟ್ಟುಗಳಂತೆ ಭಾವಿಸಲಾಗುತ್ತದೆ. ಅವನ್ನು ಹಿಡಿದು ಪುರವಂತಿಗೆ ಆಡುತ್ತಾರೆ. ಇವುಗಳನ್ನು ಗಂಗಸ್ಥಳಕೆ ಒಯ್ದು ಪೂಜೆ ಇತ್ಯಾದಿ ಮಾಡಲಾಗುತ್ತದೆ. ಈ ಪುರವಂತಿಗೆಯವರು ೧೧ ಶಸ್ತ್ರಗಳನ್ನು ಉಪಯೋಗಿಸುತ್ತಾರೆ, (ಆಯುಧಾಽ ಹಾಕಿಕೊಳ್ಳೋಣ ಎಂದು ಹೇಳುತ್ತಾರೆ. (೧) ತುಟಿಶಸ್ತ್ರ (೨) ಮೇಲಿನ ತಲೆಯ ಶಸ್ತ್ರ (೩) ಗಲ್ಲದಲ್ಲಿ ಹಾಕಿಕೊಳ್ಳುವ ಶಸ್ತ್ರ) ಇದನ್ನು ತಾಮ್ರ, ಹಿತ್ತಾಳಿ, ಉಕ್ಕು ಬೆಳ್ಳಿ ಹಾಗೂ ಬಂಗಾರದಿಂದ ಬೆರಸಿ ಮಾಡಲಾಗಿರುತ್ತದೆ. ಇದಕ್ಕೇನೆ "ಪಂಚರಾಯುಧ" ಎಂದು ಹೇಳಲಾಗುತ್ತದೆ. ಆಡುವ ವ್ಯಕ್ತಿಯ ಗದ್ದ ಹಾಗೂ ಕೆಳ ತುಟಿಯ ಮಧ್ಯದಷ್ಟು (ಸಿಂತಾಗ್ಗೆ) ಎತ್ತರ ಎಂದರೆ ಅಷ್ಟು ಉದ್ದಳತೆ ಉಳ್ಳದ್ದಾಗಿರುತ್ತದೆ. (೪) ಗಂಟಲ ಶಸ್ತ್ರ (೫) ಕೆಳಗಿನ ಗಂಟಲ ಶಸ್ತ್ರ (೬) ಕಣ್ಣಿನಲ್ಲಿ ಹಾಕಿಕೊಳ್ಳುವ ಕಣ್ ಶಸ್ತ್ರ (೭) ಕೈಶಸ್ತ್ರ (ಮುಂಗೈಗೆ ಹಾಕಿಕೊಳ್ಳಲಾಗುತ್ತದೆ). (೮) ಜನಿವಾರಶಸ್ತ್ರ (೯) ಹೊಕ್ಕುಳ ಶಸ್ತ್ರ (೧೦) ಪಕ್ಕಡಿ ಶಸ್ತ್ರ ಮತ್ತು (೧೧) ಹಸ್ತಶಸ್ತ್ರ ಈ ಹನ್ನೊಂದು ಶಸ್ತ್ರಗಳಲ್ಲಿ ಪಂಚರಾಯುಧವೊಂದನ್ನು ಬಿಟ್ಟುಕೊಟ್ಟು ಉಳಿದುವೆಲ್ಲವನ್ನು ಉಕ್ಕಿನಲ್ಲಿ ತಯಾರಿಸಲಾಗಿರುತ್ತದೆ.

೨೦. B ಪಂಚರಾಯುಧವೆಂದರೆ 'ಪಂಚಕಠಾರಿ' ಎಂಬ ಭಾವನೆಯೊಂದಿದೆ — ಡಾ|| ಚಿದಾನಂದಮೂರ್ತಿ, 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಪುಟ ೨೭೭. ಕತ್ತಿ ಕಠಾರಿಗಳಲ್ಲಿ 'ಕತ್ತಿ'ಗೆ ಆಯುಧ ಎಂದು ಹೇಳಲಾಗುತ್ತದೆಯೆ ವಿನಾ 'ಕಠಾರಿ'ಯನ್ನು 'ಕಠಾರಿ'ಯೆಂದೇ ಬಳಸಲಾಗುತ್ತದೆ. ಕಾರಣ 'ಪಂಚಕಠಾರಿ'ಯನ್ನು ಪಂಚರಾಯುಧದೊಂದಿಗೆ ಏಕೀಕರಿಸಲು ಕಷ್ಟಕರವಾಗಿ ತೋರುತ್ತದೆ.

೨೧. 'ಪಂಪ ಭಾರತ' ಪುಟ ೪೨೭.

ಕೃತ ವಿವಿಧಾಸ್ತ್ರ ವೀರಭಟಕೋಟಿ ಭಯಂಕರವಾಗೆ ಬೀಸುವಾ |
ವೃತಿಯು ಕಳಂಕ ಪಂಕಮೊಳೆ ಪೆರ್ಜಿಪ ಕಜ್ಜಲೆ ಶೀಘ್ರ ಶಸ್ತ್ರ ಸಂ ||
ಹತಿಗಳ ದೀಪ್ತಿಯಿಂ ಬಿಸುಗೆಯಾಗಿ ಕರಂ ಪೊಗರ್ವಟ್ಟುಗುರ್ವಿಮ |
ದ್ಭುತಮುಮನೀಂಟೆ ಪೊಣ್ಮಿದುವು ಪಾಂಡವ ಕೌರವ ರೌದ್ರ ಸಾಧನಂ ||

— ವಿ. ವಿ. ಆ–೧೦ ಪದ್ಯ ೫೦

ಇಲ್ಲಿ ಬರುವ 'ಬೀಸುವಾವೃತಿಯು' ಎಂಬುದಕ್ಕೆ ಆಯುಧ ವಿಶೇಷ ಎಂದು ಅರ್ಥಯಿಸಿದರೆ ಅಲ್ಲಿಯೆ ಮುಂದೆ ಬರುವ 'ಶಸ್ತ್ರ ಸಂಹತಿಗಳಿಗೆ ದೀಪ್ತಿಯುಂಟಾಯಿತು' ಎಂದು ಹೇಳುವ ಮಾತಿಗೆ ವಿರೋಧ ಉಂಟಾಗುತ್ತದೆ—'ಕಳಂಕ ಪಂಕ' ಎಂಬ ಮಾತಿನಿಂದ ಮೇಲಾಗಿ ಆಯುಧಗಳನ್ನು ಬೀಸುವಾಗ್ಗ ಬೆಳಕೇ ಉಂಟಾಗುತ್ತದಲ್ಲದೆ ಕತ್ತಲೆಯಲ್ಲ. ಕಾರಣ 'ಆವೃತಿ' ಇದನ್ನು ಆಯುಧ ವಿಶೇಷ ಎಂದು ಹೇಳಿದರೆ ಅರ್ಥಕ್ಕೆ ಬಾಧೆ ಬರುತ್ತದೆ. ಅದೇ 'ಬಲಿ' ಎಂದು ಅರ್ಥಯಿಸಿದರೆ ಈ ಆತಂಕವೂ ಇರುವದಿಲ್ಲ, ಜೊತೆಗೆ ಭಾವ ಪುಷ್ಟಿಯೂ ಉಂಟಾಗುತ್ತದೆ. ಯುದ್ಧಕ್ಕೆ ಹೋಗುವ ಮುನ್ನ ನಾಯಕನು ಯಜ್ಞ ಮಾಡುವುದು, ಪಡೆಯುವರು ರಣದೇವಿಗೆ ಬಲಿಕೊಡುವುದು ರೂಢಿ; ಮತ್ತೆ ಆ ಬಲಿಯನ್ನು ಸಕಲ ದಿಕ್ಕುಗಳಿಗೂ **ಬೀಸುವುದು** * ಎರಚುವುದು (ದಿಗ್ದೇವತೆಗಳ ಸಂತೃಪ್ತಿಗಾಗಿ ಅರ್ಪಿಸುವುದು) ಸಂಪ್ರದಾಯವೇ ಜೈನನಾದ ಪಂಪನಿಗೆ ಈ ಸಂಪ್ರದಾಯ ಒಗ್ಗದು; ಅಂತಲೇನೆ ಅವನು ಇದನ್ನು 'ಆವೃತಿ (ಆಹುತಿ)ಯು ಕಳಂಕಪಂಕ' ಎಂದು ಹೇಳಿದ್ದಾನೆ. ತನ್ನಜ್ಜ ಮಾಧವ ಸೋಮಯಾಜಿಯ ಕೀರ್ತಿಯನ್ನು ಹೇಳುವಾಗ್ಗ "ತನ್ನಧ್ವರ ಧೂಮದೆ ಕರಿದು ಮಾಡಿದಂ ನಿಜಯಶಮಂ" ಎಂದು ಹೇಳಿದವನಲ್ಲವೆ ಅವನು? ಇನ್ನು ಈ ಪದ್ಯದ 'ಬೀಸುವಾ' ಎಂಬುದಕ್ಕಿರುವ ಪಾಠಾಂತರ 'ಬೇಳಲಾ' ಎಂಬುದು ಕೂಡ ಇದನ್ನೆ ಸಮರ್ಥಿಸುತ್ತದೆ. 'ಬೆಳ್' ಎಂದರೆ ಹೋಮಮಾಡು, ಬಲಿಕೊಡು ಎಂಬುದು ಸ್ಪಷ್ಟವಷ್ಟೆ.? ಕಾರಣ ಪಂಪನು ಈ ಪದ್ಯಗಳಲ್ಲಿ 'ಆವೃತಿ' ಇದನ್ನು 'ಆಹುತಿ'ಯ ತದ್ಭವ ರೂಪದಲ್ಲಿ ಪ್ರಯೋಗಿಸಿದ್ದಾನೆ ಎಂದರೆ ತಪ್ಪಾಗದು.

೫. **ನೂಳಜಿಗೆ :** ಮಾಳಜಿ+ಗೆ=ಮಾಳ (ಳ)ಜ ದೇವತೆ = ಮಾಳಜಿ। ಮಾಲಜಿ ಎಂದರೆ 'ಮಹಾಲಕ್ಷ್ಮೀ' ಎಂಬುದನ್ನು ಈಗಾಗಲೇ ತೋರಿಸಿಕೊಟ್ಟಾಗಿದೆ.[೨೨] ಆ ಲೇಖನವನ್ನು ಓದಿದ ನನ್ನ ಗುರುಗಳಲ್ಲೊಬ್ಬರಾದ ಪ್ರೊ. ಟಿ. ವಿ. ವೆಂಕಟಾಚಲ ಶಾಸ್ತ್ರಿಗಳು ನನ್ನ ಹೇಳಿಕೆ "ಮೈಲಾರ ಮಾಳಜಿಯ ಗಂಡನಲ್ಲ' ಎಂಬುದಕ್ಕೆ ವಿರೋಧವಾದ ಅಂಶ ಮಂಗರಾಜನ ನಿಘಂಟು

---

೨೨. ಪ್ರ. ಕ. ಸಂ. ೪೯–೩ ಪುಟ ೧೭೩.

ವಿನಲ್ಲಿ ಇವೆಯೆಂಬುದರತ್ತ ನನ್ನ ಗಮನವನ್ನು ಸೆಳೆದರು. ಅಭಿನವ ಮಂಗರಾಜನ (ಕ್ರಿ. ಶ. ೧೩೯೮) ನಿಘಂಟು 'ಅಭಿನವಾಭಿಧಾನ' ದಲ್ಲಿ 'ಮಾಳಚಿಯ ಭರ್ತೃ| ಮಾಳಾಚಿಯ ಭರ್ತೃ(ಪಾಠಾಂತರ)ಮಯಲಾರನಕ್ಕುಂ'[೨೩] ಎಂಬೊಂದು ಹೇಳಿಕೆಯಿದೆ, 'ಮಯಲಾರ' ಎಂದರೆ 'ಶೇಷಾದ್ರಿ' 'ವೆಂಕಟಾಚಲ' 'ಶ್ರೀಶೈಲ' ಗಳ ಹಾಗೆ ಸ್ಥಳವಾಚಕ ನಾಮವೊ ಅಥವಾ 'ಶೇಷಾದ್ರಿಪತಿ' 'ವೆಂಕಟಾಚಲಪತಿ' 'ಶ್ರೀಶೈಲನಾಥ'ಗಳ ಹಾಗೆ ಭಿನ್ನವಾದ ದೇವತೆಯ ಹೆಸರೊ ಎಂಬ ಪ್ರಶ್ನೆ ನಮ್ಮ ಮುಂದೆ ನಿಲ್ಲುತ್ತದೆ. 'ಮಯ್‌ಲಾರ' ಎಂಬ ಹಲವು ಸ್ಥಳಗಳು ನಮಗೆ ಗೋಚರವಾಗುತ್ತವೆ[೨೪] ಇಲ್ಲೆಲ್ಲ ಸಾಮಾನ್ಯವಾಗಿ ಈಶ್ವರನೆ ಅಧಿದೇವತೆಯಾಗಿದ್ದಾನೆ. 'ಮಯ್‌ಲಾರ' ಕ್ಷೇತ್ರದ ಅಧಿಪತಿ ಮಲ್ಲಯ್ಯನಾದುದರಿಂದ 'ಮಯಲಾರ'ವನ್ನು 'ಶೇಷಾದ್ರಿ' 'ವೆಂಕಟಾಚಲ' ಮತ್ತು 'ಶ್ರೀಶೈಲ' ಗಳ ಹಾಗೆ ಸ್ಥಲವಾಚಕವೆಂದೇ ಸದ್ಯ ಪರಿಗ್ರಹಿಸಬೇಕಾಗುತ್ತದೆ—'ಮಲ್ಲಯ್ಯ'ದ ಮೂಲ 'ಮಲ್ಲಿಕಾರ್ಜುನ' ಎಂದು ಸ್ವೀಕರಿಸಿವರೆ.[೨೫] ಈ 'ಮಲ್ಲಯ್ಯನು' 'ಶ್ರೀಶೈಲದ' 'ಮಲ್ಲಯ್ಯ'ನಿಂದ ಭಿನ್ನನೆಂದರೆ ಬೇರೆ. ಅರ್ಥಾತ್ ಇವುಗಳ ವ್ಯುತ್ಪತ್ತಿ ಬೇರೆ ಬೇರೆ. ಈ ದಿಶೆಯಲ್ಲಿ ಇನ್ನೂ ಸಂಶೋಧನೆ ಆಗಬೇಕು. 'ಮಯ್‌ಲಾರ' ಕ್ಷೇತ್ರದ ಅಧಿಪತಿ 'ಮಲ್ಲಯ್ಯ'ನಾದುದರಿಂದ 'ಶೇಷಾದ್ರಿ' 'ವೆಂಕಟಾಚಲ' ಹಾಗೂ 'ಶ್ರೀಶೈಲ'ಗಳು 'ಪದ್ಮಾವತಿ' 'ಭ್ರಮರಾಂಬಿಕೆ'ಯರ ಭರ್ತೃಗಳಾಗಲು ಹೇಗೆ ಸಾಧ್ಯವಿಲ್ಲವೊ ಹಾಗೆಯೆ 'ಮಯ್‌ಲಾರ' ಸ್ಥಳ 'ಮಾಳಚಿ'ಯ ಭರ್ತೃವಾಗಲು ಸಾಧ್ಯವಿಲ್ಲ. ಮಯಲಾರಯ್ಯ | 'ಮಯ್‌ಲಾರಲಿಂಗ' (ಮಯಲಾರದಲಿಂಗ) 'ಮಾಳಚಿ'ಯ ಭರ್ತೃ ಆಗಬಹುದು. ಆಗ ಯಾತಗಿರಿಯ ಮೈಲಾರ ಕ್ಷೇತ್ರದಲ್ಲಿ ಇರುವ ತುರಂಗ (ಕುದುರೆ ಸವಾರಳು) ಬಾಲೆಯನ್ನು ಮಾಳಚಿ ಎಂಬ ದೇವತೆಯೊಂದಿಗೆ ಏಕೀಕರಿಸಬಹುದು.[೨೬] ಆದರೆ ಅಭಿನವ ಮಂಗರಾಜನು ಯಾವ ಆಧಾರದ ಮೇಲೆ ಮಾಳ

---

೨೩. ಮಂಗರಾಜ, ಅಭಿನವಾಭಿಧಾನ (ಸಂ. Prof M. M, Bhatt-) 5-15, Madras University Pub.

* ಸಂಕ್ರಾಂತಿಯಲ್ಲಿ ಒಕ್ಕಲಿಗನು ಬಿಳಿಜೋಳದ ಹೊಲಕ್ಕೆ ಹೋಗಿ 'ಸರಗ ಬೀಸೋದ'ನ್ನು ಇಂದಿಗೂ ನಾವು ನೋಡಬಹುದು, ಇತ್ತಣ ಹಳ್ಳಿಗಳಿಗೆ ಹೋದರೆ.

೨೪. a) 'ಮೈಲಾರ' ಕಲ್ಬುರ್ಗಿ ಜಿಲ್ಲೆಯ ಯಾತಗಿರಿ ತಾಲೂಕಿನಲ್ಲಿ ಒಂದು ದೊಡ್ಡ ಯಾತ್ರಾ ಸ್ಥಳ (ಕ್ಷೇತ್ರ). ಇಲ್ಲಿನ ಅಧಿದೇವತೆ "ಮಲ್ಲಯ್ಯ".

b) ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನಲ್ಲಿ 'ಮೈಲಾರ' ಎಂಬ ಸ್ಥಳವೊಂದಿದೆ; ಅಲ್ಲಿಯ ಅಧಿದೇವತೆ 'ಸೋಮಲಿಂಗೇಶ್ವರ' (ಕ. ಕ. ಚರಿತೆ ಅನುಬಂಧ ಪುಟ ೩).

೨೫. ಡಾ|| ಎ. ಆರ್. ಕೃಷ್ಣಶಾಸ್ತ್ರಿ, 'ಮಲ್ಲಿಕಾರ್ಜುನ—ಒಂದು ಊಹೆ'

೨೬. ಪಕ್ಕರೆಯಿಕ್ಕಿದ ಜಾಯಿಲವನ್ನೇರಿದವಳು ಮಾಳಜಿ ಎಂಬುದನ್ನು ಗಮನದಲ್ಲಿ ತಂದುಕೊಂಡರೆ ಸಾಕು.

ಚಿಯು ಭರ್ತೃ ಮಯಲಾರನೆಂದು ಹೇಳಿದನೊ ತಿಳಿಯದು. ಭಟ್ಟ ಹಲಾಯುಧನ 'ಅಭಿಧಾನ ರತ್ನಮಾಲಾ'ದಲ್ಲಾಗಲಿ ಅಥವಾ ಅಮರದತ್ತನ 'ನಾಮ ಲಿಂಗಾನುಶಾಸನ' ದಲ್ಲಾಗಲಿ ಹೀಗೆ ಹೇಳಿದಂತೆ ತೋರದು. ಕಾರಣ ಅವನೇ ತನ್ನ ಕೃತಿಯನ್ನು 'ಅಭಿನವಾಭಿಧಾನ' ಎಂದು ಹೇಳಿರುವದರಿಂದ ಹೊಸದಾಗಿ ಈ ಅಂಶವನ್ನು ಸೇರಿಸಿರಬಹುದೆ? ಮಂಗರಾಜನು 'ಮಾಳಚಿಯು ಭರ್ತೃ ಮಯಲಾರಯ್ಯನಕ್ಕಂ' ಎಂದು ಹೇಳಿದ್ದರೆ ನಮ್ಮ ಊಹೆಗೆ ಇನಿತು ಅಧಿಕ ಪುಷ್ಟಿ ದೊರೆಯುತ್ತಿತ್ತು. ಸಂಶೋಧನೆ ಇನ್ನಷ್ಟು ಆಗುವ ವರೆಗೆ ಇದು ಹೀಗೆ ಎಂದು ಹೇಳಲು ಬರುವಂತಿಲ್ಲ. ಆದರೆ ಮಾಳಚಿ ಮಹಾಲಕ್ಷ್ಮೀ, ಮಹಾದುರ್ಗೇ ಎಂಬುದರಲ್ಲಿ ಸಂಶಯವಿಲ್ಲ. ಕಾರಣ ಆಕೆ ರಣದೇವತೆ. ಈ ಮಾತು ನೇಮಿಚಂದ್ರನ 'ಲೀಲಾವತಿ ಪ್ರಬಂಧ' ದ ಪದ್ಯ;

ಗಾಳಿಸು ಗೆಲ್ವನಂ ಹರಹು ಹೂಜೆಗನಂ ಸುಲಿ ಸುತ್ತುಗಾಱನಂ |
ತಾಳಿಸು ತೇವನಂ (ಪೆಯಂ?) ಕುಡದೆ ಕಾಡುವನಂ ರಸಬೋನವೆತ್ತು ಮಾ ||
ಕಾಳಿಗೆ ಢಾಳನಂ ನೆಗಪು ಟಕ್ಕಿಪನಂ ತಂಟಿ **ಮೇಕುದೋರ್ಪನಂ** |
ಮಾಳಚಿಗಿಕ್ಕು ಪೂಟ್ ಪುಸಿವನಂ ಪೊಸತಿಕ್ಕುಗೆ ಪಜ್ಜೆಗಾಱನಂ ||

ಎಂಬುದರಿಂದ ಇನ್ನಷ್ಟು ಸ್ಪಷ್ಟವಾಗುತ್ತದೆ. ಮಾಳಚಿಗೆ ಜನ ಬಲಿಯನ್ನು ಕೊಡುತ್ತಿದ್ದರೆಂಬುದೂ ಈ ಮಾತಿನಿಂದ ನಮಗೆ ತಿಳಿದುಬರುತ್ತದೆ. ಮತ್ತೆ ಅವನು ಮಾಳಚಿಯನ್ನು ಚಂಡಿ, ಕಾಳಿ, ಮಾರಿ ಮುಂತಾದ ದೇವತೆಗಳೊಂದಿಗೆ ಬೆರಸಿಯೆ ಹೇಳಿದ್ದಾನೆ.[೨೭] 'ಮೇಕುದೋರ್ಪನಂ' ಎಂದರೆ ಏರಾಟ ಮಾಡುವವನೆಂದು ತಿಳಿದರೆ ಸಾಕು.

---

೨೭. ನೇಮಿಚಂದ್ರ, 'ಲೀಲಾವತಿ ಪ್ರಬಂಧ'ದ ಆ ೨ ಪದ್ಯ ೧೦೬ ಮತ್ತು ೧೦೭ನ್ನು ನೋಡಿ, ಇಲ್ಲವೆ 'ಸೂಕ್ತಿ ಸುಧಾರ್ಣವ'ದ ಚಂದ್ರೋದಯ ವರ್ಣನೆಯಲ್ಲಿನ ಪದ್ಯ ೩೭೯ ಮತ್ತು ೪೫೬ ನ್ನು ನೋಡಿ. ಈ ಪದ್ಯಗಳನ್ನು ಕವಿ ಸೂಳೆಗೇರಿಯ ವರ್ಣನೆ ಮಾಡುವಲ್ಲಿ ಹೇಳಿದ್ದಾನೆ ಯಾದುದರಿಂದ ಇಲ್ಲಿ ರಣದ ಮಾತೆಲ್ಲಿ ಬಂದಿತೆಂದು ಪ್ರಶ್ನೆ ಏಳುವುದು ಸಹಜ. ಆದರೆ ನೇಮಿಚಂದ್ರನೆ ನಮ್ಮ ಸಂಶಯವನ್ನು ದೂರವಾಗಿ ಸುತ್ತಾನೆ 'ಕೂಂಟಣಿಗೊಟ್ಟಿಯ' ಸೂಳೆಯೊಬ್ಬಳ ಮಾತಿನಿಂದ:

ಜಗಳಂ ದೇವನ ವಾರಿಗೀಕೆ ನಡೆವಾಗಳ್ ತೋಟs ಮಾಱಾಳಿಯೊ |
ತ್ತಿಗೆ ನಿಂದಲ್ಲಿ ವಿಲಾಸಮುಜ್ಜಳಿಸೆ ಭೋಗಕ್ಕೆಂದು ಪೋಪಲ್ಲಿ ಕಾ ||
ಳಿಗವೆಂದುಂ ಬೊಜಗರ್ಗೆ ಪೋಗಳಿವಳೀಗಳ್ ವಾರಿಗಂ ನಿಲ್ಲಳೊ
ತ್ತಿಗೆ ಭೋಗಕ್ಕಿದೆನ್ನ ತಂಗಿ ನಡಿಯಳ್ ಸೌಭಾಗ್ಯಮಿಂತಕ್ಕು ಮೇ ||

—ಲೀ. ಪ್ರ. ಆ. ೨-ಪ. ೭೧.

೬. ಜಾಯಿಲ : 'ಜಾಯಿಲ' ಇದರ ಅಭಿಧಾರ್ಥ ನಾಯಿ. 'ಸೂಕ್ತಿಸುಧಾರ್ಣವ' ದಲ್ಲಿ ಬರುವ ಬೇಟೆಯ ವರ್ಣನೆಗಳ ಪದ್ಯಗಳನ್ನು ಓದಿದರೆ ನಮಗೆ ವಿವಿಧ ಬಗೆಯ ಜಾಯಿಲಗಳ (ನಾಯಿಗಳ) ಪರಿಚಯ ಆಗುತ್ತದೆ.[೨೮] ಈ ಅಭಿಧಾರ್ಥದಲ್ಲಿ ಈ ಶಬ್ದವನ್ನು ನಮ್ಮ ಕವಿಗಳು ಬಳಸಿದ್ದಾರೆಯೆಂಬುದರಲ್ಲಿ ಸಂಶಯವಿಲ್ಲ. ಈ ವಿಷಯವನ್ನು ಶ್ರೀ ಬಿ. ಎಸ್. ಕುಲಕರ್ಣಿವರು 'ಗಿರಿಜಾ ಕಲ್ಯಾಣ', 'ಬಸವ ಪುರಾಣ', 'ಕುಮಾರವ್ಯಾಸ ಭಾರತ', ಸಿದ್ಧನಂಜೇಶನ 'ರಾಘವಾಂಕ ಚರಿತ' ಷಡಕ್ಷರಿಯ 'ರಾಜಶೇಖರವಿಳಾಸ' ಮುಂತಾದ ಕೃತಿಗಳಿಂದ ಪ್ರಯೋಗಗಳನ್ನು ಉದ್ಧರಿಸಿ ಸ್ಪಷ್ಟಪಡಿಸಿದ್ದಾರೆ.[೨೯] ಆದರೆ ಪಂಪಭಾರತದ ನಿಘಂಟುವಿನಲ್ಲಿ ಈ ಶಬ್ದಕ್ಕೆ 'ನಾಯಿ ?' ಹೀಗೆ ಅರ್ಥವನ್ನು ಬರೆದಿದ್ದಾರೆ.[೩೦] ಇತರತ್ರ ಈ ಶಬ್ದಕ್ಕೆ 'ನಾಯಿ' ಎಂಬ ಅರ್ಥವಿರುವದನ್ನು ಗಮನಿಸಿ ಹೀಗೆ ಹೇಳಬಹುದಾದರೂ ಇಲ್ಲಿ ಇದು ಅನ್ವಯವಾಗುವದಿಲ್ಲವೆಂಬುದು ಪ್ರಶ್ನಾರ್ಥಕ ಚಿಹ್ನೆಯಿಂದ ಸ್ಪಷ್ಟವಾಗುತ್ತದೆ. ಅವರಿಗಿರುವ ಸಂಶಯ ಸರಿಯಾದುದೆಂದೆ ನಮಗನಿಸುತ್ತದೆ. ಏಕೆಂದರೆ ಪಂಪನು ಈ ಅಭಿಧಾರ್ಥದಲ್ಲಿ ಈ ಪದವನ್ನು ಪ್ರಯೋಗಿಸಿಲ್ಲ. ಆವನು ತನ್ನ ಎರಡು ಕಾವ್ಯಗಳಲ್ಲೂ ಈ 'ಜಾಯಿಲ' ಶಬ್ದವನ್ನು ತುರಂಗ ಸಾಧನೆಯನ್ನು ವರ್ಣಿಸುವಲ್ಲಿ ಪ್ರಯೋಗಿಸಿದ್ದಾನೆ;

೨೭A. 'ಮಾಳಚಿ' ಇದಕ್ಕೆ 'ಮಾಳಬೆ" ಎಂಬ ಪಾಠಾಂತರವಿದೆಯೆಂಬುವದರ ಅರಿವು ಈ ಲೇಖಕನಿಗೆ ಇದೆ. ಮಾಳಚಿಕಬ್ಬೆಯೆ ಮಾಳಬೆಯಾಗುತ್ತಾಳೆ. ಇನ್ನು ಇಲ್ಲಿ 'ಮೇಳೆಯಂ' ಎಂಬಲ್ಲಿ 'ಮೈಲಾರ'ನ ಪ್ರಸಕ್ತಿ ಬಂದಿದೆ. ಆದರೆ ಆತನು ಮಾಳಚಿಯ ಭರ್ತೃ ಎಂಬುದಾಗಿ ಹೇಳಿದಂತೆ ನಮಗೆ ತೋರುವದಿಲ್ಲ. 'ಮೇಳೆಯಂ ಮುಱಿಗೆ, ಮಾಳಚಿಗೆ ಮೊಗವಾರಪೆತ್ತುಪೆಂ' ಎಂಬಲ್ಲಿ ಅವರನ್ನು ಭಿನ್ನವಾಗಿ ಹೇಳಿದಂತೆ ಕಂಡುಬರುತ್ತದೆ.

೨೮. ಮಲ್ಲಿಕಾರ್ಜುನ, 'ಸೂಕ್ತಿಸುಧಾರ್ಣವ' ದಲ್ಲಿ 'ಪರ್ವತ ವರ್ಣನಂ' ಎಂಬ ಭಾಗದಲ್ಲಿಯ ಪದ್ಯ ೬ ರಿಂದ ಮುಂದೆ ಕಿಱುನಾಯ ಕುನ್ನಿಗಳು, ವಿಶ್ವಕದ್ರು, ಕೌಲೇಯಕ, ಕೀಳ್ನಾಯಗಳು, ಗರ್ಜಿಪ ನಾಯ್ಗಳ್, ಕುಕ್ಕುರಂಗಳ್, ಅಳಗ [ಅಲರ್ಕಮ್ (ಸಂ)] ಜಾಯಿಲ ಇತ್ಯಾದಿ ಉದಾಹರಣೆಗೆ :

> [ಕೊಂಡುದು] ಕೊಡುದಂತದುವೆ ಸಾಳುವನಲ್ಲದು ತಪ್ಪಿತತ್ತಲಾ
> ಕೊಂಡುದು ಜಾಯಿಲಂ ಮುಗುಬ್ದು ಪೋಪುದನತ್ತಿರದೆಯ್ದಿ ಕೊಂಡುದಾ
> ಕೊಂಡುದು ನಮ್ಮ ಪುತ್ತಳಿಯೆನಲ್ ಕಿಱುನಾಯ್ಗಳ ಬಾಯ್ಗಳಿಂದೆ ನೂ
> ಲುಂಡೆಯುಸಿಟ್ಟವೊಲ್ ಮಿಡುಕುತುಂ ಪರಿದಾಡಿದುದೊಂದು ಪೆರ್ಮೊಲಂ ॥
>
> —ಪದ್ಯ ೧೨೧.

೨೯. ಬಿ. ಎಸ್. ಕುಲಕರ್ಣಿ "ಜಾಯಿಲ ಎಂದರೇನು"? (ಕ. ಸಾ. ಪ. ಪ. ಸಂಪುಟ ೪೦ ಸಂಚಿಕೆ ೧ ಮತ್ತು ೨ ಪುಟ ೪೪).

೩೦. 'ಪಂಪಭಾರತ' ಪುಟ ೪೪೮ (ಜಾಯಿಲ-ನಾಯಿ ?).

"ತ್ರೊಳಗುವಬಾಳ್.......ಪಕ್ಕರೆಯಿಕ್ಕಿದ ಜಾಯಿಲಂ....ತುರಂಗಸಾಧನ" ಇದು ಕುರುಕ್ಷೇತ್ರದಲ್ಲಿ ಸೇರಿದ ಕೌರವ ಪಾಂಡವರ ತುರಂಗ ಸಾಧನವನ್ನು ವರ್ಣಿಸುವಲ್ಲಿ ಬಂದರೆ, ಇನ್ನೊಂದು ಪ್ರಯೋಗ ಆದಿಪುರಾಣದಲ್ಲಿ ದಿಗ್ವಿಜಯೋದ್ಯುಕ್ತನಾದ ಭರತ ಚಕ್ರವರ್ತಿಯು ಚತುರಂಗ ಬಲವನ್ನು ವರ್ಣಿಸುತ್ತ ತುರಂಗ ಸಾಧನವನ್ನು ವರ್ಣಿಸುವಲ್ಲಿ ಬರುತ್ತದೆ:

ವನಧಿಯ ನೀಳ್ದ ಪೆರ್ದೆರೆಗಳೀ ನೆಲನಂ ಕವಿವಪ್ಪುವೀಗಳೆಂ |
ಬಿನಮತಿ ವೇಗದಿಂ ಪರಿವ ಪಾರುವ ಲಕ್ಕೆಯನೊಡ್ಡುವೊಳ್ಪುವ ತ ||
ನ್ನನೆ ನಡೆ ನೋಡಿಸುತ್ತುಮಿರೆ ಜಾಯಿಲವೊಂದೆರಡೆಂದು ತೋಱೆ ನೆ |
ಟ್ಟನೆ ಪದಿನೆಂಟು ಕೋಟಿ ವರೆಗಂ ತಳರ್ದತ್ತು ತುರಂಗ ಸಾಧನಂ ||

—ಆದಿಪುರಾಣ, ಆ. ೧೧-೩೧

ಈ ಎರಡು ಪದ್ಯಗಳಲ್ಲೂ 'ಜಾಯಿಲ'ಕ್ಕೆ ನಾಯಿಯೆಂದು ಅರ್ಥಯಿಸಲು ಬರುವದಿಲ್ಲ. ಶ್ರೇಷ್ಠ ಕುದುರೆ ಅರ್ಥಾತ್ 'ಜಾತ್ಯಶ್ವ'ಗಳೆಂದೇ ಅರ್ಥವನ್ನು ಹೇಳಬೇಕಾಗುತ್ತದೆ. ಇದ್ದುದು ಕೂಡ ಅಷ್ಟೆ. ಇಲ್ಲಿ ನಾಯಿಯು ಅಭಿಧಾರ್ಥ ಇಲ್ಲವೆ ಇಲ್ಲ. ಹಾಗಾದರೆ ಕುದುರೆಗೆ 'ಜಾಯಿಲ' ಎಂಬ ಮಾತು ಬಂದುದು ಹೇಗೆ? ಇದನ್ನು ಎರಡು ರೀತಿಯಿಂದ ಉತ್ತರಿಸಬಹುದು. ಒಂದನೆಯದಾಗಿ ಲಕ್ಷಣಾರ್ಥವಾಗಿಯಾದರು ಹೇಳಬಹುದು; ಎರಡನೆಯದಾಗಿ ಕವಿ ಹೊಸದಾಗಿ ಈ ಶಬ್ದವನ್ನು ಈ ಅರ್ಥದಲ್ಲಿ ಸೃಷ್ಟಿಸಿರಬಹುದು.

ಬೇಟೆಯ ನಾಯಿ ಹೇಗಿರಬೇಕೆಂಬುದನ್ನು 'ಸೂಕ್ತಿ ಸುಧಾರ್ಣವ'ಪದ್ಯವೊಂದು ಹೀಗೆ ನಿರೂಪಿಸುತ್ತದೆ:

ಅರುಣಾಸ್ಯಂ ಲೋಲಜಿಹ್ವಾನ್ವಿತಸಿತರವನಂ ಬಭ್ರುನೇತ್ರಂ ಸುಹ್ಮನ್ಮೇ
ದುರಕಂಠಂ ಜೂಡಕಕ್ಷಂ ಕೃಶಲಸದುದರಂ ಪಾಂಸುನಿರ್ಮಾಂಸಪಾದಂ
ಗುರು ದೀರ್ಘಾಪ್ಲುಷ್ಟಪೃಷ್ಠಂ ದೃಢವಿಶಿಖನಖಂ ತುಚ್ಛಪುಚ್ಛ ಸುಲೋಮಂ
ಸ್ಥಿರಕರ್ಣಂ ಸಿಂಹನಾದಂ ಪವನಜವನನಾ ಶ್ವಾನನಾದಾನದಾಮಂ ||[೩೧]

ನಾಯಿಯ 'ಪವನಜವನ' ಹಾಗೂ ಕುದುರೆಯ 'ಅತಿ ವೇಗದಿಂ ಪರಿವ ಪಾರುವ' ಗುಣವನ್ನು ಲಕ್ಷಿಸಿ ಜಾಯಿಲಕ್ಕಿರುವ ಅಭಿಧಾರ್ಥವನ್ನು ಬಿಟ್ಟುಕೊಟ್ಟು ಅದರ ನಡಿಗೆಯುನ್ನುಳ್ಳ ಕುದುರೆಯೆಂದು ಲಕ್ಷಣಾರ್ಥವನ್ನು ಪರಿಗ್ರಹಿಸಿದರೆ 'ಜಾತ್ಯಶ್ವ' ಎಂದು ಅರ್ಥ ಹೇಳಬಹುದು. ಜಾತ್ಯಶ್ವದ ಪಂಚಗತಿಗಳನ್ನು ಬಲ್ಲವರಿಗೆ ನಾನೇನು ಹೊಸದಾಗಿ ಹೇಳಬೇಕಿಲ್ಲ. ಆ ಪಂಚಗತಿಗಳೆಂದರೆ (ಪದಗತಿಗಳು).

೩೧. 'ಸೂಕ್ತಿಸುಧಾರ್ಣವ' (ಸಂ. ಎನ್. ಅನಂತರಂಗಾಚಾರ್) ಪುಟ ೪.

೧) ದೊಡ್ಡನಡಿಗಿ (ದೊಡ್ಡನಡಿಗೆ)
೨) ತೂಗು ನಡಿಗಿ (ತೂಗು ನಡಿಗೆ)
೩) ಸಣ್ಣ ಓಟ—ಚಾತರಕಿ (ಚತುರಗತಿ?)
೪) ದೊಡ್ಡೋಟ —ನಾಯಿ ನಡಿಗಿs—ಕುಕ್ಕಲೋಟ[೩೨]
೫) ಕುಣಿತ (ತಮಟೆಯ ತಾಳಕ್ಕೆ ಅನುಸಾರವಾಗಿ ಕುಣಿಯೋಣ).

ದೊಡ್ಡ ನಡಿಗೆ, ತೂಗುನಡಿಗೆ, ದೊಡ್ಡೋಟ, ಹುಟ್ಟನಿಂದಲೆ ಜಾತ್ಯಶ್ವಗಳಿಗೆ ಬೆಳೆದು ಬಂದ ಗುಣವಾಗಿರುತ್ತವೆ. ತಟ್ಟುಗಳು (ಸಣ್ಣ ಕುದುರೆ) ಪಳಗಿಸಿದರೆ ಮಾತ್ರ ಈ ನಡಿಗೆಗಳನ್ನು ಕಲಿಯಬಲ್ಲವು, (ವಿಶೇಷವಾಗಿ) ಕೆಲ ಅಂತರ ದೂರ ಹೋಗಬಲ್ಲವು. ದೊಡ್ಡ ಕುದುರೆಗಳ ಹಾಗೆ ಸತತ ಹೋಗಲಾರವು. 'ಚಾತರಕಿ' ಇಲ್ಲವೆ ಸಣ್ಣ ಓಟ ತಟ್ಟುವಿನ ವಿಶೇಷ ಲಕ್ಷಣ. ದೊಡ್ಡೋಟ (ನಾಯಿ ನಡಿಗಿs, ಕುಕ್ಕಲೋಟ) ದಂಡಿನ ಕುದುರೆಗಳು ಮಾತ್ರ ಹೋಗಬಲ್ಲ ವಿಶೇಷ ಲಕ್ಷಣ. ಗುರಿ ಮುಟ್ಟುವ ವರೆಗೆ ಓಡಬಲ್ಲವು (ಬೇಟೆಯ ಜಾಯಿಲಗಳು ಅಷ್ಟೆ, ತಾನೆ ?). ಇನ್ನು ಕುಣಿತ, ಇದನ್ನು ಕೂಡ ಸಾಮಾನ್ಯವಾಗಿ ಉತ್ತಮ ಕುದುರೆಗೇನೆ ಕಲಿಸಲಾಗಿರುತ್ತದೆ. ಮದುವೆ, ಮುಂಜಿವೆ, ಜಾತ್ರೆಗಳಲ್ಲಿ ಮೆರವಣಿಗೆಯ ಕಾಲಕ್ಕೆ ಕುದುರೆಗಳನ್ನು ಸುಂದರವಾಗಿ ಅಲಂಕರಿಸಿಕೊಂಡು ಬಂದು ಕುಣಿಸುತ್ತಾರೆ. 'ಮಜಲು' ಮಾಡುತ್ತ ಮೆರವಣಿಗೆಯನ್ನು ಪೂರ್ತಿಗೊಳಿಸುತ್ತಾರೆ.[೩೩]

---

೩೨. ಶ್ರೀ ನವರತ್ನ ರಾಮರಾಯರ 'ಕೆಲವು ನೆನಪುಗಳು' (ಪುಟ ೨೬೯) ಎಂಬ ಗ್ರಂಥದಲ್ಲಿ 'ಕುಕ್ಕುಲೋಟ'ದ ಪ್ರಯೋಗ ಬಂದಿರುದನ್ನು ತಿಳಿಸಿದವರು, ಗುರುಗಳಾದ ಶ್ರೀ T. V. V. ಶಾಸ್ತ್ರಿಗಳು, ಕುರ್ಕರಾ (ಸಂ.) (ನಾಯಿ)> ಕುಕ್ಕಲು+ಓಟ= ಕುಕ್ಕಲೋಟ. 'ಕುಕ್ಕ' ಎಂಬ ಪದ ಕನ್ನಡಕ್ಕೆ ತೆಲುಗಿನಲ್ಲಿ ಹೆಚ್ಚು ಬಳಿಕೆಯಲ್ಲಿದೆ.

೩೩. (A) ಕುದುರೆಯ ಕುಣಿತ ಜಾನಪದ ಗೀತದಲ್ಲಿ ಜೀವಂತವಾಗಿ ಉಳಿದಿದೆ:

ಹೆಣ್ಣಸಲ ಜಾತಿ ಪದ್ಮಿನಿ
ಸುರತ ಚಂದ್ರುಣಿ
ಹೊಂಟ ನಾಗಿಣಿ ನೋಡ ತಿರುಗಿ
ಮರಿಗುದರಿ ಕುಣಿಸಿದಂಗ ನಾಜೂಕ ನಿನ್ನ ನಡಿಗಿ
ಹೊಳಿ ನೀರ ತೆರಿಯ ಹೊಡಿದಂಗ ಒದುತೆ ನಿರುಗಿ
ತ್ರಿsಲೋಕ ತಿರುಗಿ ಬಂದೆ ಹಾಡಿ
ಇಲ್ಲ ನಿನ್ನ ಜೋಡಿ
ರಂಬಿ ನಿನ್ನ ನೋಡಿ ನಾಚ್ಯಾಳ ಕಡಿಗಿ ॥ ಪ ॥ —ಜೀವನ ಸಂಗೀತ

(ಡಾ. ಡಿ. ಎಸ್. ಕರ್ಕಿ, 'ಕನ್ನಡ ಛಂದೋ ವಿಕಾಸ' ಪುಟ ೨೪೯).

(B) ಕುದುರೆಯ ಕುಣಿತವನ್ನು ಮೈಸೂರತ್ತ "ಪೆಗುಟಾಕಣದ ಕ್ರಮವರಿತ ನಿಬ್ಬಣದ ನಡಿಗೆ" ಎಂದು ಹೇಳಲಾಗುತ್ತದೆ (ನೋಡಿ: ಎಸ್. ಅನಂತ ರಂಗಾಚಾರ, 'ಲಕ್ಷ್ಮೀಶ' ಪುಟ ೫೨).

ಕುದುರೆಗಳ ನಡಿಗೆಯನ್ನು ಆಧಾರವಾಗಿಟ್ಟುಕೊಂಡು ' ಜಾಯಿಲ 'ದ ನಿಷ್ಪತ್ತಿ ಹೇಳುವದಾದರೆ, ಕಂಠ ಪಾಠ ಮಾಡಿ ಪಾಠ ಒಪ್ಪಿಸುವ ಹುಡುಗನಿಗೆ ' ಗಿಳಿ ' ಎಂದು ಹೇಳುವ ಹಾಗೆ ' ಜಾಯಿಲ 'ದಂತೆ ನಡಿಗೆಯುಳ್ಳ ಕುದುರೆಗೆ 'ಜಾಯಿಲ' ಎಂದು ಹೇಳಬಹುದೆಂದು ತೋರುತ್ತದೆ.

' ಜಾಯಿಲ 'ದ ನಿಷ್ಪತ್ತಿ ಇನ್ನೊಂದು ದಿಶೆಯಿಂದಲೂ ಹೇಳಬಹುದೇನೊ? ಅದೆಂದರೆ, ವಾಜಿಯು ಯಾಜಿಯು ಸಂಪದಗಳಲ್ಲೊಂದಾದುದರಿಂದ, ' ಯಾಜಿ ' ಶಬ್ದ ಕನ್ನಡಕ್ಕೆ ಬರುವಾಗ್ಗೆ ಅದೂ ಪ್ರಾಕೃತದ ಮೂಲಕ ಬರುವಂದು ಜಾಇ' (ಜಾಯಿ) ಎಂಬ ರೂಪವನ್ನೆ ತಳೆದು ಬರಬೇಕಾಗುತ್ತದೆ. ಏಕೆಂದರೆ ಯಾಜಿನ್' ಶಬ್ದ ಪ್ರಾಕೃತ ಪರಿಚಯುವಿದ್ದವರಿಗೆ ' ಜಾಇಅ ' ಆಗುತ್ತದೆಂಬುದು ಸುವಿದಿತ.[೩೪] ' ಯಜ್ಞ ' ಕೂಡ ಪ್ರಾಕೃತದ ದ್ವಾರಾ ' ಜನ್ನ 'ವಾಗಿ ಕನ್ನಡಕ್ಕೆ ಬಂದಿದೆ.[೩೫] ಗುಣವಾಚಕ ಹಾಗೂ ಲಕ್ಷಣವಾಚಕ ಪ್ರತ್ಯಯುವಾದ ' ಲ ' ಸೇರಿ ಬರುವ ಶಬ್ದಗಳ ಹಾಗೆ ಉದಾಹರಣಾರ್ಥವಾಗಿ ' ಕುಂದಲ ' (ಕುಂದಲದೇವಿ)[೩೬] ' ಚಾಗಲ ' (ಚಾಗಲದೇವಿ)[೩೭] ' ಚಟ್ಟಲ ' (ಚಟ್ಟಲದೇವಿ)[೩೮] ' ಮೇಚಲ ' (ಮೇಚಲದೇವಿ)[೩೯] ' ಬಾಚಲ ' (ಬಾಚಲದೇವಿ)[೪೦] ' ಶಾಂತಲ ' (ಶಾಂತಲದೇವಿ)[೪೧] ಇತ್ಯಾದಿಗಳಂತೆ ' ಜಾಯಿ + ಲ > ಜಾಯಿಲ ' ಆಗುತ್ತದೆ. ಯಜ್ಞಕ್ಕೆ ಬೇಕಾದ ಕುದುರೆಗೆ ಕೆಲ ಲಕ್ಷಣಗಳು ಇರಲೇಬೇಕಾದುದರಿಂದ ಅಂಥ ಕುದುರೆಗಳಿಗೆ ಜಾಯಿಲಗಳು ಎಂದು ಹೇಳಬಹುದು. ಸಂಸ್ಕೃತ ಜೈಮಿನಿಭಾರತದ ಪ್ರಕಾರ ಅಶ್ವಮೇಧಯಜ್ಞಕ್ಕೆ ಬೇಕಾದ ಕುದುರೆ ಕುಂದ ಪುಷ್ಪದ ವರ್ಣ ಮುಂತಾಗಿ ಬಿಳಿಯು ಕುದುರೆಯಾಗಿರಬೇಕು ; ಕರಿಯು ಕುದುರೆ

---

೩೪. ' ಪಾ ಇ ಅ ಸದ್ದ ಮಹಣ್ಣವೊ ' ದಲ್ಲಿ ' ಜಾ ಇ ಅ ' (ಯಾಜಿನ್) ಶಬ್ದವನ್ನು ನೋಡಿ.

೩೫. ಯಜ್ಞ (ಸಂ) >ಜಣ್ಣೋ (ಪ್ರಾ) > ಜನ್ನ (ಕ)— ಕನ್ನಡ ಕೈಪಿಡಿ (ಮೈ. ವಿ. ವಿ.) ನಾಲ್ಕನೆ ಮುದ್ರಣ
ಪುಟ ೩೨.

೩೬. ' ಶಾಸನ ಪದ್ಯ ಮಂಜರಿ ' (ಸಂ. ರಾ. ನರಸಿಂಹಾಚಾರ್) ಪುಟ ೮.

೩೭. ಅದೇ ಪುಟ ೧೫.

೩೮. ಅದೇ ಪುಟ ೨೮.

೩೯. ಅದೇ ಪುಟ ೩೦.

೪೦. ಅದೇ ಪುಟ ೪೨.

೪೧. ಅದೇ ಪುಟ ೪೯

ಆದರೂ ಆಗ ಬಹುದು.[೪೨] ಕಾರಣ ಸುಂದರ ಸಿತಾಸಿತಾಶ್ವಗಳು ಮಾತ್ರ ಯಾಜಿಗೆ ಯೋಗ್ಯವೆಂದು ತಿಳಿಯುಬಹುದು. ಯಜ್ಞಕ್ಕೆ ಆಹುತಿಯನ್ನು ಕೊಡುವ ಪ್ರಾಣಿ ಸಂಪದಗಳಲ್ಲಿ ಮೇಕೆಯೂ ಒಂದಾಗಿರುವದರಿಂದ 'ಜಾಯಿಲ' ಎಂದರೆ 'ಮೇಕೆ' ಎಂದು ಏಕೆ ಹೇಳಬಾರದೆಂಬ ಪ್ರಶ್ನೆ ಎತ್ತಬಹುದು. ಆದರೆ 'ಅಶ್ವಕ್ಕೆ' ಇಂಥಿಂಥ ವಿಶೇಷ ಲಕ್ಷಣಗಳು ಅವಶ್ಯವೆಂದು ಹೇಳಿದ ಹಾಗೆ 'ಅಜಕ್ಕೆ' ಇಂಥಿಂಥ ವಿಶೇಷ ಲಕ್ಷಣಗಳು ಇರಬೇಕೆಂದು ಹೇಳಲಾಗುವದಿಲ್ಲ. ಯಜ್ಞಕ್ಕೆ ಬೇಕಾದ ವಿಶೇಷ ಲಕ್ಷಣಯುಕ್ತ ಪ್ರಾಣಿಯೆಂದರೆ ಅಶ್ವವೊಂದೇ ಕಾರಣ 'ಜಾಯಿಲ' ಎಂದರೆ ದಿವ್ಯ ಕುದುರೆ ಅರ್ಥಾತ್ 'ಜಾತ್ಯಶ್ವ" ವೆಂದೇ ಹೇಳಬೇಕಾಗುತ್ತದಲ್ಲದೆ ವಿನಾ ಮೇಕೆ ಎಂದು ಹೇಳಲು ಸಾಧ್ಯವಿಲ್ಲ. ಪಂಪನು ಈ ಶಬ್ದವನ್ನು ಹೀಗೇನಾದರೂ ಸ್ವಯಂ ಸೃಷ್ಟಿಸಿರಬಹುದೆ? ಕುದುರೆಯನ್ನು ದಿವ್ಯಪ್ರಾಣಿಯೆಂದು ಬಗೆಯಲಾಗಿದೆ. ವಿಜಯ ದಶಮಿಯಂದು ಅದರ ಮೈಯನ್ನು ತೊಳೆದು ಆರತಿ, ಪೂಜೆ ಇತ್ಯಾದಿಗಳನ್ನು ಮಾಡುವುದು ರೂಢಿಯಲ್ಲಿದೆ. ಅಲಂಕಾರ ಮಾಡುವುದಂತು ಸರಾಸರಿಯೆ. 'ಜಾಯಿಲ' ಇದು ಇದೇ ರೂಪದಲ್ಲಿ ಇಂದು ಬಳಕೆಯಲ್ಲಿಲ್ಲದಿದ್ದರೂ 'ಜಾಜಿ'[೪೩] ಅಥವಾ ಜಾಜಾ|ಝಾಜಾ ರೂಪದಲ್ಲಿ ಬಳಕೆಯಲ್ಲಿದೆ. ಸಣ್ಣ ಮಕ್ಕಳಿಗೆ ಕುದುರೆಯನ್ನು ತೋರಿಸುವಾಗ್ಗ ಸಾಮಾನ್ಯವಾಗಿ ಈ ಮಾತನ್ನು ಬಳಸಲಾಗುತ್ತದೆ ನಮ್ಮ ಪ್ರದೇಶಭಾಷೆಯಲ್ಲಿ. ಕಾರಣ 'ಜಾಯಿಲ'ಕ್ಕೆ 'ನಾಯಿ' ಒಂದು ಅರ್ಥವಾದರೆ ಇನ್ನೊಂದು ಅರ್ಥ 'ಜಾತ್ಯಶ್ವ'. ಮತ್ತೆ 'ಜಾಯಿಲ' ಎಂಬುದನ್ನು ಈಗ ಬಳಕೆಯಲ್ಲಿ 'ನಾಯಿ'ಗೆ ಪ್ರಯೋಗಿಸಲಾಗುವದಿಲ್ಲವೆಂಬುದನ್ನೂ ಗಮನಿಸಬೇಕು.

'ಜಾಯಿಲ' ಇದರ ವ್ಯುತ್ಪತ್ತಿಯನ್ನು ಸಂಸ್ಕೃತ ಧಾತು 'ಯಾ' ಮತ್ತು ಕನ್ನಡದ ತದ್ಧಿತ ಪ್ರತ್ಯಯ 'ಆಯಿಲ' ಎಂಬವುಗಳ ಸಂಯೋಗದಿಂದ ಎಂಬೊಂದು ಊಹೆಯನ್ನು ಶ್ರೀ ಬಿ. ಎಸ್. ಕುಲಕರ್ಣಿ ಅವರು ನಮ್ಮ ಮುಂದೆ

---

೪೨. "ಯಜ್ಞಾಶ್ವವು ಪಸುವಿನ ಹಾಲು, ಕುಂದ ಪುಷ್ಪ, ಚಂದ್ರ, ಹಿಮ ಇವುಗಳಂತೆ ಬಿಳುಪಾಗಿಯೂ, ಹಳದಿಯ ಬಣ್ಣದ ಬಾಲವೂ ಕಪ್ಪಾದ ಕಿವಿಯುಳ್ಳದ್ದಾಗಿಯೂ ವೇಗಶಾಲಿಯಾಗಿಯೂ ಇರಬೇಕು; ಕಪ್ಪು ಬಣ್ಣದ ಕುದುರೆಯಾದರೂ ಆಗಬಹುದು. —(ಸಂ. ಜೈಮಿನಿ ಭಾರತದ ಆಶ್ವಮೇಧಿಕ ಪರ್ವ- ಕನ್ನಡ ಅನುವಾದ, ಕಾ.ಸಾ.ಪ., ಯಜ್ಞಾಶ್ವವನ್ನು ಕುರಿತ ಲಕ್ಷ್ಮೀಶನ ವರ್ಣನೆ ಇಷ್ಟು ಶಿಥಿಲ ಲಕ್ಷಣವುಳ್ಳದ್ದಾಗಿಲ್ಲ) ನೋಡಿ : ಲ.ಜೈ.ಭಾ. ಸಂಧಿ ೨, ಪದ್ಯ ೨೬.

೪೩, 'ಜಾಜಿ' ಇದು ಜಾಯಲಜೀ>ಜಾಯಿಲಜಿ>ಜಾಜಿ ಹೀಗೆ ಮಾತಿನಲ್ಲಿ ರೂಪಗೊಂಡಿರಬಹುದು ಕಾಲಕ್ರಮದಲ್ಲಿ.

ಇಟ್ಟಿದ್ದಾರೆ.[೪೪] ಆದರೆ 'ಆಯಿಲ' ಎಂಬ ತದ್ಧಿತ ಪ್ರತ್ಯಯ ಕನ್ನಡದಲ್ಲಿದೆ ಎಂಬುದು ಸ್ಥಿರವಾದಾಗ ಇದು ಸರಿಹೋಗಬಹುದು. ನಮಗೆ ಪಂಪನ ಕಾಲಕ್ಕೆ 'ಆಯಿಲ' ಎಂಬ ಪ್ರತ್ಯಯ ಇದ್ದಂತೆ ಕಂಡುಬರುವದಿಲ್ಲ. ಪಂಪನಂತು "ಘೋಳಾಯ್ಲರ್"[೪೫] ಎಂದು ಪ್ರಯೋಗಿಸಿದ್ದಾನೆಯಾದ ಕಾರಣದಿಂದ ಈ ಶಬ್ದದಲ್ಲಿ 'ಆಯಿಲ' ಇದೆ ಎಂದು ಹೇಳಲು ಬರುವದಿಲ್ಲ ಇಲ್ಲಿದ್ದುದು 'ಆಯ್ಲ' ಎಂದು ಕಣ್ಣಿಗೆ ಕಂಡರೂ ಇನಿತು ವಿಚಾರಿಸಿದರೆ ಅದು ಸರಿಯಲ್ಲವೆಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ ಈ ರೂಪ ಧಾತುವಿನ ಮೂಲ ರೂಪದ ಸ್ವಿಕಾರದ ಮೇಲೆ ನಿಂತಿದೆ: (ಅ) ಘೋಟಕ: > ಘೋಡಾ > ಘೋಟಾ + ಇಲ ಇಲ್?) + ಅರ್ = ಘೋಳಾಯ್ಲರ್ (?) (ಆ) ಘೋಟಕ > ಘೋಡ > ಘೋಟ + ಇಲ = ಘೋಟಯಿಲ. ಘೋಟಯಿಲಂ, ಪಚ್ಚಯಿಲಂ. ಪಡೆಯಿಲಂ, ಗಾವಿಲಂ ಇತ್ಯಾದಿ ಪ್ರಯೋಗಗಳನ್ನು ಕೊಟ್ಟು 'ಇಲ' ಎಂಬ ತದ್ಧಿತ ಪ್ರತ್ಯಯವಿದೆಯೆಂದೇ ಹೇಳುತ್ತಾನೆ ಕೇಶಿರಾಜ.[೪೬] ಇಲ್ಲೆಲ್ಲ 'ಯ' ಕಾರಾಗಮ ಸಂಧಿಯಿದೆಯೆಂಬುದು ಸ್ಪಷ್ಟ. ಕಾರಣ 'ಆಯಿಲ' ಹಾಗು "ಆಯಿಲ" ಎಂಬ ತದ್ಧಿತ ಪ್ರತ್ಯಯಗಳು ಇಲ್ಲವೆಂದು ನಿರ್ಧಾರವಾಗುತ್ತದೆ.[೪೭] ಇದೇ ಪ್ರಯೋಗಗಳನ್ನು ಆಧಾರವಾಗಿಟ್ಟುಕೊಂಡರೆ. ಇನ್ನು "ಯಾ" ಇದು "ಜಾ + ಇಲ = ಜಾಯಿಲ" ಆಗಿದೆಯೆಂದರೆ ಮನುಷ್ಯನಿಂದ ಹಿಡಿದು ಎಲ್ಲ ಚರ ಪ್ರಾಣಿಗಳು ಜಾಯಿಲಗಳಾಗಬೇಕಾಗುತ್ತದೆ. ಆಗ ನಾಯಿ ಅಥವಾ ಕುದುರೆ ಎಂಬ ವಿಶೇಷತೆಗೆ ಬಾಧೆ ಬರುತ್ತದೆ. ಏಕೆಂದರೆ ಎಲ್ಲ ಚರಪ್ರಾಣಿಗಳು ಗತಿಯುಳ್ಳವಾಗಿವೆ (ಯಾ = ಗತಿ). ನಮಗಾದರೊ ನಾಯಿಯೆಂಬ 'ಜಾಯಿಲ' ಮತ್ತು

---

೪೪. "ಜಾಯಿಲ" ಎಂದರೇನು ?....ಬಿ. ಎಸ್. ಕುಲಕರ್ಣಿ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಸಂಪುಟ ೪೦, ಸಂಚಿಕೆ ೧ ಮತ್ತು ೨, ಪುಟ ೪೫-೪೬.

೪೫. 'ಪಂಪಭಾರತ' (ಕ.ಸಾ.ಪ.ಮು.) ಪದ್ಯ ೫೧೮, ಆಶ್ವಾಸ ೧೦, ಪುಟ ೨೬೦.

೪೬. ಕೇಶಿರಾಜ, ಶಬ್ದಮಣಿ ದರ್ಪಣಂ (ಸಂ. ಪ್ರೊ. ಡಿ. ಎಲ್. ನರಸಿಂಹಾಚಾರ್—ಮೂರನೆಯ ಮುದ್ರಣ) । ತದ್ಧಿತ ಪ್ರಕರಣಂ':

ಏನಾನುಮೊಂದು ಭಾವಮ
ನಾನಲ್ ಸಲ್ಪವನೊಳಱಿಗೆ ಕಪ್ರತ್ಯಯಮಂ
ಪೀನಂ ತದ್ವರ್ತನಗತ-
ಮಾನವನೋಳ್ ತಿಳಿಗೆ ಮತ್ತಿಲ ಪ್ರತ್ಯಯಮಂ ॥

ಸೂತ್ರ ೨೧೬ ಪುಟ ೨೨೩-೨೪.

೪೭. ಕನ್ನಡ ಕೈಪಿಡಿ (ಮೈ.ವಿ.ವಿ.) ಭಾಗ ೧ರಲ್ಲಿ ಈ ಎರಡು ಪ್ರತ್ಯಯಗಳನ್ನು ನಿರೂಪಿಸಿದುದರ ಅರಿವು ಈ ಲೇಖಕನಿಗಿದೆ. ಆ ನಿರೂಪಣೆ ಸರಿಯಲ್ಲವೆಂದು ನಮ್ರನಾಗಿ ತಿಳಿಸಬೇಕಾಗಿದೆ. ಕನ್ನಡ ಕೈಪಿಡಿ (ನಾಲ್ಕನೆಯ ಮುದ್ರಣ) ಪುಟ ೧೮.

ಜಾತಶ್ವವೆಂಬ 'ಜಾಯಿಲ'ಗಳ ವ್ಯುತ್ಪತ್ತಿ ಭಿನ್ನ ಮೂಲಗಳಿಂದೆಂದು ಕಂಡು ಬರುತ್ತದೆ. ನಾಯಿಯೆಂಬರ್ಥದ 'ಜಾಯಿಲ' (ಶಬ್ದವು) ಬೇಟೆಗೆ ಬೇಡರಬಿಲ್ಲಿನ ಹಗ್ಗದಲ್ಲಿ ಬಂಧಿತವಾಗಿ (ನಿರತವಾಗಿ) ಹೋಗುವದರಿಂದ ಅದು ಜಾಯಿಲ : ಜ್ಯಾ (ಬಿಲ್ಲಿನಹಗ್ಗ) + ಇಲ > ಜಾಯಿಲ. ಜಾತ್ಯಶ್ವವೆಂಬ 'ಜಾಯಿಲ' ಯಾಜಿಯ ಲಕ್ಷಣ ವುಳ್ಳದ್ದಾದುದರಿಂದ— ಆದರಿಂದ ಭಿನ್ನ. ಯಾಜಿ > ಜಾಯಿ + ಲ = ಜಾಯಿಲ ಆಗುವದನ್ನು ಈಗಾಗಲೆ ವಿವರಿಸಿಯಾಗಿದೆ. ಕಾರಣ ಈ ಎರಡು ಜಾಯಿಲ ಶಬ್ದ ಗಳು ಭಿನ್ನಭಿನ್ನವೆಂದು ಪರಿಗಣಿಸುವುದು ಲೇಸು. ಪಂಪನು ತನ್ನೆರಡು ಗ್ರಂಥ ಗಳಲ್ಲೂ "ಜಾತ್ಯಶ್ವ"ವೆಂಬರ್ಥದಲ್ಲೆ ಪ್ರಯೋಗಿಸಿದ್ದಾನೆಂದಿಟ್ಟುಕೊಳುವುದು ಸಮಂಜಸ. ಆಗ "ತೊಳಗುವ ಬಾಳ್.......ಸಾಧನ," ಎಂಬ ಪದ್ಯದ ಭಾವ, ಸೌಂದರ್ಯಕ್ಕೆ ಹೆಚ್ಚಿನ ಮೆರಗುಬರುತ್ತದೆ. "ಜಾಯಿಲ"ಕ್ಕೆ[೪೮] ನಾಯಿಯೆಂದೂ "ಮಾಳಜಿಗೆ" ಎಂದರೆ ಆಯುಧವೆಂದೂ[೪೯] ಅರ್ಥ ಇಟ್ಟು ಕೊಂಡರೆ ಈ ಪದ್ಯದ ಅರ್ಥ ಹೇಳುವದಕ್ಕೆ, ಭಾವದಭಿವ್ಯಕ್ತಿಗೆ ಅಸ್ತವ್ಯಸ್ತ ತೆಯುಂಟಾಗುತ್ತದೆ.

ಇನ್ನು ಪದ್ಯದಲ್ಲಿ ಬರುವ ಕಠಿಣ ಶಬ್ದಗಳ ಅರ್ಥದ ಮೆಟ್ಟಲನ್ನು ಏರಿ ಕವಿತೆಯ ಭಾವವನ್ನು ತಿಳಿದುಕೊಳ್ಳೋಣ. ಅದನ್ನು ತಿಳಿಯಬೇಕಾದರೆ ಮೊದಲು ನಾವು ಪದ್ಯವನ್ನು ಅನ್ವಯಿಸಬೇಕು: ತಗುಳ್ದು ಪಕ್ಕರೆಯಿಕ್ಕಿದ ಜಾಯಿಲಂ,[೫೦] ತಗುಳ್ದು ತೊಗಳುವಬಾಳ್, ತಗುಳ್ದು ತಟತಟಿಪ ಕಕ್ಕಡೆ, ತಗುಳ್ದು ಬುಂಭುಕವೊಳ್, ತಗುಳ್ದು ಪಂಚರಾಯುಧಂ, ಅಗುರ್ವಿಸುವಾವುತಿ ಪೂಸಿದುಂತಿರೆ ಇಟ್ಟಳಮುಮುರ್ದಿರ್ದ ಮಾಳಜಿಗೆ ಭಯಂಗೊಳಿಸೆ ಕಡಂಗಿ ತಾಗಿದುದಸುಂಗೊಳೆ ತುಂಗ ತುರಂಗ ಸಾಧನಂ.

ಭಾವಾರ್ಥ:— ಹಲ್ಲಣವಿಕ್ಕಿದ ಕುದುರೆಯನ್ನು ಹೊಂದಿದ, ತೊಳಗುವ ಖಡ್ಗವನ್ನು ಹೊಂದಿದ, ಹೊಳೆಯುವ ಕಕ್ಕಡೆಯನ್ನು ಹೊಂದಿದ, ವಿಶೇಷ

---

೪೮. ಬಿ. ಎಸ್. ಕುಲಕರ್ಣಿ, "ಜಾಯಿಲ" ಎಂದರೇನು ?—ಪುಟ ೪೩ ಮತ್ತು ೪೬.

೪೯. ಡಾ. ಚಿದಾನಂದಮೂರ್ತಿ, 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'—ಪುಟ ೨೭೭.

೫೦. ಇದು ದೂರಾನ್ವಯವೆಂದು ತೋರಿದರೆ ಇಲ್ಲಿ ಇನ್ನೊಂದು ದೃಷ್ಟಿಯಿಂದ ಅರ್ಥವನ್ನು ಹೇಳಬಹುದು. ಅದೆಂದರೆ 'ಪಕ್ಕರೆಯಿಕ್ಕಿದ ಜಾಯಿಲಂ' ಎಂಬಲ್ಲಿ ಚತುರ್ಥಿಗೆ ದ್ವಿತೀಯಾ ವಿಭಕ್ತಿ ಪಲ್ಲಟವಾಗಿ ಬಂದಿದೆಯೆಂದು ಚತುರ್ಥಿಗೆ ದ್ವಿತೀಯೆ ಬರುವುದು. ಶಾಸ್ತ್ರವಿಷಯ ಪ್ರವೇಶದಲ್ಲಿ; ನೋಡಿ: ಕೇಶಿರಾಜ, 'ಶಬ್ದಮಣಿ ದರ್ಪಣಂ' ಸೂತ್ರ ೧೪೬ ಮತ್ತು ಅಲ್ಲಿನ ಪ್ರಯೋಗ, ಪೊನ್ನಂ ಬಡ್ಡಿಗೆ ಕೊಟ್ಟನೆಂಬಲ್ಲಿ ಪೊನ್ನಂ ಬಡ್ಡಿಯಂ ಕೊಟ್ಟನೆಂದಾಯ್ತು. ಇಲ್ಲಿ ಆಗ 'ಮತ್ತು ಆಕೆಯ ವಾಹನಕ್ಕೆ' ಎಂಬ ವಿಷಯವನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ. (ಶಬ್ದಮಣಿದರ್ಪಣಂ— ಸಂ. ಡಿ. ಎಲ್. ಎಸ್. ಪುಟ ೧೫೪-೫೫).

ಗರ್ಜನೆಯಿಂದ ಒಡಗೂಡಿದ, ಪ್ರಜ್ವಲಿಸುವ ಪಂಚರಾಯುಧವನ್ನು ತಳೆದ, ಬಲಿಯಾದ ಪ್ರಾಣಿಗಳ ರಕ್ತದಿಂದಲೇ ಲೇಪಿತಳಾಗಿರುವಳೊ ಎಂಬಂತೆ ರುದ್ರ ಮನೋಹರಳಾದ 'ಮಾಳಜಿ'ಗೆ (ಮಾಳಜಿಗೆ=ರಣಶ್ರೀಗೆ) ಭಯಗೊಳಿಸುವ ಹಾಗೆ ಕೌರವ ಪಾಂಡವರ ತುರಗ ಸೈನ್ಯಗಳು, ತಮ್ಮ ತಮ್ಮ ಪ್ರತಿಪಕ್ಷಗಳನ್ನು ನಿರ್ಮೂಲಮಾಡಬೇಕೆಂಬ ಉತ್ಸಾಹದಿಂದ ಭಯಂಕರವಾಗಿ ಕಾದಿದವು. ರಣದೇವತೆಗೆ[೫೧] ಭಯಂಕರವಾಗುವಂತೆ ತಾಗಿದವಂತೆ! ಮೊದಲು ಮಾಳಜಿಯನ್ನು ಕೆಲವು ಭಯೋತ್ಪಾದಕ ವಿಶೇಷಣಗಳ ಮೂಲಕ ಭಯಂಕರ ಮೂರ್ತಿಯನ್ನಾಗಿ ಚಿತ್ರಿಸಿ ಅಂಥ ಭಯಂಕರಳೂ ಭಯಗೊಳ್ಳುವಂತೆ, ತುರಂಗ ಸಾಧನಗಳು ತಾಗಿದವು ಎಂದು ತುರಂಗ ಸೈನ್ಯದ ಯುದ್ಧವನ್ನು ಉತ್ಪ್ರೇಕ್ಷಿಸಿದ್ದಾನೆ. ದೀಪಕಾಲಂಕಾರ ಮುಖೇನ ಮಾಳಜಿಯ ಪ್ರತಿಮೆಯನ್ನು ಸೃಷ್ಟಿಸಿ ಅವಳಿಗೆ 'ಭಯಂಗೊಳಿಸೆ' ಎಂಬಲ್ಲಿ ಉತ್ಪ್ರೇಕ್ಷಾಲಂಕಾರವನ್ನು ಬೆರಸಿ ಪಂಪನು ನಮ್ಮ ಮುಂದೆ 'ಸಂಸೃಷ್ಟಿ" ಅಲಂಕಾರದ ಸೌಂದರ್ಯವನ್ನು ಪ್ರದರ್ಶಿಸಿದ್ದಾನೆ.[೫೨] ಮಿಶ್ರಾಲಂಕಾರದಿಂದೊಡಗೂಡಿದ ಕವಿತೆಯಲ್ಲಿ ಅಲ್ಲಿನ ಅಲಂಕಾರಗಳು ತಿಲತಂಡುಲಗಳ ಹಾಗೆ ಭಿನ್ನವಾಗಿ ಕಂಗೊಳಿಸುತ್ತ ಏಕತ್ರವಾಗಿದ್ದರೆ ಅದು 'ಸಂಸೃಷ್ಟಿ', ಎಂಬುದು ವಿದ್ವಾಂಸರಮತ.[೫೩] ಈ ಸಂದರ್ಭದಲ್ಲಿ "ಕೊರಲೊಳ್ ಕಟ್ಟಿದ ದೇವಿಯಂತಿರೆ...........ನಿಮ್ಮೊಂದಭಿಪ್ರಾಯಮಂ" ಎಂಬ ಇದೇ ಹತ್ತನೆಯ ಆಶ್ವಾಸದ ಪದ್ಯ ಒಂಬತ್ತನ್ನು ಪ್ರಥಮಾಶ್ವಾಸದ ಪದ್ಯ ಆರನೆಯದನ್ನೂ ನಾವು ನೆನಪಿಗೆ ತಂದುಕೊಳ್ಳಬಹುದು.[೫೪] ಈ ಪದ್ಯಗಳು ಪಂಪನ 'ರಣಶ್ರೀ' ದೇವತೆಯ ಕಲ್ಪನೆಯನ್ನು ಕಂಡರಿಸಿವೆ.[೫೫]

★ ಸೀತಾರಾಮ ಜಾಗೀರದಾರ

---

೫೧. (a) ನಮ್ಮ ಪ್ರದೇಶದಲ್ಲಿ ಗ್ರಾಮದೇವತೆ ಅಶ್ವವಾಹನೆಯಾಗಿರುವುದನ್ನು ಇಂದಿಗೂ ಹತ್ತಾರು ಹಳ್ಳಿಗಳಲ್ಲಿ ನೋಡಬಹುದು.

(b) ಇಮ್ಮಡಿ ಮುರಿಗೆಯಸ್ವಾಮಿ (೧೫೯೦) ಯ ದೇವೀ ಸ್ತೋತ್ರದಲ್ಲಿ ದೇವಿಯನ್ನು "ಹಯವಾಹನೆ" ಎಂದು ಹೇಳಲಾಗಿದೆ—ಕ. ಕ. ಚ. ಭಾಗ ೩ ಅನುಬಂಧ.

೫೨. ವರಾ ವಿಭೂಷಾ ಸಂಸೃಷ್ಟಿರ್ಬಹ್ವಲಂಕಾರಯೋಗತಃ ।
ರಚಿತಾ ರತ್ನಮಾಲೇವ ಸಾ ಚೈನ ಮುದಿತಾಯಥಾ ॥ ೩-೪೯
-ಭಾಮಹ, ಕಾವ್ಯಾಲಂಕಾರ (ಡಾ. ಕೆ. ಕೃಷ್ಣಮೂರ್ತಿ) ಪುಟ ೬೮ (ಕ. ಕಾ.).

೫೩. ಕನ್ನಡ ಕೈಪಿಡಿ (ಮೈ. ವಿ. ವಿ.) ಭಾಗ ೧ ಪುಟ ೩೦೮.

೫೪. 'ಪಂಪಭಾರತ' ಪುಟ ೨೪೯ ಮತ್ತು ೨.

೫೫. ಈ ಲೇಖನವನ್ನು ಬರೆಯುವಲ್ಲಿ ಹಿರಿಯರಾದ ಡಾ. ಹಾ. ಮಾ. ನಾಯಕ. ಪ್ರೊ. ಪಾಂಡುರಂಗಾಚಾರ್ಯ ವೈದ್ಯ, ಪ್ರೊ. ಟಿ. ವಿ. ವೆಂಕಟಾಚಲ ಶಾಸ್ತ್ರಿ ಹಾಗೂ ಡಾ. ಎಮ್. ಚಿದಾನಂದ ಮೂರ್ತಿ ಇವರುಗಳಿಗೆ ಋಣಿಯಾಗಿರುವೆ.

ಭಾರತೀಯ ಇತಿಹಾಸಕ್ಕಾಗಿ ದುಡಿದ ಎಸ್. ಕೃಷ್ಣಸ್ವಾಮಿ ಅಯ್ಯಂಗಾರ

೧೮೭೧–೧೯೪೬

ಕಳೆದ ಶತಮಾನದ ಕೊನೆಯ ಹಂತ, ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತ ಶಾಸನದ ನಕಲನ್ನು ಓದಲು ದಕ್ಷಿಣ ಭಾರತದಲ್ಲಿ ಯಾವ ಪಂಡಿತನು ಎದೆತಟ್ಟಿ ಮುಂದೆ ಬರಲಿಲ್ಲ. ಈ ನಕಲನ್ನು ವ್ಹಿಯನ್ನಾ ಪಟ್ಟಣಕ್ಕೆ ಕಳಿಸಲು, ಅಲ್ಲಿಯ ತಜ್ಞರು ಇದು ಅಶೋಕನ ಶಾಸನವೆಂದು ಸಾರಿದರು. ಇಂಥ ಸನ್ನಿವೇಶದಲ್ಲಿ ಬಿಸಿರಕ್ತದ ಅಯ್ಯಂಗಾರರು ಈ ದಿಶೆಯಲ್ಲಿ ತಮ್ಮ ದಾರಿ ಕಾಣಲು ಹಂಬಲಿಸುತ್ತಿದ್ದರು. ಇತಿಹಾಸದ ಹೆಣಿಕೆಯಲ್ಲಿ ಶಾಸನಗಳ ಮಹತಿ ಕಂಡ ಡಾ. ಹುಲ್ಷರೂ ಅಯ್ಯಂಗಾರರನ್ನು ಶಾಸನಗಳ ಅಭ್ಯಾಸಕ್ಕೆ ಹುರಿದುಂಬಿಸಿದರು. ಪ್ರಾಚ್ಯವಸ್ತು ಮತ್ತು ಇತಿಹಾಸ ಸಂಶೋಧನೆಯಲ್ಲಿ ತೊಡಗಬೇಕೆಂದು ಅವರು ಕೈಕೊಂಡ ನಿರ್ಣಯ. ಅವರಿಟ್ಟ ದಿಟ್ಟ ಹೆಜ್ಜೆ, ಸಂಶೋಧಕರಿಗೆ ಅನುಕೂಲತೆ ಮಾನ-ಮರ್ಯಾದೆ, ಧನ ಇಲ್ಲದ ಕಾಲದಲ್ಲಿ. ಕೇವಲ ಇತಿಹಾಸ ವಿಷಯದ ಅಭಿ-ರುಚಿ ಹಾಗೂ ಸಂಶೋಧನೆಯ ಹುಚ್ಚು ಹುಮ್ಮಸ, ಕೃಷ್ಣಸ್ವಾಮಿ ಅಯ್ಯಂ-ಗಾರರನ್ನು ದುಡಿಯಲು ಪ್ರೇರಿಸಿದವು. ೧೯೧೪ರ ವರೆಗೆ ಆಶೆ ಆಮಿಷಗಳಿಲ್ಲದೆ ಸಾಗಿದ ಆ ಸಂಶೋಧನೆ ಅವರನ್ನು ಒಂದು ಸ್ಥಿಮಿತಕ್ಕೆ ತಂದಿತು. ಬಲ್ಲವರ ಗೆಳೆತನ, ಹಿರಿಯರ ಮಾರ್ಗದರ್ಶನ, ಮತ್ತು ಆಶೀರ್ವಾದ ಅವರಿಗೆ ತಮ್ಮ ಕ್ಷೇತ್ರದಲ್ಲಿ ಅಧಿಕಾರವಾಣಿಯನ್ನು ಕರುಣಿಸಿದವು. ಇತಿಹಾಸಕ್ಕಾಗಿ ತಮ್ಮ ಜೀವನದ ಸುಮಾರು ಐವತ್ತು ವರ್ಷ ಶ್ರಮಿಸಿದರು. ಭಾರತೀಯ ಇತಿಹಾಸ ಅವರ ಕಾರ್ಯಕ್ಷೇತ್ರ, ದಕ್ಷಿಣ ಭಾರತೀಯ ಇತಿಹಾಸ ಅವರ ಮನಮೆಚ್ಚಿದ ವಿಷಯ. ತಮಿಳು ಹಾಗೂ ಸಂಸ್ಕೃತ ಸಾಹಿತ್ಯವನ್ನು ಇವರು ಆಳವಾಗಿ ಅಭ್ಯಸಿಸಿದರು. ಐತಿಹಾಸಿಕ ಸತ್ಯ, ಸಾಹಿತ್ಯದ ಮೆರಗು, ಇವರ ಲೇಖನದ ಹೆಗ್ಗು-ರುತುಗಳು. ಅಯ್ಯಂಗಾರರು ಪ್ರಕಟಿಸಿದ ಕೆಲಗ್ರಂಥಗಳು ದೇಶ ವಿದೇಶ ಪಂಡಿತರ ಕಣ್ಣು ತೆರೆದವು. ಸಂಘ-ಸಂಸ್ಥೆಗಳ ಸದಸ್ಯತ್ವ, ಬಿರುದು ಬಾವಲಿಗಳು ಅವರೆಡೆಗೆ ಬಂದವು. ೧೯೩೬ರಲ್ಲಿ ಅವರ ೬೬ನೆಯ ಹುಟ್ಟುಹಬ್ಬವನ್ನು ಆಚರಿಸಿ ಅವರಿಗರ್ಪಿಸಿದ ಸಂಭಾವನೆ ಗ್ರಂಥ, ಹಾಗೂ ಅವರ ೭೦ನೆಯ ಹುಟ್ಟುಹಬ್ಬದ ಸಮಯದಲ್ಲಿ ಅವರ ಸಮಗ್ರ ಲೇಖನಗಳನ್ನು ಕಲೆಹಾಕಿ ಅವರಿಗರ್ಪಿಸಿದ ಸಂಗತಿ, ಅವರ ಜನಾನುರಾಗದ ಮಾಸಲಾರದ ಕುರುಹು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪ್ರಾಧ್ಯಾಪಕವೃತ್ತಿಯನ್ನು ಆರಂಭಿಸಿ, ಮದ್ರಾಸ ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ಪ್ರಾಧ್ಯಾಪಕರೆಂದು ಸೇವೆ ಸಲ್ಲಿಸಿದರು.

ಉದ್ದಾಮ ಇತಿಹಾಸಕಾರರಾಗಿ ಪ್ರಕಾಂಡ ಪಂಡಿತರಾಗಿ ಸೌಜನ್ಯ ಮೂರ್ತಿಯಾಗಿ ತುಂಬ, ಬಾಳು ಸಾಗಿಸಿ ಅಯ್ಯಂಗಾರರು ಅಮರರಾದರು.

ಸುಮಾರು ತೊಂಭತ್ತೊಂಭತ್ತು ವರ್ಷಗಳ ಹಿಂದೆ ಸಕ್ಕೋಟಾಯ ಎಂಬ ತಂಜಾವರ ಜಿಲ್ಲೆಯ ಗ್ರಾಮದಲ್ಲಿ ೧೫-೪-೧೮೭೧ರಂದು ಅಯ್ಯಂಗಾರರ ಜನನ. ನಾಲ್ಕು ಜನ ಸಹೋದರ ಸಹೋದರಿಯರಲ್ಲಿ ಮೂರನೆಯವರಾದ ಇವರ ಶಿಕ್ಷಣದ ಭಾರ ಅಣ್ಣನ ಮೇಲೆ ಬಿತ್ತು. ಅಣ್ಣನ ನೆರವಿನಿಂದ ಕೃಷ್ಣಸ್ವಾಮಿ ಅಯ್ಯಂಗಾರರು ಬೆಂಗಳೂರಿನ ಸೇಂಟ ಜೋಸೆಫ್ ಕಾಲೇಜಿನಲ್ಲಿ ಕಾಲಿರಿಸಿದರು. ಭೌತಶಾಸ್ತ್ರದ (Physics) ಪದವಿಗಾಗಿ ಸೆಂಟ್ರಲ್ ಕಾಲೇಜ ಸೇರಬೇಕಾಯಿತು. ಪ್ರಶಸ್ತಿ ಸಿಗದ್ದರಿಂದ ಸ್ನಾತಕೋತ್ತರ ವರ್ಗದಲ್ಲಿ ಅಭ್ಯಾಸದ ವಿಷಯವನ್ನೆ ಬದಲಿಸಿದರು. ಗಣಿತ ಶಾಸ್ತ್ರ (Mathematics) ಆಯ್ದು-ಕೊಂಡರು. ಅನಾನುಕೂಲತೆಯಿಂದ ಈ ವಿಷಯದ ಅಭ್ಯಾಸ-ಯಶಸ್ಸು ಕೈಗೂಡಲಿಲ್ಲ. ಇತಿಹಾಸದ ಅಭ್ಯಾಸ ಅವರ ಪಾಲಿಗೆ ಬಂದ ಪಂಚಾಮೃತವಾಯಿತು. ೧೮೯೯ರಲ್ಲಿ ಇತಿಹಾಸ ವಿಷಯದಲ್ಲಿ 'ಪ್ರಬಂಧ' ಸಾದರಪಡಿಸಿ ಎಂ.ಎ. ಪದವೀಧರರಾದರು. ಆಗ ಅವರಿಗೆ ೨೮ ವರ್ಷದ ಪ್ರಾಯ. ೧೯೦೦ರ ಮೇ, ಮಾಡರ್ನ ರಿವ್ಯೂದಲ್ಲಿ ಈ 'ಪ್ರಬಂಧ' ಪ್ರಕಟವಾಗಿದೆ. ಅವರ ಸಾಮರ್ಥ್ಯವನ್ನು ಅರಿತ ಮೇಲಾಧಿಕಾರಿಗಳು ಅಯ್ಯಂಗಾರರನ್ನು ಸೆಂಟ್ರಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರೆಂದು ನೇಮಿಸಿದರು. ಇಂಗ್ಲೀಷು ಅವರು ಕಲಿಸಿದ ಮೊದಲನೆಯ ವಿಷಯ. ಆಮೇಲೆ ಇತಿಹಾಸ ವಿಷಯವನ್ನು ಕೈಗೆತ್ತಿಕೊಂಡು ಕೊನೆಯ ವರೆಗೂ ಆ ಕ್ಷೇತ್ರದಲ್ಲಿ ದುಡಿದರು. ಶಿಕ್ಷಣ ಶಾಖೆಯ ಮೇಲಾಧಿಕಾರಿಯೆಂದು ವರ್ಗ ಹೊಂದಿ ಎರಡು ಮೂರು ವರ್ಷ ಅವರು ಬೇರೆ ಕಡೆಗೆ ಹೋಗಬೇಕಾಯಿತು. ಆದರೂ ವಿರಾಮ ವೇಳೆಯನ್ನು ಇತಿಹಾಸದಲ್ಲಿ ಸಂಶೋಧನೆಗಾಗಿ ಮೀಸಲಿರಿಸಿದರು. ೧೯೧೪ರ ವರೆಗೂ ಹೆಣಗಾಡಿ ತಮ್ಮ ಪಾಠ ಮತ್ತು ಸಂಶೋಧನೆಯನ್ನು ಮುಂದುವರಿಸಿದರು.

ಈ ಸಮಯದಲ್ಲಿ ಮದ್ರಾಸ ವಿಶ್ವವಿದ್ಯಾನಿಲಯವು ಭಾರತೀಯ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರದ ಪ್ರಾಧ್ಯಾಪಕರ ಹುದ್ದೆಯನ್ನು ನಿರ್ಮಿಸಿ ಮೈಸೂರ ಸರಕಾರದಿಂದ ಪ್ರಾ. ಅಯ್ಯಂಗಾರರ ಸೇವೆಯನ್ನು ಎರವಲು ಕೇಳಿತು. ಮದ್ರಾಸದ ಆಗಿನ ಕುಲಪತಿಗಳ ವೈಯಕ್ತಿಕ ಪ್ರಯತ್ನದಿಂದಾಗಿ ಮೈಸೂರು ಸರ್ಕಾರ ಒಪ್ಪಿತು. ಪ್ರಾ. ಅಯ್ಯಂಗಾರರ ಪಾಂಡಿತ್ಯಕ್ಕೆ ಮನ್ನಣೆ ಸಿಕ್ಕಿತು. ೧೯೧೪ ನವ್ಹಂಬರ ೧ನೆಯ ದಿನಾಂಕ ಅಯ್ಯಂಗಾರರು ಪ್ರಾಧ್ಯಾಪಕ ಹುದ್ದೆಯ ಅಧಿಕಾರ ವಹಿಸಿದರು. ಸುಮಾರು ೧೫ ವರ್ಷ ಅವರು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ೧೯೨೯ರಲ್ಲಿ ನಿವೃತ್ತರಾದರು. ಈ ಅವಧಿ ಅವರ ಜೀವನದ ಮಧ್ಯಾಹ್ನ. ಅವರು ಓದು ಬರಹದಲ್ಲಿ ಕಾರ್ಯಪ್ರವೃತ್ತರಾದ ಅವಧಿ ಇದು.



ಶ್ರೀ ಎಸ್. ಕೃಷ್ಣಸ್ವಾಮಿ ಅಯ್ಯಂಗಾರ

ಹೊಸ ಹೊಣೆಗಾರಿಕೆ ಅರಿವು ಅಯ್ಯಂಗಾರರಿಗೆ ಮನದಟ್ಟಾಗಿತ್ತು. ಪೂರೈಸಬೇಕಾದ ಕೆಲಸದ ಗಾತ್ರ ಹಾಗೂ ರೂಪರೇಷೆ ಆಗಲೇ ಅವರ ಕಣ್ಣಮುಂದೆ ಕಟ್ಟಿದ್ದವು. ಮೊದಲನೆಯದಾಗಿ ಇತಿಹಾಸದ ಪ್ರೌಢವ್ಯಾಸಂಗದ ವಿದ್ಯಾರ್ಥಿಗಳಿಗಾಗಿ ಪ್ರತಿಸಲ ಅನೇಕ ಪ್ರಕಾಂಡ ಪಾಂಡಿತ್ಯದ ಉಪನ್ಯಾಸಗಳನ್ನು ಕೊಡುವ ಪರಿಪಾಠ ಹಾಕಿಕೊಂಡರು.

ವಿಜಯನಗರದ ಇತಿಹಾಸ, ಈ ವ್ಯಾಸಂಗದ ವಿಷಯಗಳಲ್ಲಿ ಒಂದಾಗಿತ್ತು. ಎರಡನೆಯದಾಗಿ ಸಂಶೋಧಕರಿಗೆ ಮಾರ್ಗದರ್ಶನ ಇಲ್ಲವೆ ನೆರವನ್ನು ನೀಡಿದರು. ಪ್ರಾಧ್ಯಾಪಕ ಅವಧಿ ಮುಗಿಯುವ ವರೆಗೆ ಅಯ್ಯಂಗಾರರು ತಾವು ಹಾಕಿಕೊಂಡ ನಿಯಮವನ್ನು ಚಾಚು ಬಿಡದೆ ಪಾಲಿಸಿದರು.

ಶ್ರೀ ರಂಗಸ್ವಾಮಿ ಸರಸ್ವತಿ, ಆರ್. ಸತ್ಯನಾಥ ಅಯ್ಯರ, ಆರ್. ಗೋಪಾಲನ್, ವಿ. ಆರ್. ಆರ್. ದೀಕ್ಷಿತರ ಮತ್ತು ಶ್ರೀ ಅಪ್ಪಾದೊರೈ ಮೊದಲಾದ ವಿದ್ವನ್ಮಣಿಗಳು ಇವರ ಗರಡಿಯಲ್ಲಿ ಪಳಗಿದವರು. ಪ್ರೊ. ಅಯ್ಯಂಗಾರರ ವೈಯಕ್ತಿಕ ಸಂಶೋಧನೆಯ ಫಲಶ್ರುತಿ ಅವರ ಲೇಖನ ಹಾಗೂ ಪುಸ್ತಕಗಳಲ್ಲಿ ಕಂಡುಬರುವದು. ಭಾರತೀಯ ಇತಿಹಾಸದ ೧೩ ಮತ್ತು ೧೪ನೆಯ ಶತಮಾನಗಳಲ್ಲಿ ಉಳಿದ ಅನೇಕ ತಪ್ಪುಗಳನ್ನು ಸರಿಮಾಡಿ ಹೊಸ ಅಧ್ಯಾಯವನ್ನೇ ಇವರು ಮುಂಡಿಸಿದರು. ದಕ್ಷಿಣ ಭಾರತದ ಇತಿಹಾಸವನ್ನು ಹೆಣೆಯುವಾಗ ಅವರದು ಸಿದ್ಧಹಸ್ತ. ಇದೇ ಇತಿಹಾಸದಲ್ಲಿ ಅವರು ಹೆಣೆದ ಘಟನೆ—ಸಿದ್ಧಾಂತಗಳನ್ನು ಇಂದಿಗೂ ತಿರಸ್ಕರಿಸಲು ಎಂಟೆದೆಬೇಕು. ಅವರು ತಳೆದ ನಿಲುಮೆಗೆ ಅಂಥ ಅಭ್ಯಾಸದ ಬಲವಿದೆ. ಕಳಭ್ರ ಪಂಗಡದ ರಾಜರ ಕಾಲವನ್ನು ಗೊತ್ತುಪಡಿಸುವಾಗ ಪ್ರಾ. ಅಯ್ಯಂಗಾರರು ತಳೆದ ನಿಲುಮೆ ಮನಮೆಚ್ಚುವಂತಹದು. ಪಲ್ಲವ ರಾಜರ ವಂಶಾವಳಿಯನ್ನು ಗೊತ್ತುಪಡಿಸಿ ಪಂಡಿತರು ಬೊಟ್ಟುಕಚ್ಚುವಂತೆ ಮಾಡಿದ್ದಾರೆ. ಇಂದಿನ ಪ್ರಕಾಂಡ ಇತಿಹಾಸಕಾರರಾದ ಪ್ರಾ. ಡಿ. ಸಿ. ಸರ್ಕಾರರು ಕೂಡ ಇವರ ಸುಸಂಬದ್ಧ ತರ್ಕವನ್ನು ಮೆಚ್ಚಿದ್ದಾರೆ. ಚೋಳ ರಾಜರ ಬಗೆಗೆ ಅನೇಕ ಹೊಸ ವಿವರಗಳನ್ನು ನೀಡಿದ್ದಾರೆ. ಮಲಯಾ ಸುಮಾತ್ರಾದಲ್ಲಿರುವ ಸೈಲೇಂದ್ರ ರಾಜರಿಗೂ, ಚೋಳ ರಾಜರಿಗೂ ಇದ್ದ ಜಲಮಾರ್ಗದ ಬಳಕೆಯನ್ನು ಖಚಿತಪಡಿಸಿ ಪುಷ್ಟೀಕರಿಸಿದ ಮೊದಲನೆಯ ಇತಿಹಾಸಕಾರರು ಪ್ರಾ. ಅಯ್ಯಂಗಾರರು. ದಕ್ಷಿಣಭಾರತೀಯ ಇತಿಹಾಸ ನಿರೂಪಣೆಯಲ್ಲಿ ಯಾವ ಮುಖ್ಯ ಅಂಶವೂ ಅವರ ದೃಷ್ಟಿಪಥದಿಂದ ನುಸಳಿಲ್ಲ.

ವಿಜಯನಗರದ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲಿದವರಲ್ಲಿ ಪ್ರಾ. ಅಯ್ಯಂಗಾರರು ಮೂರನೆಯವರು. ಸೆವೆಲ್ಲರು ತಮ್ಮ ಗ್ರಂಥ "Forgotten Empire"ವನ್ನು ಪರ್ಶಿಯನ್ ಹಾಗೂ ಪೋರ್ತುಗೀಜ ಆಧಾರದ ಮೇಲೆ ಬರೆದಿ

ದ್ದಾರೆ. ಪ್ರಾ. ಕೃಷ್ಣಶಾಸ್ತ್ರಿಗಳು ಶಿಲಾಶಾಸನದ ಆಧಾರ ದೊರಕಿಸಿದ್ದಾರೆ. ಆದರೆ ಪ್ರಾ. ಅಯ್ಯಂಗಾರರು ತುಳಿದ ದಾರಿ ಬೇರೆ. ತಮ್ಮ ನೆಚ್ಚಿನ ಶಿಷ್ಯರಾದ ರಂಗಸ್ವಾಮಿ ಸರಸ್ವತಿಯುವರ ಸಹಾಯುದಿಂದ ಕನ್ನಡ, ಸಂಸ್ಕೃತ ಹಾಗೂ ತೆಲಗು ಸಾಹಿತ್ಯಗಳಲ್ಲಿ ವಿಜಯುನಗರದ ಬಗ್ಗೆ ಬಂದ ಉಲ್ಲೇಖಗಳನ್ನು ಗಮನಿಸಿದ್ದಾರೆ. ಈ ಭವ್ಯ ಸಾಮ್ರಾಜ್ಯದ ಹಿನ್ನೆಲೆ ಹಾಗೂ ರೂಪರೇಷೆಗಳನ್ನು ಭಾರತೀಯು ಆಧಾರದಿಂದ ಹಾಗೂ ಭಾರತೀಯು ದೃಷ್ಟಿಯಿಂದ ಕಂಡ ಪ್ರಾ. ಅಯ್ಯಂಗಾರರು ತಮ್ಮ ಮೆಚ್ಚಿಕೆಯನ್ನು ತೋರಿದ್ದಾರೆ. ಹಿಂದೂ ಸಂಸ್ಕೃತಿ ಮತ್ತು ಸ್ವರಾಜ್ಯವನ್ನು ಎತ್ತಿಹಿಡಿಯುುವುದರಲ್ಲಿ ನಿಸ್ಸೀಮರಾಗಿದ್ದಾರೆ.

ಇತಿಹಾಸದ ಸ್ಥಾನಮಾನದ ಬಗ್ಗೆ ತಮ್ಮದಾದ ದೃಷ್ಟಿಕೋನವನ್ನು ಪ್ರಾ. ಅಯ್ಯಂಗಾರರು ತಳೆದಿದ್ದಾರೆ. ಗುರಿಗೆ ಸಾಧನ ಒಪ್ಪುವಂತಿರಬೇಕು. ಸಾಧನ ಹಗುರಾಗಿರಬಾರದು. ಐತಿಹಾಸಿಕ ಕಠೋರ ಸತ್ಯ ಎಷ್ಟೇ ಕಹಿಯಾದರೂ ಕೇವಲ ಪ್ರಚಾರದಿಂದ ಸುಳ್ಳಾಗಿರಬಾರದು. ಇಂದಿನ ಜನಾಂಗಕ್ಕೆ ಅಹಿತವೆನಿಸಿದರೂ, ಭೂತಕಾಲದ ಸಂಗತಿಗಳನ್ನು ಇದ್ದಂತೆ ವಿವರಿಸುವದು ಇತಿಹಾಸದ ಹೆಗ್ಗುರುತು. ಇತಿಹಾಸ ಪ್ರಾಧ್ಯಾಪಕರು ಅದಕ್ಕಾಗಿ ಜೀವಿಸಬೇಕು. ಸಂಕುಚಿತ ದೃಷ್ಟಿ, ದುರಭಿಮಾನ, ತಲೆತಿರುಕತನ, ಅವನಿಗೆ ಸಲ್ಲದ ಗುಣಗಳು. ಇತಿಹಾಸಕಾರನಿಗೆ ತಲೆತಿರುಕತನ ಸಲ್ಲದು. ಅವನು ತಾಳ್ಮೆವಹಿಸಿ ಬಣ್ಣಿಸಬೇಕು. ದುಷ್ಪರಿಣಾಮದ ಮೂಲ ಅಸಂಬದ್ಧ ಕೃತಿ, ಮೊದಲು ಮನನ ಮಾಡಬೇಕಾದ ಮಂತ್ರವಿದು. ಸತ್ಯದ ಈ ಮಾತನ್ನು ಇತಿಹಾಸ ಪುಷ್ಟೀಕರಿಸಬೇಕು. ಇತಿಹಾಸದ ಅಭ್ಯಾಸದಲ್ಲಿಯೇ ಅನೇಕ ತಲೆತಿರುಕತನ ಉದಾಹರಣೆಗಳು ಕಂಡರೂ ಯುವ-ಜನಾಂಗವು ಅವುಗಳನ್ನು ಕಡೆಗಣಿಸಬೇಕು, ಒಣ ಛಲ, ಅಧಿಕಾರ ದರ್ಪದಿಂದ ಆಗುವ ದುಷ್ಪರಿಣಾಮವನ್ನು ಬಿಂಬಿಸಿ, ಇವುಗಳಿಂದ ದೂರವಿರಬೇಕೆಂದು ಪ್ರಾ ಅಯ್ಯಂಗಾರರು ಸಾರಿ ಸಾರಿ ಹೇಳಿದ್ದಾರೆ. ಭಾರತೀಯು ಇತಿಹಾಸವನ್ನು ಭಾರತೀಯುರೇ ಬರೆಯುಬೇಕೆಂದು ಅವರ ಅಚಲ ವಿಶ್ವಾಸ. ಪಾಶ್ಚಾತ್ಯ ಪಂಡಿತರನೇಕರು ಅವರ ಅಭಿಪ್ರಾಯಕ್ಕೆ ಮನ್ನಿಸಿ ತಲೆ ತೂಗಿದ್ದಾರೆ. ಪ್ರಾ. ಅಯ್ಯಂಗಾರರು ವೇದಾಧ್ಯಯುನವನ್ನು ಉದಾಹರಿಸಿದ್ದಾರೆ. ಪಾಶ್ಚಾತ್ಯ ಪಂಡಿತರ ವೇದಾಭ್ಯಾಸ ಶಬ್ದ ಸೌಂದರ್ಯ, ಅರ್ಥ ಇವುಗಳನ್ನು ಹೊರಗೆಡವಿದೆ. ಆದರೆ ವೇದದ ವಿಚಾರಪ್ರಣಾಲಿ, ಹಿನ್ನೆಲೆ, ಮತ್ತು ಸಾಹಿತ್ಯಿಕ ಅಂಶಗಳನ್ನು ಅದು ಸಾಕಷ್ಟು ಗಮನಿಸಿಲ್ಲ.

ಪ್ರಾ. ಅಯ್ಯಂಗಾರರ ಲೇಖನ ಗಾತ್ರದಲ್ಲಿ ಸಮುದ್ರ, ಗುಣದಲ್ಲಿ ಕಸ್ತೂರಿ. "ಒಡೆಯುರ ಆಳಿಕೆಯುಲ್ಲಿ ಮೈಸೂರಿನ ಪ್ರಗತಿ" ಎಂಬ ಅವರ ಪ್ರಬಂಧ ಮಾಡರ್ನ ರಿವ್ಯೂದಲ್ಲಿ (೧೯೦೦ ಮೇ ಸಂಚಿಕೆಯುಲ್ಲಿ) ಪ್ರಕಟವಾಗಿದೆ.

ಇದು ಮೊದಲ ಬರಹ. "History of Tirupati" Vols 1-2, 1940-41 ಇವು ಅವರ ಕೊನೆಯ ಗ್ರಂಥಗಳು. ಹಲವಾರು ಮೂಲ ಆಧಾರದ ಮೇಲೆ ರಚಿತವಾದ ಈ ಗ್ರಂಥ, ವೆಂಕಟಗಿರಿ ಗುಡಿಯ ಇತಿಹಾಸವನ್ನು ವಿವರಿಸಿದೆ.

ಶ್ರೀ ವೈಷ್ಣವ ಪಂಥದವರಾದ ಪ್ರಾ. ಅಯ್ಯಂಗಾರರು ಅನಂತ ಭಕ್ತಿ, ವಿಶ್ವಾಸದಿಂದ ಈ ಕೆಲಸ ಪೂರೈಸಿದ್ದಾರೆ. ಖರೀಳಿತ ಕಂಡ ಗುಡಿ ಇದು. ಆಧಾರ ಗ್ರಂಥ, ಸತ್ಯ, ಮತ್ತು ತಮ್ಮ ನಿಲುವೆ ಎಲ್ಲವನ್ನೂ ಮರೆಮಾಚದೆ ಪ್ರಾ. ಅಯ್ಯಂಗಾರರು ಬಯಲಿಗಿಟ್ಟಿದ್ದಾರೆ. ೪೧ ವರ್ಷಗಳ ಅವಧಿಯಲ್ಲಿ ಪ್ರಾ. ಅಯ್ಯಂಗಾರರು ಪುಸ್ತಕಗಳ ವಿಮರ್ಶೆ ಮಾಡಿದರಲ್ಲದೆ, ಮೊದಲುಮಾತು (Foreword) ಲಘು ಟಿಪ್ಪಣಿ ಲೇಖಗಳನ್ನು ದೇಶ ವಿದೇಶ ಪತ್ರಿಕೆಗಳಲ್ಲಿ ಬರೆದಿದ್ದಾರೆ. ಸುಮಾರು ೧೨೫ ಲೇಖನಗಳು (೧೯೦೦-೧೯೩೬) ಅವರ ಪ್ರೌಢ ಬರಹಗಳು. ೧೯೩೬-೧೯೪೬ ರ ಅವಧಿಯಲ್ಲಿ ೧೬ ಲೇಖನಗಳನ್ನು ಬರೆದಿದ್ದಾರೆ. ಅವರು ಬರೆದ ಹಾಗೂ ಸಂಪಾದಿಸಿದ ಕೆಲವು ಗ್ರಂಥಗಳು ಮೊದಲು ಪಂಕ್ತಿಯ ಆಧಾರ ಗ್ರಂಥಗಳಾಗಿವೆ. ಮಣಿ ಮೇಖಲಾಯಿ ಗ್ರಂಥವನ್ನು ಪ್ರಾ. ಅಯ್ಯಂಗಾರರು ಗಾಯಕವಾಡ ಪೌರ್ವಾತ್ಯ ಉಪನ್ಯಾಸ ಮಾಲೆಯಲ್ಲಿ ಸಂಪಾದಿಸಿದ್ದಾರೆ. ಸಂಪಾದನೆ ಹಾಗೂ ಇಂಗ್ಲೀಷ ಭಾಷಾಂತರ ತಲೆದೂಗುವಂತಿವೆ. ನಿಜವಾಗಿ ನೋಡಿದರೆ ಸಂಸ್ಕೃತ ಅಧ್ಯಯನ ಪ್ರಾರಂಭಿಸಿ ಪ್ರಭುತ್ವ ಸಂಪಾದಿಸಿದ ಗ್ರಂಥ ವಿದು. ಪುಸ್ತಕಗಳ ಸಂಪಾದನೆ, ಲೇಖನ ಜೊತೆಗೆ ಸವ್ಯಸಾಚಿಯಾಗಿ ನಿಯತ-ಕಾಲಿಕೆಗಳನ್ನು ಸಂಪಾದಿಸಿದ್ದಾರೆ (Cambridge History of India ೩ ನೆಯ ಸಂಪುಟದಲ್ಲಿಯ ಅವರ ಲೇಖನ ಮನಮೆಚ್ಚುವಂತಿದೆ) ಅನೇಕ ಉಪ್ಪಾವು ಲೇಖನಗಳನ್ನು ಬರೆದು ಪ್ರಾ. ಅಯ್ಯಂಗಾರರು Oriental Conference ಗಾಗಿ ಕಳಿಸಿದ್ದಾರೆ. ಇದಲ್ಲದೆ Indian History of Congress ಹಾಗೂ ಭಾರತೀಯ ವಿದ್ಯಾಭವನದಿಂದ ಪ್ರಕಟಿತ ಗ್ರಂಥಗಳಲ್ಲಿ ಇವರ ಕೊಡುಗೆ ಕಂಡುಬರುವದು. ಪ್ರಾ. ಅಯ್ಯಂಗಾರರು ಸಂಪಾದಿಸಿದ ನಿಯತಕಾಲಿಕೆಗಳ ವಿವರ ಇಂತಿದೆ.

(೧) Journal of Indian History, Travancore ಇವರ ಸುಮಾರು ೨೦ ವರ್ಷ ಈ ನಿಯತಕಾಲಿಕೆಯನ್ನು ಸಂಪಾದಿಸಿ, ಶೈಶವಾವಸ್ಥೆಯಿಂದ ಪ್ರೌಢಾವಸ್ಥೆಗೆ ಈ ಪತ್ರಿಕೆಯನ್ನು ತಂದ ಕೀರ್ತಿ, ಪ್ರಾ. ಅಯ್ಯಂಗಾರರದು. ಕೊನೆಗೆ ಅದನ್ನು ತ್ರಾವಣಕೋರಕ್ಕೆ ಸ್ಥಳಾಂತರಿಸಿದವರು ಇವರೇ.

(೨) Journal of Mythic Society, Bangalore. ಸುಮಾರು ೫ ವರ್ಷ.

(೩) Indian Antiquary. ಸಹಸಂಪಾದಕರಾಗಿ ಕೆಲವು ವರ್ಷಗಳ ವರೆಗೆ ಸೇವೆಸಲ್ಲಿಸಿದ್ದಾರೆ.

ಪ್ರಾ. ಕೃಷ್ಣಸ್ವಾಮಿ ಅಯ್ಯಂಗಾರರ ಪತ್ಯೇತರ ಚಟುವಟಿಕೆ ಅನೇಕ. ಈ ಚಟುವಟಿಕೆಗಳು ಅವರ ಓದುಬರಹದ ಪಡಿನೆರಳಾಗಿದ್ದವು. ಮದ್ರಾಸಿನಲ್ಲಿ ಜರುಗಿದ Indian Historical Records Commission ಸಭೆಯಲ್ಲಿ ಪ್ರಾ. ಅಯ್ಯಂಗಾರರು ವಹಿಸಿದ ಪಾತ್ರ ಹಿರಿದಾದುದು. All India Oriental Conference 1924 ಸಭೆಯು ಮದ್ರಾಸಿನಲ್ಲಿ ಸೇರಿದ ಕೀರ್ತಿ ಈ ಪ್ರಾಧ್ಯಾಪಕರಿಗೆ ಸಲ್ಲುತ್ತದೆ. ಈ ಸಭೆಯ ಸ್ಥಳಿಯ ಕಾರ್ಯದರ್ಶಿಯಾಗಿ ಇವರು ಅವಿಶ್ರಾಂತ ದುಡಿದರು. ೧೯೩೫ ರಲ್ಲಿ ಮೈಸೂರಿನಲ್ಲಿ ಜರುಗಿದ ಇದೇ ಸಭೆಯ ಅಧ್ಯಕ್ಷ ಸ್ಥಾನವನ್ನು ಸಹ ಇವರು ಅಲಂಕರಿಸಿದರು. ೧೯೩೧ ರಲ್ಲಿ ಬಂಗಾಲ ಏಸಿಯಾಟಿಕ್ ಸೊಸೈಟಿ ಅವರನ್ನು ಫೆಲೊ ಎಂದು ಚುನಾಯಿಸಿ ಗೌರವಿಸಿತು. ಮಾತೃ ಸಂಸ್ಥೆಯಾದ ಮೈಸೂರು ವಿಶ್ವವಿದ್ಯಾನಿಲಯವು Doctor of Law ಎಂಬ ಪದವಿ ದಯಪಾಲಿಸಿ ಗೌರವಿಸಿತು. ೧೯೨೧ ರಲ್ಲಿ ಪ್ರಿನ್ಸ ಆಫ್ ವೇಲ್ಸರು ಕಲಕತ್ತೆಗೆ ಸಂದರ್ಶನವಿತ್ತಾಗ ಆ ವಿಶ್ವವಿದ್ಯಾನಿಲಯವು ಅವರಿಗೆ Ph. D. ಪದವಿಯನ್ನಿತ್ತು ಗೌರವಿಸಿತು. ಅದೇ ಸಮಯದಲ್ಲಿ ಅವರು ವಿಶೇಷ ಉಪನ್ಯಾಸವನ್ನು ಕೂಡ ಕೊಟ್ಟರು. Archaeological Survey of India ಸಂಘವು ಅವರಿಗೆ ಸಭಾಸದತ್ವವನ್ನು (Correspondentship) ಕೊಟ್ಟು ಗೌರವಿಸಿತು.

ಪ್ರಾ. ಅಯ್ಯಂಗಾರರು ಸಂಪಾದಿಸಿದ ಗ್ರಂಥ "ಮಣಿಮೇಖಲಾಯಿ" ಫ್ರಾನ್ಸದ ಒಂದು ಶೈಕ್ಷಣಿಕ ಸಂಸ್ಥೆಯಿಂದ ಬೆಳ್ಳಿಪದಕ ಸಂಪಾದಿಸಿದೆ. ಪ್ರಾಧ್ಯಾಪಕರು ಸಾಧಿಸಿದ ಭಾರತೀಯ ತತ್ವಜ್ಞಾನದ ಆಳವಾದ ಅಭ್ಯಾಸ, ಹಾಗೂ ಅಸಾಧಾರಣ ಪಾಂಡಿತ್ಯವನ್ನು ಸಾರುವ ಗ್ರಂಥವಿದು. ಮುಂಬೈಯ ರಾಯಲ್ ಏಶಿಯಾಟಿಕ್ ಸೊಸಾಯಿಟಿ ಅವರಿಗೆ ಕ್ಯಾಂಬೆಲ್ಲ ಸುವರ್ಣ ಪದಕ ಕೊಟ್ಟು ಗೌರವಿಸಿದರೆ, ಕಲಕತ್ತೆಯಲ್ಲಿಯ ಬೆಂಗಾಲ ರಾಯಲ್ ಏಶಿಯಾಟಿಕ್ ಸೊಸೈಟಿ ಅವರನ್ನು ಸಭಾಸದಸ್ಯರನ್ನಾಗಿ ಮಾಡಿ ಗೌರವಿಸಿತು. ಇದಲ್ಲದೆ ಮೈಸೂರು. ಮದ್ರಾಸ ವಿಶ್ವವಿದ್ಯಾನಿಲಯಗಳ ಸಿನೇಟ, ಅಕಾಡಿಮಿಕ್ ಕೌನ್ಸಿಲ್, ಸಿಂಡಿಕೇಟ, ಸಭಾಸದತ್ವ ಅವರನ್ನು ಬೆನ್ನಟ್ಟಿ ಬಂದವು. ಬೆಂಗಳೂರಿನ Mythic Society ಸ್ಥಾಪಕರಲ್ಲಿ ಒಬ್ಬರಾದ ಪ್ರಾ. ಅಯ್ಯಂಗಾರರು ತಿರುಪತಿಯ ಶ್ರೀ ವೆಂಕಟೇಶ್ವರ ಓರಿಯಂಟಲ್ ರೀಸರ್ಚ ಇನ್ಸಟ್ಯೂಟದೊಡನೆ ಸಂಪರ್ಕ ಇರಿಸಿಕೊಂಡಿದ್ದರು. ಮದ್ರಾಸ ವಿಶ್ವವಿದ್ಯಾನಿಲಯದ ಇತಿಹಾಸ ಉಪನ್ಯಾಸಮಾಲೆಯನ್ನು ಈ ಪ್ರಾಧ್ಯಾಪಕರೇ ಮೊದಲು ಪ್ರಾರಂಭಿಸಿದರು.

ಮದ್ರಾಸ ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತರಾಗಿ, ಸುಮಾರು ೧೭ ವರ್ಷ ವಿಶ್ರಾಂತಿ ಪಡೆದ ಕಾಲ ಅವರ ಜೀವನದ ಕೊನೆಯ ಹಂತ. ಅವರ ಲೆಕ್ಕಣಿಕೆ ಹರಿತವಾಗಿತ್ತು. ಕೊನೆಯವರೆಗೂ ಅವರು ತಮ್ಮ ಲೇಖನಗಳನ್ನು ತಿದ್ದಿ ತೀಡುವದರಲ್ಲಿ ನಿರತರಾಗಿದ್ದರು. ಸಂಶೋಧನೆಯ ಹೊಸ ಕ್ಷೇತ್ರದಲ್ಲಿ ಧುಮುಕುವದು ಅವರಿಗೆ ಮಕ್ಕಳಾಟ. ಇತಿಹಾಸ ಸಂಶೋಧನದ ಭದ್ರ ಬುನಾದಿ ಹಾಕಿದ ಈ ಪ್ರಾಧ್ಯಾಪಕರ ರಚನೆಗಳೇ (ಸಂಶೋಧನೆಯಲ್ಲಿ) ದಾರಿದೀಪ.

ಖುಷಿಯ ಬಾಳು ಸಾಗಿಸಿ ೨೮-೧೧-೧೯೪೬ ರಂದು ಪ್ರಾ. ಅಯ್ಯಂಗಾರರು ಕೊನೆಯುಸಿರೆಳೆದರು. ಪ್ರಾ. ಅಯ್ಯಂಗಾರರು ಮುಟ್ಟಿದ್ದೆಲ್ಲಾ ಚಿನ್ನವಾಯಿತು.

★ ಆರ್. ಆರ್. ಅತಗೂರ

ಪೆರಿಯಪುರಾಣದ ಕಥೆಗಳು

೩. ಇಳಯಾನ್ಗುಡಿ ಮಾರನಾಯನಾರ್

(ಕಳೆದ ಸಂಚಿಕೆಯಿಂದ)

ಚೋಳ ದೇಶದಲ್ಲಿ ಇಳಯಾನ್ಗುಡಿ ಎಂಬುದೊಂದು ಜನಭರಿತವಾದ ಊರು. ಆ ಊರಲ್ಲಿ ವೇಳಾಳರ (ಒಕ್ಕಲಿಗರ) ಕುಲದಲ್ಲಿ ಹುಟ್ಟಿದ ಮಾರನಾರ್ ಎಂಬ ಸಿರಿವಂತರೊಬ್ಬರು ಇದ್ದರು. ಅವರಿಗೆ ಭೂಮಿಕಾಣಿ ಸಾಕಷ್ಟು ಇತ್ತು. ಗದ್ದೆಗಳ ಬೇಸಾಯದಿಂದ ಯಥೇಷ್ಟ ವರಮಾನ ಬರುತ್ತಿತ್ತು. ಅವರು ಉತ್ತಮ ಶಿವಭಕ್ತರು. ಶಿವಶರಣರು ಯಾರು ಬಂದರೂ ಅವರಿಗೆ ಸ್ವಾಗತವನ್ನಿತ್ತು ಮನೆಯೊಳಗೆ ಕರೆದೊಯ್ದು ಪ್ರೀತಿಯ ಮಾತುಗಳನ್ನಾಡಿ ಪೀಠದಲ್ಲಿ ಕುಳ್ಳಿರಿಸುವರು. ಪಾದಪ್ರಕ್ಷಾಳನಂಗೆಯ್ದು ಕಾಲಿಗೆರಗಿ ಅರ್ಚಿಸುವರು. ಅವರಿಗೆ ಭಕ್ಷ್ಯ ಭೋಜ್ಯಗಳೊಡನೆ ಷಡ್ರಸಾನ್ನವನ್ನಿಕ್ಕಿ ಆರೋಗಣೆ ಮಾಡಿಸುವರು. ಇದೇ ಅವರು ದಿನಂಪ್ರತಿ ಮಾಡುತ್ತಿದ್ದ ಕಾಯಕವಾಗಿತ್ತು.

ಹೀಗೆ ಅತುಳ ಭಕ್ತಿಯಿಂದ ಹರಸೇವೆಯಲ್ಲಿ ನಿರತರಾದ ಅವರ ಸಿರಿಸಂಪತ್ತುಗಳು ದಿನೇ ದಿನೇ ಹೆಚ್ಚುತ್ತಲಿದ್ದವು. ತ್ರ್ಯಂಬಕಸಖನಾದ ಕುಬೇರನಂತೆ ಮಾರನಾರರು ಅಪರಿಮಿತ ಧನವಂತರಾದರು. ಸಿರಿಬಂದ ಕಾಲಕ್ಕೆ ಕರೆದು ದಾನವ ಮಾಡುವದಂತೂ ಸಹಜ. ಆದರೆ ಬಡತನದಲ್ಲಿದ್ದಾಗಲೂ ಸಹ ಹಾಗೆ ಮಾಡುವುದು ದುರ್ಲಭ. ಅದಕ್ಕೆ ದೈವಭಕ್ತಿ, ದಾನಶೀಲತೆ, ಔದಾರ್ಯ— ಈ ಗುಣಗಳು ಅತ್ಯಾವಶ್ಯಕ. ಇಳಯಾನ್ಗುಡಿ ಮಾರರಲ್ಲಿ ಈ ಗುಣಗಳೆಲ್ಲವೂ ಇದ್ದವು. ಇದನ್ನು ಲೋಕಕ್ಕೆ ಪ್ರಕಟಗೊಳಿಸಬೇಕೆಂದು ಶಿವನು ಮನದಂದನು. ತತ್ಪರಿಣಾಮವಾಗಿ ಮಾರನಾಯರರ ಸಿರಿ ಕ್ರಮ ಕ್ರಮವಾಗಿ ಇಂಗುತ್ತ ಬಂದಿತು. ಆತನ ಸಂಪತ್ತು ಕುಂದುತ್ತ ಬಂದಿತು. ಆದಾಗ್ಯೂ ಅವರ ಭಕ್ತಿ ಇನಿತೂ ಇಂಗಲಿಲ್ಲ; ಅವರ ಮನಸ್ಸು ಲೇಶವೂ ಕುಂದಲಿಲ್ಲ. ಅವರು ತಾನು ಮಾಡುತ್ತಿದ್ದ ಸೇವೆಯನ್ನು ಕೈ ಬಿಡಲಿಲ್ಲ. ತನಗೆ ಒದಗಿದ ಅರಬಿನಲ್ಲೂ ಹರ ಭಕ್ತರನ್ನು ತನ್ನ ಮನೆಗೆ ಬರಮಾಡಿಕೊಂಡು ಅವರನ್ನು ಯಥಾವಿಧಿ ಸತ್ಕರಿಸಿ ಆರೋಗಣೆ ಮಾಡಿಸುವ ಕಾಯಕವನ್ನು ಮುಂದುವರಿಸುತ್ತಲೇ ಇದ್ದರು. ತನ್ನಲ್ಲಿದ್ದ ವಸ್ತುಒಡವೆಗಳನ್ನು ಒಂದೊಂದಾಗಿ ಮಾರುತ್ತ ಬಂದರು. ಸಿಕ್ಕಿದ ಕಡೆಗಳಲ್ಲಿ ಸಾಲ ಪಡೆಯುತ್ತಲೂ ಬಂದರು. ಬೇಕಿದ್ದರೆ ತನ್ನನ್ನೇ ಮಾರಿಕೊಂಡು ಈ ಸಾಲಗಳನ್ನು ತೀರಿಸುವ ಅಗತ್ಯ ಒದಗಿದರೆ ಅದಕ್ಕೆ ಎನೆಯೊಡ್ಡಲೂ ಸಿದ್ಧರಿದ್ದರು.

ಭಕ್ತಿ ಪರೀಕ್ಷೆ

ಮಳೆಗಾಲದ ಒಂದು ರಾತ್ರಿ ಇಳಯಾನ್ಗುಡಿ ಮಾರನಾರರ ಮನೆಯಲ್ಲಿ ಉಣ್ಣಲಿಕ್ಕೆ ಏನೂ ಇರಲಿಲ್ಲ. ಅವರೂ ಅವರ ಸತಿಯೂ ಹಗಲೆಲ್ಲ ಊಟವಿಲ್ಲದೆ ಹಸಿದಿದ್ದರು. ಬೇರೆಯವರ ನೆರವು ಸಹ ಸಿಗಲಿಲ್ಲ. ಏನು ಮಾಡುವರು ಪಾಪ? ಹಸಿವನ್ನು ಸಹಿಸಿಕೊಂಡು ಬಾಗಿಲಿಗೆ ಅಗುಳಿಯಿಕ್ಕಿ ತೆಪ್ಪಗೆ ಮಲಗಿಕೊಂಡರು. ಆ ಹೊತ್ತಿನಲ್ಲಿ ವೃಷಭವಾಹನವಿಲ್ಲದೆ. ಉಮೆಯ ಜೊತೆಯಿಲ್ಲದೆ ಉಮಾಪತಿಯು ಒಬ್ಬನೇಯಾಗಿ ತಾಪಸಿಯ ವೇಷವನ್ನು ತಳೆದು ಇಳಯಾನ್ಗುಡಿಮಾರರ ಮನೆಗೆ ಬಂದು ಬಾಗಿಲನ್ನು ತಟ್ಟಿದನು. ಆ ಸದ್ದನ್ನು ಕೇಳಿ ನಾಯನಾರರು ಬಾಗಿಲನ್ನು ತೆರೆದು ನೋಡಲು ಶಿವಶರಣರೊಬ್ಬರು ಅಲ್ಲಿ ನಿಂತಿರುವುದನ್ನು ಕಂಡರು. ಮನದಲ್ಲಿ ಮುದಿತರಾಗಿ ಅವರನ್ನು ಒಳಗೆ ಕರೆದುಕೊಂಡುಹೋಗಿ, ಮಳೆಯಿಂದ ತೊಯ್ದ ಅವರ ಮೈಯನ್ನು ತನ್ನ ಅರಿವೆಯಿಂದ ಒರಸಿ, ಅವರಿಗೆ ಉಡಲು ಬೇರೆ ವಸ್ತ್ರವನ್ನು ಕೊಟ್ಟು ಪೀಠವಲ್ಲಿ ಕುಳ್ಳಿರಿಸಿದರು. ತನ್ನ ಮಡದಿಯನ್ನು ನೋಡಿ; "ಈ ತಪಸ್ವಿಯು ಬಹಳ ಹಸಿದಿರುವಂತೆ ಕಾಣುವರು. ನಮಗೆ ಏನೂ ಇಲ್ಲವಾದಾಗ್ಯೂ, ಇವರಿಗೆ ಹೇಗಾದರೂ ಮಾಡಿ ಉಣ್ಣಲಿಕ್ಕೆ ಇಕ್ಕಬೇಕು. ಏನುಮಾಡುವೆ?" ಎಂದರು. ಈ ಮಾತುಗಳನ್ನು ಕೇಳಿದ ಆತನ ಸತಿ ಉತ್ತರಿಸಿದಳು:" ಅಕಟಾ! ಅವರಿಗೆ ಉಣಸು ಅಡಲು ನಮ್ಮಲ್ಲಿ ಅಕ್ಕಿಯಿಲ್ಲ: ಮತ್ತು ಯಾವ ಪದಾರ್ಥವು ಇಲ್ಲ. ಸಾಲಕೊಡುವವರು ಯಾರೂ ಇಲ್ಲ. ಹಾಗೆ ಕಡ ತರುವುದಕ್ಕೂ ಇದು ಕಾಲವಲ್ಲ, ರಾತ್ರಿ ಇಷ್ಟು ಹೊತ್ತಾಗಿದೆ. ಅಕ್ಕಿ ಕಡತರಲು ಬೇರೆಲ್ಲಿಗೆ ಹೋಗಲಿ? ನಾನು ಮಹಾ ಪಾಪಿಷ್ಠೆ! ನಾನು ಏನು ಮಾಡಲಿ?" ಎಂದು ಬಹಳವಾಗಿ ನೊಂದುಕೊಂಡಳು.

ನೊಳಕೆ ಬಿತ್ತದ ಬೋನ

ತುಸು ಹೊತ್ತು ಯೋಚಿಸಿ ಹೇಳಿದಳು: "ನೀವು ಇಂದು ಹಗಲು ನಮ್ಮ ಗದ್ದೆಯಲ್ಲಿ ಬಿತ್ತನೆ ಮಾಡಿದ ಮೊಳೆ ಬಿತ್ತವನ್ನು ಆಯ್ಕೆಗೊಂಡು ಬನ್ನಿ. ಹೇಗೋ ಮಾಡಿ ಅನ್ನ ಬೇಯಿಸಿ ಊಟ ಸಿದ್ಧಪಡಿಸುತ್ತೇನೆ. ಇದಲ್ಲದೆ ಬೇರೆ ದಾರಿ ಯಾವುದೂ ನನಗೆ ತೋಚುವುದಿಲ್ಲ." ಇದನ್ನು ಕೇಳಿ ಮಾರನಾರ್ ಹರ್ಷಗೊಂಡು ತನ್ನ ಗದ್ದೆಯತ್ತ ಧಾವಿಸಿ ಹೋದರು. ಭೋರ್ಗರೆವ ಮಳೆ. ಕಗ್ಗತ್ತಲೆಯ ಕಾರಿರುಳು. ಆದರೂ ಇಳಯಾನ್ಗುಡಿ ಮಾರರು ತಡಮಾಡದೆ ಒಂದು ಮಂಕರಿಯನ್ನು ಬೋರಲಿಸಿ ತಲೆಯ ಮೇಲೆ ತಳೆದು, ಕತ್ತಲಲ್ಲಿ ದಾರಿಗಾಣದೆ ಒಂದಿನ ನೆಪ್ಪಿನಿಂದ ದಾರಿಯನ್ನು ಹುಡುಕುತ್ತ ಕಾಲುಗಳಿಂದ ತಡವರಿಸುತ್ತ ಮುಂಬರಿದು ಹೋದರು. ಮನೆಗೆ ಬಂದ ತಪೋಧನರ ಸತ್ಕಾರಗೈವ ಮಹದುದ್ದೇಶವೇ ಈ ಗಾಢಾಂಧಕಾರದಲ್ಲಿ ಅವರನ್ನು ಗದ್ದೆಯ ಕಡೆ ಎಳೆದೊಯ್ಯಿತು. ಜಲಮಯವಾಗಿದ್ದ ಗದ್ದೆಯೊಳು ಹೊಕ್ಕು ಮೇಲೆ ತೇಲುತ್ತಿದ್ದ

ಮೊಳೆ ಬಿತ್ತಗಳನ್ನು ಆರಿಸಿ ತೆಗೆದು ಮಂಕರಿಯೊಳಗೆ ಹಾಕಿಕೊಂಡರು. ಮಂಕರಿ ತುಂಬುತ್ತಲೇ ಕಡುವೇಗದಿಂದ ಹಿಂದಿರುಗಿ ಮನೆಗೆ ಬಂದು ಹೆಂಡತಿಯ ಕೈಗೆ ಕೊಟ್ಟರು. ಆಕೆ ಅವನ್ನು ಈಸಿಕೊಂಡು, ಮೇಲೆ ಮೆತ್ತಿಕೊಂಡಿದ್ದ ಮಣ್ಣು ಹೋಗುವಂತೆ ಮೊಳಕೆ ಬತ್ತವನ್ನು ತೊಳೆದಳು. ಒಲೆ ಹಚ್ಚಲು ಕಟ್ಟಿಗೆ ಇರಲಿಲ್ಲವೆಂದು ಹೇಳಲು ನಾಯನಾರರು ಮನೆಯ ಸೂರಿನ ಜಂತಿಯನ್ನು ಕುಯ್ದುಕೊಟ್ಟರು, ಆಕೆಯು ಮುರಿದ ಜಂತಿಯನ್ನಿಟ್ಟು ಒಲೆ ಹೊತ್ತಿಸಿ ಮೊಳೆ ಬತ್ತವನ್ನು ಹುರಿದು, ಒರಳಲ್ಲಿ ಕುಟ್ಟಿ ಅಕ್ಕಿ ಮಾಡಿ ಅದರಿಂದ ಅನ್ನ ಬೇಯಿಸಿದಳು. ವ್ಯಂಜನಕ್ಕೇನೂ ಇಲ್ಲವೆಂದು ಆಕೆ ಹೇಳಿದಳು. ಆಗ ನಾಯನಾರರು ಹಿತ್ತಲು ಕಡೆ ಹೋಗಿ ಅಲ್ಲಿ ಪಾತಿಗಳಲ್ಲಿ ಬೆಳೆದಿದ್ದ ಕೀರೆಸೊಪ್ಪು ಮೊದಲಾದ ಕಿರುಬೆಳೆಗಳನ್ನು ಕೈಯಿಂದ ತಡಕಾಡಿ ಕಿತ್ತು ತಂದರು. ಅವರ ಮಡದಿ ಅವುಗಳನ್ನು ನೀರಿನಲ್ಲಿ ತೊಳೆದು ಸ್ವಚ್ಛಮಾಡಿ ತನ್ನ ಜಾಣ್ಮೆಯಿಂದ ಬೇರೆ ಬೇರೆಯಾಗಿ ಪಾಕವನ್ನು ಮಾಡಿ ವ್ಯಂಜನಗಳನ್ನು ಸಿದ್ಧಪಡಿಸಿದರು. ಹೀಗೆ ಒಂದು ರೀತಿಯಾಗಿ ಆರೋಗಣೆಗೆ ಬೇಕಾದ ಪದಾರ್ಥಗಳನ್ನು ಸಜ್ಜು ಮಾಡಿದ ಮೇಲೆ, ಆಯಾಸದಿಂದಲೂ ಹಸಿವಿನಿಂದಲೂ ಆಸತ್ತು ಮಲಗಿ ನಿದ್ರಿಸುತ್ತಿದ್ದ ಅತಿಥಿಯನ್ನು ಎಬ್ಬಿಸಿ, “ತಪೋಧನನೆ ! ತಡವಾದುದಕ್ಕೆ ಕ್ಷಮಿಸಬೇಕು. ಈಗ ಅರೋಗಣೆಗೆ ದಯೆಗೈಯಬೇಕು” ಎಂದು ಕೈ ಮುಗಿದು ಬೇಡಿಕೊಂಡರು. ಬಂದ ತಪಸ್ವಿಯು ಆಗ ಜ್ಯೋತಿ ಸ್ವರೂಪವಾಗಿ ತೋರಲು ಇಳಯಾನ್ಗುಡಿಮಾರರೂ ಅವರ ಮಡದಿಯೂ ನಿಬ್ಬೆರಗಾಗಿ ಇದ್ದೆಡೆಯಲ್ಲೇ ಕದಲದೆ ನಿಂತುಬಿಟ್ಟರು. ಬಳಿಕ, ಉಮೆಯೊಡನೆ ವೃಷಭಾರೂಢನಾಗಿ ಸದಾಶಿವನು ತನ್ನ ನಿಜರೂಪವನ್ನು ತೋರಿದನು. ತನ್ನ ಭಕ್ತನನ್ನು ನೋಡಿ “ಷಡ್ರಸ ಭೋಜನವನ್ನು ದಿನಂಪ್ರತಿ ಹರಭಕ್ತರಿಗೆ ನೀಡುವ ಉತ್ತಮನೇ ! ನಿನ್ನ ನಿಚ್ಚಟ ಭಕ್ತಿಯಿಂದ ನಾನು ಸಂತುಷ್ಟನಾದೆನು. ನೀನೂ ನಿನ್ನ ಮಡದಿಯೂ ಕೈಲಾಸಕ್ಕೆ ತೆರಳಿ ನಿತ್ಯಸುಖವನ್ನು ಅನುಭವಿಸುತ್ತಿರಿ” ಎಂದು ಹೇಳಿ ಅವರಿಬ್ಬರಿಗೂ ಗಣಪದವನ್ನು ಕರುಣಿಸಿದನು.

”ಮೊಳೆವಿತ್ತನುಡುಗಿ ಹುರಿದಟ್ಟಿ ಶಿವನಿಗುಣಿಸಿ ಮೆರೆವ ನಿಳಯಾನ್ಗುಡಿಮಾರರ ಚರಣಾಂಬುಜಕ್ಕೆ ಶರಣು.”

★ ಎಂ. ವ್ಹಿ. ಜಂಬುನಾಥನ್

(ಮುಂದುವರಿಯುವುದು)

ಸಾಹಿತ್ಯಪ್ರಪಂಚದಲ್ಲಿ ವಿಮರ್ಶೆ

ಸಾಹಿತ್ಯ ಕ್ಷೇತ್ರದಲ್ಲಿ ವಿಮರ್ಶಕನ ಪಾತ್ರ ಎಷ್ಟೇ ಹಿರಿದಾಗಿರಲಿ, ಎಷ್ಟೇ ಅನಿವಾರ್ಯವಾಗಿರಲಿ ಆತನ ಬಗೆಗೆ ಅಸಹನೆ, ತಿರಸ್ಕಾರ ಸಾಮಾನ್ಯ ಓದುಗರಲ್ಲಿ ವಿಶೇಷವಾಗಿ ಕವಿಗಳಲ್ಲಿ ತುಂಬಿಕೊಂಡು ಬಂದಿರುವದು ಕಂಡುಬರುತ್ತದೆ. ಅವರ ದೃಷ್ಟಿಯಲ್ಲಿ ವಿಮರ್ಶಕನೆಂದರೆ, ಕಾವ್ಯವನ್ನು ರಚಿಸುವುದಾಗದೆ ಕಾವ್ಯದಲ್ಲಿ ಇಲ್ಲದ ದೋಷವನ್ನು ತೋರಿಸಿ ಕವಿಗಳ ಮೇಲೆ ಹರಿಹಾಯುವ ಪ್ರಾಣಿ, ಅಸೂಯಾಪರನಾದ ಅಪಾಯಕಾರಿ ವ್ಯಕ್ತಿ; ಕೃತಿ ಪರೀಕ್ಷಕನ ಪಟ್ಟದ ಮೇಲೆ ತಾನೇ ಏರಿ ಕುಳಿತು ಕವಿಗಳ ಮೇಲೆ, ಕಾವ್ಯದ ಮೇಲೆ ಪ್ರಭುತ್ವ ನಡೆಯಿಸಿ ಕವಿಗಳ ಸ್ಫೂರ್ತಿಯನ್ನೂ, ಉತ್ಸಾಹವನ್ನೂ ಧ್ವಂಸಗೊಳಿಸುತ್ತ ತನ್ನನ್ನೇ ಮೆರೆಯುವ ಅಹಂಭಾವಿ. ಸಹೃದಯರ ಕಣ್ಣುಗಳಿಗೆ ತನ್ನ ದೃಷ್ಟಿಯನ್ನು ಹಚ್ಚಿ, ಕೃತಿಗಳನ್ನು ನೋಡಹಚ್ಚುವ ಅಧಿಕಪ್ರಸಂಗಿ ಅಷ್ಟೇ ಅಲ್ಲ. ವಿಮರ್ಶಕರಿಂದ ಕಾವ್ಯ ಪ್ರಪಂಚಕ್ಕೆ ಅತಿ ದೊಡ್ಡ ಗಂಡಾಂತರವೆಂದು ಭಾವಿಸಿ, ಕಾವ್ಯ ಪ್ರಪಂಚದಿಂದ ವಿಮರ್ಶಕರನ್ನು ಬಹಿಷ್ಕರಿಸಿ ಹೊರದಬ್ಬುವ ಹಂಚಿಕೆ, ಹೋರಾಟವೂ ನಡೆದಂತೆ ಕಂಡುಬರುತ್ತದೆ. ವಿಮರ್ಶಕನ ಕಾರ್ಯವೆಂದರೆ, ಎರವಲು ತಂದ ಒಡವೆಗಳನ್ನು ಧರಿಸಿ, ಇದಕ್ಕೆ ಸರಿಸಾಟಿ ಯಾವುದೆಂದು ಪರರ ಆಭರಣಗಳನ್ನು ಹೀಯಾಳಿಸುವಂತೆ, ತನಗೆ ಕವಿತ್ವಶಕ್ತಿ ಇಲ್ಲದೆ ಅನ್ಯಕಾವ್ಯಗಳ ಉತ್ತಮ ಪದ್ಯಗಳನ್ನು ಪಠಿಸಿ, ಇವು ಸತ್ಕವಿ ನಿರ್ಮಿತ ಪದ್ಯಗಳು ಇವಕ್ಕೆ ಇನ್ನಾವ ಪದ್ಯಗಳು ತಾನೆ ಸರಿ ಎನ್ನುತ್ತ ಬೇರೆಯವರ ಪದ್ಯಗಳನ್ನು ಹೀಯಾಳಿಸುವ ಹೆಡ್ಡನೆಂದು ನಗೆಯಾಡಿ, ವಿಮರ್ಶಕನನ್ನು ಕಾವ್ಯಸೀಮೆಯಿಂದ ಓಡಿಸಲು ಪ್ರಯತ್ನಿಸಿದವರೂ ಉಂಟು.[೧]

ವಿಮರ್ಶಕನ ಬಗೆಗೆ ಇಷ್ಟೊಂದು ದೂರು, ದೂಷಣೆಗಳಿರುವಾಗ ಆತನಿಗೆ ಸಾಹಿತ್ಯಸೀಮೆಯಲ್ಲಿ ಸ್ಥಾನವನ್ನೀಯುವದು ಎಷ್ಟು ಉಚಿತವಾದೀತು? ಇಲ್ಲವೆ ಹೊರಗಿಡುವದು ಎಷ್ಟರಮಟ್ಟಿಗೆ ನ್ಯಾಯವಾದೀತು? ಎಂಬುದನ್ನು ವಿವೇಚಿಸುವದು ಅತ್ಯಂತ ಮಹತ್ವದ ಕಾರ್ಯವೆನಿಸುತ್ತದೆ.

---

೧. “ ಎರವಿನ ಪಜ್ಜಮಂ ತಳೆದಿದಕ್ಕೆಣೆಮಾರದಿದೆಂದು ಲೋಗರಾ
ಭರಣಮನೇಳಿಪಂತೆ ತನಗಿಲ್ಲದೆ ಸಾರಕವಿತ್ವಮನ್ಯಕಾ
ವ್ಯರುಚಿರಪದ್ಯಮಂ ಪಠಿಸಿ ಸತ್ಕವಿನಿರ್ಮಿತಪದ್ಯಮಿಂತಿದ
ಕ್ಕೊರೆಯಿಯಿಸುತ್ತ ಕಾಳ್ಗೆಡೆವನಂ ನಗದಿರ್ಪರೆ ಬಲ್ಲ ಕಬ್ಬಿಗರ್ ”
—‘ ರಾಜಶೇಖರ ವಿಳಾಸಂ ’ ಪ್ರಥಮಾಶ್ವಾಸಂ. ಪ. ೨೬. ಸಂ. ಡಾ. ಆರ್. ಸಿ. ಹಿರೇಮಠ ಮತ್ತು ಡಾ. ಎಮ್. ಎಸ್. ಸುಂಕಾಪುರ.

ತನಗೆ ಪರಿಚಿತವಿರುವ ವಸ್ತು, ವಿಷಯ, ವ್ಯಕ್ತಿಯ ಬಗೆಗೆ ಇತರರ ಅನುಭವ, ಭಾವನೆ, ಅಭಿಪ್ರಾಯಗಳನ್ನು ಅರಿತುಕೊಳ್ಳುವದು ಮಾನವನ ಪ್ರವೃತ್ತಿ. ಇಂಥ ಪ್ರವೃತ್ತಿಯೇ ವಿಮರ್ಶಾಕೃತಿಯನ್ನು ಓದಲು ಸಹೃದಯನನ್ನು ಪ್ರೇರೇಪಿಸುತ್ತದೆ. ತಾನು ಓದಿ ಆಸ್ವಾದಿಸಿದ ಕೃತಿಯೊಂದರ ಬಗೆಗೆ ಇಲ್ಲವೆ ಕವಿಯ ಬಗೆಗೆ ವಿಮರ್ಶಕನ ಅಭಿಪ್ರಾಯ, ಅನುಭವಗಳನ್ನು ಅರಿತುಕೊಳ್ಳುವ ಆತುರದಿಂದ ವಿಮರ್ಶಾ ಸಾಹಿತ್ಯವನ್ನು ಓದಲು ಮೊದಲು ಮಾಡುತ್ತಾನೆ. ಅಲ್ಲದೆ ಕೃತಿಯೊಂದರಿಂದ ವಿಮರ್ಶಕನು ಪಡೆದ ತೃಪ್ತಿ, ಕಂಡ ಸೌಂದರ್ಯವನ್ನು ವಿವರಿಸುವಲ್ಲಿ ಹಾಗೂ ತನ್ನ ಅತೃಪ್ತಿಯನ್ನು ಕಾವ್ಯದ ಅಸೌಂದರ್ಯವನ್ನು ಒಮ್ಮೆ ನಯವಾಗಿ ಇನ್ನೊಮ್ಮೆ ವಿಡಂಬಕವಾಗಿ ವಿವರಿಸುವಲ್ಲಿ ತನ್ನ ನಿರ್ಣಯವನ್ನು ಮಂಡಿಸುವಲ್ಲಿ ಆತನ ಜಾಣ್ಮೆ, ಚಾತುರ್ಯ, ವಿಮರ್ಶೆಯನ್ನು ಓದಲು ಹೆಚ್ಚಿನ ಪ್ರೇರಣೆಯನ್ನು ನೀಡುತ್ತವೆ.

ಕೃತಿಯನ್ನೋದಿದಾಗ ತನ್ನಲ್ಲಿ ಮೂಡಿದ ವಿಚಾರ, ಭಾವನೆಗಳಿಗೂ ಹಾಗೂ ವಿಮರ್ಶಕನ ವಿಚಾರ, ಭಾವನೆಗಳಿಗೂ ತಾಳೆಹಾಕುವ ಚಪಲತನವೂ ಒಂದು ಕಾರಣವೆಂದು ಹೇಳಬಹುದು.

ವಿಮರ್ಶೆಯನ್ನು ಓದುವುದರ ಹಿಂದಿರುವ ಪ್ರೇರಣೆಗಳನ್ನೇ ಕಾವ್ಯವನ್ನು ಓದುವದರಲ್ಲಿಯೂ ಕಾಣಬಹುದು. ಕವಿ ಕಂಡ ಸೌಂದರ್ಯ ಉಂಡ ಬದುಕುಗಳನ್ನು ಅಭಿವ್ಯಕ್ತಗೊಳಿಸಿದ ಕಲೆಯಿಂದ ನಮ್ಮ ಚಿತ್ತ ಸಾಹಿತ್ಯದತ್ತ ಆಕರ್ಷಿಸಲ್ಪಡುತ್ತದೆ. ಒಟ್ಟಿನಲ್ಲಿ ನಾವು ಕಂಡ ಸೃಷ್ಟಿಯನ್ನೋ ನಾವು ಅನುಭವವನ್ನೋ ಕವಿಯಾದವನು ತಾನೂ ಕಂಡುಂಡು ಕಾವ್ಯವನ್ನು ಸೃಷ್ಟಿಸಿರುತ್ತಾನೆ. ಆದರೂ ಕಾವ್ಯದ ಬಗೆಗೆ ನಮಗೆ ಆಸಕ್ತಿ, ಏಕೆಂದರೆ ನಾವು ಕಂಡುದುದನ್ನು ಕವಿ ಹೇಗೆ ಕಂಡಿದ್ದಾನೆ, ನಾವು ಆಸ್ವಾದಿಸಿದುದನ್ನು ಕವಿಯೆಂತು ಆಸ್ವಾದಿಸಿದ್ದಾನೆ, ಅದೆಲ್ಲವನ್ನು ಹೇಗೆ ಕಲಾಪೂರ್ಣವಾಗಿ ಅಭಿವ್ಯಕ್ತಗೊಳಿಸಿದ್ದಾನೆ ಎನ್ನುವ ಕುತೂಹಲ. ಅಂತೂ ಕಾವ್ಯವನ್ನು ಓದುವುದರ ಹಿಂದಿರುವ ಪ್ರೇರಣೆಗಳೇ ಸಾಹಿತ್ಯ ವಿಮರ್ಶೆಯನ್ನು ಓದುವಾಗಲೂ ಇರುತ್ತವೆ ಎಂಬ ನಿಲುವಿಗೆ ಬಂದು ನಿಲ್ಲುತ್ತೇವೆ. ಆದರೆ ವ್ಯತ್ಯಾಸವಿಷ್ಟೆ, ವಿಮರ್ಶೆಯನ್ನು ಓದುವಾಗ ಕೃತಿ ಹಾಗೂ ಆ ಕೃತಿಯನ್ನು ಕುರಿತು ವಿಮರ್ಶಕನ ಪ್ರತಿಕ್ರಿಯೆಗಳ ಅಭಿವ್ಯಕ್ತಿಯತ್ತ ನಮ್ಮ ಕುತೂಹಲವಿದ್ದರೆ, ಕಾವ್ಯವನ್ನು ಓದುವಾಗ ಬದುಕು ಹಾಗೂ ಬದುಕನ್ನು ಕುರಿತ ಕವಿಯ ಪ್ರತಿಕ್ರಿಯೆಗಳತ್ತ ನಮ್ಮ ಕುತೂಹಲ ಹಾಗೂ ಆಸಕ್ತಿ ಇರುತ್ತದೆ. ಆದರೆ ಮೂಲ ಪ್ರೇರಣೆಯೊಂದೇ ಎನ್ನುವದನ್ನು ಮರೆಯುವಂತಿಲ್ಲ.

ಇನ್ನು ಕಾವ್ಯ ರಚಿಸುವಲ್ಲಿ ಕವಿಗಿರುವ ಪ್ರೇರಣೆಯನ್ನು ಹಾಗೂ ಕಾವ್ಯ ವಿಮರ್ಶಿಸುವಲ್ಲಿ ವಿಮರ್ಶಕನಿಗಿರುವ ಪ್ರೇರಣೆಯನ್ನು ಅವಲೋಕಿಸಿದರೆ

ಅಲ್ಲಿಯೂ ಸಾಕಷ್ಟು ಸಾಮ್ಯವನ್ನು ಕಾಣಬಹುದು.[೧]

ಮುಖ್ಯವಾಗಿ "ಅಭಾವ ಹಾಗೂ ಆನಂದಗಳ ಸಂಯೋಗದಿಂದ ಕಾವ್ಯ ಜನ್ಮ ತಾಳುತ್ತದೆ."[೨] ಅಂದರೆ ಬದುಕಿನಲ್ಲಿ ದೊರೆಯುವ ತೃಪ್ತಿ-ಅತೃಪ್ತಿ, ಸುಖ-ಅಸುಖ, ಅಭಾವ ಆನಂದಗಳೇ ಕಾವ್ಯ ಪ್ರೇರಣೆಗಳಾದಂತೆ ಕೃತಿಯಿಂದ ದೊರೆಯುವ ತೃಪ್ತಿ-ಅತೃಪ್ತಿ, ಅಭಾವ-ಆನಂದಗಳೇ ವಿಮರ್ಶಕನ ಸೃಷ್ಟಿಗೆ ಪ್ರೇರಣೆಗಳಾಗುತ್ತವೆ; ಹಾಗೂ ಅವುಗಳನ್ನು ಇತರರಿಗೆ ತಿಳಿಸಬೇಕೆಂಬ ತೀವ್ರ ಬಯಕೆಗೆ ಇಬ್ಬರೂ ಒಳಗಾಗುತ್ತಾರೆ. ಕವಿ ಹಾಗೂ ವಿಮರ್ಶಕರಿಬ್ಬರಿಗೂ ಆತ್ಮ ಪ್ರದರ್ಶನದ ಗುಣ ಜನ್ಮಜಾತವಾಗಿರುತ್ತದೆ; ಆದರಿಂದಲೇ ಅವರಿಬ್ಬರಿಗೂ ಸಮಾಧಾನ ಸಾಧ್ಯ. ಅಂತೂ ಸ್ವಾಭಿವ್ಯಕ್ತಿಯ ಆಕಾಂಕ್ಷೆ ಇಬ್ಬರಿಗೂ ಕಾರ್ಯಪ್ರವೃತ್ತರಾಗಲು ಪ್ರಚೋದಿಸುತ್ತದೆ. ಆದ್ದರಿಂದ "ಕೃತಿ ತನ್ನ ಮೇಲೆ ಮಾಡಿದ ಪರಿಣಾಮಗಳನ್ನು ಸಮಾಲೋಚಿಸಿದಾಗ ಆದನ್ನು ಕುರಿತು ಯಾರಿಗಾದರೂ ಬೇರೆಯವರಿಗೆ ತನ್ನ ಅನುಭವನ್ನು ಹೇಳಲು ಮೊದಲು ಮಾಡಿದಾಗ ಆತ ವಿಮರ್ಶೆಯ ಹಾದಿಯಲ್ಲಿದ್ದಾನೆ ಎಂದು ಹೇಳಬಹುದು"[೩] ಎಂಬ ಮಾತೂ ಇದನ್ನೇ ಸಮರ್ಥಿಸುತ್ತದೆ.

ಕವಿಯಲ್ಲಿರಬಹುದಾದ ಅನುಭವವ, ಚಿತ್ತವೃತ್ತಿ, ಹಾಗೂ ಅನಿಸುವಿಕೆ ಸಹೃದಯನಲ್ಲೂ ಇರುತ್ತವೆ. ಆದರಿಂದಾಗಿ ಕಾವ್ಯವನ್ನು ಯೋಗ್ಯರೀತಿಯಿಂದ ಆಸ್ವಾದಿಸಲು ಸಹೃದಯನು ಸಮರ್ಥನಾಗಿರುತ್ತಾನೆ. ಇದನ್ನು ಹೀಗೂ ಹೇಳಬಹುದು ಕವಿಯು ತನ್ನ ಸೌಂದರ್ಯಾನುಭೂತಿಯ ಅಭಿವ್ಯಕ್ತಿಯ ಮೂಲಕ ಓದುಗನ ಹೃದಯಾಂತರಾಳದಲ್ಲಿ ಹುದುಗಿಕೊಂಡಿರುವ ಜೀವನಾನುಭವದಿಂದ ಉಂಟಾದ ಭಾವಗಳನ್ನು ಉದ್ದೀಪನಗೊಳಿಸುತ್ತಾನೆ. ವಿಚಾರಿಸಿ ನೋಡಿದರೆ ವಿಮರ್ಶಕನ ಕಾರ್ಯವಾದರೂ ಇಂತಹದೆ. ಒಂದು ಕಾವ್ಯವನ್ನು ಓದಿದಾಗ, ಆಸ್ವಾದಿಸಿದಾಗ ಸಾಮಾನ್ಯ ಓದುಗ ವಿಚಿತ್ರವಾದ ಅವ್ಯಕ್ತವಾದ ಒಂದು ರೀತಿಯ ಸುಖ ತೃಪ್ತಿಯನ್ನು ಅನುಭವಿಸುತ್ತಾನೆ. ಆದರೆ ಆ ಸುಖದ, ತೃಪ್ತಿಯ ಸ್ವರೂಪದ ಕಲ್ಪನೆ ಆತನಿಗೇ ಅಸ್ಪಷ್ಟವಾಗಿರುತ್ತದೆ. ಅದರಂತೆ ಕಾವ್ಯದಿಂದಾದ ಅಸುಖ, ಅತೃಪ್ತಿಯೂ ಅಸ್ಪಷ್ಟವೆ. ಆಗ ವಿಮರ್ಶಕನಾದ ವ್ಯಕ್ತಿ ಕಾವ್ಯದಲ್ಲಿಯ ಸೌಂದರ್ಯವನ್ನು, ಸೊಗಸನ್ನು ಇಲ್ಲವೆ ಅಸೌಂದರ್ಯವನ್ನು, ಅಸ್ಪಷ್ಟತೆಯನ್ನು

---

೧. ನಮ್ಮ ಪ್ರಾಚೀನ ಲಾಕ್ಷಣಿಕರಿಗೆ ಕಾವ್ಯ ಪ್ರೇರಣೆಗಳು ಅಪರಿಚಿತವಾಗಿರಲಿಲ್ಲ. ಆದರೂ ಲಕ್ಷಣಗ್ರಂಥಗಳಲ್ಲಿ ನೇರವಾದ ಕಾವ್ಯ ಪ್ರೇರಣೆಗಳನ್ನು ಕುರಿತ ವ್ಯಾಖ್ಯಾನ ದೊರೆಯುದು—ಡಾ. ನಗೇಂದ್ರ "ವಿಚಾರ ಔರ ಅನುಭೂತಿ" (ಹಿಂದಿ) ಪುಟ-೩.

೨. ಅಲ್ಲಿಯೇ ಪುಟ ೪.

೩. ಜಿ. ಎಸ್, ಶಿವರುದ್ರಪ್ಪ "ವಿಮರ್ಶೆಯ ಪೂರ್ವಪಶ್ಚಿಮ" ಪು: ೨೯,

ಸ್ಪಷ್ಟವಾಗಿ, ಕಲಾತ್ಮಕವಾಗಿ ಅಭಿವ್ಯಕ್ತಗೊಳಿಸಿದಾಗ, ಸಾಮಾನ್ಯ ಓದುಗನಿಗೆ ಕೃತಿಯಿಂದುಂಟಾದ ಆತನ ಹೃದಯದಲ್ಲಿ ಹುದುಗಿಕೊಂಡಿದ್ದ ಭಾವನೆಗಳು ಉದ್ದೀಪನಗೊಂಡು ಹೆಚ್ಚಿನ ಸಂತೋಷವಾಗುತ್ತದೆ. "ಕವಿ ಬದುಕಿನಿಂದುಂಟಾದ ಭಾವನಾತ್ಮಕ ಮತ್ತು ವಿಚಾರಾತ್ಮಕ ಪ್ರತಿಕ್ರಿಯೆಗಳನ್ನು ಪ್ರಕಟಪಡಿಸಿ ಸಹೃದಯರಿಗೆ ತನ್ನಂತರಾಳದ ರಸದಲ್ಲಿ ಮಗ್ನಗೊಳಿಸಲು ಪ್ರಯತ್ನಪಡುವಂತೆ ವಿಮರ್ಶಕನು ಕವಿಕೃತಿಯಿಂದ ಜಾಗೃತವಾದ ಪ್ರತಿಕ್ರಿಯೆಗಳನ್ನು, ಶಾಸ್ತ್ರೀಯ ವಿಧಾನದಿಂದಲೇ ಆಗಲಿ, ತಿಳುವಳಿಕೆ, ಆಳವಾದ ಚಿಂತನೆ, ತನ್ನ ವೈಯಕ್ತಿಕ ಅಭಿರುಚಿಗಳನ್ನು ಪ್ರಕಟಗೊಳಿಸಿ ಪರರಿಗೆ ತನ್ನ ಭಾವ ಹಾಗೂ ವಿಚಾರಗಳ ಅರಿವನ್ನುಂಟುಮಾಡುತ್ತಾನೆ"[೫] ಹೀಗೆ ಕವಿ ಹಾಗೂ ವಿಮರ್ಶಕರ ಕಾರ್ಯ ಅಭಿವ್ಯಕ್ತಿಯ ಮೂಲಕ ಸಹೃದಯರ ವಿಚಾರಗಳನ್ನು, ಭಾವನೆಗಳನ್ನು ಉದ್ದೀಪನಗೊಳಿಸುವದು, ಒಂದೊಂದು ಸಲ ಬದುಕಿನಲ್ಲಿ ಅಥವಾ ಕೃತಿಯಲ್ಲಿ ಸಹೃದಯನಿಗೆ ಅಗೋಚರವಾದ ಸೌಂದರ್ಯವನ್ನು, ಸವಿಯನ್ನು ಕಂಡರಿಸುವದು ; ಆದರೆ

> "The poet or the novelist finds his Subject in the external life around him, or in some internal life experience; the critic finds his subject in other men's books, in the world of literature: In each case there follows a reconstruction, the first reconstructing impressions drawn from life, the other reconstructing impressions drawn from literature."[೬]

ಈ ದೃಷ್ಟಿಯಿಂದ ನೋಡಿದರೆ ಕವಿಗೂ ವಿಮರ್ಶಕನಿಗೂ, ಕಾವ್ಯಕ್ಕೂ ವಿಮರ್ಶೆಗೂ ನಡುವೆ ಅತ್ಯಂತ ನಿಕಟವಾದ ಸಂಬಂಧ ಸ್ಫುಟವಾಗಿ ಕಾಣುತ್ತದೆ. ವಿಮರ್ಶಕನಲ್ಲಿ ಕಾವ್ಯಾಂಶವಿರುವಂತೆ ಕವಿಯಲ್ಲಿಯೂ ವಿಮರ್ಶನ ಶಕ್ತಿ ಇರುವದರಿಂದಲೇ ಸತ್ಕೃತಿಗಳ ಸೃಷ್ಟಿಯಾಗುತ್ತದೆ. ಕಾವ್ಯರಚನೆಯಲ್ಲಿ ತೊಡಗಿದಾಗ, ಇಲ್ಲವೆ ಕಾವ್ಯವನ್ನು ಬರೆದು ಮುಗಿಸಿದಾಗ ಕವಿ ಎಷ್ಟೋ ಸಲ ತನ್ನ ಕಾವ್ಯವನ್ನೇ ತಾನು ವಿಮರ್ಶಿಸುತ್ತಾನೆ, ಕಂಡ ಕೊರತೆಗಳನ್ನು ತುಂಬಿಕೊಳ್ಳುತ್ತಾನೆ. ಅನುಚಿತವಾದದ್ದನ್ನು. ಅಧಿಕವಾದದ್ದನ್ನು ತೊಡೆದುಹಾಕುತ್ತಾನೆ. ಆದಕ್ಕಾಗಿ ತನ್ನ ಕೃತಿಯನ್ನೇ ತಾನು ಒಂದಲ್ಲ ಹಲವು ಸಲ ಓದುತ್ತಾನೆ. ಪ್ಯಾಸ್ಕಲ್, ವರ್ಡ್ಸ್‌ವರ್ಥ್, ಹಿಮಿಂಗ್ವೆ ಮೊದಲಾದ ಸಾಹಿತಿಗಳು, ಕವಿಗಳು ಅನುಸರಿಸಿದ ರೀತಿ ಇದು. "೧೯೫೪ ರಲ್ಲಿ ನೋಬಲ್ ಪಾರಿತೋಷಕವನ್ನು ಗಳಿಸಿದ 'The oldman and the sea' ಎಂಬ ಕಿರುಕಾದಂಬರಿಯನ್ನು ಮುದ್ರಕನ ವಶಕ್ಕೆ

೫. ಗುಲಾಬರಾಯ "ಕಾವ್ಯ ಕೆ ರೂಪ" (ಹಿಂದಿ) ಪು. ೨೪೩.

೬. R. A. Scott James "The making of literature P. 385.

ಕೊಡುವ ಮುನ್ನ ಇನ್ನೂರು ಸಲ ಓದಿದ್ದನಂತೆ".[೭] ಕಾವ್ಯಕೌಶಲವೆನ್ನುವದು 'ಕಲೆಯ ಸತತವಾದ ಅಭ್ಯಾಸದ ಮತ್ತು ವಿಮರ್ಶೆಯು ಫಲವದು........ಅವನ (ಹೊರೆಸನ) ಉಪದೇಶದ ಮುಖ್ಯ ಸಾರವೇ ಅದು. ಕೇವಲ ಸ್ಫೂರ್ತಿಯೊಂದನ್ನು ಮಾತ್ರ ನಂಬಿರುವ ಕವಿಯನ್ನು ಕಂಡರೆ ಅವನಿಗೆ ತಿರಸ್ಕಾರ'[೮] ಹೀಗೆ ಪ್ರಸಿದ್ಧ ಪ್ರಾಚೀನ ಪಾಶ್ಚಿಮಾತ್ಯ ಕಾವ್ಯಮೀಮಾಂಸಕರಾದ ಹೊರೆಸನಂಥವರೂ ಕವಿಯಲ್ಲಿರುವ ವಿಮರ್ಶನ ಶಕ್ತಿಯನ್ನು ಮುಕ್ತಮನಸ್ಸಿನಿಂದ ಒಪ್ಪಿಕೊಂಡಿದ್ದಾರೆ. ಇನ್ನು ವಿಮರ್ಶಕನಲ್ಲಿಯೂ ಕೂಡ ಕಾವ್ಯಪರಿಕರಗಳಾದ ಪ್ರತಿಭೆ, ಕಾವ್ಯಪರಿಚಯು, ಸತತಾಭ್ಯಾಸ, ಪ್ರಯತ್ನ, ವ್ಯವಹಾರಜ್ಞಾನ, ಇತಿಹಾಸ ಪರಿಚಯು ಇವೆಲ್ಲವೂ ಕವಿಯಲ್ಲಿರುವಂತೆ ಅವಶ್ಯವಾಗಿ ಇರಲೇಬೇಕು. ಆಗ ಮಾತ್ರ ವಿಮರ್ಶಕ ಕಾವ್ಯವನ್ನು ಆಸ್ವಾದಿಸಿ ಕವಿಯ ಅನುಭವವನ್ನು ಆತ್ಮವನ್ನು, ಉದ್ದೇಶವನ್ನು, ಕಲಾಕೌಶಲ್ಯವನ್ನು ವಿಶ್ಲೇಷಿಸಿ ವಿವೇಚಿಸಬಲ್ಲವನಾಗುತ್ತಾನೆ.

ಪ್ರತಿಭೆಯನ್ನು ಕುರಿತು ವಿವೇಚಿಸುವಾಗ ಕವಿಗಿರುವ ಪ್ರತಿಭೆಯೇ ಬೇರೆ, ವಿಮರ್ಶಕನಿಗಿರಬೇಕಾದ ಪ್ರತಿಭೆಯೇ ಬೇರೆ, ಎಂದು ಭ್ರಮಿಸುವ ಸಂಭವವುಂಟು. ಕಾವ್ಯನಿರ್ಮಾಪಕನಾದ ಕವಿಗೆ ಕಾರಯಿತ್ರೀ ಪ್ರತಿಭೆ, ಅದನ್ನು ಆಸ್ವಾದಿಸಿ ವಿಮರ್ಶಿಸುವ ಸಹೃದಯನಿಗೆ ಭಾವಯಿತ್ರೀ ಪ್ರತಿಭೆಮಾತ್ರ ಅಗತ್ಯವೆಂದು ಭಾವಿಸುವದುಂಟು. ಆದರೆ ಒಳ್ಳೆಯ ವಿಮರ್ಶಕನಿಗೆ ಭಾವಯಿತ್ರೀ ಪ್ರತಿಭೆಯೊಡನೆ ಕಾರಯಿತ್ರೀ ಪ್ರತಿಭೆ ಇರಲೇಬೇಕು. ಬ್ರಹ್ಮಸೃಷ್ಟಿಯನ್ನು ಆಸ್ವಾದಿಸಿ ಅದರ ಅಂದವನ್ನು ವಿವರಿಸಿ, ವಿಮರ್ಶಿಸಿ ಬೆಲೆಕಟ್ಟುವಂತೆ, ವಿಮರ್ಶಕನು ಕವಿಸೃಷ್ಟಿಯ ಚೆಲುವನ್ನು ವಿವರಿಸಿ, ವಿಮರ್ಶಿಸಿ ಬೆಲೆಕಟ್ಟುತ್ತಾನೆ. ಆದರಿಂದಾಗಿ ವಿಮರ್ಶಕನು ಕೇವಲ ಉತ್ತಮ ಸಹೃದಯನಾದರೆ ಸಾಗದು. ತನ್ನ ವ್ಯಕ್ತಿತ್ವವನ್ನು ಅಭಿವ್ಯಕ್ತಗೊಳಿಸುವ ಕಲಾಶಕ್ತಿ ಇರದ ಹೊರತು ಕವಿ ಕವಿಯಾಗಲಾರನೆಂತೋ, ಅಂತೆಯೇ ಕಾವ್ಯವೊಂದರಿಂದ ಪಡೆದ ಅನುಭವ, ಉಂಟಾದ ಆಲೋಚನೆ, ಕಂಡ ಹೊಳಪನ್ನು ವಿಶ್ಲೇಷಿಸಿ ಮನಂ

೭. "ಹೊರೆಸನ ಸಾಹಿತ್ಯವಿಮರ್ಶೆ" ಪ್ರಸ್ತಾವನೆ ಪು. ೬೫-೬೬ ಎಸ್. ಬಾಲಸುಬ್ರಹ್ಮಣ್ಯ.

೮. ಅಲ್ಲಿಯೇ ಪು. ೬೪.

೯. "ಪ್ರತಿಭಾವತ್ವಮುಮಕೃತಕ
ಚತುರತೆಯುಂ ಪರಮಬುಧ ಜನೋಪಾಸನಮುಂ
ಕೃತಿ ಪರಿಚಯಮುಂ ತರ್ಕುಂ
ಪ್ರತೀತಿಯುಂ ವಾಗ್ಮಿದಗ್ಧತಾ ನಿಪುಣತೆಯೊಳ್"
—"ಕವಿರಾಜ ಮಾರ್ಗಂ" (—ಸಂ. ಎಂ. ವ್ಹಿ. ಸೀತಾರಾಮಯ್ಯ). ಪ್ರಥಮ ಪರಿಚ್ಛೇದ ಪುಟ-೧೧

ಗೊಳ್ಳುವಂತೆ ಕಲಾತ್ಮಕವಾಗಿ ಅಭಿವ್ಯಕ್ತಗೊಳಿಸದ ಹೊರತು ವಿಮರ್ಶಕ ವಿಮರ್ಶಕನಾಗಲಾರ. ಆತನ ಕೃತಿ ಶ್ರೇಷ್ಠ ವಿಮರ್ಶನ ಕೃತಿಯಾಗದು. ಈ ಅಭಿವ್ಯಕ್ತಿಯ ಕಲೆಯುಳ್ಳ ಸಹೃದಯನು ಮಾತ್ರ ವಿಮರ್ಶಕನಾಗುತ್ತಾನೆ. ಇಲ್ಲವಾದರೆ ತಲೆದೂಗಿ, ತಲೆಯಲ್ಲಾಡಿಸಿ ಅಭಿಪ್ರಾಯವನ್ನು ವ್ಯಕ್ತಮಾಡುವ ಸಾಮಾನ್ಯ ಸಹೃದಯ ಮಾತ್ರ ಆಗುತ್ತಾನೆ. ಈ ಅಭಿವ್ಯಕ್ತಿಯ ಕೌಶಲ, ಪದಪ್ರಯೋಗದ ಜಾಣ್ಮೆಯನ್ನು, ಕಲ್ಪನಾಶಕ್ತಿಯನ್ನು ವಿಶೇಷವಾಗಿ ಅವಲಂಬಿಸಿರುತ್ತದೆ. ಇವೆಲ್ಲ ಕಾರಯಿತ್ರೀ ಪ್ರತಿಭೆಯಿಂದ ಮಾತ್ರ ವಶವಾಗುವಂಥವುಗಳು. ಇಷ್ಟೆಲ್ಲ ವಿವೇಚನೆಯಿಂದ ಕವಿ ಹಾಗೂ ವಿಮರ್ಶಕರಲ್ಲಿ ಸೃಜನ ಶಕ್ತಿ ಹಾಗೂ ವಿಮರ್ಶನ ಶಕ್ತಿಗಳು ಒಂದಕ್ಕೊಂದು ಪೂರಕವಾಗಿ ದುಡಿಯುವ ಶಕ್ತಿಗಳೆಂಬುದು ಸ್ಪಷ್ಟವಾಗುವದು. ವಿಮರ್ಶಾಗುಣವಿರದ ಹೊರತು ಶ್ರೇಷ್ಠ ಕಾವ್ಯವಿಲ್ಲ; ಕಾವ್ಯಗುಣವಿರದ ಹೊರತು ಶ್ರೇಷ್ಠ ವಿಮರ್ಶೆಯಿಲ್ಲ. ಆದ್ದರಿಂದಲೇ ಕಾವ್ಯದಲ್ಲಿಯ 'ಸಹಿತ'ಭಾವವನ್ನು ವಿಮರ್ಶೆಯಿಂದಲೂ ಪಡೆಯಬಲ್ಲವರಾಗುತ್ತೇವೆ. ಇದರಿಂದಾಗಿ "ಕೃತಿ ನಿರ್ಮಾಣ ಶಕ್ತಿಯೇ ಬೇರೆ, ವಿಮರ್ಶನಶಕ್ತಿಯೇ ಬೇರೆ"[೧೦] ಎಂಬುದನ್ನು ನಂಬುವದು ಕಷ್ಟವಾಗುತ್ತದೆ. ವಿಮರ್ಶೆಯೂ ಕೂಡ ಕಾವ್ಯಗುಣ, ಕಾವ್ಯಶಕ್ತಿ, ಕಾವ್ಯಾಂಶಗಳನ್ನೊಳಗೊಂಡ ಕೃತಿಯೆಂದು ನಂಬಿದ ಮೇಲೆಯೂ ಈ ಮಾತನ್ನು ನಂಬುವದಾದರೆ, ಸಾಹಿತ್ಯ ಸೃಷ್ಟಿಯಲ್ಲಿ ಕಥೆ ಬರೆಯುವ ಶಕ್ತಿಯೇ ಬೇರೆ, ಕಾವ್ಯ ಬರೆಯುವ ಶಕ್ತಿಯೇ ಬೇರೆ, ಕಾದಂಬರಿ ಬರೆಯುವ ಶಕ್ತಿಯೇ ಬೇರೆ ಎಂದು ಹೇಳಬೇಕಾಗುತ್ತದೆ. ಆದರೆ ನಮ್ಮ ಅಭಿಪ್ರಾಯದ ಮೇರೆಗೆ ಅದು ಮೂಲತಃ ಒಂದೇ ಶಕ್ತಿಯಾದ ಆಸಕ್ತಿ, ಅಭ್ಯಾಸ, ಪ್ರಯತ್ನದ ಬಲದಿಂದ ಒಬ್ಬೊಬ್ಬರು ಒಂದೊಂದರಲ್ಲಿ ಪಳಗುತ್ತಾರೆ ಎಂದು ಹೇಳಿದರೆ ಹೆಚ್ಚು ಸತ್ಯವೆನಿಸುತ್ತದೆ. ಮೊದಮೊದಲು ಶ್ರೇಷ್ಠ ಮಾದರಿಯ ಕಾವ್ಯಗಳನ್ನು ಸಾಹಿತ್ಯ ಪ್ರಪಂಚಕ್ಕೆ ಕಾಣಿಕೆಯಾಗಿ ಕೊಟ್ಟು, ತದನಂತರ ವಿಮರ್ಶೆ, ಸಂಶೋಧನದತ್ತ ತಮ್ಮ ಆಸಕ್ತಿಯನ್ನು ಕೇಂದ್ರೀಕರಿಸಿ, ತಮ್ಮ ಪ್ರತಿಭೆ, ಪ್ರಯತ್ನಗಳನ್ನು ಅವಕ್ಕಾಗಿಯೇ ಮೀಸಲುಗೊಳಿಸಿ, ಶ್ರೇಷ್ಠ ವಿಮರ್ಶಕರಲ್ಲಿ ಗಣನೆಯಾದವರನ್ನು ಕಾಣುತ್ತೇವೆ. ಆಗ ಕವಿತ್ವ ಶಕ್ತಿ ಹಿಂದೆ ಬೀಳುತ್ತದೆಯೆಂದಲ್ಲ; ಕಾವ್ಯ ಸೃಷ್ಟಿಯತ್ತ ಒಲವು ತಪ್ಪುತ್ತದೆ, ಆ ಮೂಲ ಶಕ್ತಿ ವಿಮರ್ಶಾಸೃಷ್ಟಿಯಲ್ಲಿ ತೊಡಗಿರುತ್ತದೆ ಎಂದು ಅರ್ಥ. [೧೧]ಕವನ, ನಾಟಕ, ಸರಳರಗಳೆ ಹಾಗೂ ಕಾದಂಬರಿ ಬರೆಯುವವರಿಗೆ ಜನಾಭಿರುಚಿಯಿಂದ ಕಾದಂಬರಿ ಬರೆಯುವದಕ್ಕೆ ಹೆಚ್ಚಿನ ಬೆಂಬಲ ದೊರೆತರೆ ಆತ ತನ್ನ

---

೧೦. "ವಿಮರ್ಶೆಯ ಪೂರ್ವಪಶ್ಚಿಮ" ಪುಟ ೪.

೧೧. ಡಾ. ಆರ್. ಸಿ. ಹಿರೇಮಠರವರನ್ನು ಉದಾಹರಣೆಗಾಗಿ ನಾವಿಲ್ಲಿ ನೆನೆಯಬಹುದು.

ಪ್ರತಿಭಾ ಶಕ್ತಿಯನ್ನು ಕಾದಂಬರಿಗಾಗಿಯೇ ಮೀಸಲಾಗಿಟ್ಟು ಕಾದಂಬರಿಕಾರರಾಗಿಯೇ ಬೆಳಕಿಗೆ ಬರುವರು.[೧೨] ಸಾಹಿತ್ಯಸೃಷ್ಟಿ ಹಾಗೂ ವಿಮರ್ಶಾಸೃಷ್ಟಿಯತ್ತ ಸಮನಾಗಿ ಒಲವನ್ನು, ಪ್ರಯತ್ನವನ್ನು ತೊಡಗಿಸಿದರೆ ಎರಡನ್ನೂ ಸಾಧಿಸಬಹುದು. ಆದರೆ ಯಾವೊಂದರಲ್ಲಿಯೂ ಪರಮಸಿದ್ಧಿಯನ್ನು ಪಡೆಯುವದು ಹೆಚ್ಚಾಗಿ ಅಸಂಭವವಾಗುವದುಂಟು. ಒಂದು ವೇಳೆ ಸಾಧ್ಯವಾದರೂ ಅದೊಂದು ಅಪೂರ್ವಯೋಗ. ಆದ್ದರಿಂದ ವಿಮರ್ಶೆ ಸಾಹಿತ್ಯಸೃಷ್ಟಿಯಷ್ಟೇ ವ್ಯಕ್ತಿವಿಶಿಷ್ಟವಾದುದು. ಮತ್ತು ಅದು ಅಷ್ಟೇ ಪ್ರತಿಭಾ ಸೃಷ್ಟಿಯೇ ಎನ್ನುವ ಅಬರಕ್ರಾಂಬಿಯ ಮಾತು ಸತ್ಯಪೂರ್ಣವಾದುದೆಂದು ಖಚಿತವಾಗುತ್ತದೆ. ಒಟ್ಟಿನಲ್ಲಿ ವಿಮರ್ಶನಶಕ್ತಿ ಹಾಗೂ ಸೃಜನಶಕ್ತಿ 'ಒಂದೇ ಅಖಂಡ ಕ್ರಿಯೆಯ ಎರಡು ಭಾಗಗಳು' ಎಂದು ಯಾವ ಸಂದೇಹವೂ ಇಲ್ಲದೆ ಒಪ್ಪಿಕೊಳ್ಳಬಹುದು. "ಕೃತಿ ವಿಮರ್ಶನ ಶಕ್ತಿ ಮತ್ತು ಕೃತಿ ನಿರ್ಮಾಣ ಶಕ್ತಿ ಎರಡೂ ಮೂಲತಃ ಬೇರೆ ಬೇರೆ ಇಲ್ಲದಿರಬಹುದು. ಆದರೆ ಕೃತಿ ನಿರ್ಮಾಣದ ಸ್ವರೂಪ ಕೃತಿಯ ವಿಮರ್ಶೆಯ ಸ್ವರೂಪವೂ ಬೇರೆ ಬೇರೆಯೆಂದು ಒಪ್ಪಬೇಕು. ಆದರೆ ಸಾಹಿತ್ಯ ವಿಮರ್ಶೆ ಕೃತಿರಚನೆಯಷ್ಟೇ ವ್ಯಕ್ತಿ ವಿಶಿಷ್ಟವಾದುದು ಎನ್ನುವದರಲ್ಲಿ ಯಾವ ಸಂದೇಹವೂ ಇಲ್ಲ."[೧೩] ಅಂತೆಯೇ "ಕವಿತಾ ರಹಸ್ಯಮಂ ಸತ್ಕವಿಯಱಿಗುಂ" ಎಂದು ಪಂಪ ಸಾರಿದರೆ 'To judge of poets is only the faculty of poets' ಎಂದು ಜಾನ್ಸನ್ ಜೋರುಗೊಟ್ಟು ಹೇಳಿರುವ. ವಿಮರ್ಶಾ ಸಾಹಿತ್ಯದ ಚರಿತ್ರೆಯನ್ನು ನೋಡಿದರೂ ಉತ್ತಮ ಸೃಜನ ಶಕ್ತಿಯನ್ನು ಪಡೆದ ಸಾಹಿತಿಗಳು ಉತ್ತಮ ವಿಮರ್ಶನ ಕೃತಿಗಳನ್ನು ಹೆಚ್ಚಾಗಿ ಕೊಟ್ಟಂತೆ ಕಂಡು ಬರುತ್ತದೆ. "ನಿರ್ಮಿತಿಯ ಪ್ರತಿಕ್ರಿಯೆಯ ಬಗ್ಗೆ ಸ್ವಾನುಭವ ಮತ್ತು ಪರಿಜ್ಞಾನಗಳು ಕವಿಗೆ ಇರುವದರಿಂದ ಯಾವದೇ ಕವಿತೆಯ ರಹಸ್ಯವನ್ನು ಅವನು ಸರಿಯಾಗಿ ಅರಿಯುತ್ತಾನೆ........ಸಹೃದಯ ಇಲ್ಲವೆ ವಿಮರ್ಶಕನು ಸ್ವಂತ ಕವಿಯಾಗಿರದಿದ್ದರೆ ಅವನ ನಿರ್ಮಿತಿ ಪ್ರಕ್ರಿಯೆಯನ್ನು ಕೇವಲ ಊಹೆಯಿಂದ ತಿಳಿದುಕೊಳ್ಳಬೇಕಾಗುತ್ತದೆ. ತನ್ನ ಸಹೃದಯತೆಯ ಬಲದಿಂದ ಅವನು ರಸಗ್ರಹಣ ಮಾಡಬಹುದು, ಆದರೆ ಪಂಪನು ಹೇಳಿದಂತೆ "ಕವಿತಾ ರಹಸ್ಯವು" ಅರಿಯದೇ ಹೋಗಬಹುದು".[೧೪] ಹೀಗೆಂದಮಾತ್ರಕ್ಕೆ ಕಾವ್ಯಗಳನ್ನು

---

೧೨. ಉದಾಹರಣೆಗಾಗಿ ಕೃಷ್ಣಮೂರ್ತಿ ಪುರಾಣಿಕ, ಅ. ನ. ಕೃ. ಮೊದಲಾದವರನ್ನು ಇಲ್ಲಿ ನೆನೆಯಬಹುದು:

೧೩. 'ವಿಮರ್ಶೆಯ ಪೂರ್ವ ಪಶ್ಚಿಮ' ಪು. ೬.

೧೪. ಡಾ. ರಂ. ಶ್ರೀ ಮುಗಳಿ 'ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು' ಪು. ೨೬.

ರಚಿಸಿ ಕವಿಯು ಪಟ್ಟವನ್ನು ಕಟ್ಟಿಕೊಂಡ ಮೇಲೆಯೇ ವಿಮರ್ಶಕನಾಗುತ್ತಾನೆಂದು ಭಾವಿಸಬೇಕಾಗಿಲ್ಲ. ಆತನಲ್ಲಿರುವ ಕಾವ್ಯಶಕ್ತಿಯ ಬಲದಿಂದ ವಿಮರ್ಶಕನಾಗುತ್ತಾನೆಂದು ತಿಳಿದುಕೊಂಡರೆ ಸಾಕು. ವಿಮರ್ಶಕನಲ್ಲಿರುವ ಕವಿತ್ವ ಶಕ್ತಿಯನ್ನು ಎಲ್ಲರೂ ಒಪ್ಪಿಕೊಳ್ಳುವಂತೆ ಕಂಡುಬರುವದು. "ವಿಮರ್ಶಕನಲ್ಲಿ ಕಾವ್ಯಶಕ್ತಿ ಇಲ್ಲದಿಲ್ಲ. ಕವಿ ಹೃದಯದಲ್ಲಿ ವಿಮರ್ಶಕ, ವಿಮರ್ಶಕನ ಹೃದಯದಲ್ಲಿ ಕವಿ ಇಬ್ಬರೂ ಸನ್ನದ್ಧರಾಗಿಯೇ ಕಾರ್ಯಮಾಡುತ್ತಿರುವರು. ಕಾವ್ಯಶಕ್ತಿ ಬರಿ ಕವಿ ವಿಮರ್ಶಕರಲ್ಲಷ್ಟೇ ಏಕೆ ಸರ್ವಮಾನವರಲ್ಲಿಯೂ ಕಂಡುಬರುವ ದೈವೀಗುಣ. ಆದುದರಿಂದ ವಿಮರ್ಶಕನಲ್ಲಿ ಕಾವ್ಯಶಕ್ತಿ ಇಲ್ಲವೆಂದು ಹೇಳುವದು ಸಮಂಜವೆನಿಸದು".[೧೫] "ಕವಿಯಂತೆ ವಿಮರ್ಶಕನೂ ಕೂಡ ಕಂಡರಿವವನೂ ಕಂಡರಿಸುವವನೂ ಆಗಿರುತ್ತಾನೆ."[೧೬] ಹೀಗೆ ವಿಮರ್ಶೆ ಭಾವುಕತನದ ಕ್ರೀಡೆಯಾಗಿರದಿದ್ದರೂ ಶಾಸ್ತ್ರೀಯ ವಿಧಾನವನ್ನು ಅನುಸರಿಸಿ ಕೃತಿ ವಿಮರ್ಶೆಯಲ್ಲಿ ತೊಡಗಿದ ಸ್ವತಂತ್ರ ವಿಮರ್ಶಕನ ವಿಮರ್ಶೆಯಲ್ಲಿ ಒಂದು ಹೊಸ ರೂಪವನ್ನು ಅವಶ್ಯ ಕಾಣುತ್ತೇವೆ. ಇಂಥ ವಿಮರ್ಶೆ ಬಹ್ವಂಶದಲ್ಲಿ ಸೃಜನಾತ್ಮಕವಾಗಿಯೇ ಇರುತ್ತದೆ.

ಸಾಹಿತ್ಯದ ಚರಮಗುರಿ ರಸಾನುಭವವನ್ನು ಉಂಟುಮಾಡುವದು. ಕಾವ್ಯದ ಶ್ರೇಷ್ಠತೆ, ಅದು ಒಳಗೊಂಡಿರುವ ರಸಾನಂದವನ್ನೆ ಅವಲಂಬಿಸಿರುತ್ತದೆ. ವಿಮರ್ಶೆಯು ಸಾಹಿತ್ಯದ ಒಂದು ಅಂಗವೆಂದು ಪರಿಗಣಿಸುವುದಾದರೆ ಸಾಹಿತ್ಯ ಕೃತಿಯಿಂದ ದೊರೆಯಬಹುದಾದ ವಿಶಿಷ್ಟವಾದ, ವಿಶೇಷವಾದ ಆನಂದವು ವಿಮರ್ಶನ ಕೃತಿಯಿಂದ ದೊರೆಯಬಹುದೇ? ಕವಿತೆಯಂತೆ ವಿಮರ್ಶಕನು ಕಾವ್ಯಾನಂದವನ್ನು ಉಂಟುಮಾಡಬಲ್ಲನೆ? ಎಂಬ ಪ್ರಶ್ನೆಗಳು ನಮ್ಮೆದುರು ನಿಲ್ಲುತ್ತವೆ. ನಾವು ಏನನ್ನು ಒಪ್ಪದಿದ್ದರೂ ರಸಾನುಭವದ ವಿವರಣೆ, ವಿಮರ್ಶೆಯಲ್ಲಿ ಅವಶ್ಯವಾಗಿ ಇರುತ್ತದೆಯೆಂದು ಒಪ್ಪುತ್ತೇವೆ. ರಸಾನುಭವದ ವಿವರಣೆಯನ್ನೊಳಗೊಂಡು ಅಭಿವ್ಯಕ್ತಿಯಲ್ಲಿ ರಸಾನುಭವವಿರಲಾರದೆಂಬ ಮಾತು ಅನುಚಿತವಾದ, ಅರ್ಥಹೀನವಾದ ಮಾತಾಗುತ್ತದೆ. ತನ್ನ ಕೃತಿಯಲ್ಲಿ ವಿಮರ್ಶಕ ಕಾವ್ಯದಿಂದುಂಟಾದ ಪ್ರತಿ ಕಾರ್ಯಗಳನ್ನು ಪ್ರಕಟಗೊಳಿಸುತ್ತಾನೆ; ಆತನೂ ಅಭಿವ್ಯಕ್ತಿಯ ಕಲೆಯನ್ನು ಸಾಧಿಸಿರುತ್ತಾನೆ, ಕಲ್ಪನಾ ಶಕ್ತಿಯನ್ನು ಹೊಂದಿರುತ್ತಾನೆ, ಪ್ರತಿಭಾಸಂಪನ್ನನಾಗಿರುತ್ತಾನೆ ಎಂಬ ಮಾತನ್ನು ಈ ಹಿಂದೆಯೇ ಮನಗಾಣಿಸಿಕೊಂಡಿದ್ದೇವೆ. ಇಂಥ ವ್ಯಕ್ತಿಯ ಅನುಭವಾಭಿವ್ಯಕ್ತಿಯಲ್ಲಿ ಸಹಜವಾಗಿ ಆನಂದವನ್ನೀಯುವ ಶಕ್ತಿ ಇರುತ್ತದೆ.

---

೧೫. ಡಾ. ಆರ್. ಸಿ. ಹಿರೇಮಠ "ಸಾಹಿತ್ಯ ವಿಮರ್ಶೆ" ಕ. ವಿ. ವಿ. ಪು—೯೪

೧೬. ಗುಲಾಬರಾಯ "ಕಾವ್ಯಕ್ಕೆ ರೂಪ" ಪು—೨೪೩

ಆದರೆ ವಿಮರ್ಶೆಯು ವಿಷಯಕ್ಕೆ ತಪ್ಪು ಕಲ್ಪನೆಗಳು ಪ್ರಚಲಿತವಾಗಿವೆ. ಕೆಲವರು ರಚನಾತ್ಮಕ ಸಾಹಿತ್ಯಕ್ಕೆ ಹೊರತಾದ, ಸಾಹಿತ್ಯದ ಅನ್ಯವಿಷಯಗಳಾದ ಸಾಹಿತ್ಯಸಂಶೋಧನೆ, ಸಾಹಿತ್ಯ ಚರಿತ್ರೆ, ಕಾವ್ಯದಸ್ವರೂಪಗಳನ್ನು ವಿಮರ್ಶಾ ಸಾಹಿತ್ಯ ಒಳಗೊಳ್ಳುತ್ತದೆ ಎಂಬ ಭ್ರಾಂತಿಯಿಂದ, ಅಲ್ಲಿ ಕಾವ್ಯಾನಂದವನ್ನು ಅರಸಿ, ದೊರೆಯದೆ ನಿರಾಶರಾಗಿ ವಿಮರ್ಶಾ ಸಾಹಿತ್ಯ ಕಾವ್ಯಾನಂದಕ್ಕೆ ಹೊರತಾದದ್ದು ಎನ್ನುವ ಅಭಿಪ್ರಾಯವನ್ನು ತಾಳುತ್ತಾರೆ."[೧೭] ವಿಮರ್ಶೆಯು ಸ್ವರೂಪ ಈ ಮೂರಕ್ಕೂ (ಸಾಹಿತ್ಯ ಸಂಶೋಧನೆ, ಕಾವ್ಯೇತಿಹಾಸ ಹಾಗೂ ಕಾವ್ಯ ಶಾಸ್ತ್ರ ಅಥವಾ ಕಾವ್ಯಸಿದ್ಧಾಂತ) ಭಿನ್ನವಾಗಿದೆ."[೧೮] ಇದರ ಬಗೆಗೆ ಸರಿಯಾದ ತಿಳುವಳಿಕೆ ನಮ್ಮಲ್ಲಿ ಮೂಡಿದರೆ "ಸಭ್ಭಾವನೆ ಸದ್ರುಚಿಗಳನ್ನು ಹರಡಿ ನಮ್ಮನ್ನು ದೇವತಾ ಸ್ತರಕ್ಕೇರಿಸುವದು ಕವಿ–ಕಲೆಗಾರ–ಸಹೃದಯ ವಿಮರ್ಶಕ ಇವರಲ್ಲಿ ಅಡಗಿದೆ.[೧೯]" ಎಂಬ ಸಂದೇಹರಹಿತ ಅಭಿಪ್ರಾಯಕ್ಕೆ ಬರುತ್ತೇವೆ. ಒಂದೊಂದು ಸಲ ನಮ್ಮಲ್ಲಿ ರಸದ ಬಗೆಗೆ ಎಲ್ಲೆಮೀರಿದ ಭಾವನೆ ಕಲ್ಪನೆಗಳೂ ವಿಮರ್ಶೆಯನ್ನು ಕುರಿತು ತಪ್ಪು ವಿಚಾರಕ್ಕೆ ಅಸ್ಪದ ಕೊಡುತ್ತವೆ. ರಸವೆಂದರೆ ಬ್ರಹ್ಮಾನಂದ ಸದೃಶ್ಯ, ಬ್ರಹ್ಮಾನಂದ ಸೋದರವೆಂದು ನಮ್ಮ ಸಾಮಾನ್ಯ ಭಾವನೆ. ಪ್ರಾಮಾಣಿಕವಾಗಿ ಹೇಳುವದಾದರೆ ನಮ್ಮ ನಂಬುಗೆ ಇದಕ್ಕೆ ಇಂಬುಗೊಡಲಾರದು. "ಲೋಕ, ಕಾಲ, ಪರಿಸ್ಥಿತಿ, ರೂಪರಸ–ಗಂಧಗಳೆಲ್ಲವೂ ತೇಲಿಹೋಗಿ ಬ್ರಹ್ಮಾನಂದದ ಶಾಂತಿಯಲ್ಲಿ ಸವಿಯಲ್ಲಿ ಮುಳುಗಿ ಹೋಗುತ್ತವೆ ಪುನರಾಗಮನಾಪೇಕ್ಷೆಯಿಲ್ಲದಿರುವುದು ಅಲ್ಲಿ ಲಕ್ಷಣವಂತೆ........ಕಾವ್ಯಾನಂದದಲ್ಲಿ ಅಂಥವೆಲ್ಲಿ ಬರಬೇಕು."[೨೦] ಇದರಿಂದ ಕಾವ್ಯಾನಂದವೆಂದರೆ ಕೇವಲ ಕಾವ್ಯದಿಂದ ಇಲ್ಲವೆ ಸೃಜನಾತ್ಮಕ ಸಾಹಿತ್ಯದಿಂದ ದೊರೆಯುವ ವಿಶಿಷ್ಟವಾದ ಆನಂದವೆಂದು ತಿಳಿಯುವದು ವಿಹಿತ. ಇಂಥ ಆನಂದವನ್ನು ಖಂಡಿತವಾಗಿಯೂ ಕಾವ್ಯವಿಮರ್ಶೆಯಿಂದ ಪಡೆಯುತ್ತೇವೆ, ಎಂದು ನಮ್ಮ

---

೧೭. ಆದರೂ ಇವುಗಳಲ್ಲಿಯೂ ಕೂಡ ಕಾವ್ಯಾಂಶವನ್ನು ಕಾಣುವುದುಂಟು. ಗದ್ಯ ಸಾಹಿತ್ಯದ ವಿಕಾಸವನ್ನು ಹೇಳುತ್ತ ವಚನ ಸಾಹಿತ್ಯದ ಬಗೆಗೆ ಹೇಳುವಾಗ ಡಾ. ಆರ್ ಸಿ. ಹಿರೇಮಠರವರು "ಸಿರಿಗನ್ನಡ ದೇವಿ ಸುಗ್ಗಿಯಲ್ಲಿ ಹೆಜ್ಜೆ ಹಾಕುತ್ತ ನೃತ್ಯಲೀಲೆಯನ್ನಾಡಲು ಅವಳ ಸಿರಿಮುಡಿಯಿಂದ ಚಲುವರಿದ ಪುಷ್ಪಗಳಂತಿವೆ ವಚನಗಳು" ಎಂದಿದ್ದಾರೆ.— ೪೨ ನೆಯ ಕ. ಸಾ. ಸಮ್ಮೇಲನದಲ್ಲಿ, ವಿಮರ್ಶ (ಗದ್ಯ ಸಾಹಿತ್ಯ) ಗೋಷ್ಠಿಯಲ್ಲಿ ನಿರೂಪಿಸಿದ ಅಧ್ಯಕ್ಷ ಭಾಷಣ.

೧೮. ಭಗೀರಥ ಮಿಶ್ರ—"ಕಾವ್ಯಶಾಸ್ತ್ರ" ಪು—೧೪೨

೧೯. ಪು. ತಿ. ನರಸಿಂಹಾಚಾರ್ಯ "ಕಾವ್ಯ ಕುತೂಹಲ" ಪು–೧೪೮

೨೦. ವಿ. ಸೀತಾರಾಮಯ್ಯ "ಸಾಹಿತ್ಯ: ಸಂಪ್ರದಾಯ ಮತ್ತು ಹೊಸಮಾರ್ಗ" ಅಡಿ ಟಿಪ್ಪಣಿ ಪು—೯೨

ಅನುಭವ ನಮ್ಮ ಮನವನ್ನು ಒಪ್ಪಿಸುತ್ತದೆ. ಅಲ್ಲದೆ ಆನಂದವನ್ನುಂಟುಮಾಡುವ ಅಂಶಗಳು ಹಲವಾರು—ಬುದ್ಧಿ ಚಾತುರ್ಯ, ವಾಕ್‌ಚಾತುರ್ಯ, ದರ್ಶನಶಕ್ತಿ, ನಿರೂಪಣ ಜಾಣ್ಮೆ ಇವೆಲ್ಲವೂ ಕಾವ್ಯಾಂಶವಾದಂತೆ ವಿಮರ್ಶಾಂಶಗಳೂ ಆಗಿವೆ. ಆದರೆ ವಿಮರ್ಶೆಯೊಂದು ಬುದ್ಧಿ ಪ್ರಧಾನವಾದ ಕಾರ್ಯ: ಭಾವಪ್ರಧಾನವಾದ ಕಾವ್ಯದಿಂದ ದೊರೆಯುವ ಆನಂದ ಇಲ್ಲಿ ದೊರೆಯದೆಂದು ಒಪ್ಪಿಕೊಂಡದ್ದಾದರೆ, ಸಮಾಜ, ರಾಷ್ಟ್ರ, ವ್ಯಕ್ತಿಗಳ ವಿಡಂಬನ ಹಾಗೂ ವಿಮರ್ಶೆಗಳನ್ನೊಳಗೊಂಡ ಹಾಗೂ ಬುದ್ಧಿ ಪ್ರಧಾನವಾದ ಆಧುನಿಕ ಕಾವ್ಯಪ್ರಕಾರವಾದ ನವ್ಯ ಕಾವ್ಯದ ಗತಿಯೇನು ? ಬ್ರಹ್ಮಾನಂದ ಸೋದರವಾದ ಆನಂದವನ್ನು ಉಂಟುಮಾಡುವ ಸಾಹಿತ್ಯವೇ ಸಾಹಿತ್ಯ, ಅಂಥ ಕೃತಿಗಳೇ ಸಾಹಿತ್ಯಕೃತಿಗಳು ಎಂದು ವಾದಿಸುವದಾದರೆ, ಅಂಥ ಕೃತಿಗಳು ಅದೆಷ್ಟು ನಮಗೆ ಕಾವ್ಯಪ್ರಪಂಚದಲ್ಲಿ ದೊರೆಯಬಹುದು ? ಸೃಜನಾತ್ಮಕ ಸಾಹಿತ್ಯದ ಆಧುನಿಕ ಪ್ರಕಾರಗಳಾದ ಚುಟುಕು, ಹರಟೆ, ಸಣ್ಣಕಥೆ, ಕಾದಂಬರಿಗಳಿಗೆ ಸ್ಥಾನವೆಲ್ಲಿ ಎಂಬ ಮೊದಲಾದ ಪ್ರಶ್ನೆಗಳು ನಮ್ಮನ್ನು ಕೆಣಕಿ ನಿಲ್ಲುತ್ತವೆ. ಆದುದರಿಂದ ವಿಶಿಷ್ಟವಾದ ಆನಂದವನ್ನೀಯುವ ವಿಮರ್ಶೆಯೂ ನ್ಯಾಯಪೂರ್ಣವಾದ ಸ್ಥಾನವನ್ನು ಸೃಜನಾತ್ಮಕ ಸಾಹಿತ್ಯದಲ್ಲಿ ಪಡೆಯುತ್ತದೆ.

ಕಾವ್ಯದಲ್ಲಿಯಂತೆ ವಿಮರ್ಶೆಯಲ್ಲಿಯೂ ವಿಮರ್ಶಕನ ಸತ್ವಪೂರ್ಣವಾದ ವ್ಯಕ್ತಿತ್ವದ ಅಭಿವ್ಯಕ್ತಿ ಇರುತ್ತದೆ. ಅಯೋಗ್ಯ ವಿಮರ್ಶೆ ವಿಮರ್ಶಕನ ವ್ಯಕ್ತಿತ್ವದ ಅಭಾವವನ್ನೇ ಸಾರುತ್ತದೆ. ಕಾವ್ಯಮೀಮಾಂಸೆಯ ತತ್ತ್ವಗಳನ್ವಯ ವಿಮರ್ಶೆಗೆ ತೊಡಗುತ್ತೇನೆಂದು ಪದ್ಯಗಳನ್ನು ಉದಾಹರಿಸುತ್ತ ಇಲ್ಲಿ ಉಪಮಾ, ಇಲ್ಲಿ ಉತ್ಪ್ರೇಕ್ಷೆ, ಇಲ್ಲಿ ದೀಪಕ, ಇಲ್ಲಿ ರೂಪಕ ಎಂದು ಅಲಂಕಾರಗಳನ್ನು ಹುಡುಕಿ ಇಡುತ್ತಹೋದರೆ; ಇದು ಕದಳಿಪಾಕ, ಇದು ನಾರಿಕೇಳಿಪಾಕ ಎಂದು ಗುರುತಿಸುತ್ತ ಹೋದರೆ ವಿಮರ್ಶೆಗೆ ಅರ್ಥವೇ ಉಳಿಯದು. ಅವೆಲ್ಲವುಗಳು ಎಷ್ಟರಮಟ್ಟಿಗೆ ರಸಸೃಷ್ಟಿಗೆ ಆತ್ಮಾಭಿವ್ಯಕ್ತಿಗೆ ಹೇಗೆ ಪೋಷಕವಾಗಿವೆ, ಹೇಗೆ ಆಗಿಲ್ಲ ಎಂದು ವಿಮರ್ಶಿಸುತ್ತ ಅಲ್ಲಿಯ ಸೌಂದರ್ಯವನ್ನು ಮನಗಾಣಿಸುತ್ತ, ತನ್ನ ಭಾವನೆಗಳನ್ನು ಹರವುತ್ತ ಮುಂಬರಿಯುವದರಲ್ಲಿಯೇ ವಿಮರ್ಶಾಸಾಮರ್ಥ್ಯವನ್ನು ಹಾಗೂ ವಿಮರ್ಶಕನ ವ್ಯಕ್ತಿತ್ವವನ್ನು ಕಾಣುತ್ತೇವೆ. ಇಂಥ ವ್ಯಕ್ತಿತ್ವದಿಂದಾಗಿ ವಿಮರ್ಶೆಯೂ ಸೊಗಸಾದ ಕೃತಿಯಾಗುತ್ತದೆ. ಆದ್ದರಿಂದ ಯೋಗ್ಯ ವಿಮರ್ಶೆಯಲ್ಲಿಯೂ ವ್ಯಕ್ತಿತ್ವಾಭಿವ್ಯಕ್ತಿ ಇರುತ್ತದೆ. ಮತ್ತು ಅದು ಅಷ್ಟೇ ಆವಶ್ಯಕವಾಗಿದೆ. ಒಂದು ವಸ್ತುವಿನ ಮಾಧ್ಯಮದ ಮೂಲಕ ಕವಿ ತನ್ನನ್ನೆ ತಾನು ಪ್ರಕಟಿಸುವಂತೆ ವಿಮರ್ಶಕನು ವಿಮರ್ಶಾ ವಸ್ತುವಿನ ಮೂಲಕ ತನ್ನನ್ನು ತಾನೇ ಪ್ರಕಟಿಸುತ್ತಾನೆ. "ವಿಮರ್ಶೆಯಲ್ಲೂ ನಾನು ವಿಮರ್ಶಕನ ಭಾವುಕತೆ ಅರ್ಥಾತ್ ರಸಜ್ಞತೆ.

ಬುದ್ಧಿ, ಮಾನಸಿಕ ಸಮತೋಲನ ಮೊದಲಾದವುಗಳನ್ನೆಲ್ಲ ಒಳಗೊಳ್ಳುವ ವಿಮರ್ಶಕನ ಆತ್ಮಾಭಿವ್ಯಕ್ತಿಯನ್ನು ಪ್ರಮುಖವೆಂದು ತಿಳಿಯುತ್ತೇನೆ"[೨೧] ಎಂದು ಹಿಂದಿ ಸಾಹಿತ್ಯದ ಪ್ರಖ್ಯಾತ ವಿಮರ್ಶಕರಾದ ಡಾ. ನಗೇಂದ್ರರು ಅಭಿಪ್ರಾಯ ಪಟ್ಟಿದ್ದಾರೆ. ವಿಮರ್ಶೆಯು ರಸಗ್ರಾಹಿಯಾದ ವಿಮರ್ಶಕನ ವಿವರಣೆಯಿಂದ ಒಡಗೂಡಿದ ಕಾರಣ ಅವಶ್ಯವಾಗಿ ಅದು ರಸಪೂರ್ಣವಾಗಿರುತ್ತದೆ.

ಕಾವ್ಯದಲ್ಲಿ ಅನುಕ್ತವಾದ ಎಷ್ಟೋ ವಿಷಯಗಳಿರುತ್ತವೆ. ಕೆಲವು ವಿಷಯಗಳನ್ನು ವಿವರಿಸಿ ಉಳಿದುದನ್ನು ಓದುಗನ ಊಹೆಗೆ ಬಿಟ್ಟು ಕೊಡುವದು ಉಂಟು. ಎಷ್ಟೋ ಸನ್ನಿವೇಶಗಳು, ಪಾತ್ರಗಳು, ದರ್ಶನ ಅಪೂರ್ಣವಾಗಿಯೇ ಇರುವಂತೆ ಕಾಣುತ್ತವೆ. ಎಲ್ಲವೂ ವಾಚ್ಯವಾದರೆ ಕವಿತ್ವ ಹಾಳಾಗುವದೆಂದು ಸೂಚ್ಯವಾಗಿ ಹೇಳುವದು ಉಂಟು. ಅಂಥ ಎಡೆಯಲ್ಲೆಲ್ಲ ಆ ಎಲ್ಲ ಅಪೂರ್ಣತೆಗಳು ವಿಮರ್ಶಕನ ರಸಪೂರ್ಣ ಪ್ರತಿಭೆಯಿಂದ ಹೊರಹೊಮ್ಮುವಾಗ ಅವು ಕೂಡ ಹೆಚ್ಚು ಕಾಂತಿಯುತವಾಗಿ, ಸತ್ವಯುತವಾಗಿ ಇರುವದುಂಟು. ಇದನ್ನು ಮನದಟ್ಟು ಮಾಡಿಕೊಳ್ಳಲು ಪಂಪನ ವೈಶಂಪಾಯನ ಸರೋವರದ ವರ್ಣನೆಗೆ ಕುವೆಂಪುರವರ ವ್ಯಾಖ್ಯಾನ ನೋಡಬೇಕು.—

" ಇದು ಪಾತಾಳ ಬಿಲಕ್ಕೆ ಬಾಗಿಲಿದು ದಲ್ ಘೋರಾಂಧಕಾರಕ್ಕೆ ಮಾ
ಡಿದ ಕೂಪಂ ಪೆಱತಲ್ತಿದುಗ್ರ ಲಯಕಾಳಾಂಭೋಧರಚ್ಛಾಯೆ ತಾ
ನೆ ದಲೆಂಬಂತಿರೆ ಕಾಚಮೇಚಕಚಯಚ್ಛಾಯಾಂಬುವಿಂ ಗುಣ್ಪಿನಿಂ
ಪುದಿದಿರ್ದತ್ತು ಸರೋವರಂ ಬಕಬಳಾಕಾನೀಕ ರಾವಾಕುಳಂ "

ಪಂ. ಭಾ. ೧೩.೭೨

........ಸರೋವರ ಹೇಗೆ ಕಂಡಿತು ಎಂಬುದನ್ನು ರೂಪಕಗಳಿಂದ ಬಣ್ಣಿಸುವಂತೆ ತೋರಿದರೂ ಅದು ಗೌಣ. ಮುಖ್ಯವಾದುದು ಅದರಿಂದ ಹೊಮ್ಮುವ ಧ್ವನಿ. ಪಾತಾಳ ಬಿಲಕ್ಕೆ ಬಾಗಿಲ್ ಎನ್ನುವದರಿಂದ ಆಳವಾಗಿತ್ತೆಂದೂ, ಘೋರಾಂಧಕಾರಕ್ಕೆ ಮಾಡಿದ ಕೂಪಂ ಎನ್ನುವದರಿಂದ ನೀರು ಕಪ್ಪಗಿತ್ತೆಂದೂ ವ್ಯಾಖ್ಯಾನ ಮಾಡಿ ಅಲಂಕಾರಗಳನ್ನು ಹೇಳಿ ಎಲ್ಲ ಪೂರೈಸಿತೆಂದು ಮುಂದು ವರೆಯುವದು ಕುರುಡುಗಾಂಪು. ಪಾತಾಳ ಬಿಲಕ್ಕೆ ಬಾಗಿಲ್ ಎನ್ನುವದು ಕೊಳದ ಆಳವನ್ನು ಸೂಚಿಸುವದಕ್ಕಿಂತಲೂ ಅತಿಶಯವಾಗಿ ಕುರುಚಕ್ರವರ್ತಿಯ ಪತನದ ಆಳ ಅನಿತಿನಿತಲ್ಲ, ಪಾತಾಳದವರೆಗೂ ಇಳಿಯುತ್ತದೆ ಎಂಬುದನ್ನು ಸುರಸ್ಸು ಸಾರುತ್ತದೆ ಎಂಬುದನ್ನು ಸೂಚಿಸುತ್ತದೆ. ಘೋರಾಂಧಕಾರಕ್ಕೆ ಮಾಡಿದ ಕೂಪಂ ಎನ್ನುವದರಲ್ಲಿ ಆ ಪತನದಲ್ಲಿರುವ ಅಪಕೀರ್ತಿ.

---

೨೧. " ವಿಚಾರ ಔರ ಅನುಭೂತಿ " ಪು. ೧೪.

ತಮಸ್ಸು, ಅವಿವೇಕ, ಅಂಧಕಾರ, ಮತ್ತು ಆದರ ಘೋರತೆ ಇವು ಪ್ರತೀಯ ಮಾನವಾಗುತ್ತವೆ. ಇನ್ನು ಉಗ್ರಲಯ ಕಾಳಾಂಭೋಧರಚ್ಛಾಯೆ ಎಂಬ ರೂಪಕವಂತೂ 'ಲಯ' ಮತ್ತು 'ಕಾಲ' ಎಂಬ ಪದಗಳಿಂದ ಮೃತ್ಯು ಚ್ಛಾಯೆಯೇ ಸರೋರೂಪಿಯಾಗಿ ದುರ್ಯೋಧನನಿಗಾಗಿ ಬಾಯ್ತೆರೆದಿರು ವದನ್ನು ಘೋಷಿಸುವಂತಿದೆ. ಸಾವು ಕರ್ರಗೆ ಕರಾಳಾಗಿ ಆಳವಾಗಿ ತನ್ನ ಕೂಪಾಸ್ಯವನ್ನು 'ಆ' ಎಂದು ತೆರೆದು ವೈಶಂಪಾಯನ ಕಾಸಾರ ರೂಪದಲ್ಲಿ ಭೀಮವೈರಿಯನ್ನು ಇದುರು ನೋಡುತ್ತಿತ್ತು ಎಂಬ ಅಂತಸ್ಸತ್ಯವನ್ನು ಕವಿ ಅತ್ಯಂತ ಶ್ಲಾಘನೀಯವಾಗಿ ಸಾಧಿಸಿದ್ದಾನೆ.[೨೨] ಎಂದು ವಿವರಿಸುವಲ್ಲಿ ಭವ್ಯ ತಾದರ್ಶನದಿಂದ ಓದುಗ ತಬ್ಬಿಬ್ಬಾಗುತ್ತಾನೆ. ವಿಮರ್ಶಕನು ಬೆಳಕಿನೊಳಗಣ ಬೆಳಕನ್ನು ದರ್ಶಿಸಿ ಪ್ರದರ್ಶಿಸಿದಂತೆ ಕಂಡುಬರುತ್ತದೆ. ಇಲ್ಲಿ ಇದು ಯಾವ ಅಂಶದಲ್ಲಿ ಕಾವ್ಯಕ್ಕಿಂತ ಕಡಿಮೆಯಾಗಿದೆ? ಕವಿ ಇಳಿದ ಆಳಕ್ಕೆ ವಿಮರ್ಶಕನೂ ಇಳಿಯಬಲ್ಲ. ಕವಿ ಏರಿದೆತ್ತರಕ್ಕೆ ವಿಮರ್ಶಕನೂ ಏರಬಲ್ಲ ಎಂಬುದಕ್ಕೆ ಆದೊಂದು ನಿದರ್ಶನ. ವಿಮರ್ಶಕನಾದವನು ಕೊಲ್ವ ಬತ್ತಳಿಕೆ ಬಿಲ್ಲ ಬಾಣ ಗಳನ್ನು ಹಿಡಿದುಕೊಂಡೇ ಕಾವ್ಯಬನದಲ್ಲಿ ವಿಹರಿಸುವ ಬಿಯಂದನಲ್ಲ, ಎನ್ನು ವದನ್ನು ಸಾರುತ್ತದೆ. ಇಲ್ಲಿ ವಿಮರ್ಶಕನ ಚಿಂತನದ ಆಳ, ದರ್ಶನದ ಎತ್ತರ, ಭಾವನಾಸಂಪತ್ತು, ವಾಕ್‌ಶಕ್ತಿ, ಕಲಾಪ್ರಜ್ಞೆ, ಕಲ್ಪನಾಶಕ್ತಿ. ಎಲ್ಲವೂ ಒಂದುಗೂಡಿ ವಿಮರ್ಶೆಯನ್ನು ಸತ್ವಯುತವಾದ ಕಲಾಕೃತಿಯನ್ನಾಗಿ ಮಾಡಿವೆ. ಯಾವ ಒಂದು ರಚನಾತ್ಮಕ ಕೃತಿಗಿಂತಲೂ ಕಡಿಮೆಯಲ್ಲದ ಸೊಗಸು ಗಾರಿಕೆಯಿಂದ ಇಂಥ ವಿಮರ್ಶಾ ಕೃತಿಗಳು ಕೂಡಿಕೊಂಡಿರುವದನ್ನು ಕಾಣುತ್ತೇವೆ.

ಹೀಗೆ ಕೃತಿಯ ಸೊಗಸು ಸತ್ವವನ್ನೇ ಅನುಸರಿಸಿ ವಿಮರ್ಶೆ ಬದುಕ ಬಹುದಾದರೂ ಮೂಲ ಕೃತಿಯ ಸೌಂದರ್ಯದ ಆಧಿಕ್ಯವು ವಿಮರ್ಶಾಕೃತಿಯಲ್ಲಿ ಹರವುಗೊಂಡಿರುತ್ತದೆ.

ಹರಿಶ್ಚಂದ್ರ ಕಾವ್ಯದಲ್ಲಿಯ ಕರುಣರಸವನ್ನು ಕುರಿತು ವಿಮರ್ಶಕನ ಪ್ರತಿ ಕ್ರಿಯೆಯನ್ನು ನೋಡಿ,—"ಹೀಗೆ ಹರಿಶ್ಚಂದ್ರ ಕಾವ್ಯವು ಕಂಬನಿಯ ಕಾಲುವೆ ಯಾಗಿದೆ. ರಸದ ಮಡುವಿನಲ್ಲಿ ಈಸುವಾಗ ವ್ಯಷ್ಟಿಸಮಷ್ಟಿಗಳ ಹೋರಾಟದ ಕಲ್ಪನೆಯಾಗುತ್ತದೆ. ದೈವೀಶಕ್ತಿಯ ಎದುರು ವ್ಯಕ್ತಿ ಅಸಹಾಯನಾಗಿ ರುವನೆಂದು ಕನಿಕರಬಡುತ್ತೇವೆ. ಹರಿಶ್ಚಂದ್ರನಿಗೆ ಬಂದೊದಗುವ ಕಷ್ಟ ಪರಂ- ಪರೆ ನಮ್ಮ ಹೃದಯವನ್ನು ಜಗ್ಗಿ ಜಗ್ಗಿ ನೀರುಮಾಡಿಬಿಡುತ್ತವೆ. ಅದನ್ನು ಎದು ರಿಸುವ ಹರಿಶ್ಚಂದ್ರನ ಸತ್ಯ, ಧೈರ್ಯ, ಸ್ಥೈರ್ಯಗಳನ್ನು ಕಂಡು ಮಾನವನಲ್ಲಿ

೨೨. ಕುವೆಂಪು "ಸರೋವರದ ಸಿರಿಗನ್ನಡಿ" "ದರ್ಶನವಿಮರ್ಶೆ" ಪು. ೮೧ ಹಾಗೂ ೧೨.

ಇಂತಹ ಭೀಕರ ದೈವೀಶಕ್ತಿಯನ್ನು ಎದುರಿಸಿ ವಿಜಯಿಯಾಗುವ ಸಾಮರ್ಥ್ಯ ವಿದೆಯೆಂದು ಸಮಾಧಾನವೆನಿಸುತ್ತದೆ. ಈ ಅರುವಿನಿಂದ ಆತ್ಮೋದ್ಧಾರವಾಗುತ್ತವೆ. ಹೃದಯ ಕಶ್ಮಲತೆ ಕರಗಿ ದಿವ್ಯ ಸಾಕ್ಷಾತ್ಕಾರವಾಗುತ್ತದೆ.[೨೩] ಇಂಥಲ್ಲೆಲ್ಲ ಸೌಂದರ್ಯಾನುಭೂತಿಯಿಂದ ಕವಿ ವಸ್ತುವಿನೊಡನೆ ತಾದಾತ್ಮ್ಯ ಹೊಂದುವಂತೆ ಕಾವ್ಯಸೌಂದರ್ಯಾಸ್ವಾದನೆಯಿಂದ ವಿಮರ್ಶಕ ಕಾವ್ಯ ರಸದಲ್ಲಿ ತಾದಾತ್ಮ್ಯ ಹೊಂದಿರುವದು ಕಂಡುಬರುವದು. ಕರುಣರಸವನ್ನುಂಡು ದ್ರವಿಸಿದ ಹೃದಯಕ್ಕೆ ಹೆಪ್ಪುಹಾಕಿ ಕೆನೆಯನ್ನು ಆರಿಸಿ ಕಲಾತ್ಮಕವಾಗಿ ಎಳೆಬಿಡಿಸಿ ಇಟ್ಟಂತೆ ಇಲ್ಲಿಯ ಕೆಲಉಕ್ತಿಗಳು ಸುರಚಿತವಾಗಿವೆ, ಪೌಷ್ಟಿಕವಾಗಿವೆ. ಹಸನಾದ ಕಸುವುಳ್ಳ ನುಡಿಗಳು ಮೂಲಕಾವ್ಯದ ಸೌಂದರ್ಯವನ್ನು ಹಾಗೂ ವಿಮರ್ಶಕನ ಪ್ರತಿಕ್ರಿಯೆಗಳನ್ನು ಓದುಗನ ಮನದುಂಬ ಹರವುತ್ತವೆ. ವಿಮರ್ಶಕ ರಸದ ಹೊನಲಿನಲ್ಲಿ ಓದುಗನನ್ನು ಈಸಬಿಡುತ್ತಾನೆ.

ಹೀಗೆ ವಿಮರ್ಶೆ ವರ್ಣನಾತ್ಮಕವೇ ಇರಲಿ ಅಥವಾ ವಿವರಣಾತ್ಮಕವೇ (Appreciative method) ಇರಲಿ, ತೌಲನಿಕ ರೀತಿಯೇ (Comparative method) ಆಗಿರಲಿ, ಉನ್ಮೀಲನಾತ್ಮಕ ರೀತಿ (Interpretative method) ಆಗಲಿ, ಅದರಂತೆ ನಿರ್ಣಯಾತ್ಮಕ (Judicial method) ಅನುಗಮನ ಪ್ರಧಾನವಾದ ಶಾಸ್ತ್ರೀಯ ರೀತಿ (Indictive method) ಯಾವುದೇ ಇರಲಿ ಅದರಲ್ಲೆಲ್ಲ ಮೂಲಕಾವ್ಯದ ಸೊಬಗಿನೊಡನೆ ಹಾಗೂ ಕವಿಯ ವ್ಯಕ್ತಿತ್ವದೊಡನೆ ಸೃಜನಾತ್ಮಕ ಸಾಹಿತ್ಯದ ಸ್ವಾದ ಬೆರೆತುಕೊಂಡಿರುತ್ತದೆ. ಒಂದೊಂದು ಸಲ ಅದಕ್ಕೂ ಹೆಚ್ಚಿನ ತೃಪ್ತಿಯನ್ನು ಕೊಡಬಲ್ಲದ್ದಾಗುತ್ತದೆ.

ತರ್ಕಬದ್ಧವಾಗಿ, ಸೂಕ್ಷ್ಮವಾಗಿ ವಿಚಾರಿಸಿದರೆ ಈ ಅಭಿಪ್ರಾಯ ಇನ್ನೂ ಖಚಿತಗೊಳ್ಳುತ್ತದೆ. ಕವಿಸೃಷ್ಟಿ ಈಶಸೃಷ್ಟಿಯ ಅನುಕೃತಿಯಾದರೆ, ವಿಮರ್ಶಾಸೃಷ್ಟಿ ಕವಿಸೃಷ್ಟಿಯ ಅನುಸೃಷ್ಟಿಯಾಗಿರುತ್ತದೆ. ಹೀಗಿದ್ದರೂ ಎಷ್ಟೋಸಲ ಬ್ರಹ್ಮಸೃಷ್ಟಿಯಲ್ಲಿ ದೊರೆಯುವ ವಸ್ತು, ವಿಷಯ, ಅನುಭವಕ್ಕಿಂತ ಕಾವ್ಯದಲ್ಲಿ ದೊರೆಯುವ ಅನುಭವ ನಮ್ಮ ಮನಸ್ಸನ್ನು ಹೆಚ್ಚಿಗೆ ಅರಳಿಸುತ್ತದೆ. ಅದೇ ಮೇರೆಗೆ ಈ ಸಾಹಿತ್ಯದ ಪ್ರತಿಕೃತಿಯಾದ ವಿಮರ್ಶನ ಸೃಷ್ಟಿಯಲ್ಲಿ ಮೂಲ ಸಾಹಿತ್ಯ ಸೌಂದರ್ಯಕ್ಕಿಂತ ಅಧಿಕ ಸೌಂದರ್ಯವನ್ನು, ಆನಂದವನ್ನು ಪಡೆಯುವದು ಸಹಜವೆನಿಸುತ್ತದೆ. ಬ್ರಹ್ಮಸೃಷ್ಟಿಯನ್ನು ಅರಿತುಕೊಳ್ಳಲು ಸತ್ವಯುತವಾದ ವ್ಯಕ್ತಿತ್ವವನ್ನು ಪ್ರತಿಭೆಯನ್ನು ಪಡೆದ ಕವಿ ನಮಗೆ ಹೊಸ ದೃಷ್ಟಿಯನ್ನು ಉಂಟುಮಾಡುವಂತೆ ವಿಮರ್ಶಕನು ಕವಿಸೃಷ್ಟಿಯನ್ನರಿತು ಆಸ್ವಾದಿಸಲು ಹೊಸ ದೃಷ್ಟಿಯನ್ನು ದಯಪಾಲಿಸುತ್ತಾನೆ. ಆದುದರಿಂದ

---

೨೩. ಡಾ. ಆರ್. ಸಿ. ಹಿರೇಮಠ "ಮಹಾ ಕವಿ ರಾಘವಾಂಕ" ಪು. ೨೩೫ & ೨೩೬.

ಬ್ರಹ್ಮಸೃಷ್ಟಿಯ ಅನುಸೃಷ್ಟಿಯೆಂದು ಕವಿಸೃಷ್ಟಿಯನ್ನು ಅಲ್ಲಗಳೆಯುವದು ಎಷ್ಟು ಅಪಾಯವೋ ಅಷ್ಟೇ ಅಪಾಯ ಕವಿಸೃಷ್ಟಿಯ ಅನುಸೃಷ್ಟಿಯೆಂದು ವಿಮರ್ಶೆಯನ್ನು ಅಲ್ಲಗಳೆಯುವದರಲ್ಲಿಯೂ ಇದೆ.

ಕವಿಗಳು ದ್ರಷ್ಟಾರರು, ಮಹಾರಸಋಷಿಗಳು, ಆದ್ದರಿಂದ ಬ್ರಹ್ಮಸೃಷ್ಟಿಗೆ ಸಮಾನವಾದ ಇಲ್ಲವೇ ಅದನ್ನು ಮೀರಿಸುವ ಕಾವ್ಯಲೋಕವನ್ನು ಸೃಷ್ಟಿಸುವ ಶಕ್ತಿ ಅವರಲ್ಲಿ ಇರುತ್ತದೆ ಎಂಬುದು ಕವಿಗಳ ಮಾತಾದರೆ, ಬ್ರಹ್ಮಸೃಷ್ಟಿಯ ಪ್ರತಿಸೃಷ್ಟಿಯಾದ ಕವಿಸೃಷ್ಟಿಯ ಪ್ರತಿಸೃಷ್ಟಿ–ವಿಮರ್ಶೆ ; ಆದರಿಂದಾಗಿ ಕಾವ್ಯ ಸೃಷ್ಟಿಗೂ ಮಿಗಿಲಾದ ಸೃಷ್ಟಿ ವಿಮರ್ಶನ ಸೃಷ್ಟಿಯೆಂಬುದು ವಿಮರ್ಶಕನ ಮಾತಾಗಬೇಕಾಗುತ್ತದೆ. ಸಜಾತಿಯವರಲ್ಲಿಯೇ, ಒಂದೇ ಕ್ಷೇತ್ರದ ಒಂದೇ ದುಡಿಮೆಯವರಲ್ಲಿಯೇ ಸ್ಪರ್ಧೆ ಪೈಪೋಟಿಗಳು ನಡೆಯುತ್ತಿವೆಯಂತೆ, ಕವಿ ಹಾಗೂ ವಿಮರ್ಶಕರಲ್ಲಿ ನಡೆದಿರುವ ಸ್ಪರ್ಧೆಯೇ ಅವರಿಬ್ಬರೂ ಒಂದೇ ಬಗೆಯ ಉದ್ಯೋಗದ ವ್ಯಕ್ತಿಗಳು ಎಂಬುದನ್ನು ಎತ್ತಿತೋರಿಸುತ್ತದೆ. ಆದ್ದರಿಂದ ಕಾವ್ಯಪ್ರಪಂಚದಲ್ಲಿ ಕವಿಗೆ ಸಲ್ಲುವ ಸ್ಥಾನವೇ ವಿಮರ್ಶಕನಿಗೂ ಸಲ್ಲುತ್ತದೆ ಎಂಬ ನಿರ್ಧಾರಕ್ಕೆ ಬಂದು ನಿಲ್ಲಬಹುದು.

"It appears, from what has been Said, that the work of the critic is very akin to that of the creative writer. If critisism is a certain sense is a science. it is also, as Sainte Beuve Says, "on artist requiring a clever artist."—"poetry can only be touched by a poet." The critics process of reconstruction carries him Over the ground originally covered by the artist."[24]

★ ಎಸ್. ಎಸ್. ಕೋತಿನ

೨೪. R. A. Scott—Jâmes. "The making of the literature". P. 385.

ಅಬ್ಬಲೂರು ಚರಿತೆ: ಒಂದು ಲಘು ಪುರಾಣ

'ಅಬ್ಬಲೂರು ಚರಿತೆ' ೬ ಸಂಧಿ, ೫೧೭ ಪದ್ಯಗಳ ಒಂದು ಲಘುಕೃತಿ. ಪ್ರತಿಯೊಂದು ಸಂಧಿಯ ಆದಿಯಲ್ಲಿ ಬರುವ ಒಂದೊಂದು ವಾರ್ಧಕವನ್ನು ಬಿಟ್ಟರೆ ಮಿಕ್ಕುವು ಸಾಂಗತ್ಯ ಪದ್ಯಗಳು. ಸಾಧಾರಣ ಸತ್ವದ, ರೂಢಮೂಲ ಶೈಲಿಯ ಈ ಕೃತಿಯ ಕರ್ತೃ ಅಂತರವಳ್ಳಿಯ ಶಾಂತನಿರಂಜನ. ಕಾಶಿಯಿಂದ ಅಂತರವಳ್ಳಿಗೆ ಬಂದ, ವಿಶ್ವಬ್ರಹ್ಮ ವಂಶದ ಚಿಕ್ಕೇಶ (ಮೂರುಜಾವಿ ದೇವ)ನ ಪರಂಪರೆಗೆ ಸಂಬಂಧಿಸಿದವನೀತ.

'ಅಬ್ಬಲೂರು ಚರಿತೆ'ಯ ವಸ್ತು ಏಕಾಂತ ರಾಮಯ್ಯನ ಶಿರಸ್ಸು ಪವಾಡವಾಗಿದ್ದರೂ, ಈ ಪವಾಡ ಪ್ರಸಂಗದಲ್ಲಿ ಸೂರ್ಯನನ್ನು ನಿಲ್ಲಿಸುವುದರ ಮೂಲಕ ಮಹತ್ವದ ಪಾತ್ರವಹಿಸಿದ ತನ್ನ ಮತದ ಮಹಾಪುರುಷ ಚಿಕ್ಕೇಶನ ಘನತೆಯನ್ನು ನಿರೂಪಿಸುವುದು ಕವಿಗೆ ಮುಖ್ಯವಾಗಿದೆ.[೧] ಈ ಮಾತಿಗೆ

ಪಿಂದೆ ಶಂಕರನ ಛಲಕಾಗಿ ಖದ್ಯೋತನಂ |
ಸಂದ ಸರಣಿಯ ಮರಳಿ ಯೌವನಾರ್ತನ(?)ಮಾಡಿ |
ಕೊಂದು ಭವ್ಯರ ಪಡೆಯ ಜಿನನಿರ್ದ ತಾಣಕ್ಕೆ ನಂದಿವಾಹನ ದೇವನ |
ತಂದು ಪೀಠಂಗೊಳಿಸಿ ರಾಮನಂ ನೆರೆ ಗೆಲಿಸಿ |
ಒಂದು ರೂಪಿನೊಳಿರ್ದು ಮೂರುನಾಮವ ತಾಳ್ದ |
ಬಂದು ಗೌತಮಪುರದಿ ನಿಂದ ಶ್ರೀ ಗುರುವಿನ ಎಸಕವಂ ಪೇಳ್ವೆನೊಲಿದು |

ಎಂಬ ಪದ್ಯ ಸ್ಪಷ್ಟ ನಿದರ್ಶನವೆನಿಸಿದೆ.

ಬಸವಪುರಾಣಾದಿ ವೀರಶೈವ ಕೃತಿಗಳಲ್ಲಿ, ಅಬ್ಬಲೂರು, ತಾಳಿಕೋಟೆ ಭೋಗಾವೆ, ಕುಡತಿನಿ (?), ಮರಡಿಪುರ ಶಾಸನಗಳಲ್ಲಿ ಏಕಾಂತ ರಾಮಯ್ಯನ ಘಟನೆ ಕೆಲಮಟ್ಟಿಗೆ ಭಿನ್ನರೂಪದಲ್ಲಿ ಸಿಗುತ್ತಿರುವುದು ಸರ್ವವೇದ್ಯ.[೨] ಇಂಥ

---

೧. ಉರಿಯೊಳಗೆ ಬೆಂದ ಕೈಕಾಲ್ಗಳಂ ಪಡೆದು ಜೈ |
ನರು ನೋಡೆ ಮೇಲಕಡರಿಸಿ ರವಿಯ ರಾಮಯನ |
ಶಿರವನೊಲವಿಂ ಪಡೆದ ಮೂರುಜಾವದ ದೇವರ್......||

ಎಂಬ ವೀರಶೈವಾಮೃತ ಮಹಾಪುರಾಣದ ಈ ಪದ್ಯ(೮-೪-೩೧)ದಲ್ಲಿ ಮೂರುಜಾವಿ ದೇವನ ಎರಡು ಪವಾಡಗಳು ಹೇಳಲ್ಪಟ್ಟಿವೆ. ಈತನ ಶಾಸನಗಳಿಗಾಗಿ 'ಶಾಸನಗಳಲ್ಲಿ ಶಿವಶರಣರು' (ಎಂ. ಎಂ. ಕಲಬುರ್ಗಿ—ಪುಟ ೧೦೨) ಎಂಬ ಕೃತಿಯನ್ನು ನೋಡಬಹುದು.

೨. ಶಾಸನಗಳಲ್ಲಿ ಶಿವಶರಣರು, ಪು. ೯೦ ನೋಡಿರಿ.

ಪ್ರಸಂಗದಲ್ಲಿ ಇನ್ನೂ ಕೆಲವು ವಿಭಿನ್ನ ಸಂಗತಿಗಳನ್ನು ಹೇಳುವ ಈ ಅಪ್ರಕಟಿತ 'ಅಬ್ಬಲೂರು ಚರಿತೆ'ಯು ಕಥೆ ಹೀಗಿದೆ.[೩]

ಜಂಬೂದ್ವೀಪದ ಛಪ್ಪನ್ನದೇಶಗಳಲ್ಲಿ ಕರ್ನಾಟಕ ಸುಪ್ರಸಿದ್ಧವಾದುದು. ಅಲ್ಲಿ 'ಆಲದಿ' ಎಂಬುದು ಒಂದು ಪಟ್ಟಣ. ಆ ಪಟ್ಟಣದಲ್ಲಿ ಪುರುಷೋತ್ತಮ ಹೆಸರಿನ ಒಬ್ಬ ಶಿವಬ್ರಾಹ್ಮಣನಿದ್ದನು. ಆತನ ಸತಿ ಪದ್ಮಾವತಿ. ಪರಮ ಶಿವಭಕ್ತರಾದ ಇವರಿಗೆ ಬಹುಕಾಲ ಮಕ್ಕಳಾಗಿರಲಿಲ್ಲ. ಒಂದು ದಿನ ಶಿವನು ಪದ್ಮಾವತಿಯ ಕನಸಿನಲ್ಲಿ ಬಂದು, ಪುತ್ರಸಂತಾನವನ್ನು ಆಶೀರ್ವದಿಸಿದ. ಮರುದಿನ ಪುರುಷೋತ್ತಮನ ಕನಸಿನಲ್ಲಿಯೂ ಬಂದು

ಕದನ ಕೋಳಾಹಳ ಇದಿರಾದ ಶ್ರವಣರ | ಮದವ ಮುರಿವ ಶಿವಯೋಗಿ |
ಮುದದಿಂದ ಏಕಾಂತರಾಮನೆಂಬವ ನಿಮ್ಮ | ಉದರದಿ ಜನಿಸುವನೆಂದು ||

ಹೇಳಿದ.[೪] ಪುರುಷೋತ್ತಮನಿಗೆ ಶಿವಕೃಪೆಯ ಬಗ್ಗೆ ನಂಬುಗೆ ಹುಟ್ಟಿತು. ಪದ್ಮಾವತಿ ಗರ್ಭಧರಿಸಿದಳು. "ಹೋರಾ ಹುಬ್ಬಿ ಸ್ವಾತಿ ರೇವತಿ ನಕ್ಷತ್ರ | ವಾರ ರವಿಯು ಸಿಂಹ ಲಗ್ನ" ಸೂರ್ಯೋದಯಕ್ಕೆ ಮಗುವಿಗೆ ಜನ್ಮವಿತ್ತಳು.

ಮಕ್ಕಳಮಾಣಿಕ ಜೋ ಜೋ ಶ್ರವಣರ | ಸೊಕ್ಕುಮುರಿವ ಕಂದ ಜೋಜೋ |
ಗಕ್ಕನೆ ಶಿವನಿಂದೆಗೆಯ್ವರ ಕುಲವನು | ಒಕ್ಕಲಿಕ್ಕುವ ರಾಮ ಜೋಜೋ ||

ಎಂದು ಜೋಗುಳ ಹಾಡಿ ಹೆಸರಿಟ್ಟರು. ಏಕಾಂತರಾಮ ೧೭ ವರ್ಷದವನಾದ. ಒಂದು ದಿನ ಇದ್ದಕ್ಕಿದ್ದಂತೆ ಶಿವನು ರಾಮಯ್ಯನನ್ನು ಮೂರ್ಛೆಗೊಳಿಸಿ, ಅವನ ಮನಸ್ಸನ್ನು ಪ್ರವೇಶಿಸಿ,

ಕಾಲನ ದಿಕ್ಕು ನಾಗರಖಂಡ ದೇಶದಿ] ಖೂಳತನ ಜೈನ ಗುರುಗಳು |
ಬಾಳಿಕೊಂಡಿಹರಬ್ಬಲೂರಿಗೆ ನೀ ಹೋಗಿ | ಕೋಳಾಹಳವ ಮಾಳ್ಪವೆಂದ ||
ಆವೂರೊಳಗೆ ಜಿನ್ನಮತ ಶ್ರೇಷ್ಠವೆನುತೆನ್ನ | ಹೇವಿಸಿ ಹಳಿಯುತಲಿಹರು |
ಕೋವಿದ ನೀ ಹೋಗಿ ವಾದಿಸಿ ಪವಾಡವಮಾಡಿ | ಶೈವಮತವ ಪೆಚ್ಚಿಸೆಂದ ||

---

೩. ಈ ಹಸ್ತಪ್ರತಿಯನ್ನು ಶ್ರಮವಹಿಸಿ ಹುಡುಕಿಕೊಟ್ಟ ಶ್ರೀ ಸಂಗಯ್ಯನವರು ಆರಾಧ್ಯ-ಮಠ, ಅಬ್ಬಲೂರು ಅವರಿಗೆ ಕೃತಜ್ಞನಾಗಿದ್ದೇನೆ.

೪. ಓಹಿಲ ದಾಸ ಚೆನ್ನ ಮೊದಲಾದವರು ಕೈಲಾಸಕ್ಕೆ ಬಂದ ಕಾರಣ, ಮರ್ತ್ಯವಲ್ಲಿ ಶಿವಮತ ಕ್ಷೀಣವಾಗಿ ಜೈನ, ಬೌದ್ಧ ಮತಗಳ ಹಾವಳಿ ಹೆಚ್ಚಿದೆ ಎಂದು ನಾರದ ಗಣೇಶ್ವರನಿಗೆ ಬಿನ್ನವಿಸಿದ. ಶಿವನು ವೀರಭದ್ರನನ್ನು ಕರೆದು 'ನಿನ್ನಂಶದೊಳೊಬ್ಬನನು' ಮರ್ತ್ಯದಲ್ಲಿ ಹುಟ್ಟಿಸೆಂದು ಆಜ್ಞೆ ನೀಡಿದ. ವೀರಭದ್ರನು ಪುರುಷೋತ್ತಮ ಭಟ್ಟರ ಕನಸಿನಲ್ಲಿ ಬಂದು, ಪುತ್ರಸಂತಾನವನ್ನು ಆಶೀರ್ವದಿಸಿದನೆಂದು ಅಬ್ಬಲೂರು ಶಾಸನ ಹೇಳುತ್ತದೆ.

ಅಬ್ಬಲೂರು ಸೋಮೇಶ್ವರ ದೇವಾಲಯದ ಶಿಲ್ಪಗಳು



"ಜೇಡರ ದಾಸಿಮಯ್ಯಂಗಳು ದೇವರಿಗೆ ವಸ್ತ್ರವ ಕುಡುವ ಟಾವು"

ಫೋಟೋ : ಪಿ. ಎ. ನಾಯಿಕ



“ಸಿರಿಯಾಳಸೆಟ್ಟಿ ಚಂಗಳವ್ವೆ ದೇವರಿಗೆ ಮಗನನಿಕ್ಕುವ ಟಾವು”



"ಕುಂಬಾಜಿಗುಂಡನ ಮುಂದೆ ಬಂದಾಡಿದ ನಂಮ ಶಿವನು"

[ಇಲ್ಲಿ ಶಿವನ ವಿಗ್ರಹ ಕಂಡುಬರುವುದಿಲ್ಲ.]



"ಶ್ರೀ ಬ್ರಹ್ಮೇಶ್ವರ ದೇವರಲ್ಲಿ ಏಕಾನ್ತದ ರಾಮಯ್ಯಂ ಬಸದಿಯ ಜಿನನೊಡ್ಡವಾಗಿ ತಲೆಯನರಿದು ಹಡೆದ ಟಾವು। ಸಂಕಗಾವುಣ್ಡಂ ಬಸದಿಯ ನೊಡೆಯಲೀಯದೆ ಆಳುಂ ಕುದುರೆಯನೊಡ್ಡಿರಲು ಏಕಾನ್ತದ ರಾಮಯ್ಯಂ ಕಾದಿ ಗೆಲ್ದು ಜಿನನೊಡೆದು ಲಿಂಗ ಪ್ರತಿಷ್ಟೆಯಂ ಮಾಡಿದ ಟಾವು ॥"

[ಈ ಶಿಲ್ಪದ ಎಡಮಗ್ಗುಲಿಗೆ ಲಿಂಗಪ್ರತಿಷ್ಠೆಯ ಇನ್ನೊಂದು ಅಸ್ಪಷ್ಟ ವಿಗ್ರಹವಿದೆ.]

× × × ×

ಏಕಾಂತ ರಾಮಯ್ಯನ ಪವಾಡಕ್ಕೆ ಸಂಬಂಧಿಸಿದ ಇನ್ನೆರಡು ಅಸ್ಪಷ್ಟ ಶಿಲ್ಪಗಳಿದ್ದು ಅವುಗಳ ತಲೆಯ ಮೇಲೆ ಹೀಗೆ ಬರೆಯಲಾಗಿದೆ.

"ಶ್ರೀಮದೇಕಾನ್ತದ ರಾಮಯ್ಯಂಗೆ ಸಂಕಗಾಂವುಂಡನೋಲೆಯಂ ಕುಡುವ ಟಾವು"

"ಯೇಕಾನ್ತದ ರಾಮಯ್ಯಂಗಳು ಜಿನನನೊಡೆದು ಲಿಂಗ ಪ್ರತಿಷ್ಠೆಯಂ ಮಾಡಿದ ಟಾವು"



ಏಕಾಂತ ರಾಮಯ್ಯ ರುಂಡ ಕತ್ತರಿಸಿಕೊಂಡ
ಬ್ರಹ್ಮೇಶ್ವರ ದೇವಾಲಯ, ಅಬ್ಬಲೂರು.



ಏಕಾಂತ ರಾಮಯ್ಯ ಕಟ್ಟಿಸಿದ
ಸೋಮೇಶ್ವರ ದೇವಾಲಯ, ಅಬ್ಬಲೂರು.



ಮಾರುಂಜಾವಿದೇವ ಅಂತರವಳ್ಳಿ (ಧಾರವಾಡ ಜಿಲ್ಲೆ)

ರಾಮಯ್ಯ ಮೂರ್ಛೆ ತಿಳಿದೆದ್ದ.[೫] ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಗೆ ಕೊಟ್ಟ ತಾಯ್ತಂದೆಗಳಿಂದ ಬೀಳ್ಕೊಂಡು ಅಬ್ಬಲೂರತ್ತ ಪ್ರಯಾಣ ಬೆಳಸಿದ.

× × × ×

ದಕ್ಷಿಣಕ್ಕೆ ನಡೆದು ಭೀಮರತಿಯಲ್ಲಿ ಸ್ನಾನಮಾಡಿ, ಶಾಶ್ವತೇಶ್ವರ ಲಿಂಗ, ಮಾಗದ ತೀರ್ಥದ ಮಲ್ಲಿಕಾರ್ಜುನಲಿಂಗಗಳನ್ನು ಪೂಜಿಸಿದ. ದಾರಿ ಮಧ್ಯದಲ್ಲಿ ಅಬ್ಬಲೂರಿನ ಬ್ರಹ್ಮೇಶಲಿಂಗ ಬ್ರಾಹ್ಮಣ ವೇಷ ಧರಿಸಿ, ಸೋಮಯ್ಯ ನಾಮದಿಂದ ಬಂದು ರಾಮಯ್ಯನನ್ನು ಮಾತನಾಡಿಸಿದ. ಆಗ

ದೇವ ಚಿತ್ತೈಸೆನ್ನ ಬಿನ್ನಪವ ನಿಮ್ಮೂರ | ದೇವ ಬ್ರಹ್ಮೇಶನ ಹಳವ |
ಶ್ರಾವಕರಘಟ ಮುರಿಯ ಹೇಳಿಯೆನ್ನನು | ದೇವರಾಳ್ವನು ಕರುಣಿಸಿದ ||

ಎಂದು ರಾಮಯ್ಯ ಹೇಳಿದ. ಇಬ್ಬರೂ ಜೊತೆಗೂಡಿ ಮುನಿಗುಂದ (ಚಿಕ್ಕ ಮುಳಗುಂದ ?) ಮಾರ್ಗವಾಗಿ ನಡೆದರು. ಬೇಡರು, ಗೋವಳರು ಮತ್ತು ಮುನಿಗಳು ನೆಲೆನಿಂತ ಮುನಿಗುಂದ ಬೆಟ್ಟದ ತುದಿಗೆ ಬಂದರು. ಅಲ್ಲಿಂದಲೇ ಆ ಪುರದೊಳಗಣ (ಅಬ್ಬಲೂರು) ಅಸಂಖ್ಯ ಜೈನ ಮನೆಗಳನ್ನು ಕಂಡು

ತ್ರಿಪುರವ ಪಶುಪತಿ ಜಪಿಸಿ ತಾ ಮುರಿದಂತೆ | ಚಪಳತನದಿ ಪಟ್ಟಣದಿ |
ಕಪಟ ಜೈನರುಗಳಿಹುದ ಬಿಡಿಸುವನೆಂದು | ಶಪಥವ ತಾಳ್ದ ರಾಮಯ್ಯ |

ತರುವಾಯ ಮುನಿಗುಂದ ಬೆಟ್ಟವನ್ನಿಳಿಯುತ್ತಿದ್ದಂತೆ, ಜೊತೆಗಿದ್ದ ಸೋಮಯ್ಯ ಮಾಯವಾದ. ಈತನು ಬ್ರಹ್ಮೇಶಲಿಂಗನಲ್ಲದೆ ಬೇರಲ್ಲವೆಂದು ಖಚಿತ ಮಾಡಿಕೊಂಡು, ಮುಂದು ನಡೆದು, ರಾಮಯ್ಯ ಅಬ್ಬಲೂರನ್ನು ಪ್ರವೇಸಿಸಿದ,

× × × ×

ಎಲ್ಲಿ ನೋಡಲು ಜೈನರಾಲಯ ಮಠಗಳು | ಎಲ್ಲಿ ನೋಡಿದಡಲ್ಲಿ ಬಸದಿ |
ಎಲ್ಲಿ ನೋಡಲು ಗುರುಗುಡ್ಡರ ನೆರವಿಗ | ಳೆಲ್ಲನೋಡುತ ರಾಮ ನಡೆದ ||
ಅಸ್ತಮಯಕೆ ಉಣ್ಣಬಾರದು ಎಂತೆಂದು | ಪುಸ್ತಕವನು ಹಿಡಿದುಕೊಂಡು |
ವಿಸ್ತರಿಸುತ ಓದುವಾರುಹತರು ತಮ್ಮ | ಬಸ್ತಿಯೊಳಗೆ ರಾಜಿಸಿದರು ||

ರಾಮಯ್ಯ ಊರೊಳಗೆ ನಡೆದ. ಈ ಶಿವಭಕ್ತನನ್ನು ನೋಡಿ ಜೈನರು "ಈತನ ನುಡಿಸಬಾರದು" ಎಂದು ಉಪೇಕ್ಷೆಯಿಂದ ದೂರ ಸರಿದರು. ರಾಮಯ್ಯ ಬ್ರಹ್ಮೇಶ್ವರ ದೇವಾಲಯದತ್ತ ನಡೆದ.

---

೫. ರಾಮಯ್ಯ ಶೈವಕ್ಷೇತ್ರ ಸಂದರ್ಶನಾರ್ಥ ಹುಲಿಗೆರೆಗೆ ಬಂದು, ಸೋಮನಾಥನನ್ನು ಪೂಜಿಸಿದ. ಸೋಮನಾಥ ಪ್ರತ್ಯಕ್ಷನಾಗಿ "ರಾಮ ಅಬ್ಬಲೂರಿಗೆ ಹೋಗು, ಜೈನರೊಡನೆ ವಾದಿಸು. ನಿನ್ನ ತಲೆಯನ್ನಾದರೂ ಪಣಕ್ಕಿಟ್ಟು ಗೆಲ್ಲು" ಎಂದು ಆಜ್ಞೆ ನೀಡಿದ. ಎಂದು ಅಬ್ಬಲೂರು ಶಾಸನದಲ್ಲಿ ಬರುತ್ತದೆ.

ಹೊಳೆಯುವ ಶಿಖರಾಗ್ರದಿ ನಾಲ್ಕುದೆಸೆ| ಕಳಸಮಧ್ಯದಿ ಒಂದು ಕಳಸ|
ಇಳೆಯ ಜನರ ದೀಕ್ಷಾ ಕಾರ್ಯಕೆ ಗುರುಪೂಜೆ| ದಳೆದಂತೆ ಕಣ್ಗೆ ರಾಜಿಸಿತು||
ಕಂಡನು ಬಾಗಿಲೊಳಿರ್ದ ಕಂಟಕ ಕಲ್ಲು| ಕಂಡನು ಜಿಡು ವಾಜಿಗಳ|
ಹಿಂಡು ಗಾರ್ದಭ ಗೋವು ವರಾಹ ಶಕುನ ಕಂಡು|ಮುಂಡೆಯುನೋಲಿದು ಚಿಂತಿಸಿದ||

ದೇವಾಲಯುವನ್ನು ಪ್ರವೇಶಿಸಿ, ನಿರ್ಮಲಗೊಳಿಸಿದ. ಅಷ್ಟರಲ್ಲಿ ಒಬ್ಬ ಶಿವಭಕ್ತ ಬಂದು

ಭಾವಜಾರಿಯುನತಿಗಳೆವರೀವೂರೊಳು| ಶಾವಕರುಗಳುರೆ ಪೆಚ್ಚಿ|
ಶೈವನೊರ್ವನನಿಲ್ಲಿ ಎಡೆಮಾಡಲೀಸರು| ನೀವು ಚಿತ್ತೈಸಿರಿನ್ನೆಂದ||
ಭಕ್ತಮಹೇಶರೆಂಬತ್ತುಸಾವಿರ ಮನೆ| ವ್ಯಕ್ತದಲ್ಲುಂಟಾಗಿ ತಮ್ಮ|
ಶಕ್ತಿ ಮಕ್ಕಳು ಕೂಡಿ ಸುಖಿಮಿರ್ದೀ ಗುಡಿ ಪ್ರ| ಸಕ್ತಿಯಿಲ್ಲವುಯೆಂದು ನಡೆದ||

ಆಗ ಜೈನರು ಬಂದು "ವಾಸಿಗಳಾಗಿರಬೇಡವೀ ಗುಡಿಯೊಳು ದೋಷ ಬಪ್ಪುದು ನಿಮಗೆ ಎಂದು ಎಚ್ಚರ ನೀಡಿದರೆ",[೬] ಈಶನಾಲಯುವನು ಪೊಕ್ಕ ಮಾತ್ರದಿ ಪಾಪ ನಾಶವಾಗುವುದು" ಎಂದು ರಾಮು ಉತ್ತರಿಸಿದ. ಜೈನರು ಹಿಂಡುಹಿಂಡಾಗಿ ನೆರೆದರು. ವಾದ-ಪ್ರತಿವಾದ ನಡೆಯಿತು. ಹಾಸ್ಯ-ಪ್ರತಿಹಾಸ್ಯದ ಚಕಮಕಿ ತೀವ್ರಗೊಂಡಿತು. ಶಿವಪಾರಮ್ಯ–ಜಿನಪಾರಮ್ಯಗಳ ಘೋಷಣೆ ಕಿಡಿಕಾರಿತು. "ಹಿಂದಿನ ಪೌರುಷವನಾಡದಿರಯ್ಯ," ಶಿವಶ್ರೇಷ್ಠನಾದರೆ ಇಂದು ಗಂಡಗತ್ತರಿಯಿಂದ ನಿನ್ನ ತಲೆಯನ್ನು ಕತ್ತರಿಕೊಂಡು, ಏಳು ತೀರ್ಥಗಳಲ್ಲಿ ಮೆರೆಸಿ, ತಿರುಗಿ ಪಡೆ, ಆಗ ನಾವೆಲ್ಲ ನಿನ್ನ ಆಳಾಗುತ್ತೇವೆ, ನಮ್ಮ ಜಿನನನ್ನು ಒಡೆದು ಹಾಕಲು ಒಪ್ಪುತ್ತೇವೆ ಎಂದು ಆಹ್ವಾನ ನೀಡಿದರು. ನಮ್ಮ ಮತದ ಹಿರಿಯರನ್ನು ಕರೆಸಿ ಪತ್ರ ಬರೆಯಿಸಿ ಕೊಡುವೆವು, ನಿನ್ನ ಮತದ ಹಿರಿಯರಿದ್ದರೆ ಕರೆಸು ಎಂದು ನುಡಿದರು. ಈ ಊರ ಶೈವಮತದ ಹಿರಿಯರಾರು ? ಎಂದು ನೆರೆದ ಶೈವ ಸಮಾಜಕ್ಕೆ ರಾಮಯ್ಯ ಕೂಗಿ ಕೇಳಲು; ಪುಲಿಗೆರೆಯಲ್ಲಿರುವ ಹೊನ್ನಿ ತಂದೆಗಳು ಎಂದು ಉತ್ತರ ಬಂದಿತು. ಆಗ ರಾಮಯ್ಯ

ಸ್ವಸ್ತಿಶ್ರೀಮಂತು ಅಗ್ಗಣಿಯು ಹೊನ್ನಿತಂದೆಗೆ| ವಿಸ್ತರಿಸಿದೆನು ಬಿನ್ನಪವ|
ಬಸ್ತಿಯ ಜೈನರು ನೆರೆದಬ್ಬರೊಳು| ವಸ್ತು ಶಿವನ ನಿಂದಿಸಿಯು ||
ಘನವಾದುದೀ ಜೈನ, ಜಿನಗಿನ್ನಿಲ್ಲೆಂದು| ಮನವುಬ್ಬಿ ಆಡುತಲೀಗ|
ಜಿನುಮಯಾತ್ಮಕನ ಹಳಿಯುಲು ಶ್ರಾವಕರೆಲ್ಲ। ಅನುಗೊಳಿಸಿದೆನು ನ್ಯಾಯುವನು ||

೬. ಸಂಕಗೌಡನೊಂದಿಗೆ ಬಂದು ಜೈನರು ಶಿವಲಿಂಗದೆದುರು ಜಿನಪಾರಮ್ಯವನ್ನು ಘೋಷಿಸಿದರೆಂದು ಅಬ್ಬಲೂರು ಶಾಸನ, ಜೈನನೊಬ್ಬ ಲಿಂಗದ ಕಡೆಗೆ ಕಾಲುಮಾಡಿ ಮಲಗಿದ್ದನೆಂದು ಹರಿಹರನ ರಗಳೆ, ಜೈನನೊಬ್ಬ ಕೆರಹುಗಾಲಿನಿಂದ ಶಿವದೇವಾಲಯುವನ್ನು ಪ್ರವೇಶಿಸಿದನೆಂದು ಬಸವಪುರಾಣ-ಹೀಗೆ ಜಗಳದ ಕಾರಣವನ್ನು ಹೇಳುತ್ತವೆ.



ಗಂಡಗತ್ತರಿ (ನಿಂಬಯ್ಯನಮಠ, ಲಕ್ಷ್ಮೇಶ್ವರ) [ಪುಟ : ೧೩೫, ಅ. ಟ. ನೋಡಿರಿ.]

ಕೃಪೆ : ಪ್ರೊ. ಸಿ. ವ್ಹಿ. ಕೆರಿಮನಿ

ಇಂತೀ ಬಿನ್ನಪವನು ಮಾಡಿ ಪಾದ| ಕ್ರಾಂತನಾದೆನು ರಾಮಯ್ಯ|
ಸಂತತ ಎನ್ನ ಮೇಲ್ ದಯವಿಟ್ಟು ನೀವ| ತ್ಯಂತ ಪ್ರೀತಿಲಿ ಬನ್ನಿರೆನುತ||

ಆಗ್ಗವಣಿ ಹೊನ್ನಯ್ಯನಿಗೆ ಪತ್ರ ಕಳಿಸಿದ. ಜೈನ-ಶೈವ ಪಡೆಗಳು ತೊರೆಗಟ್ಟಿ ನಿಂತ ಸಮಯದಲ್ಲಿ ಹೊನ್ನಿ ತಂದೆ ಆಗಮಿಸಿದ. ರಾಮಯ್ಯ ನಮಸ್ಕರಿಸಿ ನಡೆದ ಸಂಗತಿಯನ್ನೆಲ್ಲ ಅವನಿಗೆ ನಿರೂಪಿಸಿದ. ಆಗ

ಕರೆತನ್ನಿ ಜೈನರ ಕರೆತನ್ನಿ ಶೈವರ| ಕರೆತನ್ನಿ ಗುರು ಗುದ್ದರುಗಳ |
ಕರೆತನ್ನಿ ಪರಿಜನ ಪುರಜನಗಳನೆಂದು | ಚರರನ್ನಟ್ಟಿದ ಪೊನ್ನಿತಂದೆ ||

ಕೂಡಲೇ ಬಲಾತ್ಕಾರ ಸೇನ, ಕಾಲುಂಗ್ರಣ್ಣ (?), ಗುಮ್ಮಟ ದೇಶಿಗಣ್ಣ, ಪರಮಹಂಸ, ಪಾಯಣ್ಣ, ಪದ್ಮಣ್ಣ, ಹೂವಣ್ಣ, ತೀರ್ಥಣ್ಣ ಮೊದಲಾದ ಜೈನರು ಬಂದರು. ಪರಸ್ಪರ ಪ್ರಮಾಣ ಪತ್ರ ಬರೆದುಕೊಟ್ಟರು. ರಾಮಯ್ಯ ಬ್ರಹ್ಮೇಶ್ವರ ಲಿಂಗದ ಸಮ್ಮುಖಕೆ ನಡೆದ. ಶೈವ ಸಮಾಜದವರೆಲ್ಲ

ಮುಂದೆ ನಮ್ಮಯ ಜೀವ ಚಂದ್ರಾರ್ಕರುಳ್ಳನ್ನ| ಹೊಂದಿರುವುದು ಯಿಲ್ಲವಷ್ಟೇ||
ಕಂಧರವ ಕೂಡೆ ಹರಣವನ್ನು ಕೊಡುವೆ| ವೆಂದು ಹೇಳಿದರು ರಾಮನಿಗೆ||

ಹೀಗೆ ಏಕಧ್ವನಿಯಿಂದ ನುಡಿದು ರಾಮನಿಗೆ ಬೆಂಬಲವಾಗಿ ನಿಂತರು.

ಸಂದೇಹವಿಲ್ಲದೆ ರಂಗಮಂಟಪದಲ್ಲಿ | ಇಂದು ಮಾಳಿಯ ಭಕ್ತ ಕುಳಿತ |
[ಗಂಡ] ಗತ್ತರಿಯನು ಪೊನ್ನಿ ತಂದೆಯು [ತಂದು] | ಪೊಂದಿಸಿದನು ಶಿರದೆಡೆಗೆ ||
ದಾರವ ಕಟ್ಟಿ ಸರಿ ಮಾಡಿ ಚರಣಕ್ಕೆ | ಸೇರಿಸಿ ಗ್ರಂಥಿಯ ಬಲಿದು |
ವಾರಿಯ ತಿದ್ದಿ ಬ್ರಹ್ಮೇಶನ ಸ್ಮರಿಸಲು|ವೀರಶೈವರು ಉಘೇ ಎನಲು || ೭
ಪೊನ್ನಿ ತಂದೆಯೆ ಮನಗುಂದ ಬೇಡಿರಿ ಎನ್ನ | ಪನ್ನಂಗಧರನು ರಕ್ಷಿಸುವ|
ಉನ್ನತ ವೀರಶೈವರು ಶಿವಭಕ್ತರು | ಚೆನ್ನಾಗಿ ಧೃಡ ವಿಡಿದಿಹುದು ||

ಎಂದು ಎಲ್ಲರಿಗೂ ಭರವಸೆ ಕೊಟ್ಟು, ಗಂಡಗತ್ತರಿಯನ್ನು ಕಟ್ಟಿಸಿಕೊಂಡು ಕಾಲು ಚಾಚಿದ. ರುಂಡ ಕತ್ತರಿಸಿ ಬಿದ್ದಿತು.[೮]

---

೭. ಗಂಡಗತ್ತರಿಯೆನ್ನುವುದು ಒಂದು ಆಯುಧ ವಿಶೇಷ. ಎಡಬಲಕ್ಕೆ ಕೊಂಡಿ ಇರುವ ಅರ್ಧಚಂದ್ರಾಕಾರದ ಹರಿತ ಆಯುಧಕ್ಕೆ ಗಂಡಗತ್ತರಿ ಎಂದು ಹೆಸರು. ಇದನ್ನು ಕುತ್ತಿಗೆಯ ಮೇಲೆ ಹೊಂದಿಸಿಕೊಂಡು ಎಡಬಲದ ಕೊಂಡಿಗಳಿಂದ ಇಳಿಬಿದ್ದ ಸರಪಳಿ ತುದಿಯನ್ನು ಕಾಲ ಹೆಬ್ಬೆರಳಿಗೆ ಕಟ್ಟಿಕೊಂಡು ಒಂದಕ್ಕೆ ಸೆಟೆದರೆ ಕುತ್ತಿಗೆ ಸುಲಭವಾಗಿ ಕತ್ತರಿಸುತ್ತದೆ. ಇಂಥ ಒಂದು ಗಂಡಗತ್ತರಿ ಲಕ್ಷ್ಮೇಶ್ವರದ ಸಿಂಬಯ್ಯನ ಮಠದಲ್ಲಿ ಇದ್ದು ದಿನಂಪ್ರತಿ ಪೂಜೆಗೊಳ್ಳುತ್ತದೆ.

೮. ಖಡ್ಗದಿಂದ ರುಂಡ ಹಾರಿಸಿಕೊಂಡನೆಂದು ಅಬ್ಬಲೂರು ಶಾಸನ ಹೇಳುತ್ತದೆ.

ಗದ್ದುಗೆಯನು ಬಿಟ್ಟೆದ್ದನು ರಾಮಯ್ಯ | ಮುದ್ದು ಬ್ರಹ್ಮೇಶ್ವರನ ಬಳಿಗೆ |
ಇದ್ದಂತೆ ಇರೆ ಮನಶುದ್ಧದಿ ತಲೆಯು ಪ್ರ | ಸಿದ್ಧಿಗೆ ತೆಗೆದು ಬೆಳಗಿದ ||

ಎಡಬಲದಲಿ ಕೈವಾರಿಪ ಬಿಡ್ನದ | ಕಡುಗಲಿಗಳು ಏಳ್ನೂರು ||
ಘುಡುಘುಡಿಸುವ ವೀರಶೈವರು ಮುನ್ನೂರು | ಒಡನೆ ರಾಮನ ಸುತ್ತ ಮುಸುಕೆ ||

ರಾಮಯ್ಯನ ಮುಂಡ, ಅರಿದ ರುಂಡವನ್ನು ಎತ್ತಿಕೊಂಡು ನಂದಿ ವಿಗ್ರಹದೆಡೆಗೆ ಎದ್ದು ಬಂದಿತು. ನಂದಿಗೆ ನಮಸ್ಕರಿಸಿ, ರುಂಡವನ್ನು ಪಾದಕ್ಕೆ ಅರ್ಪಿಸಿ, ಅದನ್ನು ರಕ್ಷಿಸಲು ಬಿನ್ನವಿಸಿಕೊಂಡಿತು.

× × × ×

ಜೈನರ ಎದೆ ನಡುಗಿತು. ಅವರು ಹೇಳಿದ ಏಳು ಶೈವ ತೀರ್ಥಗಳ ಸಂದರ್ಶನಕ್ಕೆ ಶೈವರು ಸಜ್ಜಾದರು. ವೀರಘೋಷಣೆಯೊಂದಿಗೆ ಹೆಜ್ಜೆ ಹಾಕಿದರು.

ಚಿತ್ತಜವೈರಿಯ ಭಕ್ತನ ತಲೆಯನು | ಎತ್ತಿದರುಘೇಯುಘೇಯೆನುತ |
ಎತ್ತಿದ ಸ್ವಯಂ ಬ್ರಹ್ಮೇಶಗಾರುತಿ | ಹೊತ್ತು ಮಸಕದಿ ನಡೆದರು ||

ಪಟ್ಟೆಚಲ್ಲಣ ಬಿಗಿದುಟ್ಟು ದಟ್ಟಿಯ ಝಲ್ಲಿ | ಕಟ್ಟಿದ ಸುರಗಿ ಬಲ್ಲಂಬು |
ದಿಟ್ಟತನದಿ ಪೊರಮಟ್ಟು ಬಾಗಿಲದಾಂಟಿ | ಬಟ್ಟೆಯುದೆಗೆದರರ್ಥಿಯುಲಿ ||

ನಡೆದರು ಪುಲಿಗೆರೆ ಮೃಡಸೋಮನಾಥನ | ಅಡಿಗೆರಗಿದರಾರತಿಯು |
ಒಡೆಯ ಸೋಮೇಶನೆ ಬಿಡದೆ ರಾಮನ ತಲೆ | ಗಡನೆ ಪಾಲಿಪುದಯ್ಯ ದೇವ ||

ಅಣ್ಣಿಗೇರಿಗೆ ಬಂದು ಮಿಂದು ಸಂತೋಷದಿ | ಜಿಹ್ವನ ತಲೆಯ ಆರತಿಯ |
ಕಣ್ಣತ್ರಿ ಪಂಚಮುಖದ ಅಮೃತೇಶನ | ಪುಣ್ಯಪಾವಕೆ ಬೆಳಗಿದರು ||

ಕಪ್ಪಡಿ ಸಂಗಮನಾಥನಲ್ಲಿಗೆ ಬಂದು | ತಪ್ಪದೆ ರಾಮನ ಶಿರವ |
ಒಪ್ಪಗೊಂಬುದುಯೆಂದು ಪೊನ್ನಿತಂದೆಗಳಾಗ | ಗಪ್ಪಗಾರತಿಯನೆತ್ತಿದರು ||

ಕೆಂಬಾವಿಗೈದು ಸ್ವಯಂಭೂ ಭೋಗೇಶಗೆ | ಇಂಬಾಗಿ ಶಿರವ ಆರತಿಯ |
ಶಂಭೋ ಕಾಯನುತೆತ್ತಿ ಪೊನ್ನಿತಂದೆಗಳವ | ಲಂಬಿಸಿ ಸ್ತುತಿಯ ಮಾಡಿದರು ||

ಸೊನ್ನಲಪುರಕೈದು ಸಿದ್ಧರಾಮನ ಮುಂದೆ | ಪೊನ್ನಿತಂದೆಗಳು ಮಸ್ತಕವ |
ನನ್ನಿಯಿಂದಲಿ ಪಿಡಿದೆತ್ತಿ ರಾಮನಥಲ | ನಿನ್ನದೆನ್ನುತ ಬೆಳಗಿದರು ||

ಅಪ್ರಂವದ ನಾಗನಾಥನಲ್ಲಿಗೆ ಬಂದು | ಕಾವುದು ರಾಮನ ಶಿರವ |
ಈವುದು ನಿನ್ನಯ ಕರುಣಾಮೃತವೆಂದು | ಭಾವಿಸೆತ್ತಿದರು ಆರತಿಯ ||

ಹಂಪೆಯ ವಿರುಪಾಕ್ಷನಲ್ಲಿಗೆ ಬಂದು | ಸೊಂಪಾಗಿ ಆರುತಿ ಬೆಳಗಿ |
ನೋಂಪಿ ಸಂಪೂರ್ಣವಾಯಿತು ಯಿಲ್ಲಿಗೆಯೆಂದು | ಇಂಪಿನಿಂದಲಿ ಪ್ರಾರ್ಥಿಸಿದರು ||

ಹೀಗೆ ಸಪ್ತಮ ಕ್ಷೇತ್ರ ಹಂಪೆಗೆ ಬಂದು, ತುಂಗಭದ್ರೆಯನ್ನು ದಾಟಿ, ಅಂತರವಳ್ಳಿಯಲ್ಲಿದ್ದ ಪಂಚಬ್ರಹ್ಮಮತದ ಚಿಕ್ಕೇಶಯತಿಯನ್ನು ಕಂಡರು.[೯]

ಸುಲಿಪಲ್ಲವೊಳಗಾವಿ ಉಪವಸ್ತ್ರ ರುದ್ರಾಕ್ಷಿ | ಗಳ ಹಾರ ನೊಸಲೊಳ್ ತ್ರಿಪುಂಡ್ರ |
ಪೊಳೆವ ಕುಂಡಲ ಶಿಖಿಸೂತ್ರ ಕಮಂಡಲ | ಗಳಲಿ ಚಿಕ್ಕೇಶ್ವರನೆಸೆವ ||

ಈ ಯತಿವರನಿಗೆ ವಂದಿಸಿ, ಇಂದು ಕೊನೆಯ ದಿನ, ಮುಳುಗುವ ಸೂರ್ಯನನ್ನು ತಡೆಹಿಡಿದು ನೀನು ನಮ್ಮನ್ನು ಗೆಲಿಸಬೇಕೆಂದು ಬೇಡಿಕೊಂಡರು. ಚಿಕ್ಕೇಶ ಸೂರ್ಯನನ್ನು ಕರೆದ. ಮೂರು ಜಾವ ತಡಮಾಡಿ ಮುಳುಗಲು ಆಜ್ಞೆ ನೀಡಿದ.[೧೦] ಆಗ

ಭಾಪುರೆ ಮೇಘವಾಹನ ಚಕ್ರವರ್ತಿಯೆ | ಭಾಪುರೆ ಶೈವೋದ್ಧಾರಕನೇ |
ಭಾಪುರೆ ರಾಮನ ತಲೆಕಾಯ್ದ ಚಿಕ್ಕೇಶ | ಭಾಪುರೆಂದನು ಪೊನ್ನಿತಂದೆ ||
ಅಂತಾಪ ಸೂರ‍್ಯನ ತ್ರಿಜಾವಕ್ಕೈದಿಸಿ | ಪಂಥ ಚಿಕ್ಕೇಶ್ವರಗುರುವೆ |
ಅಂತರವಳ್ಳಿಯ ಪುರಪತಿ ಶೈವರ | ಸಂತಸದಿ ತಲೆ ನೀ ಕಾಯ್ದೆ ||

ಎಂದು ಅಗ್ಗವಣಿ ಹೊನ್ನಯ್ಯ ಮತ್ತು ನೆರೆದ ಜನಸಮೂಹ ಕೀರ್ತಿಸಿತು. ಚಿಕ್ಕೇಶ ಪಲ್ಲಕ್ಕಿ ಹತ್ತಿ ರಾಮಯ್ಯನ ರುಂಡದೊಂದಿಗೆ ಅಬ್ಬಲೂರಿಗೆ ಬಂದನು. ಜನಕೋಟಿ ಘೋರ್ಗರೆಯುತ್ತಿತ್ತು. ಹೊನ್ನಿತಂದೆ ಚಿಕ್ಕೇಶನನ್ನು ಸ್ತುತಿಸಿ, ಜೈನರನ್ನು ಮುಂದೆ ಕರೆದು, ಮುಂಡದ ಮೇಲೆ ಇಡುವಷ್ಟರಲ್ಲಿ ರುಂಡ ಹತ್ತಿಕೊಂಡಿತು. ಏಕಾಂತರಾಮಯ್ಯ ಹೊನ್ನಿತಂದೆಗೆ ವಂದಿಸಿದ. ಚಿಕ್ಕೇಶನ ಮಹತಿಯನ್ನು ಕೇಳಿ, ಅವರಿಗೂ ಭಕ್ತಿಪ್ರಣಾಮ ಸಲ್ಲಿಸಿದ. ಜನತೆ ಚಿಕ್ಕೇಶನನ್ನು 'ಮೂರುಜಾವಿದೇವ' ಎಂದು ಕೀರ್ತಿಸಿದರು.

× × × ×

ಚಿಕ್ಕೇಶ್ವರ, ಹೊನ್ನಯ್ಯ, ರಾಮಯ್ಯಗಳು ಪತ್ರದಂತೆ ನಡೆದುಕೊಳ್ಳಬೇಕೆಂದು ಜೈನರನ್ನು ಕರೆಸಿದರು. ಆಡಿದ ಮಾತನ್ನು ಮಾಡಿತೋರಿಸಿದ ನಿನ್ನ ಬಗೆ ಹೊಸತು ಎಂದು ಮಾತ್ರ ನುಡಿದು, ಜೈನರು ತಮ್ಮ ಮನೆಗಳಿಗೆ ಹೊರಟರು. ಆಗ ಶಿವನು, ಮನುಜವೇಷ ತಾಳಿ ಎದುರು ಬಂದು, ಜೈನ ಗುರುವಿನ ಮೂಗು

---

೯. ಚಿಕ್ಕೇಶನ ಪ್ರಸ್ತಾಪ ಅಬ್ಬಲೂರಶಾಸನ, ಬಸವಪುರಾಣಾದಿ ಕಾವ್ಯಗಳಲ್ಲಿ ಕಂಡು ಬರುವದಿಲ್ಲ. ಅಂತರವಳ್ಳಿಯಲ್ಲಿ ಈತನ ವಿಗ್ರಹವಿದೆ. ಚಿನ್ನಮುಳಗುಂದದಲ್ಲಿಯೂ ಇರುವುದಾಗಿ ತಿಳಿದುಬಂದಿದೆ.

೧೦. " ....ಜೈ |
ನರು ನೋಡೆ ಮೇಲಕಡರಿಸಿ ರವಿಯ ರಾಮಯನ |
ಶಿರವನೊಲವಿಂ ಪಡೆದ ಮೂರು ಜಾವದ ದೇವರ್ ||"
ಎಂದು ವೀರಶೈವಾಮೃತ ಪುರಾಣವೂ (೮-೪.೩೧) ಹೇಳುತ್ತದೆ.

ಕತ್ತರಿಸಿದ. ಕೋಪಗೊಂಡ ಜೈನರು ಖಡ್ಗ ಹಿರಿದರು. ಶಿವ ಮೂಲ ರೂಪ ಧರಿಸಿ ಗಿರಿಜೆ, ಷಣ್ಮುಖ, ವೀರಭದ್ರ, ವಿನಾಯಕರೊಂದಿಗೆ ಜಿನಾಲಯದಲ್ಲಿ ಪ್ರಕಟವಾದನು. ಜಿನ ವಿಗ್ರಹಗಳನ್ನು, ಜೈನಗುರುಗಳನ್ನು, ಗುಡ್ಡರನ್ನು ಎಳೆದೆಳೆದು ರಾಮಯ್ಯ ಮತ್ತು ಶೈವರು ಕೊಂದರು.

ಬಟ್ಟೆಯೊಳಗೆಲ್ಲ ಹರಿವ ರಕ್ತದ ಧಾರೆ| ಅಟ್ಟೆಮುಂಡವು ತೇಲಿ ಮುಳುಗಿ |
ಕಟ್ಟಳಿಲ್ಲದೆ ಪ್ರಾಣಗಳ ಕಂಡು ಶ್ರವಣರು | ಘಟ್ಟದ ಕೆಳಗೆ ಓಡಿದರು ||

ಮಿಕ್ಕವರು ಖಡ್ಗ ಬಿಸುಟು ತಮ್ಮ ಸತಿಸುತರೊಂದಿಗೆ ಶರಣು ಹೊಕ್ಕರು. ರಾಮ ಅವರನ್ನು ಕ್ಷಮಿಸಿದ. ಲಿಂಗ ದೀಕ್ಷೆ ದಯಪಾಲಿಸಿದ. ಆಗ ಶೈವರು ಮತ್ತು ಬೇಡರು ರಾಮನ ಸನ್ನಿಧಿಗೆ ಬಂದು

ಹಿಡಿತಂದು ಕೊಡುವೆವು ಶಂಕಪಾಲನ ಬೇಗ | ಮಡದಿ ಮಕ್ಕಳ ಪುರೋಹಿತರ |
ಗಡಣ ಸಹಿತ ದಾಸಿ ಭೃತ್ಯರ ರಾಮ ನಿ | ನ್ನಡಿಗೊಪ್ಪಿಸುವೆವೆಂದು ನುಡಿಯೆ ||

ರಾಮ ಹಾಗೆ ಮಾಡಲು ಆಜ್ಞೆ ನೀಡಿದ. ಕಾಲಾಳುಗಳು ಜೈನಮತೀಯನಾದ ಅಬ್ಬಲೂರಿನ ಅರಸು ಶಂಕಪಾಲನಲ್ಲಿಗೆ ಖಡ್ಗ ಹಿರಿದುಹೋದರು.[೧೧] ಶಂಕಪಾಲ ಶರಣು ಬಂದು, ಕುಟುಂಬ ಸಹಿತ ಶಿವದೀಕ್ಷೆ ವಹಿಸಿದ. ಅಬ್ಬಲೂರಿನ ಈ ಎಲ್ಲ ಘಟನೆಗಳನ್ನು ಜೈನನಾದ ಬಿಜ್ಜಳನಿಗೆ ಬರೆದು ತಿಳಿಸಿದ.[೧೨]

× × × ×

ಬಿಜ್ಜಳನೊಂದಿಗೆ ಬಸವ, ಬಸವನೊಂದಿಗೆ ಕಿನ್ನರಿ ಬ್ರಹ್ಮಯ್ಯ, ಗಾಣಿಗರ ಕನ್ನಪ್ಪ, ಚನ್ನಬಸವ, ಕಾಮಿದೇವ, ಮಾದಿಗರ ಹರಳಯ್ಯ, ಮಡಿವಳ ಮಾಚಯ್ಯ, ಕನ್ನದ ಮಾರಿ ತಂದೆ, ಸುರಗಿಯ ಚೌಡಯ್ಯ, ಕೂಗಿನ ಮಾರಿತಂದೆ, ಸಿರಿಯಾಳ, ವೀರಸಂಗಯ್ಯ, ನಾಗಿದೇವಯ್ಯ, ಕಕ್ಕಯ್ಯಗಳು ಅಬ್ಬಲೂರಿಗೆ ಬಂದರು.[೧೩] ನಡೆದ ಸಂಗತಿಯನ್ನೆಲ್ಲ ಶಂಕಪಾಲನಿಂದ ಅರಿತು, ಜೈನನಾದ ಬಿಜ್ಜಳನು

---

೧೧. ಅಬ್ಬಲೂರು ಶಾಸನದಲ್ಲಿ ಶಂಕಪಾಲಕ್ಕೆ ಬದಲು ಸಂಕಗೌಡ ಎಂಬ ಹೆಸರು ಬರುತ್ತದೆ.

೧೨. ರಾಮಯ್ಯನಿಂದ ಹಾನಿಗೊಳಗಾದ ಜೈನರು ಬಿಜ್ಜಳನಿಗೆ ದೂರು ಕೊಟ್ಟರು, ಅಬ್ಬಲೂರು ಶಾಸನದಲ್ಲಿ.

೧೩. ಅಬ್ಬಲೂರು ಶಾಸನದಲ್ಲಿ ಈ ಶರಣರು ಬಂದ ಪ್ರಸ್ತಾಪವಿಲ್ಲ. ಬಸವ ಪುರಾಣ ಮತ್ತು ಆ ಸಂಪ್ರದಾಯದ ಕೃತಿಗಳು ಅಬ್ಬಲೂರಲ್ಲಿ ಈ ಮೊದಲು ಜೈನರನ್ನು ಜಯಿಸಿದ (ವಿವರ ಹೇಳುವುದಿಲ್ಲ) ಏಕಾಂತರಾಮಯ್ಯನ ಘಟನೆ, ಮತ್ತೆ ಬಸವ ಬಿಜ್ಜಳರೆದುರು ಕಲ್ಯಾಣದಲ್ಲಿ ನಡೆಯಿತೆಂದು ಹೇಳುತ್ತವೆ.

ಅಂತರವಳ್ಳಿ ಆಲದಕಟ್ಟಿ ಹಲಗೇರಿ | ಪಂತೀಲಿ ಸುಂಕಾಪುರದಾ |
ಅಂತ್ಯವಲ್ಲಿರೊ ಗ್ರಾಮ ಮಾಗೋಡ ನಿಟ್ಟೂರ| ಯಿಂತು ಕೊಟ್ಟನು ಚಿಕ್ಕೇಶ್ವರಗೆ ||
ಧೂಪದಳ್ಳೆಬ್ಬಲೂರು ಭೋಗಾವಿಯು | ದೀಪದಹಳ್ಳಿ ನೂಲ್ಗೇರಿ |
ವ್ಯಾಪಿ ಸುತ್ತಾಗೋಟಿಯನಿತ್ತ ರಾಮಗೆ | ಭೂಪ ಬಿಜ್ಜಳನು ಭಕ್ತಿಯಲಿ ||[೧೪]

ಹೀಗೆ ದತ್ತಿ ನೀಡಿ, ಏಕಾಂತ ರಾಮಯ್ಯ ಮತ್ತು ಚಿಕ್ಕೇಶ್ವರರಿಗೆ ವಂದಿಸಿ, ಬಿಜ್ಜಳನು ಕಲ್ಯಾಣಕ್ಕೆ ಹೋದನು.[೧೫] ಆಗ

ಮೂರ್ತಿ ಚಿಕ್ಕೇಶಗೆ ಬಸವೇಶ ಭಕ್ತಿಯಲಿ | ಕರ್ತು ಆರಾಧ್ಯತ್ವವಿತ್ತು |
ಪ್ರಾರ್ಥಿಸಿ ಪಂಡಿತಾರ್ಯರುಯೆಂದು ಪೆಸರಿಟ್ಟು | ಸ್ಮಾರ್ತ ಪ್ರಮಥರ ಮುಂದೆ ನಡೆದ ||
ಪ್ರಥಮ ಯುಗದಿ ರೇವಣಸಿದ್ಧಚಾರ್ಯ | ದ್ವಿತೀಯ ಯುಗದಿ ಮರುಳಸಿದ್ಧ |
ತೃತೀಯದಿ ಏಕೋರಾಮತಂದ್ಯಾಚಾರ್ಯ | ಚತುರ್ಯುಗದಲಿ ಚಿಕ್ಕೇಶ್ವರನು ||

ಎಂದು ಬಸವಣ್ಣ ನಿರ್ಣಯಿಸಿ ಹೇಳಿದ. ಶಂಕಪಾಲನು 'ಸೋಮಯ್ಯ' ಎಂಬ ಹೆಸರು ಧರಿಸಿದ. ವೇಷ ಮರೆಯಿಸಿಕೊಂಡು ಬಂದ ಶಿವ, ನಿಜವೇಷ ತೋರಿಸಿ ಪೊನ್ನಿತಂದೆ, ರಾಮಯ್ಯ ಮತ್ತು ಪಂಡಿತಾರಾಧ್ಯರನ್ನು ಕೈಲಾಸಕ್ಕೆ ಕರೆದೊಯ್ದ. ಇತ್ತ ಬಸವಾದಿ ಪ್ರಮಥರು ಕಲ್ಯಾಣಕ್ಕೆ ಮರಳಿದರು.

★ ಎಂ. ಎಂ. ಕಲಬುರ್ಗಿ

---

೧೪. ಏಕಾಂತರಾಮಯ್ಯನಿಗೆ ಬಿಜ್ಜಳನು ಗೋಗಾವೆ, ತ್ರಿಭುವನಮಲ್ಲ ಸೋಮೇಶ್ವರನು ಅಬ್ಬಲೂರು, ಕದಂಬಕಾಮರಸನು ಮಲ್ಲವಳ್ಳಿ ಎಂಬ ಹಳ್ಳಿಗಳನ್ನು ದಾನವಾಗಿ ಕೊಟ್ಟ ರೆಂದು ಅಬ್ಬಲೂರು ಶಾಸನ ಹೇಳುತ್ತದೆ. ಭೋಗಾವಿಯಲ್ಲಿ ಏಕಾಂತ ರಾಮಯ್ಯನ ಶಾಸನವಿದ್ದುದಾಗಿ ತಿಳಿದುಬಂದಿದೆ.

೧೫. ಇಲ್ಲಿಂದ ಮುಂದಿನ ವಿಷಯ ಬೇರೆ ಯಾವ ಗ್ರಂಥ ಮತ್ತು ಶಾಸನಗಳಲ್ಲಿಯೂ ಕಂಡು ಬರುವದಿಲ್ಲ.

ಶಾಸನ ಪದಸೂಚಿ

(ದಕ್ಷಿಣ ಭಾರತದ ಶಾಸನಗಳು, ಸಂಪುಟ ೧೦, ಭಾಗ ೧)

(ಕಳೆದ ಸಂಚಿಕೆಯಿಂದ)

ಲ

ಲಕಣಷ್ಟೈಶ ಪು. 371 : 50
ಲಕ್ಕಣದೇವ ಪು. 220 : 90
ಲಕ್ಕಾದೇವಿ ಸ್ತ್ರೀ. 273 : 56, 57, 66
ಲಕುಮೀಶ್ವರದೇವ ಪು. 163 : 37
ಲಕ್ಷ್ಮಣೇಶ್ವರದೇವ ದೇ. 273 : 68–69
ಲಕ್ಷ್ಮದಂಡಾಧಿನಾಥ ಅಧಿ. 213 : 62
ಲಕ್ಷ್ಮರಾಜ ಅಧಿ. 213 : 62
ಲಕ್ಷ್ಮರಾಜದಂಡಾಧೀಶ ಅಧಿ. 213 : 59
ಲಕ್ಷ್ಮಾದೇವಿ ಸ್ತ್ರೀ. 273 : 20, 58,60,85
ಲಕ್ಷ್ಮಿದೇವ ಪು. 277 : 9-10
ಲಕ್ಷ್ಮಿದೇವಿ ರಾ. 329 : 17
ಲಕ್ಷ್ಮೀ ದೇ. 330 : 54
ಲಕ್ಷ್ಮೀದೇವಿ 158 : 29
ಲಕ್ಷ್ಮೀದೇವಿ ದೇ. 220 : 82, 94
ಲಕ್ಷ್ಮೀಧರಭಟ್ಟ ಪು. 250 : 29; 251 : 60
ಲಕ್ಷ್ಮೀನರಸಿಂಹಭಟ್ಟ ಪು. 363 : 69
ಲಕ್ಷ್ಮೀನಾರಾಯಣದೇವ ದೇ. 267 : 2–3, 61; 295 : 28; 343 : 50
ಲಕುಮರಸ ಅಧಿ. 343 : 9
ಲಖಮಿದೇವ ಅಧಿ. 376 : 14-15
ಲಖುಮಿದೇವ ನಾಯಕ ಅಧಿ. 376 : 6
ಲಖ್ಬೆಯನಾಯಕ ಅಧಿ. 253 : 29-30
ಲತ್ತಲೂರಪುರ ಗ್ರಾ. 59 : 2–3
ಲಂಜ್ಯದೊನ ಗ್ರಾ. 204 : 50
ಲಾಳ ದೇಶ 95 : 21; 118 : 16; 205 : 6; 296 : 14; 330 : 15
ಲಾಳಬ್ಬೆ ಸ್ತ್ರೀ 281 : 4
ಲಿಂಗ ದೇ. 94 : 8; 107 : 16
ಲಿಂಗದೇವರಾಣೆಯ ಪು. 383 : 2, 3
ಲಿಂಗಯ್ಯ ಅಧಿ. 195 : 41
ಲುಕ್ಕಿಗುಂಡಿ ಗ್ರಾ. 158 : 72
ಲೆಂಕ... ಪು. 106 : 14
ಲೊಕ್ಕಿಯೂರು ಗ್ರಾ. 206 : 23–24
ಲೊಕುಂಡಿ ಗ್ರಾ. 347 : 32
ಲೋಕರಸ ಮಾ. 253 : 12–13
ಲೋಕರಸ ಪು. 167 : 25, 250 : 57
ಲೋಕಾಭರಣ ಪು. 357 : 11; 389 : 10
ಲೋಕಾಭರಣ ಗುರುದೇವ ಪು. 323 : 5
ಲೋಕಾಭರಣದೇವ ಪು. 325 : 7
ಲೋಕಾಭರಣಮುನಿ ಪು. 391 : 8
ಲೋಕಾಭರಣಮುನೀಂದ್ರ ಪು. 320 : 9; 390 : 9
ಲೋಕೆಯಷಣಂಗಿ ಪು. 158 : 70
ಲೋಕೆಯ್ಯಗಾವುಣ್ಡ ಗಾ. 65 : 37
ಲೋಗೇಸ್ವರ ದೇ. 80 : 14; 81 : 18, 29
ಲೋಗೇಶ್ವರ ದೇ. 80 : 26
ಲೋಪಾದಪಾರ್ನ್ವ ಪು. 18 : 30

ವ

ವಖಾಣಿಜೀಯ ಪು 82 : 35–36
ವಖ್ಬಾಣಜೀಯ ಪು. 82 : 8
ವಚ್ಚಯ್ಯ ಪು. 139 : 41
ವಚೋದೇವಿ 220 : 81–82
ವಜ್ರೇಶ್ವರದೇವ ದೇ. 343 : 52
ವಡುಗವಮಿ 12000 ಪ್ರಾ. 5 : 5
ವತ್ಸ ಋಷಿ 158 : 36, 37
ವತ್ಸಚಮೂಪ ಅಧಿ. 251 : 23,24

ವತ್ಸಚಮೂಪ ಪು. 260 : 31
ವತ್ಸದಣ್ಡಾಧಿಪ ಅಧಿ. 260 : 2
ವತ್ಸಣದದ್ದೇಶ್ವರ ಅಧಿ. 251 : 25
ವತ್ಸರಸ ಅಧಿ. 251 : 39,40
ವತ್ಸರಾಜ ಅಧಿ. 277 : 25,27
ವರ್ಧ್ದಮಾನ ನಾಯಕ ಅಧಿ. 250 : 42
ವನಗಜ ಸೂಜಿಕಾಱ ಬಿ. 287 : 8
ವನಿ ಜನಾಧಾರ ಬಿ. 128 : 8-9
129 : 4
ವನ್ದಿಬ್ರಿನ್ದ ಸನ್ತಪ್ಪರ್ಣ ಬಿ. 133 : 8-9
ವಯಂಚಯು ಷ. 22 : 4
ವಯ್ದುಮ್ಬ ವಂ. 15 : 5
ವರರಾಜನಾಯಕ ಅಧಿ. 275 : 20–21
ವರುಣಶಿವಭಟಾರ ವಾ. 24 : 22-23, 37–38
ವರೇಸ್ವರ ದೇವ ಪು. 186 : 7
ವರೇಸ್ವರ ಪಂಡಿತದೇವ ಪು. 188 : 25
ವರೇಸ್ವರ ಪಣ್ಡಿತದೇವ ಪು. 186 : 34–35
ವಲಗಲಕುಂಟಿಯಹಳ್ಳಿ ಗ್ರಾ. 358 : 11
ವಲ್ಲೂರಪುರ ಗ್ರಾ. 402 : 9
ವಲ್ಲೂರು ಗ್ರಾ. 283 : 3
ವಶಿಷ್ಠ 267 : 56
ವಸನ್ತಕಿ ದೇ. 329 : 11
ವಸುದೇವ ಪು. 376 : 5
ವಂಕಣಚೋೞಮಹಾರಾಜ ಮಾ. 231 : 6–7
ವಂಚಿದುಗ್ಗಯ್ಯ ಪು 87 : 23
ವಂಗದೇಶ 95 : 21; 118 : 16 ; 197 : 9; 267 : 7 : 269 : 10
ವಂದಿ ಜನಾಧಾರ ಬಿ. 126 : 7
ವಂದಿಬ್ರಿಂದ ಸಂತಪ್ಪರ್ಣ ಬಿ. 132 : 9
ವಂದಿಬ್ರಿಂದಚಿಂತಾಮಣಿ ಬಿ. 134 : 24–25
ವಾಕ್ಯದೇವ ನೊ. ಪ. ನಂ. 41 : 9
ವಾಗ್ದೇವಿ ದೇ. 220 : 91
ವಾಜಿ ವಂ. 197 : 14,17,27 ; 215 : 28
ವಾಣರಸರ್ ಅ. 4 : 6
ವಾಣರಾಯ ದಿಶಾಪಟ್ಟ ಬಿ. 287 : 10
ವಾಣಿ 267 : 56
ವಾಣೀಗ್ರಿಹ 197 : 35-36
ವಾದಿದೇವ ಪಣ್ಡಿತದೇವ ಪು. 165 : 7
ವಾಮುಣ ಪು. 220 : 90
ವಾಮುಣ್ಣ ಪು. 165 : 50
ವಾಮುದೇವ ಪು. 235 : 27
ವಾಮುದೇವಪಂಡಿತ ಪು. 226 : 93 ; 248 : 22–23
ವಾಮುಯ ಪು. 346 : 31
ವಾಮುರಸ ಪು. 298 : 35; 343 : 9, 10
ವಾಮುರಾಸಿದೇವ ಪು. 151 : 3
ವಾಮುಶಕ್ತಿಪಣ್ಡಿತದೇವ ಪು. 128 : 51,52
ವಾಮುಸಕ್ತಿಪಣ್ಡಿತದೇವ ಪು. 186 : 5
ವಾಮೇಶ್ವರದೇವ ದೇ. 343 : 50
ವಾಯುಸುತ 220 : 136
ವಾರಣಾಸಿಪುರ ಗ್ರಾ. 317 : 16
ವಾಲಂಬೂರ ಗ್ರಾ. 248 : 19
ವಾಲ್ಮೀಕಿ ಮುನಿ 371 : 18
ವಾಲ್ಲೂ ಚೊಟ್ಟಯರಣೆ ಪು: 14 : 10
ವಾವಣಯ್ಯ ಪು. 115 : 63
158 : 14
ವಾಸಂತಿಕೆ ದೇ. 343 : 2–3
ವಾಸಿಯಣ್ಣ ಪು. 165 : 67
ವಾಸುದೇವ ಪು. 252 : 32; 346 : 23; 371 : 58
ವಾಸುದೇವ ಅಧಿ. 380 : 19
ವಾಸುದೇವಕ್ರವಿಸ್ತ ಪು. 162 : 10
ವಾಸುದೇವಘ್ನಸಾಸ ಪು. 162 : 11
ವಾಸುದೇವ ದಸಗ್ರಂಥಿ ಪು. 250 :
ಪಾಸುದೇವನಾಯ್ಕು ಪು. 345 : 2
ವಾಸುದೇವಭಟ್ಟ ಪು. 233 : 81-82
ವಾಸುದೇವ ಶಣಂಗಿ ಪು. 329 : 62
ವಿಕ್ರಮ ಅ 153 : 13, 14; 160 : 10; 205 : 7, 9
ವಿಕ್ರಮ ಮಾ. 276 : 34
ವಿಕ್ರಮಗಾಲ 322 : 30
ವಿಕ್ರಮರಾವು ಬಿ. 30 : 24 : 25

ವಿಕ್ರಮವರ್ಷ 158:48; 204:21
ವಿಕ್ರಮಾಂಕ ಅ. 197:11; 205:6; 220:11-12
ವಿಕ್ರಮಾಂಕ ಮಾ. : 276; 20,23,36
ವಿಕ್ರಮಾಂಕಚಮೂಪ ಮಾ. 276:31-32
ವಿಕ್ರಮಚೋಳ ಅಧಿ. 300:4
ವಿಕ್ರಮದೇವ ಅ. 268:6–7
ವಿಕ್ರಮಾದಿತ್ಯ ಅ. 79:4; 161:23
ವಿಕ್ರಮಾದಿತ್ಯ ಅಧಿ. 47:6
ವಿಕ್ರಮಾದಿತ ಪು. 40:16; 130:11
ವಿಕ್ರಮಾದಿತ್ಯಕರ್ಣ್ಣ ಚೋ. ವಂ. 269:10–11
ವಿಕ್ರಮಾದಿತ್ಯದೇವ ಅ. 160:9,10,13; 389:3
ವಿಕ್ರಮಾದಿತ್ಯರಸ ಮಾ. 276:17,39
ವಿಕ್ರಮಾದಿತ್ಯರಸ ಪು. 258:18,34
ವಿಕ್ರಾನ್ತಕಣ್ಠೀರವ ಬಿ. 131:8; 132:8; 133–7
ವಿಕ್ರಾನ್ತ ತುಂಗ ಬಿ. 163:18,21
ವಿಕ್ಕಿ ಪು. 299:5
ವಿಕ್ಕಿಯಣ್ಣ ಅಧಿ. 299:3
ವಿಘ್ನೇಶ್ವರ ದೇ. 322:28
ವಿಘ್ನೇಶ್ವರ ಗೃಹ 249:66
ವಿಘ್ನೇಶ್ವರದೇವ ದೇ. 295:28
ವಿಜಯಪಾಂಡ್ಯದೇವ ಮಾ. 276:10
ವಿಜಯ ಪಾಂಡ್ಯರಸ ಮ. 389:5,9
ವಿಜಯಪಾಣ್ಡ್ಯದೇವ ಮಾ. 178:14, 16-17, 19-20; 182:1
ವಿಜಯರಾಜೇನ್ದ್ರ ಚೋಳದೇವ ಅ. 302:6–7;
ವಿಜಯಲಕ್ಷ್ಮೀಮುಖದರ್ಪಣ ಬಿ. 132:9-10
ವಿಜಯಲಕ್ಷ್ಮೀಮುಖದರ್ಪ್ಪಣ ಬಿ. 133:9
ವಿಜಯವಿಕ್ರಮ ಬಿ. 109:14
ವಿಜಯಶ್ರೀಕೇಳೀಸದನನಭಿನವಮದನ ಬಿ. 129:5-6
ವಿಜಯಸಮುದ್ರ ಗ್ರಾ. 329:23-24; 330:59
ವಿಜಯಹೆಮ್ಮಾಡಿ ಮಾ. 178:19
ವಿಜಯಾದಿತ್ಯ ಅ. 49:1
ವಿಜಯಾದಿತ್ಯಗಾವುಂಡ ಗಾ. 236:7
ವಿಜಯಾದಿತ್ಯದೇವ ಮಾ. 128:23
ವಿಜಯಾದಿತ್ಯ ಸತ್ಯಾಶ್ರಯ ಅ. 471:11
ವಿಜಯಿತ್ತ ಪು. 6:7
ವಿಜೆಯಾದಿತ್ಯಸತ್ಯಾಶ್ರಯ ಅ. 47:1–2
ವಿಟ್ಟಿ ಸೆಟ್ಟಿ ಪು. 249:65
ವಿತರಣವಿಕ್ರಮಾದಿತ್ಯ ಬಿ. 253:15
ವಿದಗ್ಧವಿಳಾಸಿನಿ ವಿಳೋಚನಚಕೋರಚಂದ್ರ ಬಿ. 132:7–8; 133:6–7
ವಿದಗ್ಧಗಣಿಕಾಜನ ಹೃದಯ ಸೂಜಿಕಾಟ ಬಿ. 226:68–69
ವಿದರ್ಭ ದೇಶ 95:21
ವಿದರ್ಭವನಿತಾವಿಧ್ವಂಸನ ಬಿ. 204:15–16
ವಿದ್ಯಾನಿಧಿಪಣ್ಡಿತ ಪು. 107:11
ವಿದ್ಯಾರಾಶಿಪಂಡಿತದೇವ ಪು. 251:50
ವಿನಯಚಂದ್ರದೇವ ಜೈ. ಗು. 387:20
ವಿನಯಾದಿತ್ಯ ಅ. 5:4; 329:14. 330:11; 333:16; 343:4.
ವಿನಾಯಕ ವಂ. 186:25
ವಿನಾಯಕದೇವ ದೇ. 249:85; 322:31; 334:12, 16
ವಿನಾಯಕನಿಳೆಯ 197:36
ವಿಪಕ್ಷ ಕುಳಕಾಳ ದಣ್ಡ ಬಿ. 126:8
ವಿಪಕ್ಷಕುಟಿಕಾಳದಣ್ಡ ಬಿ. 129:6
ವಿಪಕ್ಷಕುಟಿಕಾಐದಣ್ಡ ಬಿ. 128:10
ವಿಪ್ರನಾರಾಯಣ ಗ್ರಾ. 42:6
ವಿಭುಪಲ್ಲವ ಪು. 247:34, 36
ವಿದುಳಾದಿತ್ಯ ಜೈ. ಗು. 403:3
ವಿರುಪಯ ಅಧಿ. 347:25
ವಿರುಪಯ್ಯ ಪು. 333:41
ವಿರುಪಾಕ್ಷ ಪು. 333:35
ವಿರುಪಾಕ್ಷ ದೇ. 379:15

ವಿರುಪಾಕ್ಷದೇವ ದೇ. 324 : 9–10
ವಿರೂಪಾಕ್ಷ ದೇ. 128 : 2; 251 : 2
ವಿರೂಪಾಕ್ಷದೇವ ದೇ. 104 : 7; 253 : 42–43, 64, 89–90; 349 : 6
ವಿರುಪೆಯನಾಯಕ ಪು. 253 : 33–34
ವಿವೇಕವಿದ್ಯಾಧರ ಬಿ. 223 : 16
ವಿಶ್ವರೂಪಬ್ರಹ್ಮಚಾರಿ ಪು. 164 : 19; 166 : 13
ವಿಶ್ವಾಮಿತ್ರ ಮುನಿ. 165 : 13
ವಿಷ್ಣಯ್ಯ ಪು. 104 : 34, 44
ವಿಷುನಾಯಕ ಅಧಿ. 332 : 25
ವಿಷ್ಣು ಅ. 343–4
ವಿಷ್ಣು ದೇ. 28 : 32, 39, 7; 33 : 7; 158 : 29; 267 : 2; 291 : 12
ವಿಷ್ಣುಕರಬ್ರಹ್ಮಚಾರಿ ಪು. 326 : 90 327 : 6
ವಿಷ್ಣುಕರಬ್ರಹ್ಮಚಾರಿದೇವ ಪು. 326 : 94
ವಿಷ್ಣುಗೃಹ 249 : 64
ವಿಷ್ಣುಘೈಸ ಪು. 344 : 29
ವಿಷ್ಣುದೇವ ದೇ. 44 : 6; 69 : 3; 105 : 10
ವಿಷ್ಣುಭಟ್ಟ ಪು. 233 : 76, 79
ವಿಷ್ಣು ಭಟ್ಟೋಪಾಧ್ಯಾಯ ಪು. 250 : 34
ವಿಷ್ಣು ಭಾಟಾರ ಪು. 33 : 8
ವಿಷ್ಣುವರ್ಧನ ಮಹಾರಾಜ ಬಿ. 403 : 1
ವಿಷ್ಣುವರ್ಧನ ವೀರಬಲ್ಲಾಳದೇವ ಅ. 330 : 57–58
ವಿಷ್ಣುವರ್ಧನ ಮಾ. 220 : 16
ವಿಷ್ಣುವರ್ಧನ ಅ. 319 : 13–14; 329 : 18; 330 : 12, 13; 333 : 18; 360 : 15
ವಿಷ್ಣುವರ್ದ್ಧನದೇವ ಅ. 329 : 17
ವಿಷು ವರ್ದ್ಧನ ಮಹಾರಾಜಾಧಿರಾಜ-ವಿಜಯಾದಿತ್ಯ ಅ. 127 : 5
ವಿಷ್ಣುವರ್ದ್ಧನ ಮಹಾರಾಜ ವಿಜಯಾ-ದಿತ್ಯದೇವ ಮಾ. 128 : 12–13, 23
ವಿಷ್ಣುವರ್ದ್ಧನ ಮಹಾರಾಜಾಧಿರಾಜ-ವಿಜಯಾದಿತ್ಯದೇವ ಮಾ. 127 : 5
ವಿಷ್ಣುವರ್ದ್ಧನ ಮಹಾರಾಜಾ-ವಿಜಯಾದಿತ್ಯದೇವ ಮಾ. 126 : 9
ವಿಷ್ಣುವರ್ದ್ಧನ ವೀರಬಲ್ಲಾಳದೇವ ಅ. 329 : 6; 330 : 9; 333 : 15, 25
ವಿಷ್ಲುವರ್ದ್ಧನ ಅ. 319 : 17
ವಿಷ್ಣುವರ್ದ್ಧನ ಮಹಾರಾಜವಿಜಯಾದಿತ್ಯದೇವ ಮಾ. 129 : 8
ವಿಷ್ಣುಸೋಮ ಪು. 333 : 38
ವಿಸಮಯ್ಯದೇವಯ್ಯ ಪು. 28 : 5-6
ವಿಸ್ವಾಮಿತ್ರ ಮುನಿ 371 : 19
ವಿಂಧ್ಯಾದೇವಿ ದೇ. 163 : 29
ವೀರಕನಗಿರಿ ಗ್ರಾ. 126 : 23
ವೀರಕಲಿದೇವ ದೇ. 296: : 18
ವೀರಕವಿಯಾಳ್ವೆಂದದೇವ ಅ. 393 : 2–3
ವೀರಕುಲಸೇಖರದೇವ ಅ. 394 : 5
ವೀರಕೇಶವ ದೇ. 260 : 2
ವೀರಕೇಶವದೇವ ದೇ. 174 : 1, 4, 7· 192 : 41, 43
ವೀರಣಂದಿ ಸಿದ್ಧಾಂತ ಚಕ್ರವರ್ತಿದೇವ ಜೈ. ಗು. 278 : 17
ವೀರಣಂದಿ ಸಿದ್ಧಾನ್ತ ಜೈ. ಗು. 115 : 46
ವೀರಂಣನಮಯ್ಯ ಪು. 344 : 63–64
ವೀರನರಸಿಂಹಅನಿರುದ್ಧಭಟ್ಟ ಪು. 363 : 69–70
ವೀರನರಸಿಂಹ್ವದೇವ ಅ. 357 : 6–7
ವೀರನಾರಸಿಂಗದೇವ ಅ. 344 : 4–5; 350 : 2; 359 : 7
ವೀರನಾರಸಿಂಹದೇವ ಅ. 317 : 6,34; 338 : 10; 339 : 12–13; 341 : 2; 342 : 2; 343 : 46, 52, 71; 349 : 2; 351 : 1
ವೀರನಾರಾಯಣಪುರ–ತುಂಬುಳಪಟಣ ಗ್ರಾ. 348 : 18–19
ವೀರನೊಣಂಬ ಬಿ. 262 ; 13
ವೀರನೊಯ್ಯಾಧಿರಾಜ ಅ. 17 : 5

ವೀರನೊಳಂಬ ಇರುಂಗೋಳ-ಚೋಳಮಹಾರಾಜ ಮಾ. 230 : 13
ವೀರನೊಳಂಬ ಗಟ್ಟಿದೇವ ಮಾ. 114 : 8
ವೀರನೊಳಂಬಘಟ್ಟಿದೇವ ಮಾ. 121 (111) : 4
ವೀರನೊಳಂಬ ಪಲ್ಲವಪೆರ್ಮಾನಡಿ ಮಾ. 116 : 11-12
ವೀರನೊಳಂಬ ಪಲ್ಲವ ಪೆರ್ಮ್ಮಾನಡಿ ಮಾ. 121 : (111) : 4
ವೀರನೊಳಂಬ ಪಲ್ಲವ ಪೆರ್ಮ್ಮಾನಡಿದೇವ ಮಾ. 74 : 14-15
ವೀರಪಾಂಡ್ಯ ಮಾ. 267 : 12, 14, 16
ವೀರಪಾಂಡ್ಯ ಅಣುಕಪಲ್ಲವರಾಯ ಅಧಿ. 238 : 2-3
ವೀರಪಾಂಡ್ಯದೇವ ಮಾ. 238 : 2; 247 : 6; 261 : 9; 267 : 20; 293 : 17, 26
ವೀರಪಾಂಡ್ಯದೇವ (ಜಗದೇಕಮಲ್ಲ) ಅಧಿ. 257 : 12
ವೀರಪಾಂಡ್ಯದೇವಾಳ್ವೇಂದ್ರದೇವ ಅ. 395 : 4-5
ವೀರಪಾಂಡ್ಯನೃಪ ಮಾ. 217 : 14
ವೀರಪಾಣ್ಡ್ಯ ಮಾ. 251 : 13
ವೀರಪಾಣ್ಡ್ಯ ಕ್ಷಿತಿಪತಿ ಮಾ. 245 : 16-17
ವೀರಪಾಂಡ್ಯದೇವ (-ತ್ರಿಭುವನಮಲ್ಲ) ಮಾ. 293 : 10-11
ವೀರಪಾಣ್ಡ್ಯದೇವ (-ತ್ರಿಭುವನಮಲ್ಲ) ಮಾ. 178 : 6-7
ವೀರಸೋಮೇಶ್ವರದೇವ (ತ್ರಿಭುವನಮಲ್ಲ) ಅ. 278 : 7-8
ಮಲ್ಲಿದೇವ ಮಹಾರಾಜ (ತ್ರೈಲೋಕ್ಯಮಲ್ಲ) ಮಾ. 228 : 6
ನನ್ನಿನೊಳಂಬಪಲ್ಲವಪೆರ್ಮಾನಡಿದೇವ (ತ್ರೈಲೋಕ್ಯಮಲ್ಲ) ಅ. 44 : 3
ಪೆರ್ಮಾನಡಿದೇವ (ತ್ರೈಲೋಕ್ಯಮಲ್ಲನೊಳಂಬ-ಪಲ್ಲವ) ಮಾ. 109 : 9
ವೀರಸೋಮೇಶ್ವರದೇವ (ತ್ರೈಲೋಕ್ಯಮಲ್ಲ ಭುಜಬಳ) ಅ. 277 : 4-5
ಮಲ್ಲಿದೇವಮಹಾರಾಜ (ತ್ರೈಲೋಕ್ಯಮಲ್ಲ) ಮಾ. 227 : 7-9
ಪೆರ್ಮಾಡಿ ಜಯಸಿಂಗದೇವ (ತ್ರೈಲೋಕ್ಯಮಲ್ಲನೊಳಂಬಪಲ್ಲವ) ಮಾ. 132 : 12-13
ಪೆರ್ಮ್ಮಾಡಿಜಯಸಿಂಘದೇವ (ತ್ರೈಲೋಕ್ಯ-ಮಲ್ಲನೊಳಂಬಪಲ್ಲವ) ಮಾ. 132 : 11-12
ವೀರಪಾಣ್ಡ್ಯದೇವ ಮಾ. 245 : 30; 251 : 38-39
ವೀರಪಾಣ್ಡ್ಯದೇವ (ಜಗದೇಕಮಲ್ಲ) ಅಧಿ. 245 : 28; 247 : 41; 251 : 10; 255 : 8-9; 258 : 17-18
ವೀರಪಾಣ್ಡ್ಯದೇವರಸ ಮಾ. 245 : 12-13
ವೀರಪಾಂಣ್ಡ್ಯದೇವ (ಜಗದೇಕಮಲ್ಲ) ಅಧಿ. 242 : 8
ವೀರಪೆರ್ಮ್ಮಾಡಿರಾಯ ಅ. 267 : 6
ವೀರಬಲ್ಲಾಳ ಅ. 321 : 8; 334 : 2; 326 : 31; 329 : 19, 21; 330 : 15, 17, 22; 335 : 3
ವೀರಬಲ್ಲಾಳದೇವ ಅ. 319 : 32; 320 : 3; 323 : 1; 325 : 1; 326 : 60, 80; 327 : 16; 328 : 1; 332 : 11, 23; 336 : 9; 337 : 3; 353 : 5; 354 : 1-2; 355 : 4; 356 : 3; 357 : 8; 358 : 6; 359 : 8; 361 : 2
ವೀರಬಲ್ಲಾಳರಾಯ ಅ. 340 : 7
ವೀರಬಾಲಾಳದೇವ ಅ. 324 : 2
ವೀರಬೊಂಮರಸ ಮಾ. 377 : 83
ವೀರಮದಮರ್ದ್ದನ ಬಿ. 126 : 7
ವೀರಮಹಾದೇವ ಅ. 374 : 2
ವೀರಮಹಾದೇವರಾಯ ಅ. 373 : 7
ವೀರಮಹೇನ್ದ್ರ ಅ. 41 : 8-9
ವೀರಮಹೇನ್ದ್ರನೊಳಂಬಾಧಿರಾಜದೇವ ಅ. 39 : 8-9
ವೀರಮಹೇಶ್ವರ ಬಿ. 109 : 13; 122 : 15; 135 : 19; 163 : 27

ವೀರಮಹೇಶ್ವರ ಪಣ್ಡಿತ ಪು. 121(111):7
ವೀರಮಾರ್ತಣ್ಡ ಬಿ. 126 : 8; 127 : 3
ವೀರಮಾರ್ತ್ತಣ್ಡ ಬಿ. 128 : 10
ವೀರರಾಕ್ಷಸ ಹಿರಾಯ ಅಧಿ. 116 : 14-15
ವೀರರಾಮಚಂದ್ರ ಅ. 382 : 2
ವೀರರಾಮಚಂದ್ರದೇವ ಅ. 379 : 3; 381 : 1-2; 387 : 6
ವೀರರಾಮಚಂದ್ರರಾಯ ಅ. 378 : 2-3; 383 : 1; 386 : 1-2
ವೀರರಾಮನಾಥದೇವ ಅ. 347 : 1-2; 348 : 2
ವೀರಲಕ್ಷ್ಮೀಕಾಂತ ಬಿ. 381 : 3
ವೀರವಿಜಯೇಶ್ವರದೇವ ದೇ. 236 : 7
ವೀರಶ್ರೀಕಾನ್ತ ಬಿ. 135 : 19
ವೀರಶ್ರೀಕೇಳೀಕದನನಭಿನವಮದನ ಬಿ. 128 : 9-10
ವೀರಸತ್ತಿ ಪು. 16 : 1
ವೀಸ್ವರದಂಣ್ಣಾಯಕ ಅಧಿ. 358 : 8-9
ವುಚ್ಚಂಗಿ ಗ್ರಾ. 347 : 14, 15
ವುಚ್ಚಂಗಿ ಕೋಟೆ 245 : 22
ವುಜ್ಜಭಟ್ಟ ಅಧಿ. 223 : 22, 24
ವುಭಣಯಿತವಾಹಿದೇವರಾಣಿ ಪು. 379 : 6-7
ವುಳುವಟ್ಟು ಗ್ರಾ. 26 : 11
ವೃಕೋದರ ಕ್ಷಾವ್ಯ 163 : 25
ವೆಣ್ಣೆಯಭಟ್ಟ ಪು. 250 : 36-37
ವೆಣ್ಣೆಲದೇವಿ ಸ್ತ್ರೀ. 251 : 26
ವೆನ್ದುಱುಪೊಂನೆ ಗ್ರಾ. 41 : 11
ವೆಲಿಗಡು ಗ್ರಾ. 204 : 60
ವೆಂಕಣಭಟ್ಟ ಪು. 233 : 87
ವೆಂಗಿಮಂಡಳೇಶ್ವರ ನಯ್ಯನದಣ್ಣ ಬಿ. 129 : 7
ವೆಂತಮಣ್ಡಳೇಶ್ವರ ಬಿ. 126 : 9; 127 : 4; 128 : 12
ವೇಮುಲವಾಡ ಪೂಲುಕಱುಕೆ ಗ್ರಾ. 122 : 27-28
ವೈಜಣ್ಣ ಪು. 165 : 68
ವೈದುಂಬ ವಂ 131 : 16
ವೈದುಂಬರಾಭರಣ ಬಿ. 265 : 12
ವೈದುಂಬಾಭರಣ ಬಿ. 131 : 16
ವೈನತೇಯ 118 : 46, 53
ವೈಯ್ದುಂಬ ವಂ. 13 : 2; 14 : 3
ವೈರಿಕಾಳಾನಳ ಬಿ. 109 : 15
ವೈರಿಕ್ರಿತಾಂತ ಬಿ. 184 : 15; 224 : 15
ವೈರಿಕ್ರಿತಾನ್ತ ಬಿ. 235 : 13
ವೈರಿನಾರಾಯಣ ಬಿ. 101 : 9; 104 : 5
ವೈರಿಮದನಮಹೇಶ್ವರ ಬಿ. 157 : 23-24
ವೈರಿಮದನಿವಾರಣ ಬಿ. 135 : 20
ವೈರಿಮದಭಂಜನ ಬಿ. 163 : 28
ವೈರಿಮದಮರ್ದ್ದನ ಬಿ. 127 : 2; 128 : 9
ವೈರಿಸಂಹರಣ ಬಿ. 265 : 12
ವೈರಿಸಾಮಂತ ಸಂಹಾರ ಬಿ. 253 : 17-18
ವೈರಿಹ್ರಿತ್ಸಲ್ಲ ಬಿ. 217 : 28
ವೈರೀಭಕಂಠೀರವ ಬಿ. 293 : 9
ವೈಷ್ಣವಕುಳತಿಳಕ ಬಿ. 387 : 11
ವೈಸಕ ಗಾವುಣ್ಡ ಗಾ. 50 : 10
ವೊಡ್ಡಮದೇವ ಪು. 396 : 11-12
ವೊಡ್ಡಮ ಶ್ರೀದೇವ ಅಧಿ. 395 : 41
ವ್ಯಾಸಣಭಟ್ಟ ಪು. 231 : 13

(ಮುಂದುವರಿಯುವುದು)

★ ಎಸ್. ರಾಜಶೇಖರ

ಗ್ರಂಥಾವಲೋಕನ

ಬಹುರೂಪ : ಲೇಖಕರು : ಶಾಂತರಸ ರಾಯಚೂರ. ಪ್ರಕಾಶಕರು: ಸತ್ಯಸ್ನೇಹ ಪ್ರಕಾಶನ ರಾಯಚೂರ, ೧೯೭೦. ಕ್ರೌನ್ ಅಷ್ಟದಳಪುಟ XI+೧೫೬+VIII. ಬೆಲೆ ೪-೦೦.

ಹತ್ತು ಪ್ರಬಂಧಗಳನ್ನು ಸಂಕಲಿಸಿಕೊಂಡು ಮೈವೆತ್ತ 'ಬಹು ರೂಪ' ಅನೇಕತೆಯಲ್ಲಿ ಏಕತೆಯನ್ನು ಇಣುಕುವಂತಿದೆ. ಮೊದಲ ಒಂಬತ್ತು ಲೇಖನಗಳು ಶರಣರ ಅನುಭಾವ ಸಾಹಿತ್ಯ ವಿಶ್ಲೇಷಣೆಗೆ ಮೀಸಲಾಗಿದ್ದರೆ ಕೊನೆಯದೊಂದು ಕನ್ನಡಿಗರ ಪರಧರ್ಮ ಸಹಿಷ್ಣುತೆಯ ಪರಾಕಾಷ್ಠತೆಯನ್ನು ಎತ್ತಿ ತೋರುವುದು. ಲಿಂಗವಂತ ಧರ್ಮದ ತಾತ್ವಿಕ ವಿವೇಚನೆಯನ್ನು ಶರಣರ ವಚನಗಳ ಆಧಾರದ ಮೇಲೆ ನೇರವೂ, ಸರಳವೂ ಆದ ನಿರೂಪಣೆ ಇಲ್ಲಿದೆ.

ಷಟ್‌ಸ್ಥಲದಲ್ಲಿ ಬರುವ ಭಕ್ತ ಪ್ರಸಾದಿ ಶರಣ ಸ್ಥಲಗಳಿಗಾಗಿ ಮೀಸಲಾಗಿರುವ ಮೂರು ಲೇಖನಗಳಲ್ಲಿ ಶ್ರೀ ಶಾಂತರಸರು ತಾವು ಅರಿತುಕೊಂಡ ವೀರಶೈವ ತತ್ವಶಾಸ್ತ್ರದ ತಿರುಳನ್ನು, ಶರಣರ ವಚನಗಳೊಂದಿಗೆ ಉದಾಹರಿಸಿ ಇಟ್ಟಿದ್ದಾರೆ. ಪ್ರಸಾದದ ವಿಶೇಷ ಮಹತ್ವವನ್ನು, ತತ್ವವನ್ನು ವಿವರಿಸುತ್ತ ಅದರ ಹಿಂದೆ ರಾಷ್ಟ್ರದ ಹಿತವೂ ಇದೆಯೆಂಬುದನ್ನು ತೋರಿದ್ದಾರೆ.

ಭಕ್ತಿಯ ವೈಶಿಷ್ಟ್ಯತೆಯನ್ನು, ಹೊಸ ಅರ್ಥವನ್ನು ನಿರೂಪಿಸಿ ಅದರ ಲಕ್ಷಣಗಳನ್ನು ಒಂಬತ್ತು ವಿಭಾಗಗಳಲ್ಲಿ ವಿವರಿಸಿರುವದು ಸಮಾಧಾನಕರವಾಗಿದೆ. ಭಕ್ತಾದಿ ಷಟ್‌ಸ್ಥಲಗಳಲ್ಲಿ ಶರಣ ಸತಿ ಲಿಂಗಪತಿಭಾವವು ಶರಣಸ್ಥಲದಲ್ಲೇ ಮೈದೋರುವ ಕಾರಣಗಳನ್ನು ತಿಳಿಯಲು ಶರಣನ ಇರವು, ಅವನ ಆಚರಣೆಯ ವಿವರಗಳನ್ನು ಸಮರ್ಪಕವಾಗಿ ಬಣ್ಣಿಸಿ ಶರಣರ ಭಕ್ತಿ ಹಲವಾರು ಹೊಸ ತತ್ತ್ವಗಳನ್ನು ಹೇಗೆ ಒಳಗೊಂಡಿದೆ ಎಂಬುದನ್ನು ಅನೇಕ ಶರಣರ ಜೀವನ ಹಾಗೂ ೪೨ ವಚನಗಳ ಉದಾಹರಣೆಗಳೊಂದಿಗೆ, ಸುದೀರ್ಘವಾಗಿ ಚರ್ಚಿಸಿರುವುದು ಔಚಿತ್ಯಪೂರ್ಣವಾಗಿದೆ.

'ಅಯ್ಯಾ ಎಂದಡೆ ಸ್ವರ್ಗ' ಎಂಬ ಚುಟುಕು ಮಾತಿನಲ್ಲಿ ಹುದುಗಿರುವ ಘನವಾದ ಅರ್ಥವನ್ನು ಹಿಂಜಿ ಹಿಂಜಿ ತೆಗೆದು ಅದರ ಮಹತಿಯನ್ನು ವಿವರಿಸುತ್ತ, ಮಾತು ಮನುಷ್ಯನ ಅಂತಸ್ತನ್ನು, ಸಂಸ್ಕೃತಿಯನ್ನು 'ಅಳೆಯುವ ಅಳತೆಗೋಲು', 'ಮಾತೇ ಜ್ಯೋತಿರ್ಲಿಂಗ' ಎಂಬ ಸಿದ್ಧಾಂತಕ್ಕೆ ಬಂದು ನಿಲ್ಲುತ್ತಾರೆ. ಮಾತು ಜ್ಯೋತಿರ್ಲಿಂಗವಾದಾಗ ಈ ಲೋಕ ಸ್ವರ್ಗವಾಗುವದೆಂಬುದನ್ನು ಸಮರ್ಥಿಸುವಾಗ ನಾವು ಅರಿಯದ ಆ ಸ್ವರ್ಗವನ್ನು ಹೀಗಳೆದಿರುವುದು ಅಷ್ಟು ಸಮಂಜಸವೆ? ಎಂಬ ಪ್ರಶ್ನೆ ಬಾರದಿರದು. 'ಅಯ್ಯಾ ಎಂಬುದು ಒಂದು ಮಾತಲ್ಲ ಒಬ್ಬನ ಸುಸಂಸ್ಕೃತ ಜೀವನದ ಇತಿಹಾಸ' ಎಂದುದು ಮನನೀಯ.

'ಬಸವಣ್ಣನವರ ವಚನಗಳಲ್ಲಿ ಬಾಳೆ' ಒಂದು ವ್ಯಾಖ್ಯಾನ ವಿಮರ್ಶೆ. ಶರಣರ ವಚನಗಳಲ್ಲಿ ಹಲವಾರು ಕಡೆಗೆ ಬರುವ 'ಕದಳಿ' ವಚನಶಾಸ್ತ್ರದಲ್ಲಿ ಮಹತ್ವಪೂರ್ಣವಾಗಿರುವುದನ್ನು ಗಮನಿಸಿ ಅದು ಹಲವಾರು ಅರ್ಥಗಳಲ್ಲಿ ಬಳಕೆಗೊಂಡುದನ್ನು ವಿವೇಚಿಸಿರುವದು ಸಮರ್ಪಕವಾಗಿದೆ. ಬಾಳೆಯು ಜೀವನಕ್ಕೂ ಮನುಷ್ಯನ ಜೀವನಕ್ಕೂ ಹೋಲಿಕೆ ತಾರ್ಕಿಕವಾಗಿದೆ. ದೇಹ–ಬಾಳೆ, ಇವುಗಳ ರೂಪಕ:ನಿರ್ಮಾಣದಲ್ಲಿರುವ ವೈಶಿಷ್ಟ್ಯ ಹಾಗೂ ಸಾದೃಶ್ಯವನ್ನು ಸ್ಪಷ್ಟಪಡಿಸಿದ್ದಾರೆ. ಬಸವಣ್ಣನವರ ಮೂರು ವಚನಗಳನ್ನಾಯ್ದು ಈ ವಿವರಣೆಯನ್ನು ಅದರಲ್ಲಡಗಿದ ಅರ್ಥಗೌರವ, ಸೊಗಸು, ಸೌಂದರ್ಯಗಳನ್ನು ಹೃದ್ಯವಾಗಿಸಿದ್ದಾರೆ.

ಬಸವಣ್ಣನವರ ಕಿರಿಯ ಹೆಂಡತಿ ನೀಲಲೋಚನೆಯ ವಚನಗಳ ಮೀಮಾಂಸೆಯನ್ನು ಸ್ಫುಟವಾಗಿ ನಿರೂಪಿಸಿದ್ದಾರೆ. ಅವಳ ವಚನಗಳಲ್ಲಿ ಮೂಡಿದ ಬಸವಣ್ಣನವರ ವ್ಯಕ್ತಿತ್ವ, ಗಂಡ–ಹೆಂಡರು ಸಾಧಿಸಿದ ಆಧ್ಯಾತ್ಮದ ನಿಲವು ಹಾಗೂ ನೀಲಲೋಚನೆಯ ವ್ಯಕ್ತಿತ್ವ, ಸಮಕಾಲೀನ ಶರಣರಲ್ಲಿ ಅವಳಿಗಿದ್ದ ಗೌರವಭಾವ ಹಾಗೂ ಕಾವ್ಯಸತ್ವ, ಸೌಂದರ್ಯ ಇವು ಎದ್ದು ತೋರುವುದನ್ನು ಗುರುತಿಸಿದ್ದಾರೆ. ಈ ಪ್ರಬಂಧದಿಂದ ನೀಲಲೋಚನೆಯ ಭವ್ಯ ಜೀವನ ಚಿತ್ರ ಕಣ್ಣೆದುರು ಸ್ಪಷ್ಟವಾಗಿ ಮೂಡುವುದಾದರೂ ಅವಳು ಹುಟ್ಟು ಕವಯಿತ್ರಿಯೆಂದು ಹೇಳಿರುವ ಶ್ರೀ ಶಾಂತರಸರು ಅವಳ ವಚನಗಳ ಸಾಹಿತ್ಯಕ ಮೌಲ್ಯವನ್ನು ಇನ್ನೂ ಒಂದಿಷ್ಟು ನಿರೂಪಿಸಬೇಕಾಗಿತ್ತೆನ್ನಿಸುವುದು.

ಶರಣರು ತಮ್ಮ ಕಾಯಕದಲ್ಲಿ ಕಲೆಯನ್ನು ಕಂಡ ಮಹಾಜೀವಿಗಳೆಂಬುದನ್ನು ಸಾರುವ ಪ್ರಬಂಧ– 'ಶರಣರೂ ಕಲೆಗಳೂ'. ಕಾಯಕವು ಶರಣರಿಗೆ ಪೂಜೆ. ಕೈಲಾಸ. ಯಾವ ಕಾಯಕವಾದರೂ ಸರಿಯೆ ಅದು ಶುದ್ಧವಾಗಿದ್ದರೆ ಸಾಕು ಎಂದು ವಿವೇಚಿಸುತ್ತ ಸಕಲೇಶ ಮಾದರಸ, ಕಿನ್ನರಿ ಬ್ರಹ್ಮಯ್ಯ, ರಾಗದ ಸಂಕಣ್ಣ, ಕುಂಬಾರ ಗುಂಡಯ್ಯ, ಢಕ್ಕೆಯ ಮಾರಯ್ಯ, ಬಹುರೂಪಿ ಚೌಡಯ್ಯ, ಕಲಕೇತ ಬೊಮ್ಮಯ್ಯ, ಕಂಕರೀ ಕಕ್ಕಯ್ಯ, ವೀರದೇವಮ್ಮ, ಸಿದ್ಧದೇವಮ್ಮ, ಶಿವಮಾಯಿದೇವಿ ಈ ಶರಣ ಶರಣೆಯರ ಜೀವನದ ಉದಾಹರಣೆಗಳನ್ನಾಯ್ದು ಶರಣರು ಕಲಾ ಪ್ರವೀಣರೂ ಕಾಯಕನಿಷ್ಠರೂ ಆಗಿದ್ದರೆಂಬುದನ್ನು ಪ್ರತಿಪಾದಿಸುವಲ್ಲಿ ಅವರ ವಚನಗಳೇ ಬಲವಾದ ಆಧಾರವನ್ನೊದಗಿಸಿವೆ. ಪ್ರಬಂಧದ ಕೊನೆಯಲ್ಲಿ ವಿವರಿಸಿದ ಶರಣೆಯರ ವಿವರಣೆ ಇನ್ನೂ ಬೇಕಾಗಿತ್ತು.

ಅಕ್ಕಮಹಾದೇವಿಯವರ ವಚನಗಳಲ್ಲಿ ಕಾವ್ಯ ಸತ್ವ ಮತ್ತು ಸೌಂದರ್ಯವನ್ನು ವಿವೇಚಿಸುವಾಗ, ಪ್ರಾರಂಭದಲ್ಲಿ ಲೇಖಕರು ವಚನಗಳ ಬಗೆಗೆ ನಿರೂಪಿಸಿದ ವಿವರಣೆ ಚರ್ಚಾಸ್ಪದವೆನಿಸುವಂತಿದೆ. ವಚನಗಳು ಮಹಾ ಕಾವ್ಯದ ಸತ್ವವನ್ನೊಳಗೊಂಡಿವೆಯೆಂಬುದನ್ನು ಸಮರ್ಥಿಸಿ 'ಒಂದು ವೇಳೆ ವಚನಕಾರರು ತಮ್ಮ ಅನುಭಾವ ಸಂಪತ್ತನ್ನು ಕಾವ್ಯದಲ್ಲಿ ಎರಕಹೊಯ್ಯಲು ಪ್ರಯತ್ನಿಸಿದ್ದರೆ

ಸಫಲರಾಗುತ್ತಿರಲಿಲ್ಲ' ಎಂದಿದ್ದಾರೆ. ಹಾಗಾದರೆ ತಮ್ಮ ಅನುಭಾವವನ್ನು ವಚನಗಳಲ್ಲಿ ಮಾತ್ರ ಎರಕಹೊಯ್ಯುವ 'ದುರ್ಬಲ'ರೇ ಈ ವಚನಕಾರರು? ಎಂಬ ಪ್ರಶ್ನೆ ಏಳುತ್ತದೆ. ಪ್ರಾಯಶಃ ವಸ್ತುಸ್ಥಿತಿ ಹೀಗಿರಲಿಕ್ಕಿಲ್ಲ. ವಚನಕಾರರು ಉದ್ದೇಶಪೂರ್ವಕವಾಗಿಯೇ ಕಾವ್ಯಗಳನ್ನು ರಚಿಸದೇ ಇರಲೂಬಹುದು. ಅವರ ನೇರ ಗುರಿ ಆತ್ಮೋದ್ಧಾರ ಹಾಗೂ ಸಮಾಜಸುಧಾರಣೆ ಮಾತ್ರವಾಗಿದ್ದವು. ಅನುಭಾವ ಬಂಗಾರವೇನೋ ಸರಿ. ಆದರೆ ವಚನ ಬೆಳ್ಳಿಯಾಗಬಹುದೆ? ಆ ಬಂಗಾರವೇ ವಚನಗಳ ರೂಪದಲ್ಲಿ ಎರಕ ಹೊಂದಿದೆ ಎನ್ನಲಾಗದೆ! ವಚನಕಾರರಲ್ಲಿ ಸಾಹಿತ್ಯಗುಣದಿಂದ ಹೆಚ್ಚಾಗಿ ಶೋಭಿಸುವ ವಚನಗಳನ್ನು ಬರೆದ ಕೀರ್ತಿ ಅಕ್ಕಮಹಾದೇವಿಗೆ ಮಾತ್ರ ಸಲ್ಲುತ್ತದೆ. ಅಲಂಕಾರಗಳು, ರಸ, ಭಾವ, ಧ್ವನಿ ಮುಂತಾದ ಅನೇಕ ದೃಷ್ಟಿಯಲ್ಲಿ ಅಕ್ಕನವರ ವಚನಗಳಲ್ಲಿಯ ಸತ್ವ, ಸೊಬಗನ್ನು ಉದಾಹರಣೆ ಸಹಿತವಾಗಿ ಪ್ರತಿಪಾದಿಸಿರುವುದು ಮನೋಜ್ಞವಾಗಿದೆ.

ಶಿವಶರಣರಿಗೆ ಶಿವರಾತ್ರಿ ವರ್ಷಕ್ಕೊಂದೆ ದಿನವಲ್ಲ ಮುನ್ನೂರ ಅರವತ್ತೈದು ರಾತ್ರಿಗಳೂ ಶಿವರಾತ್ರಿಗಳೇ ಎಂಬ ಬಸವಣ್ಣನವರ ವಚನದಲ್ಲಿ ಅಡಗಿರುವ ಶರಣರ ಪೂಜೆ, ದಾಸೋಹ, ಊಟ, ಕಾಯಕ, ಶರಣರ ಸಹವಾಸ, ನಡೆ ನುಡಿ, ನಿದ್ದೆ ಈ ಕ್ರಮದಲ್ಲಿ ಶಿವರಾತ್ರಿಯ ಆಚರಣೆ ನಡೆಯಬೇಕು ಎಂಬ ಭಾವವನ್ನು ಸಮರ್ಪಕವಾಗಿ ವಿವೇಚಿಸಿದ್ದಾರೆ.

ಕನ್ನಡಿಗರ ಉಸಿರು ಪರಧರ್ಮ ಸಹಿಷ್ಣುತೆ. ಅದು ಕನ್ನಡ ಸಂಸ್ಕೃತಿಯ ಆತ್ಮವಾಗಿದೆ ಎಂಬುದನ್ನು ಕನ್ನಡಿಗರ ವಿಶಾಲ ಧರ್ಮದೃಷ್ಟಿಯ ಹಿನ್ನೆಲೆಯಲ್ಲಿ, ಇತಿಹಾಸದಲ್ಲಿ ಎದ್ದುಕಾಣುವ ಕೆಲವು ಉದಾಹರಣೆಗಳಿಂದ ಶಾಸನಾಧಾರಗಳಿಂದ ಶರಣರ ಹಾಡುಗಳ ಆಧಾರದಿಂದ ತಕ್ಕುದಾಗಿ ವಿವರಿಸಲಾಗಿದೆ.

ಬಹುರೂಪದಲ್ಲಿರುವ ಹತ್ತು ಪ್ರಬಂಧಗಳಲ್ಲಿ ಕೊನೆಯೊಂದನ್ನು ಬಿಟ್ಟು ಉಳಿದುವೆಲ್ಲ ಶರಣರು ಹಾಗೂ ಅವರ ವಚನ ವಾಙ್ಮಯಕ್ಕೆ ಸಂಬಂಧಿಸಿದುವು. ವೀರಶೈವ ಧರ್ಮ, ತತ್ವ, ಹಾಗೂ ಸಾಹಿತ್ಯ ಇವುಗಳ ಬಗೆಗೆ ಶಾಂತರಸರಿಗೆ ಇರುವ ಆಳವಾದ ವ್ಯಾಸಂಗ ಹಾಗೂ ಶ್ರದ್ಧೆ ಈ ಲೇಖನಗಳಲ್ಲಿ ಸ್ಪಷ್ಟವಾಗಿವೆ. ಸಂಶೋಧನೆಯ ಕಣ್ಣಿಂದ ನೋಡುವ ದೃಷ್ಟಿ, ಸರಳವಾದ ನಿರೂಪಣಾ ಶೈಲಿ ಮೆಚ್ಚುವಂತಿವೆ.

ಒಪ್ಪೋಲೆಯಲ್ಲಿ ಮುದ್ರಣದೋಷದಿಂದುಂಟಾದ ಅನೇಕ ಪದಗಳ ಪಟ್ಟಿಯನ್ನು ನೀಡಿದ್ದರೂ ಇನ್ನೂ ಕೆಲ ದೋಷಗಳು ಉಳಿದುಕೊಂಡು ಬಂದಿವೆ. ಇಲ್ಲಿ ಬಳಸಲಾದ ಕೆಲವು ಶಬ್ದಗಳು ವಿಶಿಷ್ಟವೆನಿಸುವಂತಿವೆ. ಉದಾ: 'ಬೆಳೆವಿದ್ದಾರೆ' (ಬೆಳೆಸಿದ್ದಾರೆ); 'ಸರೆ' (ಶರಿ); 'ಕಾಡಿಕೆ' (ಕಾಡುವಿಕೆ); 'ಅಂತೇನೇ' 'ಭಾಕ್ತಿಕ' 'ಅಳುವಡು' ಇತ್ಯಾದಿ. ಪುಸ್ತಕದ ಹೊದಿಕೆಯ ಮೇಲಣ ಚಿತ್ರ ನವ್ಯವಾಗಿದೆ. ಅಂತೆಯೇ ಅದರ ಅರ್ಥವೂ

ಸಾಮಾನ್ಯರಿಗೆ ಸಂದಿಗ್ಧ. ಹೊರಗಣ್ಣಿಗೆ 'ಬಹುರೂಪ'ದಂತೆ ಕಾಣುವ ಇಲ್ಲಿಯ ಲೇಖನ ಪುಷ್ಪಮಾಲೆಯಲ್ಲಿರುವ ಸೂತ್ರದ ದಾರ ಒಂದೇ ಆಗಿದೆ. ಅದೇನೇ ಇದ್ದರೂ ಶಾಂತರಸ ವೈಚಾರಿಕ ಪ್ರಾಮಾಣಿಕತೆ ಸಮಾಧಾನ ತರುತ್ತದೆ.

★ **ಪ್ರೊ. ಎಸ್. ಡಿ. ಸವದತ್ತಿಮಠ**

ಚಿತ್ರಾನ್ನ : ಲೇಖಕರು : ಜಿ. ಎಸ್. ಅನ್ನದಾನಿ. ಪ್ರಕಾಶಕರು : ಮಿತ್ರಭಾರತಿ ಪ್ರಕಾಶನ, ವಿಜಾಪೂರ ೧೯೬೯. ಕ್ರೌನ್ ಅಷ್ಟದಳ ಪುಟ ೧೦+೫೦+೮ ಬೆಲೆ ೨=೦೦.

ಶ್ರೀ ಜಿ. ಎಸ್. ಅನ್ನದಾನಿ ಅವರು ಈಗಾಗಲೇ ತಮ್ಮ ಚುಟುಕು ಸಂಕಲನಗಳಾದ 'ರುದ್ರವೀಣೆ' 'ಹರಳು ಮುತ್ತು' ಮತ್ತು 'ಕರ್ನಾಟಕ ಕಥೆ' ಬರೆದು ಜನಪ್ರಿಯರಾಗಿದ್ದಾರೆ. ಶ್ರೀಯುತ ಅನ್ನದಾನಿಯವರು ಕನ್ನಡ ಸಾರಸ್ವತ ಪ್ರಪಂಚಕ್ಕೆ ಹೊಸಬರೇನಲ್ಲ. 'ಚಿತ್ರಾನ್ನ' ಚುಟುಕು ಸಂಕಲನ ಅನ್ನದಾನಿಯವರ ನಾಲ್ಕನೆಯ ಕೃತಿಯಾಗಿದೆ.

ಶ್ರೀ ಅನ್ನದಾನಿಯವರ ಚುಟುಕುಗಳು ಸಾಕಷ್ಟು ಖಾರವಾಗಿದ್ದರೂ, ಅದಕ್ಕೆ ಉಪ್ಪು, ಹುಳಿ, ಅದರ ಜೊತೆಗೆ ಮಸಾಲೆಯನ್ನೂ ಕೂಡಿಸಿ 'ಕೃಷಿ ಮತ್ತು ಸಹಕಾರ'ದ ತುಪ್ಪ ಹಾಕಿ ಹುರಿದು ಚಿತ್ರಾನ್ನ ತಯಾರಿಸಿದ್ದಾರೆ.

ರಾಜಕೀಯ ಮತ್ತು ಸಾಮಾಜಿಕ ವಿಷಯಗಳ ಬಗ್ಗೆ ಶ್ರೀ ಜಿ. ಎಸ್, ಅನ್ನದಾನಿಯವರು ತುಂಬಾ ಜಿಗುಪ್ಸೆಗೊಂಡು ಅದನ್ನು ಕಟುವಾಗಿ ಇಷ್ಟೇ ಅಲ್ಲ ಆ ರೀತಿಯಲ್ಲಿ ನಡೆಯುವ ಸಾಮಾಜಿಕರನ್ನು ನಿರ್ಭಿಡೆಯಿಂದ ಟೀಕಿಸಿದ್ದಾರೆ ಚುಟುಕುಗಳು ರಾಜಕೀಯ ಮತ್ತು ಸಾಮಾಜಿಕ ಪ್ರಜ್ಞೆ ಮೂಡಿ ಬರಲು ತುಂಬಾ ಸಹಾಯಕವಾಗಿವೆ.

ಉದಾ :— **ಆಧುನಿಕ ವರಮಹಾಶಯರು**

ಅವನ ಪಾಲಿಗೆ ಬಹುದು ಪತ್ರಿಕರೆ ಭೂಮಿ
ಅಂಥ ಮನ್ಮಥನಲ್ಲ ನೋಡಲಿಕೆ ಸ್ವಾಮಿ
ಪಿ. ಯು. ಸಿ. ಗೈಹನೆಯು ಸಲ ಕುಳಿತಿಹನು ಮತ್ತೆ
ಹತ್ತು ಸಾವಿರ ಬೇಡುವನು ಕತ್ತೆ.

ಓರ್ವ ವಿಧವೆ

ತಾರುಣ್ಯಭರದಲ್ಲಿ ನಾನಾದೆ ವಿಧವೆ
ಆದರೂ ಬಯಸಿಲ್ಲ ಎರಡನೆ ಮದುವೆ.
ಆವಿಷಕೆ ಬಲಿಯಾದ ಎಮ್ಮೆಲ್ಲೆ ಮಂದಿ
ಪಕ್ಷ ಬದಲಿಸುವಂತೆ ನಾನಲ್ಲ ತಂದಿ!

ಇಂದಿರಾಜಿ

ಕಚ್ಛರಣ ತೀರ್ಪಿಗೋ ಒಪ್ಪಿಗೆಯ ಮುದ್ರೆ
ಮಹಾಜನ ನಿರ್ಣಯಕ್ಕೆ ಯಾಕಮ್ಮ ನಿದ್ರೆ?
ಒಂದೆ ತೆರ ಇರಬೇಕು ನಡೆನುಡಿಯ ಬಣ್ಣ.
ಯೋಗ್ಯತೆಯ ಕಳಕೊಂಡು ಆಗದಿರು ಸಣ್ಣ!

ರಾಜ್ಯದ ಹೆಸರನ್ನು ಬದಲಿಸುವ ಕುರಿತು ಆಗುವ ಚರ್ಚೆಗೆ ಶ್ರೀ ಅನ್ನದಾನಿಯವರು ಚುಟುಕಿನಲ್ಲಿ, ಸುಲಭವಾದ ಉತ್ತರ ಹೇಳಿದ್ದಾರೆ.

"ಹೋದ್ರೆ ಹೋಗ್ಲಿ ಮಂತ್ರಿ ಪದವಿ, ಕರ್ನಾಟಕ ಅಂದು ಬಿಡು ಒಮ್ಮೆ" ಎಂದಾಗ ಕರ್ನಾಟಕ ಅಂತಾ ಹೆಸರನ್ನು ಬದಲಿಸಬೇಕೆಂಬ ಅಭಿಮಾನದ ವಿಚಾರ ತಲೆಯಲ್ಲಿ ಹೊಳೆಯದಿರದು.

ಕೃಷಿ ರಂಗದಲ್ಲಿ ಅಭಿವೃದ್ಧಿಯಾಗಬೇಕೆಂಬ ಬಲವಾದ ಅಪೇಕ್ಷೆ ಎಲ್ಲರಿಗೂ ಇದೆ. ದೇಶ ಸಮೃದ್ಧಿಯಾಗಬೇಕು ಎಂದರೆ ಹೇಗೆ ಮಾಡಬೇಕು ಎಂದು ಚುಟುಕು ಕವಿ ರೈತನಿಗೆ ಹೀಗೆ ಮಾಡು ಎಂದು ಹೇಳಲು ಬಯಸುತ್ತಾನೆ. ಹೀಗೆ ಮಾಡಿದರೆ ಆಹಾರ ಬೆಳೆ ಹೆಚ್ಚುತ್ತದೆ. ಆಹಾರ ಸಮಸ್ಯೆ ಇಲ್ಲವಾಗುತ್ತದೆ, ಎಂದು ನಂಬಿದ್ದಾರೆ. ಕವಿಯ ನಂಬಿಕೆಗೆ ಎಂದಾದರೂ ರಕ್ಷೆ ಇದ್ದೆ ಇದೆಯಲ್ಲವೆ? "ಮಳೆಯ ನೆಚ್ಚಲು ಬೇಡ, ಭಾವಿಯನ್ನು ತೋಡು, ನಾಲ್ಕೆಕರೆ ನೀರುಣಿಸು ಸಮೃದ್ಧಿಯ ನೋಡು."

ಸಹಕಾರಿ ಸಂಘಗಳ ಕತೆ ಹೇಳಿ ಅಲ್ಲಿಯ ಅವ್ಯವಹಾರವನ್ನು ಟೀಕಿಸಿದ್ದಾರೆ. ಅಲ್ಲದೆ ಅಲ್ಲಿಯ ಒಳ್ಳೆಯ ಗುಣಗಳನ್ನು ಎತ್ತಿ ಹಿಡಿದಿದ್ದಾರೆ.

"ತುಂಡು ಹೊಲಗಳು ಎಲ್ಲ ಕೂಡಿದರೆ ಚೆಂದ
ಬೇಸಾಯ ಮಾಡಲಿಕೆ ಬಲು ಸುಲಭವೆಂದ
ರೈತರೆಲ್ಲರೂ ಕೂಡಿ ಸಹಕಾರದಿಂದ
ಕೂಡಿ ದುಡಿದರೆ ಅಲ್ಲಿ ಹೊರಡುವವು ಗಂಧ!"

ಮನೆಯ 'ಮದ್ದು' ಚುಟುಕುಗಳು ಸಾಮಾನ್ಯರಿಗೆ ಅಷ್ಟೆ ಇರದೆ, ಎಲ್ಲರಿಗೂ ಅದರ ಲಾಭ ಪಡೆಯಲು ಅನುಕೂಲವಾಗಿವೆ. ಸುಲಭವಾಗಿ ಕಡಿಮೆ ವೆಚ್ಚದಲ್ಲಿ ಬೇನೆಯನ್ನು ವಾಸಿಮಾಡಿಕೊಳ್ಳಲು ಬಹುದು.

"ಒಂದು ಚಮಚಾ ಹಸಿಯ ಶುಂಠಿಯ ರಸದಲ್ಲಿ
ದಿನಕೆರಡು ಸಲದಂತೆ ಆರು ದಿನ ಮಾತ್ರ
ಸ್ವಲ್ಪ ಜೇನನು ಬೆರಸಿ ನೀನು ಸವಿದಲ್ಲಿ
ಅನುಸರಿಸೆ ನಿಲ್ಲುವದು ಕೆಮ್ಮು ಸುಸೂತ್ರ"

ಯೋಗಿ ವೇಮನನ ಅನುಭವೋಕ್ತಿಗಳನ್ನು ಚುಟುಕಿನಲ್ಲಿ ಶ್ರೀ ಜಿ. ಎಸ್. ಅನ್ನದಾನಿಯವರು ಹೆಣೆದು ಉಪಕಾರ ಮಾಡಿದ್ದಾರೆ. ಜೀವನದ ಅನೇಕ ಕಹಿ-ಸಿಹಿ ವಿಷಯಗಳಿಗೆ ಜಿಗುಪ್ಸೆಗೊಂಡ ಮಹಾಪುರುಷರು ತಮ್ಮದೆ ಆದ ವಾಣಿಯಲ್ಲಿ ಹೇಳುತ್ತಾರೆ. ಆ ಅನುಭವದ ರಸವನ್ನು ನಾವು ಕುಡಿದರೆ ಬಾಳು ನಂದನವನವಾದೀತು! ವೇಮನ ಗೀತೆಗಳು ಆ ರೀತಿಯಲ್ಲಿ ಬಹಳಷ್ಟು ಪ್ರಸಿದ್ಧ-ವಾಗಿವೆ. ಆದರೆ ಶ್ರೀ ಅನ್ನದಾನಿಯವರು 'ಯೋಗಿ ವೇಮನ' ಇಂತಹ ಎಲ್ಲ ಅನುಭವೋಕ್ತಿಗಳನ್ನು ಚುಟುಕಿನಲ್ಲಿ ಹೆಣೆದು, ಅದೊಂದು ಹೊತ್ತಿಗೆಯನ್ನು ಪ್ರಕಟಿಸಿದ್ದರೆ ಹೆಚ್ಚು ಒಳ್ಳೆಯದಾಗುತ್ತಿತ್ತು. ಬೇರೊಬ್ಬರು ಹೇಳಿದ ವಿಷಯವನ್ನು ತಮ್ಮದೇ ಆದ ಶಬ್ದಗಳಲ್ಲಿ ಜೋಡಿಸಿ ಹೇಳುವದು ತುಂಬಾ ಕಠಿಣ-ವಾಗುತ್ತದೆ. ಆದರೆ ಇವರು ಆ ಕೆಲಸವನ್ನು ತುಂಬಾ ಜಾಗ್ರತೆಯಿಂದ ಮಾಡಿದ್ದಾರೆ. ಹೆಣ್ಣು, ಹೆಂಡ ಚುಟುಕಿನಲ್ಲಿ! "ಸಿಂದಿಗಿಡದಡಿಯಲ್ಲಿ ಹಾಲು ಕುಡಿದ-ರೇನು। ಹೆಂಡ ಕುಡಿದಿಹೆನೆನುವ ನಿಂದೆ ಬಿಡದು। ಹೆಣ್ಣೊಂದು ಇರುವಲ್ಲಿ ಸನ್ಯಾಸಿಗೂ ಸಹಿತ। ವಸತಿ ಮಾಡಿದರೆ ಅಪವಾದ ಬಹುದು।" ಶ್ರೀ ಅನ್ನದಾನಿಯವರು ಅಂತ್ಯ ಪ್ರಾಸ ಸರಿಮಾಡಲು ಹೋಗಿ ಕೆಲವು ಕಡೆಗೆ ಎಡವಿದ್ದಾರೆ, ಅದನ್ನು ಅವರು ಅನುಭವದ ಬಲ, ಅಭ್ಯಾಸದ ಬಲದಿಂದ ಪಡೆದರೆ ಚುಟುಕುಗಳ ಚುಟುಕು ಕವಿಗಳ ಸಾಲಿನಲ್ಲಿ ಅವರ ಹೆಸರು ಚಿರಸ್ಮರಣೀಯ ಎಂದು ಧೈರ್ಯ-ವಾಗಿ ಹೇಳಬಹುದು.

★ ಎಸ್. ಎಂ. ಯಲಿಗಾರ

ರಿಂಗಣ : ಲೇ : ರಾಜಶೇಖರ ಕರ್ಕಿ; ಪ್ರಕಾಶಕರು: ರೂಪಪ್ರಕಾಶನ, ಪದ್ಮರಾಗ ಸದನ, ಒಂದವಾಡಿ, ಬೆಳಗಾಂವಿ. ಕ್ರಾನ್ ಅಷ್ಟದಳ; ಪುಟ : VIII + 54; ಬೆಲೆ ಎರಡು ರೂಪಾಯಿ.

ಕನ್ನಡ ನವೋದಯ ಕವಿಗಳೆಲ್ಲ 'ನವ್ಯ' ಪ್ರಜ್ಞೆಯೊಂದಿಗೆ ತಮ್ಮ ಕಾವ್ಯ ಸೃಷ್ಟಿಯನ್ನು ಕೈಕೊಳ್ಳುತ್ತಿರುವ ಈ ಕಾಲದಲ್ಲಿ,ಶ್ರೀ ರಾಜಶೇಖರ ಕರ್ಕಿ ಅವರು ಭಾವಗೀತ ಪರಂಪರೆಯ ಪದ್ಯಗಳನ್ನು ರಚಿಸಿ 'ರಿಂಗಣ'ವನ್ನು ಹೊರತಂದಿದ್ದಾರೆ.

ಕಾವ್ಯಕ್ಕೆ ತಕ್ಕ ಪರಿಸರದಲ್ಲಿ ಬೆಳೆದ ಶ್ರೀ ರಾಜಶೇಖರ ಅವರು ತಂದೆಯವರಾದ ಹಿರಿಯ ಕವಿ ಡಾ. ಡಿ. ಎಸ್. ಕರ್ಕಿ ಅವರ ಭಾವ ಮಾಧುರ್ಯ, ಪದ-ಲಾಲಿತ್ಯಗಳ ಆವರಣದಿಂದ ತಪ್ಪಿಸಿಕೊಳ್ಳದೇ ಇದ್ದುದನ್ನು ಈ ಸಂಕಲನ ಸ್ಪಷ್ಟಪಡಿಸುತ್ತದೆ.

ತಂಗಾಳಿಯ ಮೈದಡವಲು ಕವಿಯ ಜಗೆಮುಗಿಲು ಬಿರಿದು, ಕಲ್ಪನೆಯ ಕುಸುರು ಮಾರ್ಪೊಳೆದು ಪ್ರಕೃತಿಯ ಚೆಲುವು ತಾಯ ಒಲವುಗಳೊಂದಿಗೆ ನಾಡಾಭಿಮಾನ, ದೇಶಾಭಿಮಾನ, ಆದರ್ಶ ಧ್ಯೇಯ, ವ್ಯಕ್ತಿಚಿತ್ರ, ಅನುವಾದ ಹಾಗು ಮಕ್ಕಳಿಗೆ ಸಂಬಂಧಿಸಿದ ಗೀತಗಳು ಈ 'ರಿಂಗಣ'ದಲ್ಲಿ ಸಮಾವೇಶಗೊಂಡಿವೆ,

ಇರು ಇರು ಇರು ಇರು
ನೀ ಬೆಳಕಾಗಿರು
ಬದುಕಿನ ತುಂಬಾ ನೀ ಹಸುರಾಗಿರು
ಬಾಳಿನ ತುಂಬಾ
ನೀ ಹೂವಾಗಿರು'

ಎಂಬ ಕವಿವಾಣಿಯಲ್ಲಿ ಬಾಳಿನ ದೃಢ ಆದರ್ಶವನ್ನು ಮನಗಾಣಬಹುದು. ಇಲ್ಲಿಯ ಬೆಳಕು, ಹಸುರು, ಹೂಗಳು ಬದುಕಿಗೆ ಆದರ್ಶವಾಗಿರಬೇಕು.

' ಹಸುರು ಜೀಕುವ ಚಿಗುರೆಲೆ 'ಯನ್ನು ' ಸಲಿಲದಲ್ಲಿ ರಿಂಗಣದ ತೋರಣ ' ವನ್ನು ಗುರುತಿಸಿದ ಕವಿಯ ಬಗೆ ಮೆಚ್ಚುವಂತಹದು. ಹೃದಯಮಂದಿರದಲ್ಲಿ ತುಂಬಿಬಹ ಭಾವ ಕಲ್ಪನೆಯ ಕುಸುರಾಗಿ ಮಾರ್ಪೊಳೆವ ಹದನ ' ತಂಗಾಳಿ ' ಯಲ್ಲಿ ಕಾಣುತ್ತೇವೆ.

ನೀ ಎಲ್ಲೆಲ್ಲಾ
ನಾ ಅಲ್ಲಲ್ಲಿ
ನೀನಿಲ್ಲದೆಯೆ ನಾನೆಲ್ಲಿ !

ಎಂಬ ಕವಿಮಾತಿನಲ್ಲಿ ಅವ್ಯಕ್ತಶಕ್ತಿಯೊಂದಿಗಿನ ಸಂಬಂಧ ನಿರೂಪಿತವಾಗಿದೆ. ಆದರ ಎದೆಯಲ್ಲಿ ತನ್ನೆಲ್ಲ ಇರವು ಲೀನವೆಂಬ ನಮ್ರಭಾವ ಹೊರಹೊಮ್ಮಿದೆ.

ಜೀವನದಲ್ಲಿ ಒಲುಮೆ ವಿವಿಧ ರೀತಿಗಳಲ್ಲಿ ವ್ಯಕ್ತಿಯನ್ನು ಸುತ್ತಿಕೊಂಡಿರುವದುಂಟು. ಅದರಲ್ಲೆಲ್ಲ ತಾಯಿ ಒಲುಮೆ ನಿಸ್ಸೀಮವಾದದ್ದು. ತಾಯಿಯ ಮಮತೆಯಲ್ಲಿ ಕವಿ 'ಗಂಗೆಗಿಂತಲೂ ಶುಚಿಯಾಗಿರುವ ವಾತ್ಸಲ್ಯದ ಒರತೆಯನ್ನು' ಕಂಡು ಅನುಭವಿಸಿದ್ದಾರೆ. ಧನ್ಯತೆಯ ಪಡೆದಿದ್ದಾರೆ,

'ಮುಗಿಲಿಗಿಂತಲು ಮಿಗಿಲು
ತಾಯಿ ಎದೆ ಹರವು
ಕಡಲಿಗಿಂತಲು ಆಳ
ಅವಳ ತಿಳಿ ಒಲವು'

—ಎಂದು ಕವಿಯು ತಾಯ ಒಲುಮೆಗೆ ವ್ಯಾಖ್ಯೆ ಬರೆಯಲು ಯತ್ನಿಸಿದ್ದಾರೆ.

'ಇದು ನನ್ನ ಭಾರತ'ದಲ್ಲಿ ಸೌಗಂಧ ಸಂಪದ, ಸತ್ವಶ್ರೀ, ರಸರುಚಿ ರಾಗಾಮೃತ, ರಮ್ಯ ಪ್ರಕೃತಿ, ಕಲಾವಿಭವಗಳ ನವುರಾದ ಚಿತ್ರಗಳು ಕಣ್ಮುಂದೆ ಬಂದು ದೇಶಾಭಿಮಾನ ಹಣಿಕಕ್ಕುತೆಯಾದರೂ ಸತ್ವದ ಕೊರತೆ ಕಾಣಿಸಿಕೊಳ್ಳುತ್ತದೆ.

'ಪುಟ್ಟತಾರೆ' ಕವಿಯ ಮೇಲೆ ಗಾಢವಾದ ಪರಿಣಾಮ ಬೀರಿದಂತಿದೆ ತಾರೆಯ ಆಕಾರ ಪುಟ್ಟದಾದರೂ ಆಕರ್ಷಣೀಯವಾಗಿರುತ್ತದೆ. ಸರ್ವ ಜನ ಮನವನ್ನು ತಣಿಸುತ್ತಿರುತ್ತದೆ. ರೇಡಿಯೋ ವಾಣಿ ತೆಗೆದು ಏಳುವ ಮಹಾರಾಣಿಗೆ ತಾಯಿ ಮಾಣಿಯಾಗಿ ಓಡಿಬರುವ ಚಿತ್ರ ಸುಂದರವಾಗಿದೆ. ಸಾಮ್ರಾಜ್ಞಿಯಾಗಿ, ಕವಿ ಮನವನ್ನು ಸೂರೆಗೊಂಡ ಅವಳ ಕೈಯಲ್ಲಿಯೇ (ನಮ್ಮ) ಮಾನವೆಂದು ದಿನವೂ ಅವಳಿಗೆ ಬಹುಮಾನವನ್ನಿತ್ತಿದ್ದಾರೆ. ತಮ್ಮ ಮಧುರವಾದ ಅನುಭವವನ್ನು ಹೊರಹೊಮ್ಮಿಸಿದ್ದಾರೆ.

'ಮೌಢ್ಯತೆಯನ್ನು ಅಡಗಿಸಿ ಭೀತಿಯನ್ನು ಉಡುಗಿಸಿ ಧೈರ್ಯವನ್ನು ತುಂಬು' ಎಂದು ಅನನ್ಯ ಭಾವದಿಂದ ಜಗದ ರಕ್ಷಕನ ಅಡಿಯಲ್ಲಿ ಮುಡಿಯಿರಿಸಿ ಬೇಡಿಕೊಂಡಿದ್ದಾರೆ. ಆ ರೀತಿಯಲ್ಲಿ ಭಗವಂತನ ಅನುಗ್ರಹದಿಂದ ಪಡೆದ 'ಧೈರ್ಯವೊಂದೇ ಬಾಳ ಮೂಲ' ಎಂದು ಹಾಡಿದ್ದಾರೆ.

'ಪವನ ಸುಳಿದಂತೆ ಹದವರಿತ ಪದದೊಡನೆ ಭಾವ ಸರಸದೊಳು ಮೈಮನವ ಜುಮ್ಮೆನಿಸಿ ಸ್ಫುರಿಸುವ 'ಕವನ'ದ ವಿಧಿಯನ್ನು ನಿರೂಪಿಸಿದ್ದಾರೆ. ಸ್ವಾತಂತ್ರ್ಯದ ರವಿಮೂಡಲು ಬಿಡುಗಡೆಯ ಹಕ್ಕಿ ಹೊನ್ನಿನ ಗರಿಗೆದರಿ ಹೃದಯವುಕ್ಕಿ ಸಂತಸದಿಂದ ಹಾಡುತ್ತಲಿರಬೇಕೆಂಬ ಅಭೀಪ್ಸೆ 'ಸ್ವಾತಂತ್ರ್ಯೋದಯ'ದಲ್ಲಿ ಒಡಮೂಡಿದೆ. ಚೆಲುವು ಹೃದಯ ಒಲುಮೆಗೊಲಿವ ಪರಿಯನ್ನು 'ಜೀವನಗೀತ'ದಲ್ಲಿ ಕಾಣಿಸಿದ್ದಾರೆ.

ಬಸವ ಜಯಂತಿಯಂದು ತನ್ನ ಬಾಳಬಳ್ಳಿಗೆ ಮೊದಲ ಹೂ ಮೂಡಿದ ಸಂತೋಷ ಅತ್ಯಂತ ಹೃದ್ಯವಾಗಿ ಬಂದಿದೆ. ' ಹಾಲುಗೆನ್ನೆಯ ತುಂಬು ನಗೆಯ ಮುಕ್ಕುಳಿಸಿನಿಂದು ಕೈಚಾಚಿಹ 'ರೂಪಶ್ರೀ 'ಯ ಹರುಷ ಮೊಗದ ಅನುಭವ ವನ್ನುಂಡು ತೃಪ್ತಿಪಟ್ಟು ಹಾಡಿದ್ದಾರೆ.

ಎರಡು ಚಿತ್ರ–ಸಾರ್ಥಕವಾದ ಒಂದು ಕವನ. ಬದುಕಿನ ದ್ವಂದ್ವ ಚಿತ್ರ ಮಾರ್ಮಿಕವಾಗಿ ವರ್ಣಿತವಾಗಿದೆ.

ಹಸಿದೊಡಲಿನ
ಕಣ್ಣೆವೆಯಲಿ
ತೊಟಕುತ್ತಿದೆ ನೀರು
ಸಿರಿ ಅಮಲಿನ
ಅಡಿ ಅಡಿಯಲಿ
ಹರಿಯುತ್ತಿದೆ ಖೀರು

ಎಂಬ ಸಾಲುಗಳಲ್ಲಿ ಸಮಾಜದ ನಗ್ನಸತ್ಯ ಪ್ರದರ್ಶಿತವಾಗಿದೆ. ಅದಕ್ಕೆ ಕಳವಳ ಪಟ್ಟ ಕವಿ,

ಸಿರಿವಂತರ
ಕಲ್ಲೆದೆಯಲಿ
ದ್ರವಿಸಲು ದಯಭಾವ
ಪರಿಹರಿಸಲು
ಬಹುದೇನೋ
ದಾರಿದ್ರ್ಯದ ನೇವ

ಎಂದು ಸೂಕ್ತ ಪರಿಹಾರೋಪಾಯವನ್ನೂ ಯೋಚಿಸಿದ್ದಾರೆ.

ಮೇಲೆ ನೀಲ ಕೆಳಗೆ ಜಲ ಮಧ್ಯದಿ ತನ್ನೊಡಲ ಸೊಬಗ ತೆರೆದ ತಿರೆ ಕವಿಗೆ ಸಗ್ಗವಾಗಿ ಕಂಡಿದೆ. ಆ ನೆಲದ ಮೇಲೆ ನಿಂದು ಎದೆ ತುಂಬಿ ಉಕ್ಕಿ ಬಂದ ಹಾಡು ಹೇಳಿದರೆ ಬದುಕು ನಿತ್ಯ ನೊರೆಹಾಲಾಗಿ ಕವಿಗೆ ವೇದ್ಯ–ವಾಗಿದೆ. ಇಲ್ಲಿಯ ಮಣ್ಣು ಜೀವ ಜಿವನದ ಕಣ್ಣಾಗಿ, ಬಾಳನ್ನು ಬೆಳಕಾಗಿ ಸುವ ಸಿರಿಯ ಹೊನ್ನಾಗಿದೆ. ಈ ಮಣ್ಣಲಿ ನಿಂದು ಸುತ್ತಲ ಪ್ರಕೃತಿಯ ಕರೆಗೆ 'ಓಗೊಡುವ' ಭಾವುಕತೆ ಬೆಳೆಯಬೇಕೆನ್ನುವ ಕವಿ ಆಶಯ ಪ್ರಶಂಸ ನಿಯ.

'........ದೀನ ಭಾವವನು ತೊರೆ
ನೀನಹುದು ನಿನ್ನ ದೊರೆ!'

ಎಂಬ ಸಾಲುಗಳಲ್ಲಿ ಆತ್ಮ ಪ್ರತ್ಯಯಕ್ಕೆ ಕವಿಕೊಟ್ಟ ಬೆಲೆಯು ಅರಿವು ನಮ-ಗಾಗುತ್ತದೆ. ಮಂಜು ಕಂಡು ಹಿಂಜರಿಯದೆ ಗೆಲುವೆನೆಂಬ ಪಂಜು ಹಿಡಿದು ಮುನ್ನುಗ್ಗಬೇಕೆಂಬುದು ಎದೆಯ ಹಂಬಲವಾಗಿರಬೇಕೆಂಬ ಕವಿಯ ಮನದಾಶೆ ಮೆಚ್ಚುವಂತಹದು.

"ಇಳೆಗಿಳಿಯುತಲೆ ಇರುಳು ಮನೆಗೆನುಸುಳಿ ಗುಂಗಾನ ಹಿತದ ಮೋಡಿಯನ್ನಾಡುತ್ತ ಒಮ್ಮೆ ನಾಸಿಕವೇರಿ, ಒಮ್ಮೆ ಕಿವಿಬಳಿಸಾರಿ ಸೂಜಿ ಮು(ಮ)ದ್ದನು ಒತ್ತಿ ಬೆರಳ ಸಂದಿಯೊಳಿಳಿದು ದೂರಜಾರುವ ಬಿಂಕದ ಸೋಗಿ" ಅವಳಾದರೂ ಕಲಾತ್ಮಕವಾಗಿ ಮನಸೆಳೆಯುತ್ತಾಳೆ. ಇಲ್ಲಿಯ ಕವಿಕಲ್ಪನೆ ಸ್ತುತ್ಯ.

'ಗಾಂಧಿ ನಾಂದಿ' ಎಂಬ ಪದ್ಯದಲ್ಲಿ ಬಂದ, ಭಾರತದ ಭಾಗ್ಯಕ್ಕೆ ನಿಜದ ನಾಂದಿಯಾದ ಗಾಂಧೀಜಿಯವರ ಮನದ ಹರಹು ನಭವನ್ನೇ ನಾಚಿಸುವದೆನ್ನುವ ಮಾತು ಅಕ್ಷರಶಃ ಒಪ್ಪುವಂತಹದಾದರೂ ಕರಮಚಂದ ಎಂಬ ಗಾಂಧೀಜಿ ತಂದೆಯವರ ಹೆಸರನ್ನು ಕರ್ಮಚಂದ ಎಂದು ಕರ್ಮ, ಚಂದ ಎಂದು ಎರಡು ಸಾಲುಗಳಲ್ಲಿ ಆ ಹೆಸರನ್ನು ಮುರಿದಿರಿಸಿದುದು ಆಭಾಸಕ್ಕೆ ಕಾರಣವಾಗಿದೆ. ಅದು ಕವನದ ಇಡಿಯಾದ ಸತ್ವವನ್ನೆ ನಿಶ್ಚೇತನಗೊಳಿಸಿದೆಯೆನ್ನಲಡ್ಡಿಯಿಲ್ಲ.

ಸಮಸ್ತ ಜನತೆಯ ಮನ–ಮನಗಳನ್ನು ಗೆದ್ದು ನಿಂತ 'ನೆಹರೂ' ಅವರ ರೂಪದರ್ಶನ 'ನಿಂತಿಹರು ನೆಹರೂಜಿ' ಪದ್ಯದಲ್ಲಿ ಸೊಗಸಾಗಿ ಬಂದಿದೆ. ಅವರ ವೈವಿಧ್ಯಮಯ ಜೀವನದ, ಆದರ್ಶಗಳ ನೆನಹು ಸಹೃದಯರ ಹೃದಯಕ್ಕೆ ಬಾರದಿರದು.

ಬೆಳಗು, ಬಾರೆ ತಾರೆ, ಸುಖದದಾರಿ, ಮಲ್ಲಿಗೆ, ಇಳಿಹೊತ್ತು—ಎಂಬ ಐದು ಕವನಗಳನ್ನು 'ಶಿಶುಗೀತ'ಗಳೆಂದು ಹೆಸರಿಸಿದ್ದಾರೆ. ಇದರಲ್ಲಿ 'ಸುಖದ ದಾರಿ' ಎಂಬುದು ಆಂಗ್ಲ ಕವನ ಭಾವಾನುವಾದ. ಶಿಶು ಸಹಜವಾದ ಛಂದ ಸಡಿಲವಾದರೂ ರೋಚಕತೆಯ ಕೊರತೆಯಾಭಾಸ ಕಾಣಬರುತ್ತದೆ. 'ಸುಖದ ದಾರಿ'ಯಲ್ಲಿ ಸುಖಸಾಧನೆಯ ಮಾರ್ಗವನ್ನು ತೋರಿಸಲೆತ್ನಿಸಿದ್ದಾರೆ. ಬಾನಂಗಳಲ್ಲಿ ಬೆಳಕಿನಲೆಗಳ 'ರಿಂಗಣ'ವನ್ನು ಗುರುತಿಸಿದ ಕವಿ ಇಳಿಹೊತ್ತಿನಲ್ಲಿ ಹನಿ ಮುತ್ತುಗಳನ್ನು ಉದುರಿಸಿ ಆನಂದ ಪಟ್ಟಿದ್ದಾರೆ.

ಪೂರ್ಣ ಚೆಲುವೆ, ನೈಜಪೂಜೆ, ಮಗು, ಶತಸಂವತ್ಸರ ಜ್ಯೋತಿ, ಸುಖದ-ದಾರಿ —ಎಂಬವು ಐದು ಆಂಗ್ಲ ಕವನಗಳ ಭಾವಾನುವಾದಗಳಾಗಿವೆ. ಮೂಲ ಭಾವದ ರಸವಂತಿಕೆಗೆ, ಕಲಾತ್ಮಕತೆಗೆ ಎರಡು ಬಗೆಯದಂತೆ ಅನುವಾದಿಸುವದು ದುರ್ಭರವಾದರೂ, ಕವಿ ತಮ್ಮ ಜಾಣ್ಮೆಯನ್ನು ತೋರ್ಪಡಿಸಿದ್ದಾರೆ.

'ರಿಂಗಣ'—ಕವಿಯ ಚೊಚ್ಚಲಕೃತಿ. ವಾಚ್ಯಾರ್ಥ ಇಲ್ಲಿಯ ಕವನಗಳಲ್ಲಿ ತನ್ನ ಗೆಲುವು ಸಾಧಿಸಿದೆ. ಶಬ್ದಗಳ ಜೋಡನೆಯ ಮೋಡಿ ಹಾಸು ಹೊಕ್ಕಿದೆ, ಶಬ್ದಗಳ ಅನುರಣನವನ್ನು ಉಳಿಸಿಕೊಂಡು ಬಂದ ಜಾಣ್ಮೆ ಸ್ತುತ್ಯ. ಇಲ್ಲಿಯ

ಪದ್ಯಗಳಲ್ಲಿ ಭಾವ ಇದೆ, ತಕ್ಕ ಭಾಷೆಯಿದೆ. ಆದರೆ ಸತ್ವಯುತ ಬಂಧುರತೆಯ ಕೊರತೆಯು ಅರಿವಾಗುತ್ತದೆ. ಆದರೂ ಇಲ್ಲಿಯ ಎರಡು ಚಿತ್ರ, ತಾಯಿ ಮಮತೆ, ಸೂಜಿಮದ್ದಿನ ಸೋಗಿ, ನಿಂತಿಹರು ನೆಹರುಜಿ ಸಾರ್ಥಕ ಕವನಗಳಾಗಿವೆ. ಕವಿಯ ಭವಿಷ್ಯತ್ತಿನ ಭರವಸೆಯನ್ನು ನಿರ್ವಿವಾದವಾಗಿ ನಿರೂಪಿಸುತ್ತವೆ.

★ ಬಿ.ವ್ಹಿ. ಗುಂಜೆಟ್ಟಿ

ವಚನ ಪಿತಾಮಹ: (ಸ್ಮಾರಕ ಗ್ರಂಥ) ಪ್ರ. ಸಂಪಾದಕರು: ಪ್ರಿ. ಬಿ. ಎಸ್. ಗಣಾಚಾರಿ, ಎಂ. ಎ. ಬಿ.ಟಿ.; ಸಂಪಾದಕರು: ಪ್ರೊ. ಸಂಗಮನಾಥ ಜಿ. ಹಂಡಿ ಎಂ. ಎ., ಪ್ರಕಾಶಕರು: ಬಿಜಾಪುರ ಸಂಗನಬಸವೇಶ್ವರ ಆರ್ಟ್ಸ ಕಾಲೇಜ ಪ್ರಕಟನೆ. ೧೯೬೭. ಪುಟಗಳು XXXX+೫೪೮ ಆಕಾರ: ಅಷ್ಟದಳ. ಬೆಲೆ: ಇಪ್ಪತ್ತು ರೂಪಾಯಿಗಳು.

ಕವಿಗಳ, ಸಾಹಿತಿಗಳ ಅಥವಾ ನಾಡಿನ ಒಳಿತಿಗಾಗಿ ದುಡಿದ ಮಹಾತ್ಮರುಗಳ ಉಪಕೃತಿಯನ್ನು ಹೊಂದಿದ ಸಮಾಜ ಅವರನ್ನು ಸತ್ಕರಿಸಬೇಕು, ಸನ್ಮಾನಿಸಬೇಕು. ಇಂತಹ ಸನ್ಮಾನ ನಾಡು ಜಾಗೃತವಾಗಿರುವುದರ ದ್ಯೋತಕ. ಇದರಿಂದ ಆ ಮಹನೀಯರಿಗೇನಾಗದಿದ್ದರೂ ಸಮಾಜಕ್ಕೆ ಸಮಾಧಾನ. ವಚನ ಸಾಹಿತ್ಯ, ಕರ್ಣಾಟಕ ಏಕೀಕರಣ, ವಿಜಾಪುರಗಳನ್ನು ಸ್ಮರಿಸಿಕೊಂಡರೆ ಸಾಕು, ಇವುಗಳಿಗಾಗಿ ಬಾಳನ್ನು ಮೀಸಲಿಟ್ಟ ಪುಣ್ಯ ಜೀವಿಗಳೊಬ್ಬರು ನಮ್ಮ ಕಣ್ಮುಂದೆ ನಿಲ್ಲುತ್ತಾರೆ. ಅವರೇ ಲಿಂಗೈಕ್ಯ ಡಾ. ಫ. ಗು. ಹಳಕಟ್ಟಿಯವರು. ನೂರಾರು ಚೇತನಗಳಿರುವ ದೊಡ್ಡ ಸಂಸ್ಥೆಯೊಂದು ಶ್ರಮಿಸಿದರೆ ಆಗಬಹುದಾದ ಕಾರ್ಯಗಳನ್ನು ಹಳಕಟ್ಟಿಯವರೊಬ್ಬರೇ ತಮ್ಮ ಬಾಳಿನುದ್ದಕ್ಕೂ ಹರಡಿಕೊಂಡು ಸಾರ್ಥಕರಾದರು. ಹಳಕಟ್ಟಿಯವರ ಸೇವೆ, ಕಾರ್ಯವ್ಯಾಪ್ತಿಗಳನ್ನು ಅವರು ಬದುಕಿದ್ದಾಗಲೇ ಸಮಾಜ ಗಮನಿಸಿದ್ದರೂ ಅದೆಷ್ಟರ ಮಟ್ಟಿಗೆ ಅವರಿಗೆ ನೆರವಾಯಿತೋ ಸಂದೇಹ. ಅವರಿಗೆ ಅವಶ್ಯವಾಗಿ ಒಂದು ಸಂಭಾವನಾ ಗ್ರಂಥವನ್ನು ಅರ್ಪಿಸಬೇಕಾಗಿತ್ತು. ಅವರು ನಮ್ಮಿಂದ ದೂರವಾದ ಮೇಲೆಯಾದರೂ "ವಚನ ಪಿತಾಮಹ" ಸ್ಮಾರಕ ಗ್ರಂಥವನ್ನು ಹೊರಡಿಸುತ್ತಿರುವುದು ಔಚಿತ್ಯಪೂರ್ಣ.

ಈ ಗ್ರಂಥದಲ್ಲಿ ೪೨ ಲೇಖನಗಳು, ಹಳಕಟ್ಟಿಯವರನ್ನು ಕುರಿತ ೧೦ ಕವನಗಳೂ ಇವೆ. ಸ್ಮಾರಕ ಗ್ರಂಥಗಳೆಂದ ಕೂಡಲೇ, ಸ್ಮರಿಸುವ ವ್ಯಕ್ತಿಯೊಬ್ಬರ ಬಗೆಗೆಯೇ ಲೇಖನಗಳಿರುವುದು ವೈವಿಧ್ಯತೆ ಹಾಗೂ ಒಟ್ಟಂದದ ದೃಷ್ಟಿಯಿಂದ ಅಷ್ಟೇನೂ ಒಳ್ಳೆಯದಲ್ಲ. ಅಂತಹ ಅದೇತನಕ್ಕೆ ಇಲ್ಲಿ ಅವಕಾಶವೀಯದೆ

ಗ್ರಂಥವನ್ನು ಐದು ಭಾಗಗಳಾಗಿ ಮಾಡಿಕೊಂಡಿದ್ದಾರೆ. ಒಂದನೆಯ ಭಾಗದಲ್ಲಿ ಹಳಕಟ್ಟಿಯವರ ವಿಷಯ, ಎರಡನೆಯದರಲ್ಲಿ ವಚನ ಸಾಹಿತ್ಯ ಮತ್ತು ಶರಣರು, ಮೂರನೆಯದರಲ್ಲಿ ಹರಿಹರ ಮತ್ತು ಶರಣರು. ನಾಲ್ಕನೆಯದರಲ್ಲಿ ಸಂಕೀರ್ಣ ಲೇಖನಗಳು, ಐದನೆಯದರಲ್ಲಿ ಹಳಕಟ್ಟಿಯವರನ್ನು ಕುರಿತ ಕವನಗಳಿವೆ. ಈ ಸೃಜನ, ವಿಮರ್ಶೆ, ಸಂಶೋಧನೆ ದೃಷ್ಟಿಯ ಬರಹಗಳು ಪ್ರತ್ಯಕ್ಷವಾಗಿಯಾಗಲಿ, ಪರೋಕ್ಷವಾಗಿಯಾಗಲಿ ಹಳಕಟ್ಟಿ ಹಾಗೂ ಅವರ ಕಾರ್ಯಕ್ಷೇತ್ರದೊಡನೆ ಬಾಂಧವ್ಯವನ್ನಿಟ್ಟುಕೊಂಡಿವೆ.

ಒಂದನೆಯ ಭಾಗದಲ್ಲಿನ ಪ್ರಾರಂಭದ ಲೇಖನ ಹಳಕಟ್ಟಿಯವರದು. ಅವರ ಸಾಧನೆಯ ಸಂಕ್ಷಿಪ್ತ ವರ್ಣನೆ ಇಲ್ಲಿದೆ. ಹಳಕಟ್ಟಿಯವರನ್ನು ಕುರಿತು ಬರೆದವರು ವಿಶೇಷ ಗಮನ ಕೊಡದೆ ಬಿಟ್ಟಿರುವ ಅವರ ಇತರ ಕಾರ್ಯಕ್ಷೇತ್ರಗಳ ವಿಚಾರ ಇಲ್ಲಿ ಬರುತ್ತದೆ. ಒಕ್ಕಲುತನದ ಸುಧಾರಣೆ, ಸಹಕಾರ ಬ್ಯಾಂಕ ಸ್ಥಾಪನೆ, ಕನ್ನಡ ಶಾಲೆಗಳ ಪ್ರಾರಂಭ, ರಾಜಕೀಯಕ್ಕಿಳಿದು ತನ್ಮೂಲಕ ವಿವಿಧ ಕಾರ್ಯಗಳನ್ನು ಕೈಗೊಂಡುದು ಇವೆಲ್ಲ ವಿಷಯಗಳು ಆನುಷಂಗಿಕವಾಗಿ 'ವಚನ ಪಿತಾಮಹ' ಮೊದಲಾದ ಲೇಖನಗಳಲ್ಲಿ ಸುಳಿದಿವೆಯಾದರೂ ಗಮನಾರ್ಹವಾಗಿ ಬಂದಿಲ್ಲ.

ಮೇಲೆ ಕಾಣಿಸಿದ ಹಳಕಟ್ಟಿಯವರ ಮುಖ್ಯವಾದ ಕಾರ್ಯಗಳ ಬಗ್ಗೆ ಪ್ರತ್ಯೇಕವಾಗಿ ಲೇಖನಗಳು ಬಂದಿದ್ದರೆ ಅವರ ಸಮಗ್ರ ಪರಿಚಯವಾಗುತ್ತಿತ್ತು. ಒಟ್ಟಾರೆ ಅವರ ಲೇಖನವೆ ಅವರನ್ನು ಸ್ಥೂಲವಾಗಿ ಪರಿಚಯಮಾಡಿಕೊಡುತ್ತದೆ. ಅಣ್ಣನವರು, ವಚನ ಪಿತಾಮಹ ಲೇಖನಗಳಲ್ಲಿ ಅವರ ಹೋರಾಟದ ಬದುಕು, ಸಾಹಿತ್ಯ ಸೇವೆ ಕಾರ್ಯಶ್ರದ್ಧೆಗಳನ್ನು ಮನಂಬುಗುವಂತೆ ಚಿತ್ರಿಸಲಾಗಿದೆ.

ಎರಡನೆಯ ಭಾಗ ವಚನ ಸಾಹಿತ್ಯ ಮತ್ತು ಶರಣರ ವಿಚಾರವನ್ನೊಳಗೊಂಡಿದೆ. ವಚನ ಸಾಹಿತ್ಯ ಕನ್ನಡದ ಅಮೂಲ್ಯ ಆಸ್ತಿ. ಇದರ ಬಗೆಗೆ ಎಷ್ಟು ಲೇಖನಗಳು, ಪುಸ್ತಕಗಳು ಬಂದರೂ ಸ್ವಾಗತವಿದ್ದೇ ಇದೆ. ವಚನಗಳಲ್ಲಿಯ ಶರಣರ ಮನೋಭಾವ, ಮಾನವಧರ್ಮಗಳನ್ನು ಇಲ್ಲಿರುವ ಪ್ರಬಂಧಗಳು ಸಾರ್ಥಕವಾಗಿ ತಿಳಿಸಿಕೊಡುತ್ತವೆ. ಲಿಂಗವಂತ ಧರ್ಮದ ಪ್ರಾಚೀನತೆ, ಶಾಸ್ತ್ರೀಯ ವ್ಯವಸ್ಥೆಗಳನ್ನು 'ವಚನವಾಙ್ಮಯ ವಿಚಾರ', 'ವಚನವಾಙ್ಮಯದ ಹಿನ್ನೆಲೆ', 'ಶೂನ್ಯಸಂಪಾದನೆಯ ದಿಗ್ದರ್ಶನ' ಮೊದಲಾದ ಲೇಖನಗಳಲ್ಲಿ ಕ್ರಮವಾಗಿ ವಿವೇಚಿಸಿರುವರು. ಶರಣ ಶರಣೆಯರನ್ನು ಕುರಿತ ಲೇಖನಗಳಲ್ಲಿ ಸಮಾಜವನ್ನು ಉದ್ಧರಿಸುವ ಅವರ ತತ್ತ್ವ ನಿರೂಪಣೆ ವ್ಯಾಪಕವಾಗಿ ಬಂದಿದೆ. ಅವರ ಕ್ರಿಯಾಶೀಲತೆ, ವಿಚಾರ ಪ್ರಚೋದನೆಗಳನ್ನು ಎತ್ತಿತೋರಿಸಿರುವರು.

ಮೂರನೆಯ ಭಾಗವನ್ನು ಹರಿಹರ, ಅವನ ಕೃತಿಗಳು, ಅಲ್ಲಿ ಬರುವ ಶರಣ ಶರಣೆಯರಿಗೆ ಮೀಸಲಿಟ್ಟಿರುವರು. 'ಹರಿಹರ ಕ್ಷೇತ್ರ ಮತ್ತು ಹರಿಹರ

ಕವಿಯ ಕಾಲ' ಇದು ಕವಿ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಲೇಖನವಾದರೆ, 'ಹರಿಹರ ಕವಿ ಮತ್ತು ಅವನ ಕೆಲವು ರಗಳೆಗಳು', 'ಹರಿಹರನ ಪುಷ್ಪರಗಳೆ' ಮೊದಲಾದ ಲೇಖನಗಳು ಅವನ ಕೃತಿಗಳ ಮೌಲ್ಯವಿವೇಚನೆಮಾಡಿವೆ. ಕನ್ನಡದ ಮಹಾಕವಿಯೊಬ್ಬನನ್ನು ಸಲಿಲವಾಗಿ ತಿಳಿಸಿ, ಅವನ ಕೃತಿಗಳಿಗೆ ಆರೋಗ್ಯಕರ ವಾದ ವಿಮರ್ಶೆಯನ್ನು ನೀಡಿದ್ದಾರೆ.

ಒಬ್ಬ ಕಥಾ ನಾಯಕ ಅಥವಾ ನಾಯಕಿಯನ್ನು ಕುರಿತು ಅನೇಕ ಕವಿ ಗಳು ಬರೆದಾಗ ಕಥೆಯೂ ದೃಷ್ಟಿಕೋನವೂ ಬದಲಾಗುತ್ತದೆ. ಎಲ್ಲ ಕವಿಗಳ ಕೃತಿಗಳನ್ನು ತೌಲನಿಕ ಅಧ್ಯಯನ ಮಾಡಿದಾಗ ಈ ಅಂತರ ಕಂಡುಬರುತ್ತದೆ. 'ಕೋಳೂರು ಕೊಡಗೂಸಿನ ಕಥಾವಾಹಿನಿ', ಕನ್ನಡ ಕಾವ್ಯಗಳಲ್ಲಿ ಬಸವಣ್ಣ ನವರು, ಕನ್ನಡ ಕಾವ್ಯಗಳಲ್ಲಿ ಕಣ್ಣಪ್ಪನ ಕಥೆ ಇವು ಇಂತಹ ಅಧ್ಯಯನ ದಿಂದ ಮೂಡಿಬಂದ ಲೇಖನಗಳಾಗಿವೆ. ವಿದ್ವಾಂಸರನ್ನು ವಿಚಾರಕ್ಕೀಡು ಮಾಡಿ ರುವ 'ಕೊಂಡಗುಳಿ ಕೇಶಿರಾಜ', 'ಪುಲಿಗೆರೆಯ ಸೋಮೇಶ್ವರ' ಇವರ ಬಗೆಗೆ ಸಂಶೋಧನಾತ್ಮಕ ಲೇಖನಗಳಿವೆ. ಸಾಹಿತ್ಯ ಚರಿತ್ರೆಗೆ ಇವು ಪ್ರಾಮಾಣಿಕವಾದ ಕೊಡುಗೆಗಳಾಗಿವೆ.

ಐದನೆಯ ಭಾಗದಲ್ಲಿ ಹಳಕಟ್ಟಿಯವರನ್ನು ಕುರಿತ ಹತ್ತು ಕವನಗಳಿವೆ. ನಾಡಿನ ಸರ್ವಾಂಗೀಣ ಪ್ರಗತಿಗಾಗಿ ದುಡಿದ ಪುಣ್ಯಜೀವಿಯ ಮಹತೆ ಸಾಧನೆ ಕವಿಗಳಿಗೆ ಪ್ರೇರಣೆಯನ್ನಿತ್ತಿದೆ. ಇಲ್ಲಿರುವ ಕವನಗಳಲ್ಲಿ ಕೆಲವು ಭಾವನಿರ್ಭರ ವಾಗಿ ಬಂದಂತೆ ಕಂಡರೂ ಕೆಲವು ಬತ್ತಿಹೋದಂತಿವೆ, ಕೆಲವು ಅವರ ಜೀವನದ ವರದಿಯನ್ನೊಪ್ಪಿಸುತ್ತವೆ. ಆದರೆ ಒಂದೆರಡು ಇದಕ್ಕೆ ಅಪವಾದವಾಗಿವೆ:

" ಗೋಳಗುಮ್ಮಟ ತಾನೆ ತಲೆಬಾಗಿಸಿತು ನಿಮಗೆ
ಏಳು ಸಲ ಕರೆದರೂ ಎಚ್ಚರಾಗದು ನಮಗೆ"

('ಹಳಕಟ್ಟಿಯವರ ಸ್ಮರಣೆ')

ಎನ್ನುವ ಸಾಲುಗಳು ಹಳಕಟ್ಟಿಯವರ ಸಾರ್ಥಕ ಜೀವನವನ್ನು, ಜನತೆ ಮಾಮೂಲಿನಂತಿರುವುದನ್ನು ಧ್ವನಿಪೂರ್ಣವಾಗಿ ಚಿತ್ರಿಸುತ್ತವೆ.

" ಬಾಳಿನುದ್ದಕು ಬೀಳು ಹೊಲವನಗೆದೇ ಅಗೆದೆ!
'ಬಸವನಾ ಹುಳು'ವಾಗಿ ಬೆಳ್ಳಿ ದಾರಿಯ ಕೊರೆದೆ!"

('ಹಳಕಟ್ಟಿಯವರನ್ನು ನೆನೆದು')

ಮೇಲಿನ ವಾಕ್ಯಗಳು ಅವರ ಅವಿಶ್ರಾಂತ ದುಡಿಮೆಯನ್ನು ಮನೋಜ್ಞವಾಗಿ ವರ್ಣಿಸಿವೆ.

ಶಿವಾನುಭವ ಗ್ರಂಥಮಾಲೆ, ಹಳಕಟ್ಟಿಯವರ ಜೀವನದ ಮಹತ್ವ ಘಟನೆಗಳನ್ನು ಕೊಟ್ಟಿರುವುದು ಉಪಯುಕ್ತವಾಗಿದೆ. ಹಳಕಟ್ಟಿಯವರ ಮತ್ತು ಅವರಿಗೆ ಸಂಬಂಧಿಸಿದ ಭಾವಚಿತ್ರಗಳನ್ನು ಸುಂದರವಾಗಿ ಅಚ್ಚುಹಾಕಿರುವರು. ಈ ಗ್ರಂಥದ ಕೆಲವು ಲೇಖನಗಳು ಸುಲಭವಾಗಿ ಬರೆದಂತೆ ಕಾಣಿಸಿದರೂ, ಬಹಳ ಲೇಖನಗಳು ಬೆಲೆಯುಳ್ಳವಾಗಿವೆ. ಅಚ್ಚಿನ ದೋಷಗಳಿಗೆ ಒಪ್ಪೋಲೆಯನ್ನು ಕೊಟ್ಟಿದ್ದರೂ ತಪ್ಪುಗಳು ಉಳಿದುಕೊಂಡಿವೆ. ಒಟ್ಟಿನಲ್ಲಿ ಕಡೆತನಕ ಬಂದ ಲೇಸನ್ನು ಗಮನಿಸಿದಾಗ ಇದೊಂದು ಓದಲರ್ಹವಾದ ಗ್ರಂಥವೆನಿಸುತ್ತದೆ.

★ **ಶ್ರೀಶೈಲಾರಾಧ್ಯ ಎಂ. ಎ.**

ಚರಿತ್ರೆಯ ಮಹಾ ಪುರುಷರು : ಲೇಖಕರು : ಎಚ್. ಕೃಷ್ಣರಾವ್; ಪ್ರಕಾಶಕರು : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೬೯. ಪುಟ-೫೦೭. ಬೆಲೆ : ಸಾಧಾರಣ ಪ್ರತಿ- ರೂ. ೧೨-೦೦; ಕ್ಯಾಲಿಕೊ ಪ್ರತಿ- ರೂ. ೧೪-೦೦.

ಜ್ಞಾನಾರ್ಜನೆಗಾಗಿ ವಿವಿಧ ವಿಷಯಗಳನ್ನು ಕುರಿತು ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗವು ಈಗಾಗಲೇ ಅನೇಕ ಗ್ರಂಥಗಳನ್ನು ಪ್ರಕಟಿಸಿದೆ. ಇತ್ತೀಚೆಗೆ ಪ್ರಕಟವಾದ ಶ್ರೀಮಾನ್ ಎಚ್. ಕೃಷ್ಣರಾಯರ "**ಚರಿತ್ರೆಯ ಮಹಾಪುರುಷರು**" ಗ್ರಂಥವು ಪ್ರಸಾರಾಂಗದ ಇನ್ನೊಂದು ಅಮೂಲ್ಯ ಕಾಣಿಕೆ. ಅನುವಾದಿತ ಗ್ರಂಥಗಳಿಗಿಂತ ಸ್ವತಂತ್ರ ಕೃತಿಗಳು ಹೆಚ್ಚು ಲಾಭದಾಯಕವೆಂದು ಹೇಳುವುದುಂಟು. ಶ್ರೀಮಾನ್ ಕೃಷ್ಣರಾಯರ ಕೃತಿಯು ಈ ಮಾತನ್ನು ಸಮರ್ಥಿಸುತ್ತದೆ. ಅನೇಕ ದಶಕಗಳ ವಿಶಾಲವಾದ ಅನುಭವ, ವಿಪುಲ ಗ್ರಂಥಗಳ ಅಭ್ಯಾಸ, ನಮ್ಮ ಜೀವನಾನುಭವಕ್ಕೆ ಸಂವಾದಿಯಾದುದನ್ನು ಹೇಳಲು ಇರುವ ಸ್ವಾತಂತ್ರ್ಯ–ಇವು ಈ ಗ್ರಂಥದಲ್ಲಿ ಸಮ್ಮಿಳಿತವಾಗಿವೆ.

ಚರಿತ್ರೆಯಲ್ಲಿ ಬರುವ ಮಹಾಪುರುಷರೆಲ್ಲ ಸಾಧು ಸಂತರಲ್ಲ, ಧರ್ಮದ ಪತಾಕೆಯನ್ನು ಹಾರಿಸಿದ ಆಚಾರ್ಯರಲ್ಲ, ಚಕ್ರವರ್ತಿಗಳಲ್ಲ. ಮಾನವನ ಇತಿಹಾಸವನ್ನು ರೂಪಿಸಿದವರಲ್ಲಿ ಅನೇಕರು ಹುಟ್ಟಿರದಿದ್ದರೆ ಜಗತ್ತು ನೆಮ್ಮದಿಯಿಂದ ಇರಬಹುದಾಗಿತ್ತೇನೊ! ಆದರೆ ಈ ಮಹಾಪುರುಷರು ಚರಿತ್ರೆಯ ಮೇಲೆ ತಮ್ಮ ವಿಶೇಷವಾದ ಪ್ರಭಾವವನ್ನು ಬೀರಿದ್ದಾರೆಂಬುದು ಮಾತ್ರ ಸುಳ್ಳಲ್ಲ. ಫ್ರಾನ್ಸ ದೇಶದ ಹದಿನಾಲ್ಕನೆಯ ಲ್ಯೂಯಿ, ಇಟಲಿಯ ಗೆರಿಬಾಲ್ಡಿ, ಜರ್ಮನಿಯ ಬಿಸ್ಮಾರ್ಕ್ ಮೊದಲಾದವರನ್ನು ಮಹಾಪುರುಷರ ಪಟ್ಟಕ್ಕೇರಿಸು

ವುದನ್ನು ಅನೇಕರು ಒಪ್ಪಲಿಕ್ಕಿಲ್ಲ. ನಮ್ಮ ದೇಶದ ಒಂದು ತಲೆಮಾರಿನ ಜನರು ಗಾಂಧೀಜಿಯವರನ್ನು ದೇವತ್ವಕ್ಕೆ ಏರಿಸಿದ್ದರು. ಆದರೆ ಹೊಸ ತಲೆಮಾರಿನ ಅನೇಕರು ಈಗ ಅದನ್ನು ಅಲ್ಲಗಳೆಯುತ್ತಿದ್ದಾರೆ. ಹೀಗಿರುವಾಗ, ನಾವು ಬುದ್ಧ, ಬಸವ ಅಥವಾ ಗಾಂಧೀಜಿಯವರ ಗುಣಗಳನ್ನು ಬೇರೆ ಕೆಲವರಲ್ಲಿ ಹುಡುಕಿದರೆ ತಪ್ಪಾಗಬಹುದು. ರಷ್ಯಾದ ಪೀಟರ್ ದೊರೆಯಾಗಲೀ, ಇಟಲಿಯ ನಿರ್ಮಾತೃ-ಕವೂರನಾಗಲೀ ನಮ್ಮ ಜೀವನ ಮೌಲ್ಯಗಳ ಮೇಲೆ ಹೆಚ್ಚಿನ ಪ್ರಭಾವ ಬೀರಿಲ್ಲ. ಹೀಗಿದ್ದರೂ ಇವರುಗಳು ಬೇರೆ ದೇಶಗಳ, ಬೇರೆ ಜನಾಂಗಗಳ ಹಾಗೂ ಬೇರೆ ಕಾಲಖಂಡಗಳ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ್ದಾರೆಂಬುದನ್ನು ನಾವು ನೆನಪಿಡಬೇಕು. ಇವರಲ್ಲದೆ, ಚೀನಾದ ತತ್ವಜ್ಞಾನಿ-ಋಷಿ ಕಾನ್‌ಫ್ಯೂಷಿಯಸ್, ರೋಮನ್ನರ ತತ್ವಜ್ಞಾನಿ-ಪ್ರಭು ಮಾರ್ಕಸ್ ಆರೂಲಿಯಸ್, ಅಮೇರಿಕಾದ ಶ್ರೇಷ್ಠ ಪುತ್ರನಾದ ಅಬ್ರಹಾಂ ಲಿಂಕನ್, ಇಟಲಿಯ ದೇಶಭಕ್ತನಾದ ಮ್ಯಾಟ್ಜಿನಿ, ಜಗದ್ವಿಖ್ಯಾತ ಚಕ್ರವರ್ತಿಗಳಾದ. ಅಶೋಕ, ಅಕ್ಬರ್, ಪೆರಿಕ್ಲಿಸ್, ಭಾರತದ "ಮಹಾತ್ಮ"ರಾದ ಗಾಂಧೀಜಿ ಹೀಗೆ ಹದಿಮೂರು ಮಹಾಪುರುಷರ ಜೀವನ ಚರಿತ್ರೆಗಳು ಇಲ್ಲಿ ಸಂಗ್ರಹವಾಗಿ ಬಂದಿವೆ

ಇಲ್ಲಿ ಬರುವ ಹದಿಮೂರು ಮಹಾಪುರುಷರು ಚರಿತ್ರೆಯ ಉದ್ದಗಲವನ್ನು ಪ್ರತಿನಿಧಿಸುತ್ತಾರೆಯೇ ಎಂಬ ಪ್ರಶ್ನೆಯನ್ನು ಲೇಖಕರು ಎತ್ತಿಲ್ಲ. ಅದನ್ನು ಎತ್ತಬೇಕಾಗಿಯೂ ಇಲ್ಲ. ಇನ್ನೂ ಕೆಲವರು, ಇವರಿಗಿಂತ ಮಿಗಿಲಾದವರು, ಇರಬಹುದು. ಇವರೆಲ್ಲರಿಂದಲೂ ನಾವು ಕಲಿತುಕೊಳ್ಳುವುದು ಬಹಳಿದೆ. ನಮ್ಮ ಜನಪದಕ್ಕೆ ಹೆಚ್ಚು ಪರಿಚಿತವಾದ ಹೆಸರುಗಳೆಂದರೆ ಅಶೋಕ, ಅಕ್ಬರ್, ಗಾಂಧೀಜಿ ಮತ್ತು ಲಿಂಕನ್. ಆದರೆ ಚೀನೀ ದಾರ್ಶನಿಕ ಕಾನ್‌ಫ್ಯೂಷಿಯಸ್ ಜಗತ್ತಿಗೆ ನೀಡಿದ ಕೊಡುಗೆ ಕಡಿಮೆಯಿಲ್ಲ. ದೊರೆ ಆರೂಲಿಯುಸನ ಚಿಂತನೆಗಳು ಅಮೂಲ್ಯವಾದವು. ಇಟಲಿಯ ಸುಪುತ್ರರಿಂದ ಹೊಸ ರಾಷ್ಟ್ರಗಳು ಧೈರ್ಯದ ಪಾಠವನ್ನು ಕಲಿಯಬಹುದು, ನಾವು ಚಿಕ್ಕಂದಿನಲ್ಲಿ ಮಹಮ್ಮದ್ ತಘಲಕನೊಬ್ಬ ಹುಚ್ಚುದೊರೆ ಎಂದುಕೊಂಡಿದ್ದೆವು ಈ ಹುಚ್ಚು ದೊರೆಯ ಬಗ್ಗೆ ಹೆಚ್ಚು ಹೆಚ್ಚು ತಿಳಿದಂತೆಲ್ಲ ನಮ್ಮ ಹಳೆಯ ಅಭಿಪ್ರಾಯಗಳು ಅಷ್ಟೇನೂ ಸಮರ್ಪಕವಲ್ಲ ಎಂದು ಅನ್ನಿಸಿದ್ದಿದೆ. ಹಾಗೆಯೇ, ಹದಿನಾಲ್ಕನೆಯ ಲ್ಯೂಯಿ, ಪೀಟರ್ ("ದಿ ಗ್ರೇಟ್") ದೊರೆ, ಬಿಸ್ಮಾರ್ಕ್ ಇವರುಗಳ ಜೀವನ ಚರಿತ್ರೆಗಳನ್ನು ಓದಿದ ಮೇಲೆ ಅನೇಕರಿಗೆ ಇಂತಹ ಭಾವನೆ ಬರಬಹುದು.

ಶ್ರೀಮಾನ್ ಕೃಷ್ಣರಾಯರ ವಿಷಯ ಸಂಗ್ರಹ ವಿಪುಲವಾದದ್ದು. ಅವರು ವಿಷಯದ ಹಿಂದು-ಮುಂದು, ಆಚೆ-ಈಚೆಗಳನ್ನು ಏಕ ಕಾಲಕ್ಕೆ ಸೆಳೆಯುತ್ತ ಕಥಾನಕವನ್ನು ವೇಗವಾಗಿ ನಡೆಯಿಸಿಕೊಂಡು ಹೋಗಬಲ್ಲರು. ಚಿಕ್ಕ, ಸರಳ ವಾಕ್ಯಗಳು ಈ ಓಟಕ್ಕೆ ಸಹಕಾರಿಯಾಗಿವೆ. ಅವರು ಆಗೀಗ

ತಡೆದುದು ಇದೆ. ಎಲ್ಲವನ್ನೂ ಹೇಳಿಯೇ ಬಿಡಬೇಕೆಂಬ ತವಕವೇ ಇದಕ್ಕೆ ಕಾರಣವಿರಬಹುದು.

ಎಲ್ಲ ಚರಿತ್ರೆಗಳಿಗೆ ಸವಿಸ್ತಾರವಾದ 'ಹಿನ್ನೆಲೆ'ಯನ್ನು ಲೇಖಕರು ಕೊಟ್ಟಿದ್ದಾರೆ. ಇವರಿಂದಾಗಿ ಮಹಾಪುರುಷರು ತಮ್ಮ ದೇಶ ಮತ್ತು ಕಾಲಗಳನ್ನು ಹೇಗೆ ಬದಲಿಸಿದರು ಎಂದು ನಾವು ಸುಲಭವಾಗಿ ಗುರುತಿಸಿಕೊಳ್ಳಬಹುದು. ಗ್ರೀಕರ ಕಾಲ, ರೋಮನ್ನರ ರಾಜ್ಯಭಾರ, ಸ್ವಾತಂತ್ರ್ಯ ಪೂರ್ವ ಇಟಲಿಯ ಪರಿಸ್ಥಿತಿ, ಚೀನಾದ ಸಾಮಾಜಿಕ ಹಿನ್ನೆಲೆ, ರಷ್ಯಾದ ಸಾಂಪ್ರದಾಯಿಕ ಸಮಾಜ, ಜರ್ಮನಿಯ ಪೂರ್ವೇತಿಹಾಸಗಳನ್ನು ನಾವು ತಿಳಿದುಕೊಳ್ಳಬಹುದು. (ಆದರೆ ಕೆಲವೊಮ್ಮೆ ಈ ಹಿನ್ನೆಲೆ ತುಸು ದೀರ್ಘವಾಗಿ "ನಮ್ಮ ಕಥಾ ನಾಯಕ" ಹಿಂದೆ ಬೀಳುತ್ತಾನೆ. ಉದಾ: ಪೆರಿಕ್ಲಿಸ್ ವೃತ್ತಾಂತ ಬರುವುದು ಹದಿಮೂರು ಪುಟಗಳ ಹಿನ್ನೆಲೆಯನಂತರವೆ!)

'ಚರಿತ್ರೆಯ ಮಹಾಪುರುಷರು' ಅವಸರ ಅವಸರವಾಗಿ ಹೊರ ಬಂದಿತೇ ಎಂಬ ಸಂಶಯ ಕೆಲವೊಮ್ಮೆ ಬರುತ್ತದೆ. ವಿಷಯದ ಎಳೆಗಳು ಹಿಂದು ಮುಂದಾದ ಉದಾಹರಣೆಗಳಿವೆ. ಅನೇಕ ಸಲ ಅರ್ಥ ಹಾಗೂ ಸಂದರ್ಭಗಳು ಸ್ಪಷ್ಟವಾಗಿಲ್ಲ, (ಪು. ೧೦, ೨೨೨, ೩೪೨ ಇ. ಇ.) ಪುನರುಕ್ತಿ ದೋಷಗಳೂ ಇವೆ. ಎಲ್ಲ ದೇಶೀಯ ಭಾಷೆಗಳೂ ಮಾನ್ಯಮಾಡಿದಂತಹ ಉಚ್ಚಾರವನ್ನು ಬಿಟ್ಟು ಲೇಖಕರು ಇಂಗ್ಲಿಷ್ ಗ್ರಂಥಗಳಿಂದ ಸಾಧುವಲ್ಲದ ರೂಪಗಳನ್ನೆ ಎತ್ತಿದ್ದಾರೆ. (ಟೋಡರ್ ಮಲ್, ಟಾನ್‌ಸೆನ್, ಜಿಹಂಗಾರ್ ಇ. ಇ.) ಹೀಗೆ ಅವಸರದ ಗ್ರಂಥ ರಚನೆಗೆ ಸಹಜವಾದ ಅನೇಕ ದೋಷಗಳು ಉಳಿದುಕೊಂಡಿವೆ. ಗ್ರಂಥದ ಉದ್ದಕ್ಕೂ ಬಿಟ್ಟೂಬಿಡದೆ ಬರುವ ಮುದ್ರಣ ದೋಷಗಳು ಅಕ್ಷಮ್ಯ. ಈ ಗ್ರಂಥವನ್ನು ಮೆಚ್ಚುವ ಯಾರೂ ಈ ಎಲ್ಲ ದೋಷಗಳನ್ನು ಗಮನಿಸದೆ ಇರಲಾರರು.

ಶ್ರೀಮಾನ್ ಕೃಷ್ಣರಾಯರಂಥ ವಿದ್ವಾಂಸರು ಇಂತಹ ಗ್ರಂಥಗಳನ್ನು ಬರೆದು ನಮ್ಮ ಜ್ಞಾನ ಸಂಪತ್ತನ್ನು ಬೆಳೆಸುವಲ್ಲಿ ಮಾರ್ಗದರ್ಶನ ಮಾಡಿದ್ದಾರೆ. ಇಂತಹ ಪ್ರಯತ್ನಗಳು ಇಷ್ಟಕ್ಕೆಯೇ ನಿಲ್ಲಬಾರದು. ಪ್ರಸಾರಾಂಗದ ಸಮರ್ಥ ನೇತೃತ್ವದಲ್ಲಿ ಈ ಕಾರ್ಯ ಮುಂದುವರಿಯಲಿ.

★ ಹಾ. ವೆಂ. ನಾಗೇಶ

ಸಾದರ ಸ್ವೀಕಾರ

೧. **ಶ್ರೀ ಕುವೆಂಪು—ಭಾಷಣಗಳು-ಬಿನ್ನವತ್ತಳೆಗಳು**

ಸಂಪಾದಕರು: ಶ್ರೀ ಕೊ. ಚೆನ್ನಬಸಪ್ಪ. ಪ್ರಕಾಶಕರು: ಬಳ್ಳಾರಿ ಸಾಹಿತ್ಯ ಅಕ್ಯಾಡೆಮಿ, ಬಳ್ಳಾರಿ ಪುಟ: ೧೨೫+xvi ಬೆಲೆ: ೭-೦೦ ೧೯೬೬.

೨. **Veerasaiva Vachanas & Vachanakaras :—**

By. P. Sama Rao. Published by: The Bellary Sahitya Akademi, Bellary. Pages: 196+10. 1966.

೩. **ತಪ್ತ : (ಎಂಟು ಸಣ್ಣ ಕತೆಗಳು)**

ಲೇಖಕರು: ಶ್ರೀ ಕೃಷ್ಣ ಆಲನಹಳ್ಳಿ. ಪ್ರಕಾಶಕರು: ಸಮೀಕ್ಷಕ ಪ್ರಕಾಶನ ಮೈಸೂರು-4. ಪುಟ : ೧೨೯+xvii ಬೆಲೆ: ಸಾಧಾರಣ ಪ್ರತಿ : ೪-೦೦; ಕ್ಯಾಲಿಕೊ ಪ್ರತಿ : ೧೦-೦೦. ೧೯೭೦.

೪. **ಕಿರಣ ವೀಣೆ : (ಕವನ ಸಂಕಲನ)**

ಕವಿ: ಸತ್ಯಾನಂದ. ಪ್ರಕಾಶಕರು : ಮಿತ್ರಭಾರತಿ ಪ್ರಕಾಶನ, ವಿಜಾಪುರ. ಪುಟ: ೧೦೬+೧೨. ಬೆಲೆ: ೩-೦೦; ೧೯೭೧.

೫. **ಜೇಂಗೊಡ : (ಜಾನಪದ ಸಂಗ್ರಹ)**

ಕವಿ: ಶ್ರೀ ಎನ್. ಆರ್. ನಾಯುಕ ಪ್ರಕಾಶಕರು : ಎನ್. ಆರ್. ನಾಯುಕ. ಕನ್ನಡ ವಿಭಾಗ, ಆರ್ಟ್ಸ್ ಮತ್ತು ಸಾಯನ್ಸ ಕಾಲೇಜು, ಹೊನ್ನಾವರ (ಉ. ಕನ್ನಡ) ಪುಟ: ೧೧೭ ಬೆಲೆ: ೩-೦೦. ಜೂನ್ ೧೯೭೧.

೬. **ದಾರಿಕಾರ : (ಕವಿತಾ ಸಂಕಲನ)**

ಕವಿ: ಲಿಂಗಣ್ಣ ಸಂಗಮೇಶ ಚನ್ನಳ್ಳಿ. ಪ್ರಕಾಶಕರು: ಡಾ. ಸಿ. ಎಮ್. ಜುರ್ಜಿ ಹಾಳಮಠ, ಚೇರಮನ್, ಮೃಡಗಿರಿ ಗ್ರಂಥಮಾಲೆ, ಮುಂಡರಗಿ. ಪುಟ: ೨೨+೫ ಬೆಲೆ: ೧-೫೦; ೧೯೭೧.

ಸಂಪಾದಕೀಯ

ಕರ್ನಾಟಕ ಭಾರತಿ–ವಿಜ್ಞಾನ ಭಾರತಿ

‘ಕರ್ನಾಟಕ ಭಾರತಿ’ ಈ ವರೆಗೆ ಸುಪ್ರಸಿದ್ಧ ವಿದ್ವಾಂಸರ ಲೇಖನಗಳನ್ನು ಪ್ರಕಟಿಸುವುದರ ಮೂಲಕ, ಹೊಸ ಹೊಸ ಲೇಖಕರನ್ನು ಹುಡುಕಿ ಅವರಿಗೆ ಲೇಖನ ವ್ಯವಸಾಯ ದೀಕ್ಷೆಯನ್ನು ನೀಡಿದೆ. ಹೀಗಾಗಿ ಪ್ರತಿ ವರುಷ ‘ಭಾರತಿ’ಗೆ ಸುಸಜ್ಜಿತ ಲೇಖಕವರ್ಗ ಸಿದ್ಧವಾಗುತ್ತಲಿದೆ. ಇವರು ಉತ್ಸಾಹದಿಂದ ಬರೆದು ಕಳಿಸುತ್ತಲಿರುವ ಲೇಖನಗಳಿಗೆ ಅವಕಾಶ ಕೊಡುವುದು ‘ಭಾರತಿಯ’ ಆದ್ಯಕರ್ತವ್ಯ. ಆದಕ್ಕಾಗಿ ಈ ವರುಷದ ರಾಜ್ಯೋದಯ ದಿನದಂದು ಪ್ರಾರಂಭವಾಗಲಿರುವ ‘ವಿಜ್ಞಾನ ಭಾರತಿ’ಗೆ ವಿಜ್ಞಾನ ವಿಷಯಕ ಲೇಖನಗಳನ್ನು ವರ್ಗಾಯಿಸಿ, ಮಿಕ್ಕ ಲೇಖನಗಳನ್ನು ಮಾತ್ರ ಹೊತ್ತುಕೊಂಡು ಹೊಸ ವರ್ಷದ ಈ ಸಂಚಿಕೆ ಹೊರಬರುತ್ತಲಿದೆ. ‘ಭಾರತಿ’ ತನ್ನ ಪ್ರಗತಿಗಾಗಿ ಮೊದಲಿನಂತೆ ಲೇಖಕ ವರ್ಗ, ವಾಚಕ ವರ್ಗದಿಂದ ಸಲಹೆ ಸಹಕಾರಗಳನ್ನು ಬಯಸುತ್ತದೆ.

ಕುಲಪತಿಗಳ ವಿದೇಶ ಪ್ರಯಾಣ

ಕರ್ನಾಟಕ ವಿಶ್ವವಿದ್ಯಾಲಯದ ಭಾರತೀಯ ಘನತೆಯನ್ನು ಉಳಿಸಿಕೊಂಡು ಬೆಳಸಿಕೊಂಡು ಬಂದ ನಮ್ಮ ಜನಪ್ರಿಯ ಕುಲಪತಿಗಳಾದ ಡಾ|| ಎ. ಎಸ್. ಅಡಕೆ, ಅವರು ಅದಕ್ಕೆ ಹೆಚ್ಚಿನ ಜಾಗತಿಕ ಮನ್ನಣೆಯನ್ನು ಒದಗಿಸುವಲ್ಲಿ ವಿಶೇಷ ಶ್ರಮವಹಿಸುತ್ತಲಿರುವರು. ಈ ದೃಷ್ಟಿಯಿಂದ ಪ್ರತಿ ವರುಷ ಒಂದೆರಡುಸಲ ವಿದೇಶಕ್ಕೆ ಆಮಂತ್ರಿತರಾಗಿ ಹೋಗುತ್ತಲಿರುವ ಅವರು, ಈ ವರ್ಷ ಆಫ್ರಿಕಾ ದೇಶದ ಘಾನಾದಲ್ಲಿ ಜರುಗಲಿರುವ ಕಾಮನ್‌ವೆಲ್ಥ್ ವಿಶ್ವವಿದ್ಯಾಲಯಗಳ ಕುಲಪತಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಇದೇ ೧೯-೮ ೭೧ರಂದು ಪ್ರಯಾಣ ಬೆಳಸಿದರು. ಅವರ ವಿದೇಶಯಾತ್ರೆ ಸುಖಕರವಾಗಲಿ, ಸಫಲವಾಗಲಿ ಎಂದು ಭಾರತಿ ಹೃತ್ಪೂರ್ವಕ ಹಾರೈಸುತ್ತದೆ.

ಕಂಬನಿ

ಸಾಹಿತ್ಯ ಕ್ಷೇತ್ರದ ದಿಗ್ಗಜಗಳಾದ ಡಿ.ಎಲ್.ಎನ್., ಅ.ನ.ಕೃ., ಹುಯಿಲಗೋಳ ನಾರಾಯಣರಾಯರು, ಕೆ. ಎಸ್. ಧರಣೇಂದ್ರಯ್ಯನವರು ನಿಧನರಾದುದರಿಂದ ಕನ್ನಡಕ್ಕೆ ನಿಜವಾಗಿಯೂ ಅಪಾರ ಹಾನಿಯಾಗಿದೆ.

ಡಿ. ಎಲ್. ಎನ್. ಎಂಬುದು ಪಾಂಡಿತ್ಯ-ಪ್ರಾಮಾಣಿಕತೆಗಳಿಗೆ ಇನ್ನೊಂದು ಹೆಸರು. ಕಳೆದ ೩–೪ ದಶಕಗಳಿಂದ ಸಂಪಾದಕರಾಗಿ, ಸಂಶೋಧಕರಾಗಿ,

ಪ್ರಾಧ್ಯಾಪಕರಾಗಿ ಅವರು ಸಲ್ಲಿಸಿದ ಸೇವೆ ಗಮನಾರ್ಹವಾಗಿದೆ. ಮೈಸೂರು ವಿಶ್ವವಿದ್ಯಾಲಯಕ್ಕೆ, ತನ್ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ವಿದ್ವತ್ತಿನ ತಳಹದಿ ಹಾಕಿದ ಕೀರ್ತಿ ಶ್ರೀಯುತರಿಗೆ ಸಲ್ಲುತ್ತದೆ.

ಅ.ನ.ಕೃ. ಕನ್ನಡದ ಮನೆಮಾತು. ಕಾದಂಬರಿ, ಕಥೆ, ನಾಟಕ, ಪ್ರಬಂಧ ಮುಂತಾದ ಕ್ಷೇತ್ರಗಳಲ್ಲಿ ಕೈದಣಿ ಸೇವೆಗೈಯುವುದರ ಮೂಲಕ, ಸಾಹಿತ್ಯದಲ್ಲಿ 'ಪ್ರಾಮಾಣಿಕತೆ'ಗೆ ಸ್ಥಾನವನ್ನು ಗಳಿಸಿಕೊಟ್ಟವರು ಅ. ನ. ಕೃ. ಕನ್ನಡದ ಏಳ್ಗೆಗಾಗಿ ಹೋರಾಟ ನಡೆಸಿದ, ಕನ್ನಡ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದ ತನ್ನ ತಲೆಮಾರಿನ ವ್ಯಕ್ತಿಗಳಲ್ಲಿ ಅವರದು ಎದ್ದುಕಾಣುವ ವ್ಯಕ್ತಿತ್ವ.

'ಉದಯವಾಗಲಿ' ಎಂಬ ನಾಡಗೀತೆಯ ಮಂತ್ರದಿಂದ ನಾಡವರನ್ನು ಬಾಂಧವ್ಯದಲ್ಲಿ ಬೆಸೆದವರು ಶ್ರೀ ಹುಯಿಲಗೋಳ ನಾರಾಯಣರಾಯರು. ಕಷ್ಟ ಕಾಲದಲ್ಲಿ ಕನ್ನಡವನ್ನು ಬದುಕಿಸಲು ದುಡಿದ ಮಹಾ ವ್ಯಕ್ತಿಗಳಲ್ಲಿ ಒಬ್ಬರಾದ ಇವರು ರಂಗಭೂಮಿ, ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಹಗಲಿರುಳೂ ಸೇವೆಸಲ್ಲಿಸಿದವರು.

ಕೆ. ಎಸ್. ಧರಣೇಂದ್ರಯ್ಯನವರು ಉನ್ನತ ವರ್ಗದ ಪ್ರಾಧ್ಯಾಪಕರಾಗಿ, ಕನ್ನಡ ಭಾಷೆ—ಸಾಹಿತ್ಯಗಳ ಪರಮ ಭಕ್ತರಾಗಿ ದುಡಿದವರು. "ರಾಜ್ಯ ಸಂಸ್ಕೃತಿ ಇಲಾಖೆ"ಯ ಏಳ್ಗೆಗೆ ಶ್ರಮಿಸಿ, ತನ್ಮೂಲಕ ಅನೇಕ ಸಾಹಿತ್ಯಕೃತಿಗಳು ಕನ್ನಡಿಗರ ಮನೆಮನೆಗೆ ಮುಟ್ಟುವಂತೆ ಮಾಡಿದವರು.

ನಮ್ಮನ್ನಗಲಿದ ಸಾಹಿತ್ಯ ಕ್ಷೇತ್ರದ ಈ ಪುಣ್ಯ ಪುರುಷರಿಗೆ 'ಭಾರತಿ' ಶ್ರದ್ಧಾಂಜಲಿಗಳನ್ನು ಸಮರ್ಪಿಸುತ್ತದೆ.

ರಾಜ್ಯ ಸಾಹಿತ್ಯ ಅಕಾಡೆಮಿ ಗೌರವ

ಪ್ರತಿ ವರುಷ ನಮ್ಮ ರಾಜ್ಯ ಸಾಹಿತ್ಯ ಅಕಾಡೆಮಿ ಕನ್ನಡದ ಸುಪ್ರತಿಷ್ಠ ಸಾಹಿತಿಗಳನ್ನು ಗೌರವಿಸುತ್ತಿರುವುದು ಅಭಿಮಾನದ ಸಂಗತಿ. ಈ ವರುಷ ಈ ಗೌರವವನ್ನು ಗಳಿಸಿದವರು ಶ್ರೀಗಳಾದ ಬೆಟಗೇರಿ ಕೃಷ್ಣಶರ್ಮ, ಡಾ. ಆರ್. ಸಿ. ಹಿರೇಮಠ, ಎಸ್. ವಿ. ಪರಮೇಶ್ವರಭಟ್ಟ, ಸಿ. ಕೆ. ವೆಂಕಟರಾಮಯ್ಯ ಮತ್ತು ಎಸ್. ವಿ. ರಂಗಣ್ಣ. ಕನ್ನಡಕ್ಕಾಗಿ ತ್ರಿಕರಣಪೂರ್ವಕ ದುಡಿಯುತ್ತಿರುವ ಇವರಿಗೆ ಲಭಿಸಿದ ಗೌರವ ಕನ್ನಡಕ್ಕೆ ಒಂದು ದೊಡ್ಡ ಹೆಮ್ಮೆ. ಭಾರತಿ ಈ ಐವರು ವಿದ್ವಾಂಸರಿಗೆ ಹೃತ್ಪೂರ್ವಕ ಅಭಿವಂದನೆಗಳನ್ನು ಸಲ್ಲಿಸುತ್ತಿದೆ.

ಲೇಖಕರ ಪರಿಚಯ

೧. **ಶೈಲಜಾ :**

ಕನ್ನಡ ಅಧ್ಯಾಪಿಕೆ, ಸರಕಾರಿ ಆರ್ಟ್ಸ್ ಮತ್ತು ಸೈನ್ಸ ಕಾಲೇಜ, ಗುಲ್ಬರ್ಗಾ.

೨. **ಪ್ರ. ಗೋ. ಕುಲಕರ್ಣಿ :**

ವಿಶ್ರಾಂತ ಶಿಕ್ಷಕರು, ೨೦೦/೩೩ ಹಿಂದವಾಡಿ, ಬೆಳಗಾಂವಿ

೩. **ಜ್ಯೋತಿ ಹೊಸೂರ :**

ಕನ್ನಡ ಅಧ್ಯಾಪಕರು, ವಾಣಿಜ್ಯ ಮಹಾವಿದ್ಯಾಲಯ, ಕಾಗವಾಡ (ಬೆಳಗಾಂವಿ ಜಿ.)

೪. **ಎಂ. ಬಿ. ಚರಂತಿಮಠ :**

ಸಮಾಜ ವಿಜ್ಞಾನದ ಅಧ್ಯಾಪಕರು, ಎಸ್. ಎಂ. ಎಸ್. ಕಾಲೇಜ, ಅಥಣಿ

೫. **ಆರ್. ಎನ್. ಗುರವ :**

ವಿಶ್ರಾಂತ ರೆವಿನ್ಯೂ ಅಧಿಕಾರಿಗಳು, ಸಿವ್ಹಿಲ್ ಆಸ್ಪತ್ರೆರಸ್ತೆ, ಧಾರವಾಡ.

೬. **ಕೃಷ್ಣಮೂರ್ತಿ ಕಿತ್ತೂರ :**

ಕನ್ನಡ ಅಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ಗುಲ್ಬರ್ಗಾ

೭. **ಜಿ. ಕೃಷ್ಣರಾವ್ :**

ಕನ್ನಡ ಅಧ್ಯಾಪಕರು, ವಾಣಿಜ್ಯ ಮಹಾವಿದ್ಯಾಲಯ, ರಾಯಚೂರು

೮. **ಭೋಜರಾಜ ಪಾಟೀಲ :**

ಕನ್ನಡ ಅಧ್ಯಾಪಕರು, ಶ್ರೀ ಮಹಾಂತಸ್ವಾಮಿ ಕಾಲೇಜ್, ಹಂಸಭಾವಿ (ಧಾರವಾಡ ಜಿ.)

೯. **ಬಿ. ಕೆ. ಕಡಬಡಿ**

ಲಕ್ಚರರ-ಪ್ರಾಕೃತ, ಕರ್ನಾಟಕ ಕಾಲೇಜ, ಧಾರವಾಡ.

೧೦. **ಜಯಂತ ಕ್ಯಾಕಿಣಿ :**

ವಿದ್ಯಾರ್ಥಿ. ಕ್ಯಾನರಾ ಕಾಲೇಜ, ಕುಮಟಾ

೧೧. **ಚೆನ್ನವೀರ ಕಣವಿ :**

ನಿರ್ದೇಶಕರು, ವ್ಯಾಸಂಗ ವಿಸ್ತರಣ ಮತ್ತು ಪ್ರಕಟನವಿಭಾಗ, ಕ. ವಿ. ವಿ. ಧಾರವಾಡ.

೧೨. **ಸೀತಾರಾಮ ಜಾಗೀರದಾರ :**

ಅಂಚೆ ಇಲಾಖೆಯಲ್ಲಿ ದುಡಿಯುತ್ತಿರುವ ಕನ್ನಡ ಬರಹಗಾರರು, ೩-೫-೨೫೮/೧ ನಾರಾಯಣಗುಡ (ವಿಠಲವಾಡಿ) ಹೈದ್ರಾಬಾದ.

೧೩. **ಆರ್. ಆರ್. ಅತಗೂರ :**

ಅಧ್ಯಾಪಕರು, ಗ್ರಂಥಾಲಯ ವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೪. **ಎಂ. ವ್ಹಿ. ಜಂಬುನಾಥನ್ :**

ವಿಶ್ರಾಂತ ಪ್ರಾಧ್ಯಾಪಕರು, ಮಾನಸಗಂಗೋತ್ರಿ, ಮೈಸೂರು

೧೫. **ಎಸ್. ಎಸ್. ಕೋತಿನ :**

ಕನ್ನಡ ಅಧ್ಯಾಪಕರು, ಕೋರೆ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜ ಚಿಕ್ಕೋಡಿ

೧೬. **ಎಂ. ಎಂ. ಕಲಬುರ್ಗಿ :**

ರೀಡರ, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೭. **ಎಸ್. ರಾಜಶೇಖರ :**

ಇತಿಹಾಸ ಅಧ್ಯಾಪಕರು, ಕರ್ನಾಟಕ ಕಾಲೇಜ್, ಧಾರವಾಡ.

೧೮. **ಎಸ್. ಡಿ. ಸವದತ್ತಿಮಠ :**

ಕನ್ನಡ ಅಧ್ಯಾಪಕರು, ಮುನಸಿಪಲ್ ಆರ್ಟ್ಸ್ ಕಾಲೇಜ್, ನರಗುಂದ.

೧೯. **ಎಸ್. ಎಂ. ಯಲಿಗಾರ :**

ಮುಖ್ಯಾಧ್ಯಾಪಕರು, ವೀರಪುಲಿಕೇಶಿ ಹೈಸ್ಕೂಲ, ಬಾದಾಮಿ.

೨೦. **ಬಿ. ವ್ಹಿ. ಗುಂಜೆಟ್ಟಿ :**

ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜ್, ಧಾರವಾಡ.

೨೧. **ಶ್ರೀಶೈಲಾರಾಧ್ಯ :**

ಕನ್ನಡ ಅಧ್ಯಾಪಕರು, ಸರಕಾರಿ ಆರ್ಟ್ಸ್ ಮತ್ತು ಸೈನ್ಸ್‌ಕಾಲೇಜ, ಹಾಸನ.

೨೨. **ಹಾ. ವೆಂ. ನಾಗೇಶ :**

ಸಮಾಜ ವಿಜ್ಞಾನದ ಅಧ್ಯಾಪಕರು, ಜೆ.ಎಸ್.ಎಸ್. ಕಾಲೇಜ, ಧಾರವಾಡ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನೆಗಳು

I. Text Books (ಪಠ್ಯಪುಸ್ತಕಗಳು)

		PRICE Rs. Ps.
1	Selections from Mahābhārata & Rāmāyaṇa (Sanskrit)	3·00
2	Sanskrit Selections for P. U. C. (Arts & Science)	1·50
3	संस्कृत सौदामिनी	2·00
4	ಕಾವ್ಯಮಂಜರಿ : ಭಾಗ ೧, ಸಂಪುಟ ೧	1·00
5	ಕಾವ್ಯಮಂಜರಿ : ಭಾಗ ೧, ಸಂಪುಟ ೨	1·00
6	ಕಾವ್ಯಮಂಜರಿ : ಭಾಗ ೨, ಸಂಪುಟ ೧	1.00
7	ಕಾವ್ಯಮಂಜರಿ : ಭಾಗ ೨, ಸಂಪುಟ ೨	1·00
8	ಕಾವ್ಯಮಂಜರಿ : ಭಾಗ ೧, ಸಂಪುಟ ೩	2·00
9	ಕಾವ್ಯವಿಲಾಸ	1·50
10	ಕಾವ್ಯಕುಂಜ	1·50
11	ಗದ್ಯವಿಲಾಸ	2·50
12	ಗದ್ಯಮಂಜರಿ	2·00

II. Research Publications Series (ಸಂಶೋಧನ ಗ್ರಂಥಮಾಲೆ)

1 Pleistocene Studies in the Malaprabha Basin (Joint Publication of Karnatak University, Dharwar and Deccan College Research Institute, Poona) —*R. V. Joshi* 15·00

2 The Karnatak Theatre Ord. binding 3·00
—*H. K. Ranganath* Half calico 5·00

3 Some Problems in Jaina Psychology Full cal. 7·00
—*T. G. Kalghatgi* Half calico 6·00

4 The Concept of Comedy —*G. S. Amur* 7·00
$ 2 or Sh. 13

5 Local Self-Government in Mediaeval Karnatak 7·00
—*G. S. Dikshit* $ 2 or Sh. 13

6 Basic Syllabus in Practice —*N. R. Hiremath* 10·00
$ 3 or £. 1

7 The Later Phase in the Development of W. B. Yeats —*S. R. Mokashi* 10·00
$ 3 or £. 1

8 Some Studies in Boolean Algebra 7·00
—*E. Sampathkumarachar* $ 2 or Sh 14

9 A History of South Kanara —*K. V. Ramesh* 30.00

10 A Critical Study of the Hindu Astronomy in the Light and Language of the Modern 12·00
—*D. A. Somayaji* $ 4 or Sh. 25

11 The Havyaka Dialect of North Kanara 12·00
—*K. G. Shastri* $ 4 or Sh. 25

12 Keladi Polity —*K. N. Chitnis* (In Press)

13 ನೇಮಿಚಂದ್ರ —ಬಿ. ಎಸ್. ಕುಲಕರ್ಣಿ 12·00

14 ಕನ್ನಡ ಜಾನಪದ ಗೀತಗಳು —ಜಿ. ಎಸ್. ಗದ್ದಗಿಮಠ 10·00

15 ಕನ್ನಡ ಸಾಹಿತ್ಯದಲ್ಲಿ ಹಾಸ್ಯ —ಎಂ. ಎಸ್. ಸುಂಕಾಪುರ 8·00

III. Extension Lectures Publications Series
(ವಿಶೇಷ ಉಪನ್ಯಾಸ ಗ್ರಂಥಮಾಲೆ)

1 Introduction to Karnatak Mysticism 1.50
—*R. D. Ranade* Cents 50 or Sh. 4

2 Hindu Code Bill —*P. B. Gajendragadkar* 2·00

3 Karnataka's Trans-Oceanic Contacts 3.00
—*B. A. Saletore*

4 Kālidāsa (2nd Edn.) —*R. D. Karmarkar* (In Press)

5 Bhavabhūti —*R. D. Karmarkar* 3.00
$ 1 or Sh. 7

6 Bāṇa —*R. D. Karmarkar* 3·00

7 Rockets, Satellites and Space Travel 2·00
—*G. B. Pant*

8 Purandara and Haridāsa Movement 6.00
—*M. V. Krishna Rao* $ 2 or Sh. 13

9 Śaṅkara's Advaita —*R. D. Karmarkar* 3·00

10 ಮಹಾಕವಿ ಷಡಕ್ಷರದೇವ
—ಜಿ. ಶಿವಮೂರ್ತಿಶಾಸ್ತ್ರೀ } 3.00 / 4·00

11 ಸಾಹಿತ್ಯ : ಸಂಪ್ರದಾಯ ಮತ್ತು ಹೊಸ ಮಾರ್ಗ
— ವಿ. ಸೀತಾರಾಮಯ್ಯ 4·00

12 ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು 3·00
—ದ. ರಾ. ಬೇಂದ್ರೆ

13 ವಿಚಾರ ಸಾಹಿತ್ಯ ನಿರ್ಮಾಣ — ಕೆ. ಎಸ್. ಕಾರಂತ 2·00

14 ಕನ್ನಡ ರಂಗಭೂಮಿಯ ಪುರೋಭಿವೃದ್ಧಿ
— ಆದ್ಯ ರಂಗಾಚಾರ್ಯ 2·50

15 ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು
—ರಂ. ಶ್ರೀ. ಮುಗಳಿ 3·00

IV. Economics Series

1 A Survey of Handicrafts in Eight Districts of the Mysore State —*S. S. Mensinkai* 5·00

2 Community Development and Employment 3·00
—*D. M. Nanjundappa*

3 Research Reporting in Social Sciences 2·00
—*M. H. Gopal*

4 Economy of Scarcity Areas —*T. K. Meti* 4·00
$ 1 or Sh. 7

5 Foreign Trade and Economic Development 1·50
—*V. L. D'souza*

6 Food and Freedom —*V. M. Dandekar* 2·50

7 Local Taxation in Urban Areas 3·00
—*D. M. Nanjundappa & M. V. Nadkarni*

8 Economic Development in India 5·00
—*R. Balakrishna*

9 Economic Development of the Underdeveloped Region in Italy —*T. K. Meti* 10·00
$ 5 or Sh. 30

10 Rural Industrialisation: An Integrated Approach —*V. S. Vyas* 3·00
$ 1 or Sh. 7

11 Economic Development and Social Change in Mysore State —*Ed. T. K. Meti* 15·00

12 Resale Price Maintenance in a Developing Economy —*D. M. Nanjundappa* (In Press)

V. ಕನ್ನಡ ಕಾವ್ಯಮಾಲೆ (Kannada Classical Series)

1 ರಾಜಶೇಖರವಿಳಾಸ ಸಂಗ್ರಹ 2·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

2 ಸೋಮನಾಥ ಚಾರಿತ್ರ 5·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

3 ರಾಜಶೇಖರವಿಳಾಸಂ 10·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

4 ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ—ಭಾಗ ೧ 6·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

5 ತ್ರಿಷಷ್ಟಿಪುರಾತನಚಾರಿತ್ರ ಸಂ. : ಆರ್. ಸಿ. ಹಿರೇಮಠ 12.00

6 ಬಸವರಾಜವಿಜಯಂ ಸಂ. : ಆರ್. ಸಿ. ಹಿರೇಮಠ 20.00

7 ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ—ಭಾಗ ೨
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ 8.00

8 ಹರಿಹರದೇವಕೃತ ಪುರಾತನರ ಆರು ರಗಳೆಗಳು 3.50
ಸಂ. : ಆರ್. ಸಿ. ಹಿರೇಮಠ

9 ನೇಮಿನಾಥ ಪುರಾಣಂ ಸಂ. : ಬಿ. ಎಸ್. ಕುಲಕರ್ಣಿ 6.00

10 ಅಕ್ರೂರಚರಿತ್ರೆ ಸಂ. : ಜಟಗೇರಿ ಕೃಷ್ಣಶರ್ಮಾ (ಕೆಲಿಕೋ) 6.00
(ಸಾದಾ) 4.00

11 ಜೀವಂಧರಚರಿತೆ ಸಂ. : ಬಿ. ಎಸ್. ಕುಲಕರ್ಣಿ 7.00

12 ಮಹಾಭಾರತ : ಪೌಲೋಮ-ಆಸ್ತೀಕ ಪರ್ವಗಳು 8.00
—ಕೆ. ಜಿ. ಶಾಸ್ತ್ರಿ

13 ಹರಿಹರದೇವಕೃತ ಪುರಾತನರ ರಗಳೆಗಳು (ಅಚ್ಚಿನಲ್ಲಿ)
ಸಂ : ಆರ್. ಸಿ. ಹಿರೇಮಠ

14 ಮೋಹನ ತರಂಗಿಣಿ ಸಂ : ಆರ್. ಸಿ. ಹಿರೇಮಠ ,,

15 ಮಲ್ಲಿನಾಥ ಪುರಾಣ ಸಂ : ಬಿ. ಎಸ್. ಕುಲಕರ್ಣಿ ,,

16 ಲೋಭದತ್ತ ಚರಿತೆ ಸಂ : ಬಿ. ಎಸ್. ಕುಲಕರ್ಣಿ ,,

17 ಐರಾವತ ನೋಂಪಿ ಸಂ : ಕೆ. ಜಿ. ಶಾಸ್ತ್ರಿ ,,

VI. ಉಪನ್ಯಾಸ ಗ್ರಂಥಮಾಲೆ

(Kannada Extension Lectures Booklets Series)

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

1. ಭವಭೂತಿ — ಕೆ. ಕೃಷ್ಣಮೂರ್ತಿ
2. ಮನೋರೋಗಗಳು — ಎನ್. ಆರ್. ಕುಲಕರ್ಣಿ
3. ಪ್ರಥಮ ಪಂ.ವಾ. ಯೋಜನೆ ಹಾಗೂ ಒಕ್ಕಲುತನ — ಎನ್. ಪಿ. ಪಾಟೀಲ
4. ಗಾದೆಗಳು — ಎ. ಕೆ. ರಾಮಾನುಜನ್
5. ಭಾರತದಲ್ಲಿ ಜಾತಿಪದ್ಧತಿ — ವ್ಹಿ. ಎಸ್. ಡಿಸೋಜಾ
6. ಕೀಟಕ ಪಿಡುಗುಗಳ ಸಮೀಕ್ಷಣೆ — ಎಸ್. ಎಸ್. ಕಟಗಿಹಳ್ಳಿಮಠ
7. ರಾಜಕೀಯ ಪಕ್ಷಗಳು — ಎನ್. ರಾಜಗೋಪಾಲರಾವ್
8. ಸ್ವಾದಿ ಅರಸುಮನೆತನ — ಎಸ್. ಎಸ್. ಮಾಳವಾಡ
9. ಮಕ್ಕಳ ಶಿಕ್ಷಣ — ಡಿ. ಎಸ್. ಕರ್ಕಿ

10. ಮೂಢ ನಂಬಿಕೆಗಳು — ಎಲ್. ಆರ್. ಹೆಗಡೆ
11. ಸಂಸ್ಕೃತ ಕವಯಿತ್ರಿಯರು — ಕೆ. ಟಿ. ಪಾಂಡುರಂಗಿ
12. ನಿತ್ಯಜೀವನದಲ್ಲಿ ರಸಾಯನಶಾಸ್ತ್ರ — ಬಿ. ವಿರೂಪಾಕ್ಷಪ್ಪ
13. ಸಾರ್ವಜನಿಕ ಆಡಳಿತ — ಜಿ. ಎಸ್. ಹಾಲಪ್ಪ
14. ವಿಚಾರವಾದ — ಗೌರೀಶ ಕಾಯ್ಕಿಣಿ
15. ಮಹಾಕವಿ ಮಿಲ್ಟನ್ — ಜಿ. ಎಸ್. ಆಮೂರ
16. ಭಾರತದಲ್ಲಿ ಗ್ರಂಥಾಲಯ ಪ್ರಸಾರ — ಕೆ. ಎಸ್. ದೇಶಪಾಂಡೆ
17. ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ — ಬಿ. ಎಚ್. ಶ್ರೀಧರ
18. ಜನಸಂಖ್ಯೆ ಹಾಗೂ ಆಹಾರ ಸಮಸ್ಯೆ — ಪಿ. ಎಂ. ಉಮಾಕಾಂತಶಾಸ್ತ್ರಿ
19. ಸೌರವ್ಯೂಹ — ಸಿ. ಎನ್. ಶ್ರೀನಿವಾಸ ಅಯ್ಯಂಗಾರ
20. ಪ್ರಾಚೀನ ಭಾರತದಲ್ಲಿ ಸಾಮಾಜಿಕ ಜನಜೀವನ — ಸಿ. ವಿ. ರಂಗಸ್ವಾಮಿ
21. ಸಮಾಜ ಕಾರ್ಯ — ಎಚ್. ಎಂ. ಮರುಳಸಿದ್ಧಯ್ಯ
22. ಸಂಸತ್ತಿನ ಕಾರ್ಯಪದ್ಧತಿ — ಎ. ಎಂ. ರಾಜಶೇಖರಯ್ಯ
23. ಕನ್ನಡನಾಡಿನ ಶಾಸನಗಳು — ಪಿ. ಬಿ. ದೇಸಾಯಿ
24. ಕವೀಂದ್ರ ರವೀಂದ್ರರು — ಎಸ್. ಎಸ್. ಮಾಳವಾಡ
25. ನಾಗಾನಂದ — ಎಚ್. ಪಿ. ಮಲ್ಲೇದೇವರು
26. ಜೀವನದಲ್ಲಿ ನಗೆ — ಎಂ. ಎಸ್. ಸುಂಕಾಪುರ
27. ಬಸವಣ್ಣನವರ ಯೋಜನೆಗಳು — ಬಿ. ಸಿ. ಜವಳಿ
28. ೧೮೫೭ರ ಕ್ರಾಂತಿ — ಸಿ. ವೀರಬಸಣ್ಣ
29. ಕನ್ನಡ ಕಥಾಸೃಷ್ಟಿ — ಬಿ. ಬಿ. ಮಹೀಶವಾಡಿ
30. ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರರಸ — ಕೆ. ಕೃಷ್ಣಮೂರ್ತಿ
31. ನೀರಾವರಿ ಬೇಸಾಯ — ಎಸ್. ಎ. ಹೊಸಮನಿ
32. ಸಾರ್ವಜನಿಕ ಅಭಿಪ್ರಾಯ — ಎಸ್. ರಾಜಗೋಪಾಲರಾವ್
33. ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನ ಪ್ರಸಂಗ — ದೇವೇಂದ್ರಕುಮಾರ ಹಕಾರಿ
34. ಕನ್ನಡಕ್ಕೆ ಪುರಂದರದಾಸರು ನೀಡಿದ ಕೊಡುಗೆ — ಜಿ. ಡಿ. ನಾಡಕರ್ಣಿ
35. ಫ್ಯಾಶನ್ನುಗಳು — ಕೆ. ಡಿ. ತಂಗೋಡ
36. ಮಹಾಕವಿ ರಾಘವಾಂಕನ ಪಾತ್ರಗಳಲ್ಲಿ ತತ್ವನಿಷ್ಠೆ — ಬಿ. ವ್ಹಿ. ಮಲ್ಲಾಪುರ
37. ಅಭಿವೃದ್ಧಿ ಯೋಜನೆಗಳಲ್ಲಿ ಸಹಕಾರದ ಪಾತ್ರ — ಎಸ್. ಜಿ. ಕರಭಂಟನಾಳ
38. ಕನ್ನಡ ಜೈನಪುರಾಣಗಳು — ಎಸ್. ಎನ್. ನಾಯಕ
39. ಕನ್ನಡ ನಾಟ್ಯಸೃಷ್ಟಿ — ಎಚ್. ಜಿ. ಲೋಕೂರ
40. ಹರಿಹರನು ಚಿತ್ರಿಸಿದ ಶಿವಶರಣೆಯರು — ಬಿ. ಬಿ. ಹೆಂಡಿ
41. ನೀವು ಬಯಸುವ ಮಗು ಗಂಡೋ? ಹೆಣ್ಣೋ? — ಕೆ. ಆರ್. ರಾಮಸ್ವಾಮಿ

42. ಅಂಡಯ್ಯ — ಬಿ. ಎಸ್. ಕುಲಕರ್ಣಿ
43. ಬೆಳವಲನಾಡಿನ ಬೆಳೆಗಳು — ಎಸ್. ಎ. ಹೊಸಮನಿ
44. ಜಾನಪದ ಕಥೆಗಳು — ಎಲ್. ಆರ್. ಹೆಗಡೆ
45. ಸುಧಾರಿಸಿದ ಬೇಸಾಯ — ಎ. ಸಿ. ಕಲ್ಯಾಣಿಮಠ
46. ಕನ್ನಡನಾಡಿನ ಐತಿಹಾಸಿಕ ಮಹಾಪುರುಷರು — ಬಿ. ಆರ್. ಗೋಪಾಲ್
47. ಗ್ರಂಥಾಲಯದ ಅಂತರಂಗ — ಎಸ್. ಆರ್. ಗುಂಜಾಳ
48 ಸ್ತ್ರೀ ಮತ್ತು ಶಿಕ್ಷಣ — ವನಮಾಲಾ ಆಚಾರ್
49. ಜಾಗತಿಕ ಸರಕಾರ — ಸಿ. ವೀರಬಸಣ್ಣ
50. ಸಮುದಾಯ ಸಂಘಟನೆ — ಎಚ್. ಎಂ. ಮರುಳಸಿದ್ದಯ್ಯ
51. ಅಶೋಕನ ಧರ್ಮಶಾಸನಗಳು — ಶ್ರೀನಿವಾಸ ರಿತ್ತಿ
52. ಪ್ರಾಚೀನ ಭಾರತದ ರಾಜ್ಯಪದ್ಧತಿ — ಸಿ. ವ್ಹಿ. ರಂಗಸ್ವಾಮಿ
53. ಅಕ್ಕಮಹಾದೇವಿ ಮತ್ತು ಮೀರಾಬಾಯಿ — ಎಸ್. ಎಸ್. ಕಬ್ಬಿನ
54. ಕನ್ನಡ ಕಾವ್ಯದಲ್ಲಿ ವೀರರಸ ನಿರೂಪಣೆ — ಜಿ. ಬಿ. ಮಹೀಶವಾಡಿ
55. ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರಗಳು—ಬಿ. ಸಿ. ಜವಳಿ
56. ಭಾರತ ರಾಜ್ಯಘಟನೆ — ಎಂ. ಎಸ್. ಪಾಟೀಲ
57. ಪಂಚಾಯತಿ ರಾಜ್ಯ — ಎಸ್. ಜಿ. ಕರಘಂಟಿನಾಳ ಮತ್ತು ಕೆ. ಡಿ ಬಸವ
58. ವಿಷಮಜ್ವರ — ಪಿ. ಎಸ್. ಶಂಕರ
59. ಪುಸ್ತಕ ಭಾಂಡಾರ ಕಾಯದೆ — ಜಿ. ಎಂ. ಪಾಟೀಲ
60. ಸರ್ ಐಸಾಕ್ ನ್ಯೂಟನ್ — ಆರ್. ವ್ಹಿ. ಅಬ್ಬಿಗೇರಿ
61. ಗ್ರಾಮಾಭ್ಯುದಯದ ಯೋಜನಾಂಗಗಳು — ಟಿ. ಕೆ. ಮೇಟಿ
62. ಹರಿಜನರ ಸಮಸ್ಯೆಗಳು ಹಾಗು ಅವುಗಳ ಪರಿಹಾರ

— ಎಸ್. ಕೆ. ಕಡೆತೋಟದ

63. ರಾಸಾಯನಿಕ ಕಿಣ್ವಗಳು — ಎಂ. ಎಸ್. ಎಸ್. ರಾವ್
64. ಪ್ರಜಾಪ್ರಭುತ್ವದ ಮೂಲತತ್ವಗಳು — ಕೆ. ಬಿ. ಬಕ್ಕಪ್ಪ
65. ಹೃದಯಾಘಾತ — ಪಿ. ಎಸ್. ಶಂಕರ್
66. ಆಭರಣಗಳ ಬಗೆಗೆ ಸಾಮಾಜಿಕ ದೃಷ್ಟಿಕೋನ — ಡಿ. ಎ. ಚಿಕ್ಕಿ
67. ಶ್ರೀರಾಮಾಯಣದರ್ಶನದಲ್ಲಿ ಕುವೆಂಪು ಸೃಜಿಸಿದ ಮೂರು ಪಾತ್ರಗಳು

— ಎಂ. ಜಿ. ಬಿರಾದಾರ

68. ಯೋಜನೆಗಳೇಕೆ ಬೇಕು ? — ಎಸ್. ಎಸ್. ಜುಮ್ಮಿ
69. ಸಗರನಾಡಿನ ಶಿವಶರಣರು — ವ್ಹಿ. ಶಿವಾನಂದ
70. ವಿಜ್ಞಾನದ ದೃಷ್ಟಿಯಲ್ಲಿ ಸೃಷ್ಟಿ — ಆರ್. ಎಸ್. ಭೂಸನೂರಮಠ

71. ವಿಜಯನಗರದ ನಿರ್ಣಾಯಕ ಯುದ್ಧ — ಎಸ್. ಬಿ. ಕೋಡದ
72. ಬಸವಣ್ಣನವರನ್ನು ಕುರಿತ ಶಾಸನಗಳು — ಎಂ. ಎಂ. ಕಲಬುರ್ಗಿ
73. ಆಧುನಿಕ ಭಾಷಾವಿಜ್ಞಾನ — ಜಿ. ಎಸ್. ಕುಳ್ಳಿ
74. ಪುರಾಣ ಜಿಜ್ಞಾಸೆ — ಎಲ್. ಆರ್. ಹೆಗಡೆ
75. ಭಾರತದಲ್ಲಿ ಶೈಕ್ಷಣಿಕ ಪ್ರಯೋಗ — ವ್ಹಿ. ಎಸ್. ಕುಲಕರ್ಣಿ
76. ಅಧಿಕ ಉತ್ಪಾದನೆಗಾಗಿ ಮಿಶ್ರತಳಿ ಬೆಳೆಗಳು — ಎ. ಸಿ. ಕಲ್ಯಾಣಿಮಠ
77. ಕನ್ನಡ ನುಡಿಯ ಬೆಳವಣಿಗೆ — ಎಚ್. ಜಿ. ಲೋಕೂರ
78. ಹರಿಹರನ ಗಿರಿಜಾಕಲ್ಯಾಣ — ಬಿ. ವ್ಹಿ. ಶಿರೂರ
79. ಹೊಟ್ಟೆಯ ಹುಣ್ಣು — ಪಿ. ಎಸ್. ಶಂಕರ
80. ಸಂಯೋಜಕ ಶಕ್ತಿ — ಬಿ. ಜಿ. ಜ್ಯೋತಿ
81. ಸಂಸದೀಯ ಸರಕಾರವು ಭಾರತಕ್ಕೆ ಒಪ್ಪುವುದೇ? — ವಸಂತ ಪಾಟೀಲ
82. ನಮ್ಮ ರೈತರೇಕೆ ಹಿಂದುಳಿದಿದ್ದಾರೆ? — ಎಂ. ಸಿ. ಕೊಡ್ಲಿ
83. ನಗೆಗಾರ ನಯಸೇನ — ಎಂ. ಎಸ್. ಸುಂಕಾಪುರ
84. ಶೂನ್ಯಸಂಪಾದನೆ — ವ್ಹಿ. ಎಸ್. ಕಂಬಿ
85. ಮಹಮೂದ ಗವಾನ — ಎಲ್. ಆರ್. ಕುಲಕರ್ಣಿ
86. ಕೆಳದಿಯ ನಾಯಕರು — ಜಿ. ಎಸ್. ದೀಕ್ಷಿತ
87. ಮುಳುಗುಂದನಾಡು — ಎಸ್. ಎಚ್. ರಿತ್ತಿ
88. ಶ್ವಾಸಕೋಶ ಕ್ಷಯ — ಪಿ. ಎಸ್. ಶಂಕರ
89. ಕರ್ನಾಟಕದಲ್ಲಿ ಗ್ರಂಥಾಲಯಗಳು — ಎಸ್. ಆರ್. ಗುಂಜಾಳ
90. ಮಿರ್ಜಾ ಘಾಲಿಬ್ — ಅಬ್ದುಲ್ ಮಜೀದಖಾನ್
91. ಕಬೀರದಾಸ — ಬಿ. ಎಸ್. ಸಿರೋಳ
92. ಬ್ಯಾಂಕುಗಳ ರಾಷ್ಟ್ರೀಕರಣ — ಎಸ್. ಜಿ. ಕರಭಂಟಿನಾಳ
93. ಪ್ರಾಚೀನ ಭಾರತದಲ್ಲಿ ಶ್ರಮಜೀವಿಗಳು — ಎಸ್. ಜಿ. ಘಟಪಣದಿ
94. ಹಿಂದುಸ್ಥಾನಿ ಸಂಗೀತ ಪದ್ಧತಿಯ ರೂಪರೇಷೆಗಳು — ಎ. ಯು. ಪಾಟೀಲ
95. ಶ್ರೀ ಅರವಿಂದ ಸ್ಮರಣೆ — ಸ. ಸ. ಮಾಳವಾಡ
96. ಮಾನವಜೀವನ ಹಾಗೂ ಭೌಗೋಲಿಕ ಪರಿಸರ — ಡಿ. ಜಿ. ಕುಲಕರ್ಣಿ
97. ಲಕ್ಕಣದಂಡೇಶ — ವ್ಹಿ. ಶಿವಾನಂದ
98. ವ್ಯಾವಹಾರಿಕ ಮಾನವಶಾಸ್ತ್ರ — ಕೆ. ಜಿ. ಗುರುಮೂರ್ತಿ
99. ಪ್ರಾಚೀನ ಗ್ರೀಕರ ಅಮರ ಕೊಡುಗೆಗಳು — ಡಿ. ಟಿ. ಜೋಶಿ

100. ಭರ್ತೃಹರಿಯ ನೀತಿಶತಕ — ಡಿ. ಎನ್. ಶಾನಭಾಗ

101. ಹರ್ಡೇಕರ ಮಂಜಪ್ಪನವರು ಹಾಗೂ ಅವರ ಕೃತಿಗಳು — ಜಿ. ಎಸ್. ಹಾಲಪ್ಪ

102. ಪೃಥ್ವಿ ಹಾಗೂ ಜೀವಿಗಳ ರೂಪಾಂತರ—ಎಂ. ಎಸ್. ಎಸ್. ರಾವ್

103. ಪ್ರಜಾಪ್ರಭುತ್ವದಲ್ಲಿ ಕಾಯಿದೆಯ ಸ್ಥಾನ — ಸಿ. ಕೆ. ಎನ್. ರಾಜ

104. ಪೇಟೆ ಮತ್ತು ಜಾಹೀರಾತುಗಳು — ಟಿ. ಎಂ. ಪಂಡಿತ

105. ಆಯುರ್ವೇದಶಾಸ್ತ್ರ — ಧನ್ಯಕುಮಾರ ಇಜಾರಿ

106. ಮೈಲಾರದೇವರು — ಶ್ರೀನಿವಾಸ ರಿತ್ತಿ

107. ಭಗವದ್ಗೀತೆ — ಎಲ್. ಸಿ. ಪಾಟೀಲ

108. ಭೂಸಂರಕ್ಷಣೆ ಮತ್ತು ಒಣ ಬೇಸಾಯ — ಎಂ. ಎಂ. ಹೊಸಮನಿ

109. ಜನಪದ ಕಾವ್ಯದಲ್ಲಿ ಜೀವನಧರ್ಮ — ಪಿ. ವ್ಹಿ. ಮಲ್ಲಾಪುರ

110. ಆಧುನಿಕ ಕನ್ನಡ-ಹಿಂದೀ ಕಾವ್ಯ — ಸಿದ್ಧಲಿಂಗ ಪಟ್ಟಣಶೆಟ್ಟಿ

111. ಪ್ರಾಚೀನ ಕರ್ನಾಟಕದ ಶಿಕ್ಷಣಕ್ರಮ — ಜಿ. ಎಸ್. ದೀಕ್ಷಿತ

112. ತಮಿಳು ಶಿವಭಕ್ತೆ ಕಾರಿಕಾಲಮ್ಮೆ — ಎಂ. ಎಸ್. ಲಕ್ಷ್ಮೀ

113. ಜಾನಪದ ವೀರಗೀತೆಗಳು — ಬಿ. ಬಿ. ಮಹೀಶವಾಡಿ

114. ಕಸದಿಂದ ರಸೋತ್ಪತ್ತಿ — ಸಂಜೀವರಾವ ಕಲ್ಲಾಪುರ

115. ವಚನಕಾರ ದೇವರ ದಾಸಿಮಯ್ಯ — ಎಸ್. ಎಸ್. ಬಾಣದ

116. ಭಾರತದ ಪ್ರಾಚೀನ ನಾಣ್ಯಗಳು — ಎ. ಎಂ. ಅಣ್ಣಿಗೇರಿ

117. ಗಳಗನಾಥರ ಕಾದಂಬರಿಗಳು — ಕೃಷ್ಣಮೂರ್ತಿ ಕಿತ್ತೂರ

118. ಯೋಜನೆಗಳು ಹಾಗೂ ಗ್ರಾಮೋದ್ಯೋಗಗಳು — ವ್ಹಿ.ಬಿ.ಅಂಗಡಿ

119. ಮಾನವವಿಜ್ಞಾನ ಹಾಗು ಆಧುನಿಕ ಭಾರತ — ಎಲ್. ಎಸ್. ಜನಾಪುರ

120. ಹಳ್ಳಿಗರೇಳ್ಗೆ ಸಾಧಿಸುವ ಬಗೆ — ಬಿ. ಆರ್. ಪಾಟೀಲ

121. ಸಾಮಾಜಿಕ ಭದ್ರತೆ — ಎಚ್. ವಿ. ನಾಗೇಶ

122. ಸಾಮಾಜಿಕ ಸಮಸ್ಯೆಗಳು—ಕೆ. ಜಿ. ಜೋಶಿ

123. ಕರ್ನಾಟಕದಲ್ಲಿ ನವಶಿಲಾಯುಗ—ಬಾ. ರಾ. ಗೋಪಾಲ್

124. ಜೀವಾವಶೇಷಗಳು—ಎಂ. ಎಸ್. ಮನ್ನಿಕೇರಿ

125. ವಿಜಯನಗರ ಕಾಲದ ಧಾರ್ಮಿಕ ಜೀವನ—ಶ್ರೀ ಸದ್ಯೋಜಾತ ಸ್ವಾಮೀಜಿ

126. ಡಾ. ಖೊರಾನಾ ಅವರ ಸಂಶೋಧನೆಗಳು—ಎಚ್. ಕೆ. ಮಲ್ಲಿಕಾರ್ಜುನಪ್ಪ

127. ಸಂಸ್ಕೃತಸಾಹಿತ್ಯದಲ್ಲಿ ಹಾಸ್ಯ—ಎಲ್. ಜಿ. ಜೋಶಿ

128. ಕಾರ್ಮಿಕ ಮತ್ತು ಯೋಜನೆ—ಟಿ. ಕೆ. ಮೇಟಿ

129. ಭಾರತೀಯ ಹಬ್ಬಗಳು—ಸಿ. ವಿ. ಕೆರಿಮನಿ

VII ವಿಶೇಷ ವಾಙ್ಮಯ ಪ್ರಸಾರ ಪುಸ್ತಕಮಾಲೆ

1	ನಿಜಗುಣ ಶಿವಯೋಗಿ ಹಾಗೂ ಅವರ ಕೃತಿಗಳು	0.50
2	ಮಹಾಕವಿ ರನ್ನ ಹಾಗೂ ಅವನ ಕೃತಿಗಳು	1.00
3	ಮಹಾಕವಿ ಪಂಪ ಹಾಗೂ ಅವನ ಕೃತಿಗಳು	1.00
4	ಸರ್ವಜ್ಞಕವಿ : ಜೀವನ ಹಾಗೂ ಕಾವ್ಯ	1.50
5	ಬಸವಣ್ಣನವರ ವ್ಯಕ್ತಿತ್ವ ಹಾಗೂ ಜೀವನಸಿದ್ಧಿ	1.50
6	ಸಾಹಿತ್ಯವಿಮರ್ಶೆ	1.50
7	ಗಾಂಧೀತತ್ವವಿಶ್ಲೇಷಣೆ	1.50
8	ದಾಸಸಾಹಿತ್ಯ : ದ್ವಿತೀಯ ಘಟ್ಟದ ಸಾಧನೆ	2.50
9	ರೆವರೆಂಡ್ ಚೆನ್ನಪ್ಪ ಉತ್ತಂಗಿ : ಜೀವನ ಹಾಗೂ ಕೃತಿಗಳು	2.50

VIII. ಜನಪದ ಸಾಹಿತ್ಯ ಮಾಲೆ

1 ಜೀವನ ಜೋಕಾಲಿ : ಚೌಪದನಗಳು — 4.00

ಸಂ : ಎಂ. ಎಸ್. ಸುಂಕಾಪುರ

2 ಜೀವನ ಜೋಕಾಲಿ : ಸರಸ-ವಿರಸ — 4.00

ಸಂ : ಎಂ. ಎಸ್. ಸುಂಕಾಪುರ

3 ಪರಮೇಶ್ವರಿಯ ಪದಗಳು — (ಅಚ್ಚಿನಲ್ಲಿ)

ಸಂ : ಎಲ್. ಆರ್. ಹೆಗಡೆ

IX. Publications in Anthropology

1 Contributions to the Understanding of Indian Civilization — 3.00

—*Baidyanath Saraswati* — $ 1 or Sh. 8

X. Other Publications (ಇತರ ಪ್ರಕಟನೆಗಳು)

1 Hubli City—A Study in Urban Economic Life — 10.00

—*B. R. Dhekney* — $ 3 or £ 1

2 Private International Law — 10.00

— *N. K. Dixit & Negalur Ranganath*

3 The Structure of Kannada — *R. C. Hiremath* 5·00

4 Studies in State Administration 15·00
—Ed. *G. S. Halappa*

5 Yashodhara Charita 5·00
Ed. *K. Krishnamoorthy* $ 1·50 or Sh. 10

6 Essays in Sanskrit Criticism 5·00
—*K. Krishnamoorthy*

7 The First General Elections in Goa 3·00
—*G. S. Halappa, A. M. Rajashekharaiah & K. Raghavendra Rao*

8 Sunyasampadane—Vol. I (*English version of a Kannada work with Commentary & Notes*) 12·00
$ 4 or Sh. 20
—Ed. *S. C. Nandimath, Menezes and R. C. Hiremath*

9 Sunyasampadane—Vol. II 20·00
—Ed. *S. S. Bhoosanurmath & Armando Menezes* $ 5 or Sh. 30

10 Sunyasampadane – Vol. III 20·00
—*Ed. S. S. Bhoosnurmath & Armando Menezes* $ 5 or Sh. 30

11 Sunyasampadane – Vol. IV. 20.00
-*Ed. S.S. Bhoosnurmath & Armando Menezes* $ 5 or Sh. 30

12 Kavi Kaumudi —Ed. *K. Krishnamoorthy* 1·50

13 Critical Essays on Indian Writing in English 20·00
—Ed. *M. K. Naik, S. K. Desai and G. S. Amur* $ 4 or Sh. 30

14 Sāyaṇa's Subhāṣita-Sudhānidhi 10·00
—Ed. *K. Krishnamoorthy*

15 Urban Studies: An Aid to Research 30·00
—*B. N. Sinha & T. N. Achut Rao* $ 10

16 Old People of Makunti 10·00
—*H. M. Marulasiddaiah*

17 Sirsi: An Urban Study in Application of Reseach Models —*Dr. B. N. Sinha* 20·00 $ 7

18 Konkani, a Language —*Jose Pereira* 10.00 $ 3 or Sh. 20

19 Analytical Survey of Iśāvāsyopanisad —*V. V. Mudholkar* 7·00 $ 2 or Sh. 14

*20 The Image of India in the Western Creative Writing (Joint Publication with Macmillan & Co. India) —*Ed. M. K. Naik, S. K. Desai & S. T. Kallapur* 30·00

21 Essays in Criminal Law —*V. R. Bhat* (In Press)

22 Songs from the Saranas and other poems - *Armando Menezes* ,,

23 Sūnyasaṁpādane Vol. V —*Ed. S. S. Bhoosnurmath & Armando Menezes* ,,

24 Dāya Vibhāga —*I. S. Pawate* ,,

25 ಕನ್ನಡ ಪದವಾರ್ಥಸೋಪಾನ —ಸಂ. ಎಂ. ಎಸ್. ದೇಶಪಾಂಡೆ 2·50

26 ಚನ್ನಬಸವಣ್ಣನವರ ವಚನಗಳು (ದ್ವಿ. ಸಂ.) —ಸಂ. ಆರ್. ಸಿ. ಹಿರೇಮಠ (ಅಚ್ಚಿನಲ್ಲಿ)

27 ಸಸ್ಯಶಾಸ್ತ್ರ — ಪಿ. ಎಸ್. ಚಿಕ್ಕಣ್ಣಯ್ಯ 1·50

28 ರಸಾಯನಶಾಸ್ತ್ರ — ಆರ್. ಎಸ್. ಹಮಸಾಗರ 4·00

29 ಪ್ರಾಯೋಗಿಕ ರಸಾಯನಶಾಸ್ತ್ರ — ಆರ್. ಬಿ. ಕಂಠಿ 3·00

30 विवेकचितामणि 6·75
(Marathi rendering of Nijaguna Shivayogi's Viveka Chintamani in Kannada)
(Joint publication of the Karnatak University, Dharwar & the Poona University, Poona)
—Ed. *D. N. Awalikar*

---

* (Sole Distributors : M/s Macmillan & Co. Madras)

31 ಕನ್ನಡ ಸಂತರ ಪರಮಾರ್ಥಪಥ — ಆರ್. ಡಿ. ರಾನಡೆ 5·00
—(ಅನು. : ಎಂ. ಎಸ್. ದೇಶಪಾಂಡೆ)

32 ಷಟ್‌ಸ್ಥಲಪ್ರಭೆ (ದ್ವಿ.ಮು) —ಆರ್. ಸಿ. ಹಿರೇಮಠ (ಅಚ್ಚಿನಲ್ಲಿ)

33 ಶ್ರೀ ಸಿದ್ಧರಾಮೇಶ್ವರ ವಚನಗಳು —ಸಂ. ಆರ್. ಸಿ. ಹಿರೇಮಠ 20·00

34 ಶಿವಶರಣೆಯರ ವಚನಗಳು (ಸಮಗ್ರ ಸಂಪುಟ) 20·00
—ಸಂ. ಆರ್. ಸಿ. ಹಿರೇಮಠ

35 ಬಸವಣ್ಣನವರ ವಚನಗಳು —ಸಂ. ಆರ್. ಸಿ. ಹಿರೇಮಠ 20·00

36 ಮಹಾದೇವಿಯಕ್ಕನ ವಚನಗಳು —ಸಂ. ಆರ್. ಸಿ. ಹಿರೇಮಠ 7·00

37 ನೀಲಮ್ಮನ ವಚನಗಳು ಮತ್ತು ಲಿಂಗಮ್ಮನ ವಚನಗಳು (ದ್ವಿ. ಮು.)
—ಸಂ. ಆರ್. ಸಿ. ಹಿರೇಮಠ (ಅಚ್ಚಿನಲ್ಲಿ)

38 ಇಪ್ಪತ್ತೇಳು ಶಿವಶರಣೆಯರ ವಚನಗಳು 5·00
—ಸಂ. ಆರ್. ಸಿ. ಹಿರೇಮಠ

39 ಅಮುಗೆ ರಾಯಮ್ಮನ ವಚನಗಳು ಮತ್ತು 5·00
ಅಕ್ಕಮ್ಮನ ವಚನಗಳು —ಸಂ. ಆರ್. ಸಿ. ಹಿರೇಮಠ

40 ಶಾಸನಸಂಪದ —ಸಂ. ಆರ್. ಸಿ. ಹಿರೇಮಠ, 2·00
ಎಂ. ಎಂ. ಕಲಬುರ್ಗಿ

41 ಮುಕ್ತಿಕಂಠಾಭರಣ —ಸಂ. ಆರ್. ಸಿ. ಹಿರೇಮಠ 6·00

42 ಶೂನ್ಯ ಸಂಪಾದನೆ (ಶಿವಗಣ ಪ್ರಸಾದಿ ಮಹಾದೇವಯ್ಯ ವಿರಚಿತ) 12·00
—ಸಂ : ಆರ್. ಸಿ. ಹಿರೇಮಠ

43 ವೀರಶೈವ ಚಿಂತಾಮಣಿ —ಸಂ : ಆರ್. ಸಿ. ಹಿರೇಮಠ 7.00

44 ಬ್ರಹ್ಮಾದ್ವೈತ ಸಿದ್ಧಾಂತ ಷಟ್ಸ್ಥಲಾಭರಣ (ಅಚ್ಚಿನಲ್ಲಿ)
—ಸಂ : ಆರ್. ಸಿ. ಹಿರೇಮಠ

45 ಲಿಂಗಚಿದಮೃತ ಬೋಧೆ —ಸಂ : ಆರ್. ಸಿ. ಹಿರೇಮಠ ,,

46 ಸಕಲಪುರಾತನರ ವಚನಗಳು ಭಾಗ ೧—ಸಂ: ಆರ್.ಸಿ. ಹಿರೇಮಠ ,,

47 ವಿಶೇಷಾನುಭವ ಷಟ್ಸ್ಥಲ —ಸಂ : ಆರ್. ಸಿ. ಹಿರೇಮಠ ,,

48 ಬಾಲಸಂಗಯ್ಯನ ವಚನಗಳು —ಸಂ : ಆರ್. ಸಿ. ಹಿರೇಮಠ ,,

Available for sale :

1	Studies in Education and Culture	(Ord.)	15·00
	—Ed. G. S. Halappa	(Calico)	25·00
2	Pathway to god in Kannada Literature		6·00
	—R. D. Ranade	Sh.	10·6
		$	2·75
3	The Grammatical Structure of Dravidian Languages *—Jules Block*		6.00

XI. UNIVERSITY JOURNALS

Annuals :

1 Journal of the Karnatak University — Science
2 Journal of the Karnatak University — Humanities
3 The Journal of Karnatak University — Social Sciences

Rate of Annual Subscription for Each Journal :

Rs. 5-00 (In India)

2 Dollars
14 Shillings } (Foreign)

Quarterly :

ಕರ್ನಾಟಕ ಭಾರತಿ

ವಾರ್ಷಿಕ ಚಂದಾ : ರೂ. 8/- (ಅಂಚೆವೆಚ್ಚ ಸಹಿತ)
ಬಿಡಿ ಸಂಚಿಕೆಯ ಬೆಲೆ : ರೂ. 2·50 (ಅಂಚೆವೆಚ್ಚ ಪ್ರತ್ಯೇಕ)

Biannual ;

ವಿಜ್ಞಾನ ಭಾರತಿ

ವಾರ್ಷಿಕ ಚಂದಾ : ರೂ. 4/- (ಅಂಚೆವೆಚ್ಚ ಸಹಿತ)
ಬಿಡಿ ಪತ್ರಿಕೆಯ ಬೆಲೆ : ರೂ. 2·50 (,, ಪ್ರತ್ಯೇಕ)

Monthly :

KARNATAK UNIVERSITY BULLETIN

Subscription :

Annual : Rs. 6/-
Monthly : 50 paise

XII. ಕನ್ನಡ ಪಠ್ಯಪುಸ್ತಕ ಮಾಲೆ

ಪಿ. ಯು. ಸಿ.			ರೂ. ಪೈಸೆ
1	ರಾಜ್ಯಶಾಸ್ತ್ರ		3-00
2	ಸಂಸ್ಕೃತ ಗದ್ಯಪದ್ಯ (ತೃತೀಯ ಮುದ್ರಣ)		3-50
3	ಉದ್ಯಾನಶಾಸ್ತ್ರ ಪರಿಚಯ		3-75
4	ಅರ್ಥಶಾಸ್ತ್ರ ಪರಿಚಯ		4-00
5	ವಾಣಿಜ್ಯಶಾಸ್ತ್ರ ಪರಿಚಯ		5-00
6	ತರ್ಕಶಾಸ್ತ್ರ ಪರಿಚಯ		3-00
7	ಜಗತ್ತಿನ ಇತಿಹಾಸ		4-50
8	ಬೀಜಗಣಿತ-ಕಲನಶಾಸ್ತ್ರ ಪರಿಚಯ		4-50
9	ಸಮಾಜಶಾಸ್ತ್ರ ಪರಿಚಯ		3-00
10	ಮಾನವಶಾಸ್ತ್ರ ಪರಿಚಯ		3-00
11	ಸಸ್ಯಶಾಸ್ತ್ರ ಪರಿಚಯ		5-50
12	ಪ್ರಾಯೋಗಿಕ ರಸಾಯನಶಾಸ್ತ್ರ		3-50
13	ಗಣನಶಾಸ್ತ್ರ ಪರಿಚಯ		5-00
14	ಭೂಮಂಡಲ ಪರಿಚಯ		8-50
15	ರಸಾಯನಶಾಸ್ತ್ರ		8-50
16	ಸಂಗೀತಶಾಸ್ತ್ರ ಪರಿಚಯ		4-50
17	ಪ್ರಾಣಿಶಾಸ್ತ್ರ ಪರಿಚಯ		7-00
18	ಪ್ರಾಯೋಗಿಕ ಭೌತಶಾಸ್ತ್ರ		6-50
19	ಭೂಮಿತಿ ಹಾಗೂ ತ್ರಿಕೋನಮಿತಿ		7 00
20	ಭೌತಶಾಸ್ತ್ರ	(ಸಾದಾ)	10-50
		(ಕೆಲಿಕೋ)	12-50
21	ಸಂಖ್ಯಾಶಾಸ್ತ್ರ		(ಅಚ್ಚಿನಲ್ಲಿ)

ಬಿ.ಎ., ಬಿ.ಎಸ್‌ಸಿ., ಬಿ.ಕಾಂ.—ಭಾಗ ೧

22	ಸಂಸ್ಕೃತ ಗದ್ಯಪದ್ಯ (ದ್ವಿತೀಯ ಮುದ್ರಣ)	3-00
23	ರಾಜ್ಯಶಾಸ್ತ್ರ	4-00
24	ಮಾರಾಟ ಹಾಗೂ ವಿಕ್ರಯಶಾಸ್ತ್ರ	4-50

25	ಕಾರ್ಯನಿರ್ವಹಣ ಶಾಸ್ತ್ರ	6-50
26	ತರ್ಕಶಾಸ್ತ್ರ (ನಿಗಮನ)	4-50
27	ಸಮಾಜಶಾಸ್ತ್ರ	3-00
28	ಅರ್ಥಶಾಸ್ತ್ರದ ಮೂಲತತ್ವಗಳು (ವಾಣಿಜ್ಯ) (ಸಾದಾ)	10-50
	(ಕೆಲಿಕೋ)	12-50
29	ಸಂಸ್ಕೃತ ಸುಭಾಷಿತ ಸಂಗ್ರಹ	4-00
30	ಭೌತಿಕ ಭೂಗೋಲ ಶಾಸ್ತ್ರ	(ಅಚ್ಚಿನಲ್ಲಿ)
31	ಅರ್ಥಶಾಸ್ತ್ರ : ತತ್ವನಿರೂಪಣೆ	,,
32	ಸಂಖ್ಯಾಶಾಸ್ತ್ರ	,,
33	ಗಣನಶಾಸ್ತ್ರ	,,
34	ಬೀಜಗಣಿತ	,,
35	ಪ್ರಾಚೀನ ಭಾರತ ಚರಿತ್ರೆ	,,

ಪೂರಕ ಗ್ರಂಥ ಮಾಲೆ

36	ಆಯುರ್ವೇದ ವಿಜ್ಞಾನ	7-00
37	ರಾಗದರ್ಶನ	4-50
38	ಭಾರತ ಸಂವಿಧಾನದ ಇತಿಹಾಸ	3-00
39	ಹೃದಯ ರೋಗಗಳು	4-00
40	ಫ್ರಾನ್ಸ್ ದೇಶದ ಮಹಾಕ್ರಾಂತಿ	(ಅಚ್ಚಿನಲ್ಲಿ)

★

— ಪುಸ್ತಕಗಳು ದೊರೆಯುವ ಸ್ಥಳ —

1 ವ್ಯಾಸಂಗ ವಿಸ್ತರಣ ಹಾಗು ಪ್ರಕಟನ ಶಾಖೆ (ಮಾರಾಟ ವಿಭಾಗ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-3.

2 ಯೂನಿವರ್ಸಿಟಿ ಕನ್‌ಸ್ಯೂಮರ್ಸ್ ಕೋ-ಆಪರೇಟಿವ್ ಸೊಸೈಟಿ, ಧಾರವಾಡ-3.

3 ಭಾರತ ಬುಕ್‌ಡಿಪೊ, ಸುಭಾಸರೋಡ್, ಧಾರವಾಡ-1.

4 ಗೀತಾ ಬುಕ್ ಹೌಸ್, ನ್ಯೂ ಸ್ಟ್ಯಾಚ್ಯೂ ಸರ್ಕಲ್, ಮೈಸೂರು-1.